ರ್ಪಿನಮುದ್ಯನ್ಮಂಡಲಾಗ್ರಂ ಸಲೆ ಘನಪದವೀಶೋಭೆಯುಂ ಪೆರ್ಚಿಸುತ್ತಿ ।
ರ್ಪಿನವೊಳ್ಪಂಬೆತ್ತುದಾತ್ತಂಬೆಳಗುಗೆ ಜಗಮಂ *ಗೋಪಮಾರ್ತಂಡದೇವಂ॥

ಅರಿರಾದ್ರಂ ಕರದೈಶ್ವರ್ಯಮುಲ್ಲಸದಹೀನಾಲಂಕೃತಂ ಮೂರ್ತಿ ಸಾ ।
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ ॥
ವರದಾನೋನ್ನತಭದ್ರಲಕ್ಷಣ†ಗುಣಂ ಪದ್ಮಾನುಷಂಗಿತ್ವಮಾ ।
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ ॥೫

(ಜಗನ್ನಾಥವಿಜಯಂ)

ಶ್ರೀಪಾದದ್ವಿತಯಪ್ರದಕ್ಷಿಣಕೃತಿವ್ಯಾಸಕ್ತಗೀರ್ವಾಣಕಾಂ ।
ತಾಪಾಂಗಪ್ರತಿಬಿಂಬಕೋಟಿಘಟಿತಸ್ಮೇರಸ್ಥಲೇಂದೀವರ ॥
ಶ್ರೀಪೂರ್ಣಂ ಹಿಮವನ್ನಗೇಂದ್ರಮೆನೆ ಕಣ್ಗಿಂಬಾದ ಚಾಂದ್ರಪ್ರಭಂ ।
ರೂಪಂ ದಿವ್ಯವಚೋಮರುನ್ನದಿಯಿನೆಮ್ಮೊಳ್ ಮಾಳ್ಕೆ ನೈರ್ಮಲ್ಯಮಂ ॥೬

(ಚಂದ್ರಪ್ರಭಪುರಾಣಂ)

ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರಕಾಂತಂ ।
ತಾಪಧ್ವಾಂತಾಪನೋದಕ್ಷಮನಮೃತಕಲಾವಲ್ಲಭಂ ವಿಶ್ವವಿದ್ಯಾ ॥
ಕೂಪಾರೋಜ್ಜೀವಜೈವಾತೃಕನತನುಕೃ‡ತಸ್ವಾಂತಸೌಖ್ಯಂ ತ್ರಿಲೋಕೀ ।
ದೀಪಂ ತಳ್ಕೈಸುಗಸ್ಮನ್ಮತಿಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ॥೭

(ಕವಿಕುಂಜರಲೀಲಾವತಿ)

ಶ್ರೀಭಾಸ್ವದ್ಬಿಂಬಮೆಂಬಂತುದಯಿಸಿ ದಶಧರ್ಮಕ್ಕಡರ್ಪಾದ ತೇಜೋ ।
ಭಾಭಾಸ್ವದ್ಧರ್ಮಚಕ್ರಂ ಸಮನಿಸೆ ಸುಮನೋಧರ್ಮನಂ ಧರ್ಮನಂ ಧಾ॥
ತ್ರೀಭಾಗಂ ಜಾಗೆನಲ್ ಚಾಳಿಸಿ ಚತುರತೆಯಿಂ ಗೆಲ್ದ ಕೈವಲ್ಯಲಕ್ಷ್ಮೀ ।
ಲಾಭಾಯತ್ತಾತ್ಮಧರ್ಮಂ ಸಲಪುಗೆ ಸತತಂ ಧರ್ಮಮಂ ಧರ್ಮನಾಥಂ ॥೮

ಇದಿರೊಳ್ ನಿಂದಿದಿರ್ದೊಡಂಗಕ್ಕಡರೆ ತೊಡೆದ ಬಾವನ್ನದಂತಾವಗಂ ನೋ।
ಡಿದ ಕಣ್ಗಳ್ಗಿಟ್ಟ ತೆಳ್ಗಪ್ಪುರದ ಸಲಗೆಯಂತಳ್ಕಿಱಿಂ ಕೂಡೆ ಕೊಂಡಾ ॥

---

*. ಶ್ರೀಜಗನ್ನಾಥದೇವಂ. †. ಪದಂ. ‡. ತಾಕ್ರಾಂತ.

ಡಿದ ಬಾಯ್ಗೋರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನ ।
ಗ್ಗದ ದೇಹಚ್ಛಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥಾ॥
(ಧರ್ಮನಾಥಪುರಾಣಂ)

ಬನಮಂ ಸಾರ್ದ ನರಂಗೆ ಪಾವನಫಲಂ ಪ್ರೋತ್ಫುಲ್ಲಪಂಕೇಜಕಾ ।
ನನಮಂ ಸಾರ್ದ ನರಂಗೆ ಶೀತಳಜಳಂ ಸಾರಸ್ವತಾಧಾರಸ ॥
ಜ್ಜನರಂ ಸಾರ್ದ ನರಂಗೆ ನಿರ್ಮಲಗುಣಂ ನಿನ್ನಂಘ್ರಿಯಂ ನಂಬಿ ಸಾ ।
ರ್ದ ನರಂಗುತ್ತಮಸೌಖ್ಯಮಾವ ಗಹನಂ ಶ್ರೀಮಜ್ಜಿನಾಧೀಶ್ವರಾ ॥ ೧೦

ಕಡುಕೆಯ್ದುಟ್ಟದನಿಕ್ಕಿಯುಂ ಸುಭಟನೈ ಸಂಸಾರಕಾಂತಾರಮಂ ।
ಕಡಿಮಂ ಶಾಂತಿಯಿಂದನೈ ಸುವಿದಿತಂ ಜೀವಾದಿತತ್ವಂಗಳಂ ॥
ನುಡಿಮಂ ಮೌನಸಮೇತನೈ ವಿಮಳನಶ್ರೀದೋರ್ಲತಾಪಾಶದೊಳ್ ।
ತೊಡರ್ದು*ಂ ಮುಕ್ತನದೆಂ ಕರಂ ಪಿರಿಯನೈ ಶ್ರೀಮಜ್ಜಿನಾಧೀಶ್ವರಾ ॥೧೧
(ಕವಿಕುಂಜರಲೀಲಾವತಿ)

ಊದುವ ಬಾಯ್ಗೆ ಬೂದಿ ಸದೆವೊಯ್ದುದು ಮರ್ದಿಸುತಿರ್ಪ ಕೈಗೆ ಕಂ ।
ದಾದುದು ನೋಳ್ಪ ಕಣ್ಗೆ ಪೊಗೆ ಪೊಯ್ದುದು ಮುನ್ನಿನಗುಳ್ಳ †ಭೂಷಣಂ ॥
ಪೋದುದು ಲಜ್ಜೆ ಪಾಱಿತು ತಳಾಱರ ಕೋಟಿದ §ಬಂದಿಯಲ್ಲಿ ಕಾಲ್ ।
ಕೋದುದು ವಾದದಿಂ ಪಡೆದೆನೀಸಿರಿಯಂ ಗುರುಮೂರ್ತಿಶಂಕರಾ ॥೧೨
(ಗುರುಮೂರ್ತಿಶಂಕರಶತಕಂ)

ಕೆಸಱೊಳ್ ಪುಟ್ಟಿದುದಂತುಮಲ್ಲದೆ ರಜಸ್ಸಲ್ಲೀಢಮೆಂ‡ತುಂ ಜಡಾ ।
ವಸಥಂ ಚೀ ಮಧುಪಪ್ರಸಂಗಿ ಖರದಂಡಂ $ಮತ್ತೆನುತ್ತಬ್ಜಮಂ ॥
ಬಿಸುಟತ್ಯುತ್ತಮಮಿಂತುಟೆಂದು ಪಿರಿದುಂ ಸಂತೋಷದಿಂ ವಾಣಿ ಬಂ ।
ದು ಸಮಂತಿರ್ಕೆ ನವೀನಸೌರಭದವೋಲ್ ಜಿಹ್ವಾಗ್ರದೊಳ್ ರುದ್ರನಾ ॥೧೩
ವ. (ಜಗನ್ನಾಥವಿಜಯಂ)

---

†. ಪೊನ್ನ. §. ಕಂಡಿ. ‡. ದ್ರುಂ. $. ತಾನೆ.

ಪರಮಬ್ರಹ್ಮಶರೀರಪುಷ್ಟಿ ಜನಿತಾನ್ತರ್ದೃಷ್ಟಿ ಕೈವಲ್ಯಬೋ |
ಧರವಾಙ್ಮೌಕ್ತಿಕಹಾರಯಷ್ಟಿ ಕವಿತಾವಲ್ಲೀಸುಧಾವೃಷ್ಟಿ ಸ ||
ರ್ವರಸೋತ್ಪಾದನವೀನಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗಸುಂ |
ದರಿ ವಿದ್ಯಾನಟಿ ನಾಟಕಂನಲಿಗೆ ಮತ್ಕಾವ್ಯಸ್ಥಲೀರಂಗದೊಳ್ ||೧೪

(ರಾಮಚಂದ್ರಚರಿತ ಪುರಾಣಂ)

ದುರಿತವ್ರಾತಲತಾಕೃಪಾಣಿ ವಿಸರದ್ದುರ್ಬೋಧಧರೋದಸ್ವಿನೀ |
ತರಣಿದ್ರೋಣಿ ಸಮುನ್ನತಾಕ್ಷಯಮಹಾಪ್ರಾಸಾದನಿಶ್ರೇಣಿ ಬಂ ||
ಧುರಸಾಹಿತ್ಯಸುರತ್ನರೋಹಣಮಹೀಧ್ರಕ್ಷೋಣಿ ತಾಳ್ದರ್ಕೆ ವಿ |
ಸ್ತರದಿಂ ವಾಣಿ ಮದೀಯಮಾನಿತಮುಖಶ್ರೀಯೊಳ್ ಸಖೀಲೀಲೆಯಂ ||೧೫

(* ಚಂದ್ರಪ್ರಭಪುರಾಣಂ)

ಬಱಿದೆ ಮರಲ್ದರಲ್ದ ಕುಕವಿವ್ರಜಶಾಲ್ಮಲಿಯಂ ಮಲಂಗದೆ |
ಬ್ಬಱಸದೆ ‡ದುರ್ವಿದಗ್ಧಮುಖಕುಟ್ಮಲದಿಂದವಗಂಧಮಂ ಮರ ||
ಲ್ದಿಱಗದೆ ಮುಗ್ಧಚಂಪಕದೊಳೊಲ್ದು ಸರಸ್ವತಿಯೆಂಬ ತುಂಬಿ ಬಂ |
ದೆಱಗುಗೆ ನೇಮಿಚಂದ್ರನ ನವಸ್ಮಿತಜಾತಮುಖಾಂಬುಜಾತದೊಳ್ ||೧೬

(ಕವಿಕುಂಜರಲೀಲಾವತಿ)

ಕೋಕನದಗರ್ಭನಿಂ ವಾ |
ಲ್ಮೀಕಿಯೆ ಕವಿ ಮುನಿನಿಕಾಯದೊಳ್ ಸಂದತ್ತೀ ||
ಲೋಕಕ್ಕೆ ನಾನೃಷಿಃ ಕುರು |
ತೇಃಕಾವ್ಯಮೆನಿಪ್ಪ ಮಹಿಮೆ ತನ್ಮುನಿವರನಾ ||೧೭

ಸ್ತುತಿಗೆಯ್ವೆಂ ಕೃತಪಂಚಮಶ್ರುತಿಪುರಾಣವ್ಯಾಸನಂ ವ್ಯಾಸನಂ |
ಕೃತಿಲೋಕಶ್ರುತಿಪೂರಕಲ್ಪಕವಿತಾಗೀರ್ಬಾಣನಂ ಬಾಣನಂ ||

---

* ಮಾತೃಕೆಯಲ್ಲಿ "ಚಂದ್ರಪ್ರಭಪುರಾಣಂ" ಎಂಬುದಕ್ಕೆ ಬದಲಾಗಿ "ಅ[illegible] ಲೀಲಾವತಿ" ಎಂದಿದೆ.

‡. ದುರ್ವಿವೇಕ.

ಚತುರೋಕ್ತಿಪ್ರಚುರಾರ್ಥ†ಕಾವ್ಯಜನಿತೋರ್ವೀಹರ್ಷನಂ ಹರ್ಷನಂ |
ಶತಪತ್ರಾಕ್ಷಕಥಾಮೃತಚ್ಯುತಬುಧಸ್ತೋಮಾಘನಂ ಮಾಘನಂ ||೧೮

ಸುಕವಿಜನಗಣನೆಯೊಳ್ ದ |
ತ್ತಕನಿಷ್ಠಿಕನಾಗಿ ಕಾಳದಾಸಂ ಮೊದಲೆಂ ||
ದು ಕರಂ ಬಣ್ಣಿಪರವಱಿಂ |
ದೆ ಕಾಳದಾಸಂಗೆ ದಾಸರೆನಿಪರ್ ಕವಿಗಳ್ ||೧೯

(ಜಗನ್ನಾಥವಿಜಯಂ)

ಏಮಾತೊ ನವ್ಯಕಾವ್ಯಕ |
ಲಾಮಹಿಯೊಳ್ ಬಿಡದೆ ಬೀದಿವರಿವೊಡೆ ಮೊದಲೊಳ್ ||
ನೇಮಿಯನೆಮ್ಮಗೆಯಿಲ್ಲದೊ |
ಡೀಮತ್ತಿನ ಕವಿಮನೋರಥಂ ನಡೆದಪುದೇ ||೨೦

ಸರ್ವರ ಸಮ್ಮತಮೆನಗಿದು |
ಗರ್ವದ ಮಾತಲ್ತು ಶಾಸ್ತ್ರಲೌಕಿಕಕಲೆಯೊಳ್ ||
ಬೇರ್ವರಿದ ನೇಮಿಜನ್ನಿಮ |
ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ ||೨೧

ಬಿನ್ನಣದ ಕುಸುರಿ ಪಸರಿಸು |
ವನ್ನಂ ಗುಣಜಾತಿಬಂಧಮಳವಡೆ ನೆಗಳ್ದಾ* ||
ಪೊನ್ನಂ ರನ್ನಂ ಕೂಡಿದೊ |
ಡೆನ್ನೀವಾಗ್ವಧುಗೆ ಭೂಷಣಂ ಪೆಱತುಂಟೇ ||೨೨

(ಧರ್ಮನಾಥಪುರಾಣಂ)

ಇನಿತುಮಿರ್ಕೆ ಮತ್ಕೃತಿಯೊಳೀಧರೆ ಬಣ್ಣಿಸೆ ಸಂದ ಶಂಖವ |
ರ್ಮನ ಬಗೆ ಶಾಂತಿವರ್ಮನ ನಯಂ ಗುಣವರ್ಮನ ಬಂಧಗೌರವಂ ||

---

†. ವಾಕ್ಯ. §. ಕೃತಿ.

ಮನಸಿಜನೋಜೆ ಕಣ್ಣಮನ ಜಾಣ್ಣುಡಿ ಪಂಪನ ರೀತಿ ಚಂದ್ರಭ ।
ಟ್ಟನ ಜತಿ ಪೊನ್ನಮಯ್ಯನ ಬೆಡಂಗು ಗಜಾಂಕುಶನುಳ್ಳ ಬಿನ್ನಣಂ ॥೨೩

(ಜಗನ್ನಾಥವಿಜಯಂ)

ವಿತತಗುಣಮಾರ್ಗಣವಿವಿ ।
ಕ್ತತೆಯಿಂದನವರತಮೋಕ್ಷಸಂಧಾನಮನ ॥
ಸ್ಕತೆಯಿಂ ಧಾರ್ಮಿಕವೃತ್ತಿಯು ।
ನತಿಶಯಿಪಂ ನೇಮಿಚಂದ್ರಸೈದ್ಧಾಂತೀಶಂ ॥೨೪

(ಚಂದ್ರಪ್ರಭಪುರಾಣಂ)

ಪರಮಬ್ರಹ್ಮಸಮುದ್ಭವಂ ವಿಗತದಂಡ ವೀತರಾಗಾತ್ಮಕಂ ।
ವಿರಜಸ್ಕಂ ದ್ವಿಜರಾಜಪೂಜ್ಯಮಮಲಂ ನಿಷ್ಕಂಟಕಂ ತಾನೆನಲ್ ॥
ಪಿರಿದುಂ ಧಾತ್ರಿಗೆ ಚಿತ್ರಮಾದ ಪದಪಿಂ ಮೆಯ್ವೆತ್ತ ಜೈನಾಗಮಾಂ ।
ಬುರುಹಂ ಮಾಳ್ಕೆ ಮನೋನುರಾಗದೊದವಂ ಭವ್ಯಾಳಿಗವ್ಯಾಕುಳಂ ॥

(ಧರ್ಮನಾಥಪುರಾಣಂ)

ಜಿತಕರ್ಮಂ ಸಮುಪಾತ್ತತತ್ತ್ವಚಯಮುದ್ಧರ್ಮಂ ಶುದ್ಧರತ್ನತ್ರಯೀ ।
ಧೃತಧರ್ಮಂ ಕುಮತಾವಳೀಶಿಶಿರಘರ್ಮಂ ಸಾಧುಸಂದೋಹಸಂ ॥
ವೃತದರ್ಮಂ ವಿನಮದ್ವಿನೇಯಜನಶರ್ಮಂ ಮೋಕ್ಷಲಕ್ಷ್ಮೀಪ್ರಿಯೋ ।
ಚಿತನರ್ಮಂ ನಿಮಗಾರ್ಮಮಕ್ಕೆ ಜಿನಧರ್ಮಂ ಜನ್ಮಪಾರಂಪರಂ ॥

(ಚಂದ್ರಪ್ರಭಪುರಾಣಂ)

ಹರಿಯೆಂತಂತಿರನೇಕಪಾಪಹರಣೈಕಪ್ರೌಢಮಂ ಕಿನ್ನರೇ ।
ಶ್ವರನೆಂತಂತಿರಗಣ್ಯಪುಣ್ಯಜನತಾಸೌಂದರ್ಯಮಂ ಮೇರುಭೂ ॥
ಧರಮೆಂತಂತಿರೆ ಪುಷ್ಪದಂತಪರಿವೃತ್ತೋದಾತ್ತಮಂ ಭವ್ಯರಾ ।
ದರಿಸಲ್ ಭಕ್ತಿಯಿನಾಂ ವಿನಿರ್ಮಿಸುವೆನೀಶ್ರೀಮತ್ಕಥಾಬಂಧಮಂ ॥

ಸುಕೃತಂ ಶಾಂತದಿನಕ್ಕುಮೀಕಥೆಗೆ ಶೃಂಗಾರಾದಿನಾನಾರಸಾ ।
ಷ್ಟಕಮೇಬಾಳ್ತೆಯೊ ರಾಗಕಾರಣಮೆನಲ್ ಪೇಳೆಯುದ್ದಗುಂ ವೀತರಾ ॥

ಗಕಥಾಂತರ್ಗತನಾದೊಡಾವರಸಮುಂ ಶಾಂತತ್ವಮಂ ನೀರದ ।
ಪ್ರಕರಾಂತರ್ಗತವಾರ್ಧಿವಾರಿ ಪಡೆವಂತತ್ಯಂತಮಾಧುರ್ಯಮಂ ॥೨೮

(ಪುಷ್ಪದಂತಪುರಾಣಂ)

ಪೊಸತೆನೆ ಪೇೞ್ವ ತಿರ್ದುವೞಿವೆನ್ನಳಿ ಸನ್ನಿದಮಾದುದಾದೊಡಂ ।
ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ತಮಂತೆ ತಿ ॥
ರ್ದಿಸುವುದೆನಲ್ ನಯಂ ಬೆಳಗೆ ಕನ್ನಡಿ ಸೋದಿಸೆ ಪೊರ್ೞ ವಿರಾಜಿಸಂ ।
ತೆಸೆದು ಬೞಿಕ್ಕೆ ಮತ್ಕೃತಿ ಚಮತ್ಕೃತಿಯಂ ಧರೆಗುಂಟುಮಾಡುಗುಂ ॥೨೯

ಉತ್ಸವಕರಮೆನೆ ಬೆಳಪ ಶ ।
ರತ್ಸಮಯದೊಳಿಂದುಕಾಂತಿ ದಳವೆ ಱಮಪ್ರೋಲ್ ॥
ವತ್ಸಲರೆನಿಸುವ ಬುಧರಿನ ।
ಮತ್ಸರರಿಂ ಕತಿ ಕೃತಾರ್ಥಮಕ್ಕುಮಮೋಘಂ ॥೩೦

ಕವಿತಾಪ್ರೌಢನೆ ಸೋಲ್ವಪ್ರೋಲ್ಕೃತಿಯೊಳಜ್ಞಂ‡ಸೋಲ್ವನೇಚಂದ್ರಕಾಂ।
ತಪ್ರೊಸರ್ವಂತಿರೆ ಗೋೞಿಕಲ್ಲೊಸರ್ಗು*ಮೇ ಬೆಳ್ದಿಂಗಳೊಳ್ ತುಂಬಿ ಪೀ ॥
ರ್ವಪ್ರೊಲೇಂ ಪೀರ್ದಪ್ರುದೇ ಕಡಂದುಱು ¶ತೆ ನವ್ಯಾಮೋದಮಂ ಪೂಗಳೊಳ್।
ನವಚೂತಂ ತಳಿರ್ವ*ಂದದಿಂ ತಳಿರ್ಗು*ಮೇ ಸ್ಥಾಣೂತ್ಕರಂ ಚೈತ್ರದೊಳ್ ॥

(ಜಗನ್ನಾಥವಿಜಯಂ)

ಅತಿಶಯಪದಾರ್ಥನಿಕರ ।
ಪ್ರತೀತಿಯಂ ಪಡೆವ ಪದವಿನ್ಯಾಸಂ ಭೂ ॥
ನುತಮಾಗದಲ್ತೆ ನಿರ್ದೋ ।
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥೩೨

(ಚಂದ್ರಪ್ರಭಪುರಾಣಂ)

ಕಡುಗೞಿದಯಶಂ ಪೆಸರಿಡೆ ।
ಕಡುವಿಳದಾಯಿತ್ತು ಕೀರ್ತಿ ಕವಿಗಳ್ ಕೞಿದಂ ॥

---

‡. ಸೋಲ್ಗುಮೆ. ¶. ನವವ್ಯಾ.

ದೊಡೆ ಕಱಿದವರ್ಗ್ಗಳ್ ಬಿಳಿದೆಂ ।
ದೊಡೆ ಬಿಳಿದೇಕವರನುಱದೆ ಕಿಡುವರ್ ಕಿಲಬರ್ ॥೩೩

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರ†ನೊತ್ತಿ ಗಂಟಲಂ ॥
ಮೆಟ್ಟುಗೆ§ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟದರ್ ।
ಮುಟ್ಟದರಿಕ್ಕಿ ಮೆಟ್ಟದರಿದೇನಳವಗ್ಗಳವೋ ಕವೀಂದ್ರರಾ ॥೩೪

ಕಿವಿಯಿಂದೀಂಟಿಸುವರ್ ಸಮಸ್ತರಸಮಂ ತೋರ್ಪರ್ ಸರೋಜಾತಮಂ ।
ಯುವತೀಪ್ರೌಢಲತಾಗ್ರದೊಳ್ ಕುಮುದಮೊಂದೊಂದಲ್ಲಿಯಾಬಾಲಪ ॥
ಲ್ಲವಮಂ ಪುಟ್ಟಿಪರಾರ್ಯಮೋಹನಮುಮಂ ಮಾಙ್ಮೀಚಮತ್ಕಾರಮಂ ।
ಕವಿಗಳ್ ಬಲ್ಲವೊಲನ್ಯರೆತ್ತಱಿವರಂತಾಬ್ರಹ್ಮನುಂ ಬಲ್ಲನೇ ॥೩೫

ಮರನೀಗುಂ ಮಣಿಯಿಗಾಗುವೊಂದುಪಶುವೀಗುಂಕೇಳಮೆಂದೋಳಿಯೊಳ್।
ಪುರುಡಂ ಪುಟ್ಟಿಸಿ ಕಾಷ್ಠಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್ ॥
ಮರುಳಂ ಪೋ ಪುರುಳಾಗಿಪರ್ ಕಿವಿಗಳೊಳ್ ಪೀಯೂಷಮಂ ಪಿಂಡಲು ।
ರ್ವರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆಱರ್ ಬಲ್ಲರೇ ॥೩೬

(ಕವಿಕುಂಜರಲೀಲಾವತಿ)

ಅರ್ಥಾಭಾಸದಿನಕ್ಷರ ।
ಸಾರ್ಥಮನುಚ್ಚರಿಸೆ ಕಾವ್ಯಮಂತೆಸೆಗುಂ ತ ॥
ತ್ತ್ವಾರ್ಥಮನಱಿಯದ ಮುನ್ನಮ ।
ಪಾರ್ಥಂ ರಂಜಿಸದ ಪಳಕುಮಣಿಯವೊಲಿರದೇ ॥೩೭

(ಜಗನ್ನಾಥವಿಜಯಂ)

ಜೇಯೆನೆ ಬಲ್ಲವರ್ ನೆಱಿಯೆ ಸತ್ಕೃತಿವೇೞದೆ ಪೇೞ್ ಘುಣಾಕ್ಷರ ।
ಪ್ರಾಯದೆ ಶಬ್ದಮೊಂದೆರಡು ಮತ್ತೆ ವಿಚಾರಿಸಿ ನೋಡೆ ಕಾಕತಾ ॥
ಳೀಯದೆ ವಾಚ್ಯಮೊಂದೆರಡು ಕೂಡೆ ನಿಘರ್ಷಿಪೊಡಂಥಲಾವಕ ।
ನ್ಯಾಯದೆ ಭಾವಮೊಂದೆರಡು ಲೇಸೆನೆ ಪೇೞ್ದಱದಿರ್ಪುದೊಪ್ಪಮೇ ॥೩೮

---

†. ನಿಕ್ಕ. § ಮರತಾಬ್ರಹ್ಮನೇಂ.

ಕುಕವಿಯನಲೆದಂಜಿಪ ಜಾಣ |
ಸುಕವಿಯೊಳೇನುಂಟೆ ದುರ್ಜನಾಳಿಗೆ ಶಕುಲ ||
ಪ್ರಕರಮನೆರ್ದೆಗಿಡಿಪುಗ್ರತೆ |
ಬಕನಿಕರಕ್ಕುಂಟೆ ತಿಮಿತಿಮಿಂಗಿಳಗಿಳನೊಳ್ ||೩೯

(ಚಂದ್ರಪ್ರಭಪುರಾಣಂ)

ಎನಿತನೊಱಲ್ದು ಪೇೞ್ದು ಕವಿಯೇವನದಂ ಪೆಸರಿಟ್ಟು ಮೆಚ್ಚ ಬ |
ಲ್ಲನನಱಸಲ್ಕೆವೇೞ್ಪುದವನಂ ಜಗದೊಳ್ ಪಡೆಯಲ್ಕೆ ಬಾರದಾ ||
ತನ ಮುಖದಿಂದಮಲ್ಲದದು ಸಲ್ಲದು ಕಟ್ಟೆಯುಮೇನೊ ಮಾಲೆಗಾ |
ಱನ ಪೊಸಬಾಸಿಗಂ ಮುಡಿವ ಭೋಗಿಗಳಲ್ಲದೆ ಬಾಡಿ ಪೋಗದೇ ||೪೦

(ಅನಂತನಾಥಪುರಾಣಂ)

ನಿಶ್ಚಿತಮಿದೆನಗೆ ಸಕಲವ |
ಚಕ್ಷುತುರಜನೋಪದೇಶದಿಂ ಪಿಶುನವಚೋ ||
ವೃಶ್ಚಿಕವಿಷಹರಮಖಿಳವಿ |
ಪಶ್ಚಿನ್ನುತಿಮಂತ್ರಮೆಂಬುದಿನ್ನುಂ ಮುನ್ನುಂ ||೪೧

(ಕವಿಕುಂಜರಲೀಲಾವತಿ)

ಗುರುನಿಂದ್ಯಂಗೆ ಶಠಂಗೆ ಶೂನ್ಯಹೃದಯಂಗಾಚಾರಹೀನಂಗೆ ನಿ |
ಷ್ಠುರವಾಕ್ಯಂಗತಿಗರ್ವಿತಂಗೆ ಬಹುಭಾಷೋಕ್ತಂಗೆ ನೀಚಂಗೆ ಪಾ ||
ಪರತಂಗನ್ಯವಧೂಪ್ರಿಯಂಗೆ ಬಧಿರಂಗಂಧಂಗೆ ಮೂಕಂಗೆ ಮೂ |
ರ್ಖರ ದೇವಂಗುಪದೇಶಿಸಲ್ ಕಿಡುಗುಮಾಸದ್ವಿದ್ಯರಭ್ಯಂತರಂ ||೪೨

ಕುಟಿಲಾಳಾಪದೆ ಪಿಂತೆ ಕಾೞ್ಗೆಡೆದು ಮುಂತಾಸತ್ಕವೀಂದ್ರರ್ಕಳು |
ಬ್ಬಟೆಯುಂ ಕಂಡು ಕನಲ್ದು ಕೇದಗೆಯ ತೂಱಲ್ಗೊಂಬನೇಱಿರ್ದ ಮ ||
ರ್ಕಟನೆಂತಂತೆ ಕುನುಂಗಿ ಪಲ್ಗಿಱಿದು ಬಾಯುಂ ಬಿಟ್ಟು ಬೆಂಬೀೞ್ವನ |
ಕ್ಕಟ ಧಾತ್ರೀತಳದಲ್ಲಿ ದುಷ್ಕವಿಯಿದೇಂ ಹಾಸ್ಯಕ್ಕೆ ಪಕ್ಕಾದನೋ ||೪೩

ಚಂದನದೊಳ್ ಪಾವಿನ ಭಯ ।
ಮಿಂದುವಿನೊಳ್ ರಾಹುಬಾಧೆ ಸತ್ಕೃತಿಯೊಳ್ ತ ।
ಳ್ತೊಂದಿದ ದುರ್ಜನದೂಷಣ ।
ಮಿಂದಾದುದೆ ತಾನನಾದಿಯುಗಸಂಸಿದ್ಧಂ ॥ ೪೪

ಮಾಡಿದನೇಕೆಯೊ ಮೇಲಂ ।
ನೋಡದೆ ಬಿದಿ ವಿಷಮಫಣಿಗಣಂಗಳ ಪಲ್ಲಂ ॥
ರೂಡಿಸಿ ತೇಳ್ಗಳ ಮುಳ್ಳಂ ।
ನಾಡಱಕೆಯ ದುರ್ಜನಂಗೆ ನಿಡುನಾಲಗೆಯಂ ॥೪೫

(ಧರ್ಮನಾಥಪುರಾಣಂ)

ಅಱಖುದೆ ಪದವಿನ್ಯಾಸನು ।
ನೆಱಯುದೆ ಸಾರಸ್ಯಮುಂ ಪರಪ್ರತಿಭೆಯು ಗು ॥
ಣ್ಪಱಿಯುದೆ ತಾಮುಂ ಕೆಮ್ಮಗೆ ।
ಡುಱುಕೆಂಬುವು ಕುಕವಿಕೂಪಮಂಡೂಕಂಗಳ್ ॥೪೬

ಪೞಿದೊಡೆ ಬಾೞ್ವನಲ್ಲದೊಡೆ §ಬಾೞ್ವನೆ ಸತ್ಕೃತಿಗೇಳ್ದ ದುರ್ಜನಂ ।
¶ಪೞಿವ ವೃಥೋಕ್ತಿ ಸಲ್ಲದೊಡೆ ಸಾಲದೆ ಕಾವ್ಯನಿಬಂಧನಕ್ಕಮಾ ॥
ಪೞಿಯೆ ಪೊಗೞ್ತೆ†ಯುಂತಿರೆ ಲಸತ್ಕೃತಿಯುಂ ಕವಿ $ಪೇೞ್ಗೆ ದುರ್ಜನಂ ।
ಪೞಿಯುತುಮಿರ್ಕೆ ಬಾೞ್ವಮನೆಗೊಂದು ಬಗುೞ್ವುದು ಬೇೞ್ಕಮೆನ್ನಿರೇ ॥೪೭

(ಅನಂತನಾಥಪುರಾಣಂ)

ತಲೆಯುಂ ತೂಗುವನೊರ್ವನುರ್ವಿ ಕೆಲದೊಳ್ ಕಾೞ್ಗಬ್ಬಮಂ ಕಟ್ಟಿಕೋ ।
ಟಲೆಗೊಂಡಾೞ್ವನೊರ್ವನೊಲ್ದವರ ಚಾತುರ್ಯಕ್ಕೆ ‡ ಕೈವಾರಮಂ ॥
ಪೊಲಗೆಟ್ಟೀವವನೊರ್ವನಿಂತಕಟ ಯಕ್ಷೋಯಾದೃಶಸ್ತಾದೃಶೋ ।
ಬಲಿಯೆಂಬುಕ್ತಿಗೆ ದುರ್ವಿದಗ್ಧರೆ ಮಲಂ ನೋಂತರ್ ಪೆಱರ್ ನೋಂತರೇ ॥೪೮

(ಕವಿಕುಂಜರಲೀಲಾವತಿ)

---

§ ಸಾಯನೆ. ¶ ಪೞಿದು. † ಯಲ್ತರಸವ. $ ಪೇೞ್. ‡ ಕೈಚಾಗ.

ಪಂಡಿತರುಂ ವಿವಿಧಕಲಾ |
ಮಂಡಿತರುಂ ಕೇಳತಕ್ಕ ಕೃತಿಯುಂ ಕ್ಷಿತಿಯೊಳ್ ||
ಕಂಡರ್ ಕೇಳ್ವೊಡೆ ಗೋರವರ |
ಡುಂಡುಚಿಯೇ ಬೀದಿವರಿಯೆ ಬೀರನ ಕತೆಯೇ ||೪೯

ನೆರೆಯಱಿಯದ ಪೊರೆಯಱಿಯದ |
ಬಿರುದುಗಳೇಕೆಮಗೆ ಕೃತಿಯನೀಕ್ಷಿಸಿ ಮಿಗೆ ಮ ||
ಚ್ಚರಿಸುವ ಕವಿಯೆರ್ದೆ* ಬಿಕ್ಕನೆ |
ಬಿರಿದೊಡದೇ ಬಿರುದು ಮಿಕ್ಕ ಬಿರುದುಂ ಬಿರುದೇ ||೫೦

(ಧರ್ಮನಾಥಪುರಾಣಂ)

ಪರಿಕಿಪೊಡೆ ಪಿಶುನನಗ್ಗದ |
ಹರನೊಳ್ ಪುರುಡಿಸುವನೆಂದೊಡುೞಿವರ ಪುರುಳೇಂ ||
ಕೊರಲೊಳ್ ವಿಷಮಂ ತಳೆದೊಡೆ |
ಗಿರಿಶಂ ತಾಂ ತಳೆದನಲ್ತೆ ತುದಿನಾಲಗೆಯೊಳ್ ||೫೧

(ಕವಿಕುಂಜರಲೀಲಾವತಿ)

ತುಡುಕಿದ ದೋಷಿಯನಲ್ಲದೆ |
ಪಿಡಿಯದು ಘಟಸರ್ಪನಂತುಟಲ್ಲದೆ ತನ್ನಂ |
ತುಡುಕದ ನಿರ್ದೋಷಿಯುಮಂ |
ಪಿಡಿವುದು ಖಳಮುಖಘಟೋಗ್ರಜಿಹ್ವಾಸರ್ಪಂ ||೫೨

(ಜಗನ್ನಾಥವಿಜಯಂ)

ಮಿಗೆ ಪದವಿಡಲಱಿಯದ ನಾ |
ಲಗೆವೆೞವರ್ ಸಲೆ ಸದರ್ಥಮಂ ಕಾಣದ ಪೋ ||
ಬಗೆಗುರುಡರ ಬಗೆವೊಡೆ ಕ |
ಬ್ಬಿಗರಕ್ಕುಮೆಯೋದುಗೇಳದಕ್ಕರಗಿವುಡರ ||೫೩

ನೀರೊಳಗಣ ಪೆಣನಂತೆವೊ |
ಲಾರೆೞೆದೊಡಮುರುಳೆವರಿದು ಪುರುಳಲ್ಲದಹಂ ||

ಕಾರದೊಳ್ ಬಾತು ಬಲ್ಮೆಗೆ ।
ಹಾರೈಸುವರೇಕೆ ಬಯಕೆಗವಿಗಳ್ ಕೆಲವರ್ ॥೪೪
ಎಂವುದನೆನುತಿರ್ಪರ್ ಗಿರಿ ।
ಯುಂದದಿನತಿ†ನಿಶಿತಸುಕವಿವಾಕ್ಕುಲಿಶಂ ಬೀ ॥
ಟ್ಟೆಂದೊಡಮೆರ್ದೆ*ಯುಂ ಸೀಳ್ದೊಡ ।
ವೊಂದಕ್ಕರಮಿಲ್ಲನಿಪ್ಪ ಕಲ್ಲೆರ್ದೆ*ಗವಿಗಳ್ ॥೪೫
ಆತಂಗೆ ನಮಸ್ಕಾರಮ ।
ಚಾತುರ್ಯಂ ರಾಜತತಿಗೆ ರಾಹುವ ವದನಂ ॥
ಶೀತಾಂಶುಗೆ ಕಾವ್ಯಮಣಿ ।
ಜ್ಯೋತಿಗೆ ದುರ್ಜನಪತಂಗವಾವನಿನಾಯ್ತೋ ॥೪೬
ಆನುಂ ಬುಧರೊಡನೆ ನೃಪಾ ।
ಸ್ಥಾನದೊಳ್§ಪೆರ್ಚಿ ದಲೆಂವು ಕುಕವಿಕದಂಬಂ ॥
ಬಾನುದ್ದಮುಪ್ಪುದೇಕು ।
ದ್ಯಾನದೊಳೊಡನಿರವೆ ಕಾಗೆಯುಂ ಕೋಗಿಲೆಯುಂ ॥೪೭
ಫಣಿಯ ಫಣಾಮಣಿಯುಂ ವಾ ।
ರಣರದಮುಂ ವ್ಯಾಘ್ರಚರ್ಮಮುಂ ಚಮರಮೃಗೀ ॥
ಗಣವಾಲಮುಮತಿಕೃಪಣನ ।
ಪಣಮುಂ ಬಾಳ್ವನ್ನೆ ಸಾರಮಾರುಮನೆಂವಂ ॥೪೮
ಬಳ್ಳ ಮೊದಲಾಗಿ ಮೊವಲೊಳ ।
ಗೆಳ್ಳನಿತುಂ ಪೊನ್ನನಿಕ್ಕದೊಡೆ ಪರ್ಬದು ಪೊ ॥
ನ್ನಳ್ಳ ನರನಿತ್ತೊಡಲ್ಲದೆ ।
ಬೆಳ್ಳನೆ ಪರ್ಬುಗುಮೆ ಕೀರ್ತಿಲತೆ ದಿಕ್ತಟಮಂ ॥೪೯

† ಸುಕರ. § ದರ್ಪಂಟೆಂದು.

ಜೀವಿಸುಗೆ ವಜ್ರಲೋಭಿಯು ।
ಗಾವಧಿವರಮಲ್ಲದಂದು ಧಾತ್ರನ ಬಲ್ಪಿಂ ॥
ಪೋವಾಗಿ ಪುಟ್ಟಿ ಧನಮುಂ ।
ಕಾವಂತುಟೆ ಲೋಕಮೆಲ್ಲಮಂ ಮೆಲ್ಲದಿರಂ ॥೬೦

ಸರಸಮಹಾಕವೀಶ್ವರಮಹೀತಳದೊಳ್ ಪುಲಕಾಂಕುರಂಗಳು ।
ಬ್ಬರಿಸೆ ಮೃದೂಕ್ತಿಬಿಂದುಚಯಮುಂ§ ಸವಿದಾಱೆ ವಿದಗ್ಧಚಾತಕಂ ॥
ನರಪ¶ಸಭಾನಭಃಸ್ಥಳದೊಳುನ್ನತಿವೆತ್ತು ರಸಪ್ರವಾಹಮುಂ ।
ಸುರಿವುದನಾರತಂ ಸುಕರಕಾವ್ಯಘನಂ ಕವಿರಾಜ‡ಮಲ್ಲನಾ ॥೬೧

(ಕವಿಕುಂಜರಲೀಲಾವತಿ)

ಪೆಸರೆಸಕದ ಪೊಲ್ಮೆಯುಂ ।
ಪೊಸತೆನೆ ನೆಱೆದುಣ್ಬುದಂಬಿಲಂ ಗಡಮೆಂಬೀ ॥
ಗಸಣಿಯೊಳೊಂದದೆ ನೆಗೞ್ವ* ।
ಳ್ಪೆಸರುಂ ಮಧುರಂ ದಲವನ ನುಡಿಯುಂ ಮಧುರಂ ॥೬೨

(ಧರ್ಮನಾಥಪುರಾಣಂ)

ಪಳಕಿನ ಕಪ್ಪುರವಳಕಿನ ।
ಮಳಯಜದಿಂಗಡಲ ಪೊಳೆವ ಮುತ್ತಿನ ಬೆಳ್ಪಿಂ ॥
ಗಳ ಸಿರಿಗೆ ಸರಿಗೆವರ್ಪುದು ।
ಪಳಚನೆ ಕವಿಭಾಳನೇತ್ರನಿಡುವ ಪದಂಗಳ್ ॥೬೩

(ಅನಂತನಾಥಪುರಾಣಂ)

ತಿಂಗಳ ತಣ್ಣನಪ್ಪ ಕದಿ*ರ್ಗೊಂಗಲೊಳಭ್ಯಸಿಸಿತ್ತೊ ಕಾಮಬಾ ।
ಣಂಗಳೊಳಾದಮೋದಿದುದೊ ಬಂದ ಬಸಂತದ ತಣ್ಣನಪ್ಪೆಲರ್ ॥
ತಾಂ ಗುರುವಾಗೆ ಕಲ್ತುದೊ ವಿಳಾಸವತೀನಯನತ್ರಿಭಾಗದೊಳ್ ।
ಸಂಗಳಿಸಿತ್ತೊ ಮೋಹನಮನಗ್ಗಳ ನಿನ್ನಯ ವಾಕ್ಯಗುಂಭನಂ ॥೬೪

(ಚಂದ್ರಪ್ರಭಪುರಾಣಂ)

§ ಮುಂ ಸವಿದೋಱೆ. ¶ ಸಭೋನ್ನತಸ್ಥಳ. ‡ ವಲ್ಲಭಾ.

ಎಳಗಿಳವಿಂಡಿನಂತೆ ಮಿಳರ್ದಾಡುವ ತುಂಬಿಯ ಬಂಬಲಂತೆ ಕೆಂ |
ದಳರ್ಗಳ ತೊಂಗಲಂತೆ ನಡೆನೋಡುವ ಪೆಂಡಿರ ನೋಟದಂತೆ ಪೂ |
ಗಳ ಪೊಸಗಂಪಿನೊಳ್ ಪೊರೆದು ತೀಡುವ ತೆಂಬೆಲರಂತೆ ತೋರ್ಪ ತಿಂ |
ಗಳ ಸಿರಿಯಂತೆ ಸೋ$ಲಿಸುವುದಾತನ ಕಬ್ಬಮುದಾರನಾದೊಡಂ ॥೩೫

(ಕಬ್ಬಿಗರಕಾವಂ)

ಇನಿಯನ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ |
ದನರಸದಣ್ಪಿನಂತೆ ನನೆಯೇಱಿದ ಮಲ್ಲಿಗೆಯಂತೆ ಪೂರ್ಣಚಂ ॥
ದ್ರನ ಸಿರಿಯಂತೆ ಬಂದಲೆವ ತೆಂಕಣ ತೆಂಬೆಲರಂತೆ ರುದ್ರಭ |
ಟ್ಟನ ಕವಿತಾರಸಂ ಮನಮನಿರ್ಕುಳಿಗೊಳ್ವುದು ಸಜ್ಜನರ್ಕಳಾ ॥೩೬

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಪೀಠಿಕಾಸಂಧಿ.

೨. ಸಮುದ್ರವರ್ಣನೆ.

ಉದಧಿಪುರಾಧಿಪಸುತವಂ |
ತ್ರಿದೂತಗಮನಾಜಿವಿರಹಪರಿಣಯಸುರತ ॥
ರ್ತುದಿನೇಶಚಂದ್ರಮಧುಕುಭೃ |
ದುದಕವನಸ್ಪತಿಯೆ ಕೃತಿಗೆ ಪದಿನೆಂಟಂಗಂ ॥೩೭

(ಉದಯಾದಿತ್ಯಾಲಂಕಾರಂ)

ನೊರೆಯಿಂ ಬುದ್ಬುದದಿಂ ಕಣಾವಳಿಗಳಿಂದಾವರ್ತದಿಂ ತುಂತುಱಿಂ |
ತೆರೆಯಿಂ ಬಳ್ದೆರೆಯಿಂ ತಿಮಿಂಗಿಳಗಿಳಸ್ತೋಮಂಗಳಿಂ ಕಚ್ಛಪೋ ॥
ತ್ಕರದಿಂ ನಕ್ರನಿಕಾಯದಿಂ ಮಕರದಿಂ ನೀರಾನೆಯಿಂ ಕಂಬುವಿಂ |
ವರರತ್ನವ್ರಜದಿಂ ಪ್ರವಾಳಲತೆಯಿಂದೊಪ್ಪಿತ್ತು ನೀರಾಕರಂ ॥೩೮

$ ಸೋಲಿಸದೆ ಕಾವನ.

ಪವಳದ ಕೆಯ್ ಮುಗಿಲ್ಗಳಜವಟ್ಟಿಗೆ ನೀರ್ಗಳ ಸುತ್ತು ಮುತ್ತು ಪು।
ಟ್ಟುವ ಕಣಿ ಬೆಟ್ಟವಕ್ಕಿಗಳ ಗೂಡೆಳನೇಸಱ ತೊಟ್ಟಿಲುದಗ್ರದಾ॥
ನವರಜವಟ್ಟು ಲಕ್ಷ್ಮಿಯು ತವರ್ಮನೆ ತಿಂಗಳ ಪೆತ್ತ ತಂದೆ ಬಾ।
ಡವಶಿಖಿಗಂ ನಿವಾಸಮುಸುರಾರಿಯ ಸೆಜ್ಜೆ ವಲಂ ಮಹಾರ್ಣವಂ॥೧೯

(...............)?

ನಳನೀಗರ್ಭಾಂಡಮಾಲಾಫಳತಮೆನಿಪ ಪೃಥ್ವೀಮಹಾವಲ್ಲಿಯುಂ §ಮಂ।
ಡಳಿಸಿರ್ದಾವಾಲವಂತಿರ್ಪುದು ಜಲಚರಸಂಭೂತಸಂಪದ್ವಿಧಾನಂ॥
ವಿಳಸದ್ರತ್ನಪ್ರತಾನಂ ಕುಲಗಿರಿಶರಣಸ್ಥಾನಮುತ್ಕೀರ್ಣಫೇನಂ।
ಬಳವದ್ವೀಚೀವಿತಾನಂ ಪ್ರಬಳಘುಳುಘುಳುಧ್ವಾನಮಂಭೋನಿಧಾನಂ॥೨೦

(ಜಗನ್ನಾಥವಿಜಯಂ)

ಧರಣೀವನಿತೆಗೆ ಧಾತ್ರಂ।
ವಿರಚಿಸಿದ ವಿಚಿತ್ರಮೇಖಲಾಸೂತ್ರಮೆನಲ್॥
ಕರಮೆಸೆದುದಖಿಲಮಣಿಗಣ।
ಕಿರಣಾವಳವಳಪರೀತಪಾರಾವಾರಂ॥೨೧

(ವರ್ಧಮಾನಪುರಾಣಂ)

ಚಕಿತತರಂಗಸಂಘಹತಿಯಿಂ ಪೊಱಪೊಣ್ಮುವ ಮುತ್ತು ದಿಗ್ವಧೂ।
ನಿಕರದ ತೊಟ್ಟ ಮುತ್ತಿನೊಳೊಡಂಬಡೆ ಸೂಸುವ ಶೀಕರಾಳಿ ತಾ॥
ರಕಗಣದೊಳ್ ಸಮಂಬಡೆಯೆ ತೇಂಕುವ ಮೌಕ್ತಿಕರತ್ನಗರ್ಭಶು।
ಕ್ತಿಕೆ ಪೆಱೆಯೊಳ್ ತಡಂಬಡೆ ಸುಧಾರ್ಣವಮೊಪ್ಪಿದುದುದ್ಗತಾರ್ಣವಂ॥೨೨

(ಜಗನ್ನಾಥವಿಜಯಂ)

ಗಂಭೀರಸ್ಫಾರವೇಳಾಬಹಳಪರಿ†ವೃತೋಲ್ಲೋಲಕಲ್ಲೋಲಮಾಲಾ।
ರಂಭಪ್ರೋಡ್ಡೀನಫೇನಪ್ರಬಳಜಲ‡ಚರೋಲ್ಲೋಲಪಾಠೀನಶುಂಭ॥

§. ತಾಂ ಬಳಸಿ. † ವೃತಾಲೋಲ. ‡ ಚರಾಲೋಲ.

ತ್ಕುಂಭೀ†ರಾಭೀಳನಕ್ರಪ್ರಕರ‡ಕಮಠನೀರೇಭ್ಯರತ್ನಪ್ರಭಾವೋ |
ಜ್ಜೃಂಭತ್ಪ್ರೋದ್ಭಾಸಿವೀಚೀನಿಚಯಘನಘನಾರಾವರೌದ್ರಂ ಸಮುದ್ರಂ ॥೨೩

ಆದು §ಮತ್ತಂತೆಂದೊಡುದ್ವೃತ್ತಕರಿಮಕರಕುಳಕ್ಷೋಭನೀರೇಭರಾಜೀ |
¶ರದನವ್ಯಾಘಾತಪಾತೋತ್ಕಮಠಲುಠನಕಾಠಿನ್ಯಪಾಠೀನಮತ್ಸ್ಯ ॥
ಚ್ಛದನಚ್ಛೇದಾದಿನಾನಾಜಲಚರನಿಕರಾ ‡‡ಸ್ಫಾಳನಪ್ರೋಚ್ಛಲತ್ಪ್ರ |
ಚ್ಛದನಚ್ಛನ್ನಚ್ಛಟಾಪ್ರಕ್ಷುಭಿತಲಹರಿಕಾಸ್ಫಾರರಾವಂ ಸಮುದ್ರಂ ॥೨೪

ಅತುಳೋತ್ತಾಲತಿಮಿಂಗಿಳಪ್ರಬಳಪಕ್ಷೋದ್ಧೂತವಾತಪ್ರಕಂ |
ಪಿತಕುತ್ಕೀಲಸಮಗ್ರ††ದುರ್ಗ್ರಹಘನಗ್ರಾಸಗ್ರಹವ್ಯಗ್ರವಿ ॥
*ಸ್ತೃತವಕ್ತ್ರೋದರಭಾಗಭೂರಿಕಮಠಪ್ರಕ್ಷುಬ್ಧಕಲ್ಲೋಲಕ |
ಲ್ಪಿತಕೋಲಾಹಲಕಲ್ಪಕಾಲರಭಸಪ್ರಸ್ಪರ್ಧಿಯಂ ವಾರ್ಧಿಯಂ ॥೨೫

ಮಿಳಿರ್ವ*ರುಣಧ್ವಜಂಗಳ ನೆೞಲ್ಗಳನೊಂದೆರೆಗೆತ್ತು ವಾರ್ಧಿಯೊಳ್ |
ಪೊಳೆವೆಳವಾಳೆಗಳ್ ಕದು*ರ್ಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ॥
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ |
ಗಿಳನುಮನಾತಿಮಿಂಗಿಳಗಿಳಂಗಳೆ ನುಂಗಿದುವೊಂದು ತಾಣದೊಳ್ ॥೨೬

ಮೀಂಗಳಳತೆ ಯೋಜನದಗ |
ಲಂಗಳವಂ ಪೆಱವು ಬಂದು ನುಂಗುವುವುಮವಂ ॥
ನುಂಗುವುವುಂ ಮೀಣವುಮುಂ |
ನುಂಗುವುವೊಳವುದಧಿಯೊಳ್ ಮಹಾಮತ್ಸ್ಯಂಗಳ್ ॥೨೭

ಕರಿಮಕರಂಗಳುಚ್ಚಳಿತಭಂಗುರತುಂಗತರಂಗಮಾಲೆಯಂ |
ಖರ ರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ॥

---

† ರೋದಾರ ‡ ಮಕರ. § ರಕ್ತಪ್ರವಾಳ. $ ಮತ್ತೇನೆಂ. ¶ ಸದವೋದ್ಯದ್ಭೃತಪಾತಾಕಮಠಲುಠಿತ ‡‡ ಪ್ರಾಳನಪ್ರಾಂತನಪ್ರ |; ಸ್ಫಾಳನಪ್ರೋಚ್ಛಲ| ಚ್ಛಾಛಚ್ಛದನಚ್ಛಟಚ್ಛಟಾ. †† ವಿಗ್ರಹ. * ಶ್ರುತನಕ್ರೋದರಭೂರಿಭಾರಕಮಠಪ್ರಕ್ಷಿಪ್ತ.

ಕರದೊಳ್ ನಾಂದು ಸೇಡುಗೊಳುತಂ ಸುೞಿದೂದುವ ಗಾಳಿ ಬರ್ಪಂದೆ ।
ವರ ವರಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್ ॥೭೮

(ಗುಣವರ್ಮನ ಶೂದ್ರಕಂ)

ಸುೞಿಗಳ್ ನೀರ್ದಿಗುರಿಯುವೊಲ್ ।
ಸುೞಿದುವು ತೆರೆತೆರೆಯನಟ್ಟಿದುವು ಬೆಟ್ಟದ ಬೆಂ ॥
ಬೞಿಯಂ ಬೆಟ್ಟಟ್ಟುವವೊಲ್ ।
ತೞಿ ತಳ್ತುವೊಲಿರ್ದುವೊಗೆವ ಮಣಿಕಿರಣಂಗಳ್ ॥೭೯

(ರಾಮಚಂದ್ರಚರಿತಪುರಾಣಂ)

ಅವಿಲಂಘ್ಯಂ ನಿಜತೇಜವೊಪ್ಪೆ ಶರಣಾಯಾತಂ ಕುಭೃದ್ವಾಹಿನೀ ।
ನಿವಹಂ ಕೂಡಿದ ಪೆಂಪುವೆತ್ತವನಿಯುಂ ತನ್ನಂತೆ ಮರ್ಯಾದೆಯಿಂ ॥
ಭುವನಪ್ರಸ್ತುತರಾಗಿ ಪಾಲಿಪುದು ಧಾತ್ರೀನಾಥರೆಂದೊಲ್ದು ಪೇ ।
ೞ್ವವೊಲುತ್ತುಂಗತರಂಗಘೋಷಗೆ ಕರಂ ವಾರಾಶಿ ಕಣ್ಗೊಪ್ಪುಗುಂ ॥೮೦

ಹರಿಪರಿಶೋಭಿತಂ ಮಕರಹಸ್ತಪರಿಸ್ಫುರಿತಂ ಲಸತ್ಸುಧಾ ।
ಕರಮನಿಮೇಷಭಾಸುರತರಂ ಗುರುಕರ್ಕಟಕಾನ್ವಿತಂ ಘನೋ ॥
ದ್ಧುರತರನಿಸ್ವನಕ್ಷುಭಿತಮೆಂಬ ಮಹಾಮಹಿಮಾವಳಂಬದಿಂ ।
ಧರೆಗೆ ನಭಃಸ್ಥಳಂ ಪೞಿದು ಬಿರ್ದವೊಲಿರ್ದುದು ಘೂರ್ಣಿತಾರ್ಣವಂ ॥೮೧

ಉರಗೇಂದ್ರಾಭಿನುತಾಂತರಂಗಬಹಿರಂಗಶ್ರೀಯುತಂ ವೃತ್ತರ ।
ತ್ನರುಚಿವ್ಯಾವೃತನಿಷ್ಕಳಂಕಹೃದಯಂ ನಿತ್ಯಂ ಗಭೀರಂ ಸುರಾ ॥
ಸುರಸೇವ್ಯಂ ಕಮಠಪ್ರಣೀತವಿಭವಂ ಶ್ರೀಪಾರ್ಶ್ವತೀರ್ಥೇಶನಂ ।
ತಿರೆ ಪೂರ್ಣಂ ಲವಣಾರ್ಣವಂ ಸೊಗಯಿಕುಂ ನೀಲಪ್ರಭಾಡಂಬರಂ ॥೮೨

(ಪಾರ್ಶ್ವನಾಥಪುರಾಣಂ)

ಗದ್ಯ॥ ಆಮಹಾರ್ಣವಂ ಸಮುದ್ರಮಾಗಿಯುಂ ¶ಮಪಾರವಿಸ್ತಾರಿಯುಂ, ಭಂಗವ್ಯಾಕುಲಿತಮಾಗಿಯುಮಚ್ಯುತಪ್ರಭಾವಭಾಸುಗಮುಂ, ಅಪ್ರತಿಷ್ಠಿತ

¶. ಮಹಾ.

ಮಾಗಿಯುಂ ಲಕ್ಷ್ಮೀಜನನಭವನವುಮುಂ, ಮದ್ಯಜನ್ಮಸ್ಥಾನವಾಗಿಯುಂ ಬಾಡಬೋಪಭೋಗಯೋಗ್ಯಮುಂ, ಕಾಳಕೂಟ§ಪ್ರಭವಭೂಮಿಯಾಗಿಯುಮಮೃತೋಪಯುಕ್ಷೇತ್ರಮುಂ, ಜಡಪ್ರಕೃತಿಯಾಗಿಯುಮುದಾತ್ತಸತ್ತ್ವಮುಂ, ವಜ್ರಾವಲಂಬಿಯಾಗಿಯುಂ ಕುಲಶೈಲಪಾಲನಸ್ವಭಾವಯುಕ್ತಮುಂ, ಮುಕ್ತಾಧಾರವಾಗಿಯುಮನಂತಾಧಾರಮುಂ; ಮತ್ತಮದು ರಸಾತಳದಂತೆ ವಿಷಧರನಿಷೇವ್ಯಮುಂ, ಸಾರ್ವಭೌಮಭವನಾಂಗಣದಂತೆ ಅನೇಕವಾಹಿನೀಪ್ರಸಂಗಿಯುಂ, ಗಾಣಿಕ್ಯಗೇಹರಾಜಿಯಂತೆ ಪಲ್ಲವಕಸಂತಾನಕ್ರೀಡಾಪ್ರಪಂಚಮುಂ, ಅರಣ್ಯದಂತಗಣ್ಯವಿದ್ರುಮವಲ್ಲರೀವೇಲ್ಲಿತಮುಂ, ತಾರಾಧ್ವದಂತೆ ದುರ್ಧರಗ್ರಹನಿರುದ್ಧಮುಂ, ನಾಕಲೋಕದಂತೆ†ಅನಿಮಿಷಪ್ರಕೀರ್ಣಕಮುಂ, ಕಂದರ್ಪನಂತೆ ಶಂಬರನುದ್ವಾರಣೋದ್ಧಾರಮುಂ, ಐರಾವತದಂತೆ ಪುಷ್ಕರಶೀಕರೋದ್ಧಾರಮುಂ, ತ್ರಿಪುರಾರಿಯಂತೆ ವಿಷೋರಗಧಾರಿಯುಂ, ಪುರುಷೋತ್ತಮನಂತೆ ಶಂಖಚಕ್ರಾಂಕಿತಮುಂ, ಚತುರ್ಮುಖನಂತೆ ಸರಸ್ವತೀಪತಿಯುಮೆನಿಸಿಪುದಂತುಮಲ್ಲದೆಯುಂ ||೮೩

ಡಿಂಡೀರಾವಳಿ ಶಂಖವಲ್ಲರಿಯಿನೂರ್ಮಿಸ್ತೋಮಮುದ್ವೃತ್ತಿಯು |
ಶ್ಶುಂಡಾಲೌಘದಿನುಗ್ರನಕ್ರಕುಳಮಾವರ್ತಂಗಳಿಂ ವಿದ್ರುಮಂ ||
ಚಂಡೌರ್ವಾನಳದೀಪ್ತಿಯಿಂ ದ್ವಿಗುಣಿಸುತ್ತಿರ್ಪಾಮಹಾಂಭೋಧಿಯಂ |
ಕಂಡುತ್ಕೋಪದೊಳೊಂದು ಬೆಂಚೆಯನೆ ಕಂಡಂತಾದನಬ್ಜೋದರಂ ||೮೪

ಚರಿಯಿಪ್ಪೊಳ್ದಿಣಮಾಯ್ತೆನ್ನುಯ ಸುತಶಶಿಗಶ್ರಾಂತಮೆಂದೆಯ್ದೆ ನೀಳ್ದಾ|
ತೆರೆದೋಳ್ದೊಂಗಲ್ಗಳಿಂದಂ ನಭಮನೊಸೆದು ತಕ್ಕೈಸುತಿರ್ದಪ್ಪುದೆಂಬಂ ||
ತಿರೆ ತನ್ಮೇಘೌಘಮಂ ತಳ್ತಿಡರ್ದು ತುಡುಕುವಾಭೀಳಕಲ್ಲೋಲಮಾಲಾ |
ಕರದಿಂದೊಪ್ಪಿರ್ದುದಾಶಾಬಧಿರಿತಬಹಳಧ್ವಾನರೌದ್ರಂ ಸಮುದ್ರಂ ||೮೫

§ ಪ್ರಭಾವವಾಗಿಯುಂ. † ನಿರ್ನಿಮಿಷ.

ಪದಿನಾಲ್ಕುಂ ಲೋಕಮುಂ ಕೆಟ್ಟೊಡೆಯೊಳ್ ತಳೆದಾವಿಷ್ಣು ತನ್ನೇಕ ದೇಶಾ | ಗ್ರದೊಳಿರ್ಪಂ ವಾರಿದಂ ತನ್ನೊಳ್ ಕತಿಪಯವಾರ್ಬಿಂದುವಂ ಪೇ ಱ ತಂದಂ ॥ ತದಱಿಂದಂ ಲೋಕಮುಂ ತೀವ್ರವುನ ಪವಿಭಯಭ್ರಾಂತಿಯಿಂ ದಂ ಶರಣ್ಬೊ | ಕ್ಕುದು ತನ್ನಂ ಗೋತ್ರಧಾತ್ರೀಧರತತಿಯೆನೆ ಪೆಂಪರ್ಣವ †ಕ್ಕೇಕಭೋಗ್ಯಂ ॥೪೬ (ಜಗನ್ನಾಥವಿಜಯಂ

ಇಂತು ಕಾವ್ಯಸಾರದೊಳ್

ಸಮುದ್ರವರ್ಣನೆ.

೩. ದೇಶವರ್ಣನೆ.

ಆನೆಗೆಟ್ಟ* ಮಹಾವಾರಿನಿ |
ಧಾನಂ ಪರಿವೇಷ್ಟಿಸಿರ್ದ ಜಂಬೂದ್ವೀಪಂ ॥
ತಾನೆಸೆದುದು ವೃತ್ತತೆಯಿಂ |
ದಾನವಮರ್ದನನ ಕೂರ್ಮಮೂರ್ತಿಯ ತೆಱದಿಂ ॥೪೭

(ಜಗನ್ನಾಥವಿಜಯಂ)

ವರಯೋಷಿಜ್ಜನಮಂ ಪುರಂ ಪುರಮನೊಳ್ಪಿಂಗೋಂಟೆ ಪೂಂಗೋಂಟೆಯಂ|
ತರುಷಂಡಂ ತರುಷಂಡಮಂ ಬಹುತಟಾಕಂಗಳ್ ತಟಾಕಂಗಳಂ ॥
ಪರಿಕಾಲ್ಗಳ್ ಪರಿಕಾಲ್ಗಳಂ ಬೆಳೆದ ಕೆಯ್ಗಳ್ ಕೆಯ್ಗಳಂ ಸುತ್ತಿ ಪಾ |
ವರಿಯರ್ ತಳ್ತಿಳಕೆಯ್ಯೆ ಚೆಲ್ವನೊಳಕೊಂಡಿರ್ಕುಂ ತಮರ್ವಿತಳಂ॥೪೮

(ವರ್ಧಮಾನಪುರಾಣಂ)

ಎನಸುಮಶೋಕಭಾಜಿ ವನಮುಂ ಜನಮುಂ ಸುಮನಶ್ಶಿಳೀಮುಖಾ |
ಸನಮದನಾನುಷಂಗಿ ವನಮುಂ ಜನಮುಂ ಸುಮನೋವಿಲಾಸನೂ ॥
ತನತಿಳಕೋಪಶೋಭಿ ವನಮುಂ ಜನಮುಂ ಕಮಲಾಕರಾವಲಂ |
ಬನಜನಿತಾದ್ರ್ರಭಾವಮಹಿತಂ ವನಮುಂ ಜನಮುಂ ತದುರ್ವಿಯೊಳ್ ॥೪೯

(ಪುಷ್ಪದಂತಪುರಾಣಂ)

---

† ಕ್ಕೆನೆ ಚೋದ್ಯಂ.

ಬಲಿರಾಜ್ಯಂ ಸತತಂ ಪ್ರಜಾಪ್ರತತಿಗೆಲ್ಲಂ ಯೌವನಶ್ರೀಭರಂ ।
ಸಲೆ ಕಾಂತಾತತಿಗೆಲ್ಲಮೂರ್ಜಿತವಸಂತಂ ಸಂತತಂ ನಂದನಾ ॥
ವಳಿಗೆಲ್ಲಂ ರತಕೇಳಿರಾಗ¶ಮನಿಶಂ ಸ್ತ್ರೀಪುಂವ್ರಜಕ್ಕೆಲ್ಲಮು ।
ಜ್ಜ್ವಲಚಂದ್ರಾತಪಮೊರ್ಮೆಯುಂ ರಜನಿ†ಜಾತಕ್ಕೆಲ್ಲಮಾದೇಶದೊಳ್ ॥೯೦

§ದಲಿತಾಬ್ಜಪ್ರಸರಂ ಸರಂ ಕುಸುಮಮಾಲಾರಾಮಮಾರಾಮಮು ।
ಜ್ಜ್ವಲರತ್ನಾರ್ಚಿರಲಂಕೃತಂ ಕೃತಕಶೈಲಂ ರಾಜಕೀರಚ್ಛದಾ ॥
ನಿಲಲೋಲತ್ಕಣಿಶಾಳಿ ಶಾಳಿ ಜನಚೇತೋನಂದನಂ ನಂದನಂ ।
ಲಲಿತಶ್ರೀಪರಿರಂಜನಂ ಜನಮೆ ನಲ್ ಚೆಲ್ವಾದುದುರ್ವೀತಳಂ ॥೯೧

(ಜಗನ್ನಾಥವಿಜಯಂ)

ಇಲ್ಲ ಮರಾಳಮಿಲ್ಲದ ಕೊಳಂ ಕೊಳನಿಲ್ಲದ ಪಾಣಿಪಾಡು ಪಾ ।
ಡಿಲ್ಲದ ತುಂಬಿ ತುಂಬಿಗಳ ಗೊಂದಣಮಿಲ್ಲದ ಪೂ ಮರಲ್ಲ ಪೂ ॥
ವಿಲ್ಲದ ಮಲ್ಲಿಕಾಲತಿಕೆ ಮಲ್ಲಿಗೆಯಿಲ್ಲದ ಬಂದ ಮಾವು ಮಾ ॥
ವಿಲ್ಲದ ನಂದನಂ ಕುಳಿರ್ವ* ನಂದನಮಿಲ್ಲದ ಜಾತಿಜಾಂಗಣಂ ॥೯೨

(ಅನಂತನಾಥಪುರಾಣಂ)

ಬಳಸ್ವರ್ದದ್ರಿಯ ಕಲ್ಗಳೆಲ್ಲಮವು ಪೊನ್ನುಂ ರನ್ನಮುಂ ಪೂಗೊಳಂ ।
ಗಳ ನೀರೆಲ್ಲಮನೇಕಸಿದ್ಧರಸಮುಂ ಪೀಯೂಷಮುಂ ಕೆಯ್ವೊಲಂ ॥
ಗಳ ಸಸ್ಯಾ‡ವಳಿಯೆಲ್ಲಮೊಳ್ಗಬಿಮೆ¶ಯುಂ ಪುಂಡ್ರೇಕ್ಷುವುಂ ನಂದನಂ ।
ಗಳ ಧಾತ್ರೀರುಹಜಾತಮೆಲ್ಲಮಮರೋರ್ವೀಜಾತಮುಂ ಚೂತಮುಂ ॥೯೩

(ಜಗನ್ನಾಥವಿಜಯಂ)

ಭೂತಳವರ್ತಿಯಪ್ಪ ವಿಷಯಾಳಿ ವಿಚಾರಿಪೊಡಾವಗಂ ನದೀ ।
ಮಾತೃಕದೇವಮಾತೃಕಮೆ ತದ್ವಿಷಯಂ ನವನಾಳಿಕೇರಮಾ ॥

¶ ನಿವಹಂ † ಗಂಡುಂಕುಂದದಾ. § ಲಲಿ.
§ ದಳ್ಳಿ. ‡ ೪ಗೆಲ್ಲ. ¶ ಗಳ್.

ವರ್ಣಾತ್ಮಕಮಿಂದುಕಾಂತಜಲಮಾತ್ಮಕಮಿಕ್ಷುಲಸದ್ರಸಾ¶ವಳೀ |
ಮಾತ್ಮಕಮಾಮ್ರಕಮ್ರಪರಿಪಕ್ವಫಲೋತ್ಕರಸಾರಮಾತ್ಮಕಂ ||೯೪
(ಚಂದ್ರಪ್ರಭಪುರಾಣಂ)

ಪರಿಮಳದಿಂ ನಿಜಕುಂತಳ |
ಭರಮಂ ಪೊರೆಯೆಂಬರಲ್ಲದೊರ್ವರನೊರ್ವರ ||
ಪೊರೆಯೆಂಬವರಿಲ್ಲಲ್ಲಿಯು |
ನರನಾರೀಜನದೊಳನ್ನದೆನ್ನದು ದೇಶಂ ||೯೫
(ಧರ್ಮನಾಥಪುರಾಣಂ)

ನಿಗಡಂ ಸೋರ್ಕಾನೆಯೊಳ್ ವಿಗ್ರಹವೊದವಿದ ವಾದಂಗಳೊಳ್ ದಂಡಮುತ್ತೇ | ತುಗಳೊಳ್ ಕಾರ್ಶ್ಯಂ ವಧೂಮಧ್ಯದೊಳತಿಕಠಿನತ್ವಂ ಕುಚದ್ವಂದ್ವದೊಳ್ ವ || ಕ್ರಗಮಂ ನಕ್ಷತ್ರದೊಳ್ ಭಂಗದ ಪರಿ ತೆರೆಯೊಳ್ ಕಂಟಕಂ ಹರ್ಷದೊಳ್ §ಬ | ಲ್ಪುಗೆ ಕಾವ್ಯ†ಪ್ರೌಢರೊಳ್ ತಳ್ತುಱುವುದೆಮೆಯೊಳುಂಟಿಲ್ಲ ಬೇಱಲ್ಲಿ ನಾಡೊಳ್ ||೯೬ (ಅನಂತನಾಥಪುರಾಣಂ)

ಧೃತಧರ್ಮಚ್ಯುತಿ ಬಾಣಸಂಹತಿಗೆ ಶುಂಡಾವೈಕೃತಂ ವಾರಣ |
ಕ್ಕೆ ತಮಸ್ಸಂತತಿ ರಾತ್ರಿಗೞಿ ಸುಗಂಧೋತ್ಫುಲ್ಲಪುಷ್ಪಕ್ಕಪಾ ||
ತ್ತ ತಪೋಹೀನತೆ ಚೈತ್ರದೇೞ್ಗೆ ಮಹಸ್ವಂದಿಗ್ರಹಂ ತ್ಯಾಗಿಗ |
ಬ್ರತಯೋಗಂ ಜಲಪಕ್ಷಿಗಲ್ಲದೆ ಜನಕ್ಕಿಲ್ಲಲ್ಲಿ ಬೇಱಲ್ಲಿಯುಂ ||೯೭
(ಪುಷ್ಪದಂತಪುರಾಣಂ)

ಸತತಂ ಮಾರ್ಗೋಲ್ಲಂಘನ |
ಗತಿ ಹಯದೊಳವಗ್ರಹಂ ಮದೇಭಸಮೂಹಾ ||
ಕೃತಿಯೊಳ್ ಸಮದಾಗಮನ |
ಸ್ಥಿತಿ ನಲ್ಲರೊಳಲ್ಲದಿಲ್ಲ ಪೆಱತೊಂದೆಡೆಯೊಳ್ ||೯೮
(ಚಂದ್ರಪ್ರಭಪುರಾಣಂ)

¶ ಳಿಕಾ. § ಸ್ವಾತಿಗೆ. † ಪ್ರಾಡಿಯೊಳ್.

ಮೇವರೊಳಲ್ಲದೆ ವಂಶ ।
ಚ್ಛೇದಂ ಗಾರುಡದೊಳಲ್ಲದಹಿತತ್ವಂ ಪೊಂ ॥
ಗೇದಗೆಯ ಪೊದಱೊಳಲ್ಲವಿ ।
ೞಾದುರ್ಧರಕಂಟಕತ್ವಮಿಲ್ಲಾನಾಡೊಳ್ ॥೯೯

ನೆಗೞ್ದ ಮಹಾಲಯಮಲ್ಲದೆ ।
ನೆಗೞ್ದ* ಮಹಾಲಯಮದಿಲ್ಲ ಯುತವರನಾರೀ ॥
ಯುಗಪರಿವರ್ತನಮಲ್ಲದೆ ।
ಯುಗಪರಿವರ್ತನಮದಿಲ್ಲ ತದ್ಭೂತಳದೊಳ್ ॥೧೦೦

ಬಾಲಾಶೋಕಂ ವಿಗ್ರಹ ।
ಲೀಲೆ ರಜೋವಿಕೃತಿ ಜಾತಿಸಂಕರಮನಿಲೋ ॥
ಲ್ಲೋಲತರಶಿಖಿಶಿಖಾಕುಲ ।
ಕೋಲಾಹಲಮಿಲ್ಲ ಬನದೊಳಲ್ಲದೆ ನಾಡೊಳ್ ॥೧೦೧

(ಪುಷ್ಪದಂತಪುರಾಣಂ)

ಪರಕಟಕಾವೃತಿ ಭೃತಮಧು ।
ಕರಮಾತಂಗಪ್ರವರ್ತನಂ ಸತ್ಪಥಭೀ ॥
ಕರಕಂಟಕವಂಶೋನ್ನತಿ ।
ಪರಿಭಾವಿಪೊಡಿಲ್ಲ ನಗದೊಳಲ್ಲದೆ ನಾಡೊಳ್ ॥೧೦೨

(ಧರ್ಮನಾಥಪುರಾಣಂ)

ಪ್ರತಿಕೂಲತೆ ನದಿಯೊಳ್ ಸಂ ।
ಗತವಿಘಟನಮರಿಪವಂಗಳೊಳ್ ಸ್ವಾರ್ಥಾಪ ॥
ಹ್ನುತಿಯೆಂಬುದಲಂಕಾರ ।
ಪ್ರತತಿಯೊಳೇ ನೆಗೞ್ಗ*ಮಲ್ಲದಿಲ್ಲಾನಾಡೊಳ್ ॥೧೦೩

ಮೇಳಸಿ ಕಾಯ್ದಿಱಿವುನು ವನ ।
ಪಾಳರೊಳಾಱಿಡಿಯ ಮಸಕದೆಸಕಂ ಸುಮನೋ ॥

ಮಾಳಿಕೆಯೊಳ್ ಕಳ್ದೋಡುವ ।
ಶೀಳಂ ಶೌಂಡಿಕರೊಳಲ್ಲದಿಲ್ಲಾ ನಾಡೊಳ್ ॥೧೦೪

(ಪುಷ್ಪದಂತಪುರಾಣಂ)

ಕಳಕಂಠಕ್ಕತನುಗೆ ಚಾ ।
ಪಳತಾರೋ†ಪಣವಿಕಾರವುಳಗಾಮ್ರಕುಜಾ ॥
ವಳಗೆ ಮಧುವಿಕೃತಿ ಮಾನವ ।
ಕುಳಕ್ಕೆ ಕನಸಿನೊಳಮಿಂತಿವಿಲ್ಲಾ ನಾಡೊಳ್ ॥೧೦೫

(ರಾಮಚಂದ್ರಚರಿತಪುರಾಣಂ)

ಪರಿಕಿಸುವೊಡವಗ್ರಹಮು ।
ದ್ಧುರಸಿಂಧುರಬಂಧುರಾಂಗದೊಳ್ ಗುಣಲೋಪಂ ॥
ವರಶಬ್ದಶಾಸ್ತ್ರದೊಳ್ ತಾಂ ।
ದೊರೆಕೊಳ್ಗುಮದಲ್ಲದಿಲ್ಲ ತಜ್ಜನಪದದೊಳ್, ॥೧೦೬

(ವರ್ಧಮಾನಪುರಾಣಂ)

ಗಿಳಿಗಳ ಚಂಚುವಿಂದೊಡೆದ ಮಾವಿನ ಪಣ್ಣ ರಸಪ್ರವಾಹದಿಂ ।
ಬೆಳೆವುದು ಗಾಳಿಯಿಂದೊಡೆದ ಕರ್ಬಿನ ಸೋರ್ವೆಳನೀರ ಸಾರ್ದಿಂ ॥
ಬೆಳೆವುದು ಪಾಮರೀಮುಖಶಶಿದ್ಯುತಿಯಿಂದೊಸರ್ವಿ*ಂದುಕಾಂತನಿ ।
ರ್ಝರಜಲಪೂರದಿಂ ಬೆಳೆವುದಲ್ಲಿಯ ಬಂಧುರಗಂಧಶಾಲಿಗಳ್ ॥೧೦೭

ಬನವಿನ ಶಾಳಿ ಗರ್ದೆಗಳ ಪಾಳಿ ಕುಕಿಲ್ವ ಶುಕಾಳಿ ತಣ್ಪುವೀ ।
ಜವ ಸುಳಿಗಾಳಿ ಪಾಮರಿಯರೋಳಿ ವಿಟೀವಿಟಕೇಳಿ ಪೂಗಳಂ ॥
ಕೆದಱಿದ ಧೂಳಿ ಪಾಡುವ ಮದಾಳಿ ಪೊದಳ್ದಲರೋಳಿಯೆಂಬಿನಂ ।
ಮದನನ ದಾಱಿಗೆತ್ತು ಸುಗಿದಿರ್ಪುದು ಪಾಂಥಜನಂ ನಿರಂತರಂ ॥೧೦೮

(ಪುಷ್ಪದಂತಪುರಾಣಂ)

ಸಲೆ ಕಾಲಂ ಪಿಡಿದೆತ್ತಿರಲ್ ಭುವನಮೆನ್ನಿರ್ದಲ್ಲಿಗಾಂ ಮುನ್ನಮಾ ।
ದೊಲವಿಂದಂ ತಲೆಗೊಯ್ಸಿಕೊಂಡೆನೆನುತುಂ ಲಜ್ಜಾಮಹಾಭಾರದಿಂ ॥

---

† ಹಣ.

ತಲೆವಾಗಿತ್ತನೆ ಪಕ್ವಶಾಳಿ ಕಣಿಶಾಳೀನವುಂ ವೊಪ್ಪಿದುರ್ದೇಂ ।
ಗೆಲೆವಂದತ್ತೊ ಸುವರ್ಣವರ್ಣದಿನಿಳಾಶ್ರೀಯುಟ್ಟ ಪೊಂಬಟ್ಟೆವೋಲ್ ॥೧೯
(ಜಗನ್ನಾಥವಿಜಯಂ)

ತಿಳಿದ ತಡಿವಿಡಿದ ಮಡಿಗಳ ।
ಜಳದೊಳ್ ರಂಜಿಸುವ ಧಾನ್ಯಮಂಜರಿಯು ನೆಟಿಲ್ ॥
ಪೊಳೆಯೆ ತೆನೆವೊತ್ತುವಿವು ಬೇ ।
ಗ೯ಳನೆನಿಪುವು ಬೆಳೆದ ಕಟಿಮೆ ಭೂಸಾರತೆಯಿಂ ॥೧೧೦

ತೊಲಗದೆ ಗಂಧಶಾಲಿವನವುಂ ತಟಜೋತ್ಪಲಗಂಧದೊಳ್ ತಡಂ ।
ಗಲಿಸಿವ ಕಂಪಿನಾಸೆಗೆ ಮುಸುಂಕಿದ ಭೃಂಗಕದಂಬಕಂ ಕೃಷೀ ॥
ವಲತತಿ ಕೀರವಾರತತಿ ಶಂಕೆಯಿನಾನವನೀಲಚೇಲಸಂ ।
ಕುಲದೊಳೆ ಕೂಡೆ ಬಾಸಣಿಸಿತೆಂಬ ವಿಕಲ್ಪಮನುಂಟುಮಾಡುಗುಂ ॥೧೧೧
(ಚಂದ್ರಪ್ರಭಪುರಾಣಂ)

ಮಡಿಯೊಳ್ ಪಾಲ್ದೆಗಿರ್ದ ಶಾಳವನದೊಳ್ ಕೀರಾಳಿಯಂ ಸೋವಲೊ ।
ಲ್ಮಡಿಯಿಂದಂ ಮಿಡಿವಿಲ್ಲೊಳಿಟ್ಟೊಡೆಯೊಳ್ ಪುಂಡ್ರೇಕ್ಷುವಂ §ತಾಗೆ ಗಂ॥
ಟುಡಿದೆತ್ತಂ ರಸವೆಚ್ಚುಪಾಯೆ ಪಥಿಕರ್ ಪೊಕ್ಕೀಂಟುತುಂ ಕೈಯುಬಾ ।
ಯೆಡೆಯುಂ ಸಾರ್ಚುತೆ ಕಂಡು ಬೆಂಡುಬೆಗಪ್ಪರ್ ಪಾಮರೀವಕ್ತ್ರಮಂ ॥
(ಅನಂತನಾಥಪುರಾಣಂ)

ಕಲೆವಿಲೊಗ್ಗಂಡುದ್ದ ಮಾಸ್ತ್ರಂ ಕವಿದಿಸುತೆ ಕನಲ್ದಟ್ಟೆ ಕಣ್ಗೆಟ್ಟು ಬೆಂಗೊ ।
ಟ್ಟಲರ್ವಂಡಿಂದಾವ ಬಂಬಲ್ದೊ ಜೊಗಳ ನಲವಿಂ ದಾಂಟ ಪೋಪನ್ನೆಗಂ ತ ॥
ತ್ಕಲಮಕ್ಷೇತ್ರಂಗಳೊಳ್ ಪಾಮರಿಯುರ ನವಲಾವಣ್ಯವಾರಾಶಿಯುಡ್ಡಂ ।
ನಿಲೆ ನಿಲ್ಕುಂ ಸಿಲ್ಕಿ ಕಾಲ್ಕುಪ್ಪಳಿಸಿ ನಡೆಯದಲ್ಲಿಂದೆ ಪಾಂಥಪ್ರತಾನಂ ॥೧೧೪

ಅರಗಿಳಿವಿಂಡು ಪಾಱೆ ನಸು ಸೋಂಕಿದೆಱಂಕೆಯ ಗಾಳಿಗೊಂದಿನೊಂ ।
ದೊರಸೆ ನಿರಂತರಂ ಸುರಿವ ನುಣ್ದನಿವಾಲ್ಗಳ ಧಾರೆಗೊಡ್ಡಿ ಚಂ ॥

§ ಕೊಂಡು. $ ಯೊಳ್ಪಾರ್ಚುಗೆ.

ಚತುರನಿಜಚಂಚುವಿಂ ಸವಿದು ಸಂತಸದಿಂದೆರಡಳ್ಳೆ ಪಿಱ್ಗುವಂ ।
ದರಗತಿಯಿಂ ಮರಳ್ದು ಸುೞಿದಾಡುಗುಮಲ್ಲಿ ಮರಾಳಮಂಡಲಂ ॥೧೧೪

ಪೊಱಸಲೆಂದು ಬಂದು ಬಳಿಗಳ್ ಘುಳಿಲೆಂಬಿನಮಿಂಬುಮಿೞ ಮೆ ।
ಯ್ದೋಱುವ ತನ್ನ ಕೈಪಱಿಗೆ ಬೆರ್ಚಿ ಶುಕಂ ತೆನೆಗರ್ಚಿ ಬೇಗದಿಂ ॥
ಪೊಱ ಮಡಲ್ತು ಮಂಡಳಿಸೆ ಗರ್ದೆಗಳೆರ್ದ್ದು ನಭಕ್ಕೆ ಮೊಕ್ಕಳಂ ।
ಪೊಱದುವೆಂದು ಪಾಮರಿಯರೀಕ್ಷಿಸರಾರ್ದು ನಭೋವಿಭಾಗಮಂ ॥೧೧೫

ಪವಣಿಂ ನೋಡದೆ ನಾಡೆಯುಂ ಸೆಣಸಿ ಮುನ್ನೆಕ್ಕೆಕ್ಕೆಯಿಂ ಪಕ್ಕಿಸೋ ।
ವ ವರಸ್ತ್ರೀಯುಗ ಸೀಯನಪ್ಪ ನುಡಿಯಂ ಕೇಳ್ದಾಗಳಂತಾತ್ಮಗ ॥
ರ್ವವನೀಡಾಡಿ ಬಿಗುರ್ತು ತಂಬುಲಕೆ ಬಾಯಾಂಪಂದದಿಂ ಬಂದು ಪಾ ।
ಯ್ವುವು ಕೀರಾಳಿಗಳಲ್ಲಿ ಪಾಮರವಧೂಬಿಂಬಾಧರಕ್ಕಾವಗಂ ॥೧೧೬

(ಧರ್ಮನಾಥಪುರಾಣಂ)

ಗಗನದೊಳೆಯ್ದೆ ಮಂಡಳಿಸಿ ನಿಂದ ಶುಕಾಳಿಯನಂದು ಬೆರ್ಚಿಪು ।
ಜ್ಜುಗದೊಳೆ ನೋಳ್ಪ ಪಾಮರಿಯ ಚಾರುಕಟಾಕ್ಷಮರೀಚಿ ನೀಳ್ದು ಶೋ ॥
ಭೆಗೆ ನೆಲೆಯಾಯ್ತು ತತ್ಕಲಮಭೂರಮೆಗೆತ್ತಿದ ಪಚ್ಚನಪ್ಪ ಸ ।
ತ್ತಿಗೆಗಳವಟ್ಟು ತೋರ್ಪ ಶಶಿಕಾಂತದ ಕಾಂತದ ಕಾವಿದೆಂಬಿನಂ ॥೧೧೭

(ಚಂದ್ರಪ್ರಭಪುರಾಣಂ)

ಕಳಮಕ್ಷೇತ್ರದುಪಾಂತನಂದನದೊಳರ್ದಾನಂದದಿಂ ಪಕ್ಕಿಸೋ ।
ವ ಳತಾಂಗೀಜನದೊಂದು ಮೆಲ್ಲುಲಿಪುಮಂ ಕೇಳ್ದಂತದಂ ತದ್ವನಾಂ ॥
ತಳತಾನೀಕದಿನುಣ್ಮುತಿರ್ಪ ಕಳಕಂಠಧ್ವಾನಸಂತಾನಮಂ ।
ದಿಱಿಕೆಯ್ದಂತುಮಗಲ್ದು ಪೋಗವು ರುಮತ್ಕೀರಾಳಿ ಕೇದಾರದಿಂ ॥೧೧೮

(ಜಗನ್ನಾಥವಿಜಯಂ)

ಅವಿರಳಮಾದ ತುಂಗಕುಚಭಾರದೆ ತೋಳ್ಸಳೆದಿಟ್ಟ ತಕ್ಕಿನೊಳ್ ।
ಕವಣೆಯು ಗುಂಡು ಪಾಯ್ದುವು ಮೃಗಾವಳಿ ಪಾಯ್ದುವು ಕೆಯ್ಗೆ ಪಾಮರೀ ॥

ಯುವತಿಯರಾರ್ದು ಚಪ್ಪರಿಸೆ ಕೋಗಿಲೆಯಿಂಚರವೆಂದು ಬೆರ್ಚಿ ಪಾ ।
ಱುವ ಗಿಳಿವಿಂಡು ಪಾಂಥರೆರ್ದೆ* ಪೌವನೆ ಪಾಱುವುದಾಪ್ರದೇಶದೊಳ್ ॥೧೧೯

ಪುಳಕಂ ಕೈಮಿಗೆ ಮಾಱ್ಗಮೆಂಬ ಬಗೆಯಿಂ ರೂಪಂ ಕರಂ ಮೆಚ್ಚಿಯುಂ।
ತಲೆಯುಂ ತೂಗದೆ ಪಾಂಥರೀಂಟಿ ವಿಕಸತ್ತೃಷ್ಣಾತುರರ್ ಚಿತ್ತಭೂ ॥
ತಲಮಂ ನಾಂಟಿದ ಬೇಂಟಮೆಂಬಗೆಗೆ ನೀರ್ವೊಯ್ವಂತೆ ಭೃಂಗಾರಶೀ।
ತಲತೋಯಂಗಳನಾಂತು ಪಾಣಿತಳದೊಳ್ ಪೊಯ್ವರ್ ಪ್ರಪಾಕಾಂತೆಯರ್ ॥
(ಕವಿಕುಂಜರಲೀಲಾವತಿ)

ಜಳಪಾನಚ್ಛಳದಿಂ ಪ್ರಪಾಪ್ರಣಯಿನೀಶೃಂಗಾರಲೀಲಾಸುಧಾ ।
ಜಳಮಂ ಕಣ್ಗಳನೀಂಟಿ §ಮಂದಪರಿಹಾಸಾಲಾಪಮಾಲಾಮೃತಾ ॥
ವಳಿಯುಂ ಕರ್ಣದಿನೀಂಟಿ ಭಾವ¶ರತಕೇಳೀಸೌಖ್ಯಪೀಯೂಷಮಂ ।
ಕುಳಮಂ ಚಿತ್ತದಿನೀಂಟಿ ತದ್ವಿಷಯ‡ದೊಳ್ ಧನ್ಯರ್ ಮನಂಬೆರ್ಚುವರ್॥೧೨೧

ಕಲಶಮನೆತ್ತಿ ನೀರೆಱೆವ ಕಾಂತೆಯ ತೋಳ ತೆರಳ್ಕೆ ಮೇಲುದಂ ।
ತೊಲಗಿಸೆ ನೋಡಿ ಸುಣ್ಬೊಗರ†ನೀಂಬ ಕುಚದ್ವಯಮೂಲಮಂ ಸಮು ॥
ಜ್ಜ್ವಲಭುಜಮೂಲಮಂ ನೆಱೆಯೆ ಕಂಡೆರ್ದೆ*ಯಾಱಿದೊಡಂ ನಿರೀಕ್ಷಣಾ।
ಕುಳತೆಯಿನೀಂಟುವರ್ ಪಥಿಕರಾಕಳಶಾಂಬುವೆ ಸೀಮೆಯೆಂಬಿನಂ ॥೧೨೨
(ಚಂದ್ರಪ್ರಭಪುರಾಣಂ)

ವನಲಕ್ಷ್ಮೀಶ್ವಸಿತಂಬೊಲಾಡುವೆಲರಿಂದಂ ಕಂಪಿಸುತ್ತಿರ್ದ ಕ ।
ರ್ಬಿನ ಕೋಲ್ಗಳ್ ಬಿಡದೊಂದನೊಂದೊರಸೆ ಪರ್ಣಾಘಾತದಿಂದುರ್ಬಿ ಭೋ ॥
ರೆನೆ ಪಾಯ್ತರ್ಪ ರಸಪ್ರವಾಹಚಯದಾವಾಲಂಗಳಂ ತೀವುತಿ ।
ರ್ಪಿನಮಿರ್ದತ್ತಮೃತಾಕರಾವನಿಯವೋಲ್ ಪುಂಡ್ರೇಕ್ಷುವಾಟೀಕುಲಂ ॥೧೨೩
(ಜಗನ್ನಾಥವಿಜಯಂ)

---

§ ಮಂದ್ರ. ¶ ರಸ. ‡ ಪಥ್ವನ್ಯರ್. † ನಾಂತ.

ಕಱಿದುಮೆನಿಪೆಲೆಗಳ ಬಾ ।
ಯ್ದಾರೆಗಳೆಲರ್ವೆಲೆಯೆ ಸೋಂಕಿ ಪೞಿಮುಗುವ ರಸಾ ॥
ಸಾರಮೆ ಕೆೞಗೊಂಡೆಂದುಂ ।
ನೀರೂಟಕ್ಕೆಳಸವಲ್ಲಿ ಕರ್ಬಿನ ‡ ಕೆಯ್ಗಳ್ ॥೧೨೪

(ಚಂದ್ರಪ್ರಭಪುರಾಣಂ)

ಸ್ಫುರಿಯಿಸುವೆಮ್ಮ ಪುರ್ಬೆ ನೆಱಗುಂ ಜಗಮುಂ ಗೆಲಲಿನ್ನಿದೇಕೆ ನೀಂ ।
ಪರಿಹರಿಸೆಂದುಮುತ್ಕಲದ ಕರ್ಬಿನ ಬಿಲ್ಲನನಂಗನಿಂದಗ ॥
ಲ್ಪರಿಸಿದರೀಪುರಾಂಗನೆಯರೆಂಬ ಕನಲ್ಕೆಯಿನಿಕ್ಷುಕೋಟಿ ಪ ।
ಲ್ಮೊರೆವವೊಲಿಕ್ಷುಯಂತ್ರನಿವಹಂ ಮೊರೆವಬ್ಬರಮೊಂದಮುಬ್ಬರಂ ॥೧೨೫

(ಪುಷ್ಪದಂತಪುರಾಣಂ)

ಇಂತು ಕಾವ್ಯಸಾರದೊಳ್

ದೇಶವರ್ಣನಂ.

೪. ನಗರೋಪವರ್ಣನಂ.

ದಿಕ್ಕಾಮಿನಿಯರ ಕಂಡಂ ।
ದಕ್ಕಂ ಕಣ್ಣೆಂಜಲೆಂದು ಧಾತ್ರಪುರಶ್ರೀ ॥
ಗಿಕ್ಕಿದ ಪಜ್ಜೆಯ ಜವನಿಕೆ ।
ಯೆಕ್ಕಮಿದೆನಿಸಿದುದು ಬಳಸಿದುಪವನಷಂಡಂ ॥೧೨೬

(ವರ್ಧಮಾನ ಪುರಾಣಂ)

ಅಳಿಮಾಲಾಕೇಶಮುಂ ಮೆಲ್ಲನೆ ಬರೆತೆಗೆದಬ್ಜಾನನಾಮೋದಮುಂ ಪೀ ।
ದರ್ನ ಲತಾಂಗಾಲಿಂಗಮುಂ ಸಂಗಳಿಸಿ ಕೃತಕಶೈಲೇಂದ್ರಶುಂಭನ್ನಿತಂಬ ॥
ಸ್ಥಲಮುಂ ತನ್ನಿರ್ಝರಾಂಬುಸ್ಮರರಸಮೊ*ಸರ್ವಂತೇಱೆ ನಿಚ್ಚಂ ವನಶ್ರೀ ।
ಗೊಲಮಂ ಮಾಡುತ್ತುಮಿರ್ಕುಂ ಚತುರವಿಟನವೋಲ್ ದಕ್ಷಿಣಾಶಾಸಮೀರಂ ॥

§ ರೆಲೆಯಾತಾಗಿ.　　‡ ತೋಟಂ

ಎಳಲತೆಯೆಂಬ ನಟ್ಟಣಿಯನಾಡಿಸಿ ತುಂಬಿಗಳೆಂಬ ಗಾಯಕಾ ।
ವಳಿಯನಲಂಪಿನಿಂ ತಗುಳೆ ಪಾಡಿಸಿ ಕೂಡೆ ಬಱಲ್ದು ನೋೞ್ಪ ಪೆ ॥
ಣ್ಗಳ ವದನಂಗಳಂ ಬಳಸಿ ಬೇಂಟದ ರಾಜಕುಮಾರಲೀಲೆಯಿಂ ।
ತಳೆವುದು ತತ್ಪುರೋಪವನವೀಥಿಯೊಳಾಡುವ ಮಂದಮಾರುತಂ ॥೧೨೮

ಸರಸಿಯನೀರಜಂಗಳ ರಜಂಗಳ ಪೊಂಪುಱವೆತ್ತ ಕಂಪಿನೊಳ್ ।
ಬೆರಸಿ ತದಂತರಂಗದ ತರಂಗದ ನಿರ್ಮಲಬಿಂದುಬೃಂದಮಂ ॥
ಧರಿಯಿಸಿ ತೀರಸಾಗರದ ಸಾರಸದಾಗರಮಂ ತೆರಳ್ಚಿ ಸಂ ।
ಚರಿಸಿ‡ದುದೊಪ್ಪವಂತು ಪವನಂ ನಿಜಮಂದಿರಮಂದಚಾರದಿಂ ॥೧೨೯

(ಜಗನ್ನಾಥವಿಜಯಂ)

ತಳರಂ ಮೆಲ್ಲನೆ ¶ನೂಂಕಿ ಮಾಮಿಡಿಗಳಂ ಸೆಂಡಾಡುತುಂ ಕೂಡೆ ಪೂ ।
ಗಳ ದೂಳಿಂ ಪೊಱಯೇೞುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ ॥
§ಬಱಯಂ ಕೈಮಿಗೆ ಬರ್ಪ ತುಂಬಿ⁑ಯುಲಿಯಿಂದಂ ಡಂಗುರಂಬೊಯ್ಸುತುಂ ।
ತಳರ್ದೇಂ ಬಂದುದೊ ಕಾವನಾನೆ+ಯುವೊಲಾತಂಗಾಳಿ ತನ್ನಿಚ್ಚೆಯಿಂ ॥೧೩೦

(ಕಬ್ಬಿಗರಕಾವಂ)

ತಳರಂ ತೂಗಿ ಪರಾಗಮಂ ಪಿಡಿದು ಪೂನೀರಂ ತಡಂಗೊಂಡಿ ಗು ।
ಗ್ಗುಳನಿರ್ಯಾಸಮನಾಂತು ಚಂದನರಸಕ್ಷೋದಂಗಳಂ ಪೊತ್ತು ಶೀ ॥
ತಳಕರ್ಪೂರಮೃಗೋದ್ಭವಾಗುರುಕುಮುಸ್ತಾಗ್ರನ್ಥಿಗಂಧಂಗಳಂ ।
ತಳೆದೇಂ ಗಂಧಿಗರಂತೆ ಬಂದಲೆದುದೋ ಮತ್ತೊಂದು ಮಂದಾನಿಲಂ ॥೧೩೧

ಅನುಸಿಂಚತ್ಸಲ್ಲಕೀಶೀಕರಪರಿಚಯದಿಂ ಶೀತಶೀತಂ ಲತಾಲಿಂ ।
ಗನದಿಂದಂ ಮಂದಮಂದಂ ಫಣಿವಿಲಸನದಿಂ ಭೀತಭೀತಂ ಚಲಚ್ಚಂ ॥
ದನಶಾಖಾಂದೋಲದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕಪ್ರ ।
ಧ್ವನಿತಂ ಪುನ್ನಾಗನಾಗಸ್ಫುಟಿತಕಟಮದಾಮೋದಭಾರಂ ಸಮೀರಂ ॥೧೩೨

(ಅರ್ಧನೇಮಿಪುರಾಣಂ)

‡ ವಿರಾಜಿಸಿತ್ತು ಪವನಂ ಪವನಂ ನಿಜಮಂದಚಾರದಿಂ. ¶ ಸೋಂಕಿ.
§ ಚೆಳೆಯಿಂ. ⁑ ಗಳಪಿಂತಿಂ. + ಮೊನಲಾ.

ಸರಳಲತಾಲಾಸ್ಯನಟಂ ।
ಹರಿಣೀರೋಮಂಥಮಂಥರಂ ಲವಲೀಮ ॥
ಮರ್ಮರಮುಖರಂ ಕರಿಕರಶೀ ।
ಕರಶೀತಲಮೊಸಗಿದತ್ತರಣ್ಯಸಮೀರಂ ॥೧೩೩

(ಮಲ್ಲಿನಾಥಪುರಾಣಂ)

ವನಮಲ್ಲೀಲಾಸ್ಯದಿಂ ಜೀರ್ಕೆಾಟಮಿಮುನಸಿಬದ್ಧಾಳಿಯಿಂ ವಾರನಾರೀ ।
ಜನಮಂ ಧಾರಾಲಯೋದ್ಯದ್ಗತಿಚತುರತೆಯಿಂ ವಾಜಿಯಂ ಸೌರಭಾಲಂ ॥
ಬನದಿಂ ಗೋಸರ್ಗಮಂ ಲಾಲಿತಕುಶಲವಸಾಂಗತ್ಯದಿಂ ರಾಮಸೀಮಂ ।
ತಿನಿಯಂ ಪ್ರೀಲ್ತಲ್ಲಿ ನಿಚ್ಚಂ ಸುಳಿವುದು ಮದನಸ್ವೈರಚಾರಂ ಸಮೀರಂ ॥

(ಪುಷ್ಪದಂತಪುರಾಣಂ)

ನೆಯ್ದಿಲ್ಗೊಳಂಗಳೆಡೆಯೊಳ್ ।
‡ಕಾಯ್ದೀವದೆ ಪೋರ್ವ ಪಲವು ನೀರ್ವಕ್ಕಿಗಳಂ ॥
†ದೆಯ್ಯುಣ್ಮವ ಸೀರ್ಪನಿಯೊಳ್ ।
ತೊಯ್ದೊಯ್ಯನೆ ಗಾಳಿ ಕೂಡೆ ತೀಡುತ್ತಿರ್ಕುಂ ॥೧೩೪

(ಕಬ್ಬಿಗರಕಾವಂ)

ಸ್ಮರರಾಜಂ ವನಪಾಲನಾಗೆ ರತಿಲಾವಣ್ಯಪ್ರವಾಹೋತ್ಕರಂ ।
ಪರಿನೀರಾಗೆ ನಿರಂತರಂ ಋತುಗಳಾಳುಂ ಕಾಪಿನಾಳಾಗೆ ಚಿ ॥
ತ್ರರಥೋದ್ಯಾನದ ಚೆಲ್ವನೊತ್ತರಿಸೆ ಕೇಳೀಶೈಲಕೇಳೀಸರೋ ।
ವರಕೇಳೀಗೃಹಮೊಂಬಿನಂ §ತಳೆದು ಕೇಳೀನಂದನಂ ರಂಜಿಕುಂ ॥೧೩೬

(ಜಗನ್ನಾಥವಿಜಯಂ)

ಅಗಜಾನವರತಶೋಭಾ ।
ಧಿಗತಂ ಭೃತಕಾಳಕಂಠಮುರುಶಿಖಿನಮನಂ॥
ನಗರೋಪವನಂ ಭವನಂ ।
$ಮಿಗುವುದು ರಕ್ಷೀಕೃತಸ್ಮರಂ ಸವಿಶಾಖಂ ॥೧೩೭

‡ ತೊಯ್ದೀವದೆ ಪೀರ್ವ. † ದೆಯ್ಯುವ ಸೀರ್ಪನಿಪನಿ. § ತಳರ್ದು. $ ನಗು.

ಧೃತನಾನಾವರ್ಣಪರ್ಣಚ್ಛವಿಸಮುದಯಸಂದರ್ಶನೀಯಂ ದಳತ್ಪು ।
ಷ್ಪತತಿಘ್ರಾಣೀಯಮುದ್ಯತ್ಫಲರಸವಿಸರಾಸ್ವಾದನೀಯಂ ದ್ವಿರೇಫೋ ॥
ದಿತನಾದಾಕರ್ಣನೀಯಂ ಸಿಕತಿಳತಳಶಯ್ಯಾತಳಸ್ಪರ್ಶನೀಯಂ ।
ಸತತಂ ಪೌರರ್ಗೆ ಪಂಚೇಂದ್ರಿಯಸುಖದೋದವಂ ನಂದನಂ ಮಾೞ್ಪುದೆಂದುಂ॥

ಅಲರ್ಗೆಣೆದುಂಬಿದಂಬುಜದ ಮೊಗ್ಗೆಯ ಮೂಡಿಗೆ ನೀಳ್ದ ಕೇತಕೀ ।
ದಳದಲಗಾಮ್ರದೊಳ್ದಳರ ಕೈಪೊಡೆ ಕರ್ಬಿನ ಬಿಲ್ ತದಗ್ರದೊಳ್ ॥
ಮಿಳಿರ್ವ ತಮಾಲಪಲ್ಲವದ ಚಾಮರಮುಪ್ಪರವಟ್ಟವೊಪ್ಪೆ ಬಂ ।
ದೞೆದಿಸುವಂ ಬನಂಬಿಡಿದು ಪೊಂಥರನಾಪರಿಪಂಥಿ ಮನ್ಮಥಂ ॥೧೩೯

(ಚಂದ್ರಪ್ರಭಪುರಾಣಂ)

ತಿಳನೀರಿಂ ನೆಯ್ದಿಲಿಂ ತಾವರೆಯಿನೆಸೆವ ಲೀಲಾಸರಸ್ಸಂಕುಲಂ ಕೆಂ ।
ದಳಿರಿಂ ಪೂವಿಂ ‡ಫಲವ್ರಾತದಿನಿಡಿದ ರಸಾಳದ್ರುಮಶ್ರೇಣಿ ಪೊನ್ನಿಂ ।
ಪಳಿಕಿಂ ಮಾಣಿಕ್ಯದಿಂ ತೀವಿದ ಕೃತಕನಗೇಂದ್ರಾಳಿ ತಳ್ತಂಚೆವಿಂಡಿಂ ।
ಗಿಳಿವಿಂಡಿಂ ಸೋಗೆವಿಂಡಿಂ ಸೊಗಯಿಸಲೆಸೆಗುಂ ತತ್ಪುರೋದ್ಯಾನಮೆಂದುಂ ॥

ಲತೆಯೆಳಲತೆ ಮಾವಿನಮ್ಮಾ ।
ವು ತೆಂಗು ಚೆಂದೆಂಗು ಕಂಗು ಪೂಗಾಂಗೆಲೆವ ॥
ಳ್ಳಿ ತೊವಲ್ತಲೆವಳ್ಳಿ ನಗಂ ।
ಕೃತಕನಗಂ ಪಲಸು ಬಕ್ಕೆವಲ¶ಸುಗಳೆಸೆಗುಂ ॥೧೪೧

(ಜಗನ್ನಾಥವಿಜಯಂ)

ನೆಲೆವೀಡು ರತಿಗೆ ತಿರುವಾ ।
ಯ್ತಲೆವೀಡಂಗಜಶರಕ್ಕೆ ಕಾಮನ ಕಿಸುಗ ॥
ಣ್ಮಲರ್ವೀಡು ವಿಯೋಗಿಗೆ ಸಂ ।
ಕಲೆವೀಡು ವಸಂತದಂತಿಗುಪವನಗರವನಂ ॥೧೪೨

(ಚಂದ್ರಪ್ರಭಪುರಾಣಂ)

‡ ಫಲಾನೀಕದಿನೆಸೆವ. ¶ ಸಾವನಥೊಳ್.

§ಪಳಮೆಂದುಂ ಕಳವಣ್ಗಳಾಗವಲರೆಂದುಂ ಬೀಯುವಬ್ಜಾಕರಂ ।
ತಿಳದೆಂದುಂ ಬಗೆಗೊಳ್ವುದುರ್ಕುಡುಗದೆಂದುಂ ತುಂಬಿಗಂ ಹಂಸೆಗಂ ॥
ಗಿಳಗಂ ಕೋಗಿಲೆಗಂ ವಿಯೋಗಿ§ಮಥನಕ್ಕೆಂದುಂ ವಸಂತಪ್ರಿಯಂ ।
ಮುಳಿಸಿಂದಾರ್ದಲರು‡ಬುಪ್ರೊಯ್ದು ತೆಗೆದಿರ್ದಂ ಬಿಲ್ಲನುದ್ಯಾನದೊಳ್ ॥೧೪೩
(ಜಗನ್ನಾಥವಿಜಯಂ)

ಪಣ್ಗಾಯ್ತೀವಿವ ಬಾಟೆಯು ।
ಬಿಣ್ಗೆನೆ ನಿಜಭರದಿನಿರದೆ ಬಾಟ್ವೇಲಿಯು ಪಿಂ ॥
ತಣ್ಗೆಗೆದು ಜೋಲ್ದು ಪಥಿಕರ ।
ಕಣ್ಗಳ್ಪಂ ಮನಕೆ ಬಯಕೆಯಂ ಪುಟ್ಟಿಸುಗುಂ ॥೧೪೪

ವಿಧಿ ಬೀಜಪೂರಕಾರ್ಥಾ ।
ಭಿಧಾನಮಂ ಮಾತುಲುಂಗದೊಳ್ ನಿರವಿಸಿದಂ ॥
ಮುಧೆಯಾಗಾಮಿರ್ದಂತೆಂ ।
ದಧರಿಸಿ ನಗುವಂತೆ ಬಿರಿದ ದಾಡಿಮಮೆಸೆಗುಂ ॥೧೪೫
(ಚಂದ್ರಪ್ರಭಪುರಾಣಂ)

ಶಿತಿಕಣ್ಠನಂತಪರ್ಣಾ ।
ಸ್ವಿತಮಿದು ತಾನೆನಿಸಿ ತಳ್ತ ತನಿವಣ್ಗಳ ಸಂ ॥
ತತಿಯಿಂ ತುಱುಂಗಿ ನೆಱೆ ಕ ।
ಣ್ಗತಿಶಯಮಾಗಿರ್ದಲ್ಲಿ ನಾರಂಗಕುಜಂ ॥೧೪೬
(ಶಾಂತೀಶ್ವರಪುರಾಣಂ)

ಪಿರಿದಾಗಿ ಪತ್ತೆ ಕೆಂದಳ ।
ದರಿಸಿನವಿರಿಸಿದಳೊ ಪರಿದು ಪೊದೆಯಂ ರತಿ ತ ॥
ನ್ನರಸನಲಗುಗಳನೆಂಬಂ ।
ತಿರೆ ಮುಗಮುಗಿಸಿದುವು ಪೊಂಗಿ ಪೊಂಗೇವಗೆಗಳ್ ॥೧೪೭
(ಕವಿಕುಂಜರಲೀಲಾವತಿ)

§ ಫಲ. § ಮಿಥುನ. ‡ ಬನಾಯ್ದು.

ಸಾರತರಮಪ್ಪ ಪುಷ್ಪದ ।
ಸೌರಭಮಂ ಪವನನುಯ್ದನೆಂದತಿಭಯದಿಂ ॥
ಧಾರಿಣಿಯು ಮಱಿಯು ಪೊಕ್ಕಂ ।
ಬೇಱಿಱಿಮವೆನಲ್ಕೆ ಮೆಱೆದುವಾವುಡಿವಾಳಂ ॥೧೪೮

ಬನವೆಂಬ ಮದನನೃಪನರ ।
ಮನೆಯೊಳ್ ಪೊತ್ತಿಸಿದ ದೀಪಮಾಲೆಯ ಮಾಡ ॥
ಕ್ಕನುಸಾರಿಯಾಗಿ ಪೆಣೆಯಿಂ ।
ಕೊನೆನರೆಗಂ ನಿಮಿರ್ದುವರರೆ ಚಂಪಕನಿಕರಂ ॥೧೪೯

(ಚಂದ್ರಪ್ರಭಪುರಾಣಂ)

ಸಮುಳನಮುಳಿಕುಳಮೆಂದಾ ।
ದಮೆ ತತ್ಸಂಗತಿಯನುಱಿದು ಸುಮನಸ್ಸಂತಾ ॥
ನಮನೆಯ್ದಿ ಸತತಮತ್ಯು ।
ತ್ತಮರಂಮದಿನೆಸೆವುದಲ್ಲಿ ಚಂಪಕನಿಕರಂ ॥೧೫೦

(ವರ್ಧಮಾನಪುರಾಣಂ

ಮೊಗೆದುಣ್ಬೆ ಮಧುವಂ ಮಲೀನನಪ್ಪು ದಾನಂಗೊಳ್ವ ಮಾತಂಗಜಾ ।
ತಿಗಳೊಳ್ ಮಾಣದೆ ಮಾೞ್ಪ ಪುಷ್ಪಲತಿಕಾಸಂಭೋಗಮಂ ನಿನ್ನೊಳಾ ॥
ವ ಗುಣಂ ಪೊರ್ದದು ಪೋಗು ಭೃಂಗಯೆನುತುಂ ಕೈಸನ್ನೆಗೆಯ್ವಂತೆ ಸಂ ।
ಪಗೆ ಚೆಲ್ವಾಯ್ತು ಸಮೀರಸಂಚಲಿತಚಂಚತ್ಪಲ್ಲವೋಲ್ಲಾಸದಿಂ ॥೧೫೧

ಪಿರಿದುಂ ವಂಧ್ಯಾಂಗನೆಯುಂ ।
ತಿರೆ ತಾನಪ್ರಸವಮಾಗಿಯುಂ ಮೂಲಾಗ್ರಂ ॥
ಬರಮೆಯ್ದೆ ಕಾತು ಮಿಗೆ ಬಿ ।
ತ್ತರಿಸಿರ್ದುದು ಪನಸಕುಜಮುದೇನಚ್ಚರಿಯೋ ॥೧೫೨

(ಶಾಂತೀಶ್ವರಪುರಾಣಂ)

ರಸಮುಂ ಕಂಪುಂ ಕನಕದೊ ।
ಳೆಸೆದಿರವೆಂಬವರ ನುಡಿಯನಲ್ಲಿಯ ಬನದೊಳ್ ॥

ಪುಸಿಮಾಡುವುವೋರಂತಿರೆ ।
ರಸಮಾಮಪಲಂಗಳಮರ್ದೆ ರಸಪರಿಮಳದಿಂ ॥೧೫೩
(ಧರ್ಮನಾಥಪುರಾಣಂ.)

ಅಡರ್ದೇಱ ಕೊಡಗಂಗಳ್ ।
ಕಡುಪಿಂದೀಡಾಡೆ ಫಳಿಲನೊಡೆದೆಳಗಾಯಿಂ ॥
ಪೆಡೆವಿಡಿದೊಸರ್ವೆಳನೀರ್ಗಳ್ ।
ಮಡುಗೊಂಡೊರ್ವುತ್ತುಮಿರ್ಪುವಲ್ಲಿಯ ಬನಮಂ ॥೧೫೪
(ಕಬ್ಬಿಗರಕಾವಂ)

ಮಿಸುಪಂಗಂ ಬೆಮರೇಱ ನೀಳ್ದ ನಗೆಗಣ್ ಕೆಂಪೇಱ ಬಿಂಬಾಧರಂ ।
ನಸು ಬೆಳ್ಪೇಱ ಪೊದಳ್ದ ಕಾಮರಸದಿಂ ರಾಗಾಬ್ಧಿ ನೀರೇಱ ವ ॥
ಕ್ತ್ರಸರೋಜಂ ಪೊಳಪೇಱ ನಿಶ್ವಸಿತದಿಂ ತೆಂಗಾಳಿ ತಣ್ಪೇಱ ಸಂ ।
ತಸದಿಂ ನಂದನವಲ್ಲಿ ದಂಪತಿ ಮನೋಜಕ್ರೀಡೆಯುಂ ಮಾಡುಗುಂ ॥೧೫೫
(ಜಗನ್ನಾಥವಿಜಯಂ)

ಗಿಡುಗಂ ಕೊಂದುದೊ ಬೇಡರಿಟ್ಟ ಬಲೆಯೊಳ್ ಮೇಣ್ ನೊಂದುದೋ ಪಕ್ಕವೇ । ನುಡಿವತ್ತೋ ಪಿಡಿದನ್ಯಶಾರಿಕೆ ರತವ್ಯಾಪಾರದೊಳ್ ಪೊಯ್ದಳೋ ॥ ತಡೆದಂ ಮತ್ಪ್ರಿಯನೆಂದು ನೊಂದು ಗಱಗಳ್ ನಾಂಬನ್ನಿಗಂ ದುಃಖದಿಂ । ಗಡ ಕೀರಪ್ರಿಯಕಾಂತೆ ಸುಯ್ದು ಸುರಿವಳ್ ಭೋರೆಂದು ಬಾಷ್ಪಾಂಬುವಂ ॥೧೫೬

ಗಱಯೆಲ್ಲಂ ಪುಳಕಂಗಳಾಗೆ ಕಡುಪಿಂ ಪಾಯ್ದಪ್ಪೆ ನುಣ್ದುಪ್ಪಳಂ ।
ಪಱದೀಡಾಡಿ ಬಹುಪ್ರಕಾರದಳಸಂ ತೋಱುತ್ತೆ ತುಂಡಾಗ್ರದಿಂ ॥
ದಿಱದೊಂದೊಂದಱ ಗಲ್ಲಮಂ ಪದಕೆ ಪತ್ತುತ್ತಿರ್ದ ಬಾಯಾಂತು ಮೆ ।
ಯ್ಮಱದೇಂ ಕಾಯ್ದು ಕಡಂಗಿ ಕೀರಮಿಥುನಂ ಕೂಡಿತ್ತೊ ಕಾದಲ್ಮೆಯಿಂ ॥
(ಕವಿಕುಂಜರಲೀಲಾವತಿ)

ಲಲಿತಮುಖಿಂ ದ್ರೋಣಾಮುಖಿ ।
ಮುಲಘುನಿತಂಬಂ ಮಡಂಬಮಿಂಬಿನ ಹಾರಂ ॥

ಲಲಿತಾಗ್ರಹಾರವೆನಲೇ ।
ನಲೆದುದೊ ಬಗೆಯುಂ ನೆಗಳ್ತೆ ದೇಶಶ್ರೀಯಾ ॥೧೫॥
(ವರ್ಧಮಾನಪುರಾಣಂ)

ನುಸುಳಲ್ ಬಾರದು ಸಪ್ತಸಪ್ತಿಯ ವರೂಥಕ್ಕೆಂದುಮೆಂಬಂತೆ ಕಾ ।
ಳಸಗೊಂಡಾಗಸದೊಳ್ ನಿಜಸ್ಥಗಿತರತ್ನದ್ಯೋತಿವಿಸ್ತಾರದಿಂ ॥
ದೆಸೆಯುಂ ಚಿತ್ರಿಸುತುಂ ವಿಶಾಲ†ತರಶಾಲಂ ವಿಸ್ತೃತಾಟ್ಟಾಲಮು ।
ದ್ಘಸಮೀಚೀನಪಟಧ್ವಜಂ ಕನಕಕೋಟಾಮಂಡಲಂ ರಂಜಿಕುಂ ॥೧೬॥

ಜಲಧರತತಿಯುಂ ನಿಜಮೊ ।
ಖಿಲೆಯೊಳ್ ತಳೆದಿರ್ಪ ಮೇರುವೆನೆ ಕನಕಮಯಂ ॥
ವಿಲುಲಿತಪರಿಖಾಲಹರೀ ।
ವಲಯಿತಮುರಮನೆಯ ಕೋಂಟೆ ಸೊಗಯಿ‡ಸಿ ತೋರ್ಕುಂ ॥
(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ನಗರೋಪವನವರ್ಣನಂ.

೫. ಪುರವರ್ಣನೆ.

ವಿಪುಳೋದ್ಯತ್ಸ್ವರ್ಣಕೋಟಾಕಟ ಘನಪರಿಖಾಕಾಂಚಿ ತುಂಗಧ್ವಜಾ
ಳೋ । ಲ¶ಪಟೀಸಂವ್ಯಾನೆ ದೇವಾಲಯಕಲಶಕುಚಾಭೋಗೆ ಸೌಧಾಂಶು
ಚಂದ್ರಾ ॥ ತಪಹಾಸದ್ಯೋತೆ $ಮುಕ್ತಾಮಣಿಮಯವಿಳಸತ್ತೋರಣಸ್ಫಾ
ರಹಾರ§ । ಘೆ ಪುರಶ್ರೀ ದೇವಕೀಪುತ್ರನ ಬಗೆಗೊಲವಂ ಬೀಱುತಿರ್ಪನ್ನ
ಪೊಗಳ್ ॥೧೭॥

ವಾರಿಧಿ ತನ್ನಗಳ್ ತನಗೆ ರೈವತಶೈಲಮುಪಾಂತಶೈಲಮಂ ।
ಘೋರುಹಲೋಚನಂ ತ್ರಿಭುವನಪ್ರಭು ತನ್ನಧಿನಾಥನೆಂದೊಡಿ ॥

---

† ತರು. ‡ ಸುತಿರ್ಕುಂ. ¶ ಪಕ್ಷಿಸಂ. $ ನಾನಾ. § ರೋದ್ಧ್ಯ.

ನ್ನಾರಭಿವರ್ಣಿಸಲ್ ನೆಱೆವರೆಂಬಿನಮಿರ್ಪುದುದಗ್ರಗೋಪುರಂ ।
ದ್ವಾರವತೀಪುರಂ ಜಿತಸುರೇಂದ್ರಪುರಂ ವಸುಧಾಂಘ್ರಿನೂಪುರಂ ॥೧೬೨

(ಜಗನ್ನಾಥವಿಜಯಂ)

ಸುರನಗವಂ ನಿಮಿರ್ಚಿ ತೆರೆಸುತ್ತಿದನಲ್ತೆ ಸರೋಜಸಂಭವಂ ।
ಪುರಕೆನೆ ಚೆಲ್ವನಪ್ಪ ನವಹಾಟಕನಿರ್ಮಿತನುಪ್ಪ ಕೋಂಟೆ ಮು ॥
ಟ್ಟಿರೆ ಮುಗಿಲಂ ರಥಕ್ಕೆ ಪಥಮಿಲ್ಲದೆ ಬಿಟ್ಟಿರಡುಂ ಕೆಲಂಗಳೊಳ್ ।
ಚರಿಯಿಪನಲ್ಲವಂದು ರವಿಗೆತ್ತಣದುತ್ತರದಕ್ಷಿಣಾಯನಂ ॥೧೬೩

(ಚಂದ್ರಪ್ರಭಪುರಾಣಂ)

ಮಿಳಿರ್ಪುತ್ತುಂಗಧ್ವಜಂ ಮಾರ್ಪೊಳೆವ ಜಲಚರವ್ರಾತಮೆಂಬಂತೆ ಪೇರ ।
ಟ್ಟಳೆಗಳ್ ತಳ್ತುತ್ತಲುಂ ಬಿಂಬಿಸಿ ಬಹಳಬಹಿತ್ರಾಳಿಯೆಂಬಂತೆ ಕೋಟಾ ॥
ವಳಯಂ ಪ್ರೋತಪ್ರದೀಪ್ರೋಜ್ಜ್ವಲಮಣಿಯ ನೆಬಿಲ್ ಪರ್ವಿದೌರ್ವಾಗ್ನಿಯಂತಾ ।
ಗಳುವಂಭೋರಾಶಿಗೆತ್ತಾನ್ತೆ ಜಗಿದಪುದದಭ್ರಾಭ್ರಮಭ್ರಾಧ್ವದಿಂದಂ ॥೧೬೪

(ಧರ್ಮನಾಥಪುರಾಣಂ)

ಬಡಪಾರ್ವಂ ಜಾಮದಗ್ನ್ಯಂ ತುಡೆ ವಿಶಿಖಮನೀ§ರೆಪ್ಪತೆಣ್ಗಾವುದಂ ಮೆ ।
ಯ್ಸಡೆಗೋಡಿತ್ತೆರ್ಗಸ್ತ್ಯಂ ತನುಮುನಿ ·ಮುನಿದಾಪ್ರೋಶನಂಗೊಂಡೊ
ಡೆತ್ತಂ॥ ಪುಡಿವಿಟ್ಟತ್ತೆಂದೆ ಧೀಂಕಾಡುಪ ಕಪಿಗಣಮಂಗೆಂಪಗಟ್ ವಾರ್ಧಿಯಂ
ಕೇ । ಟ್ಟಿಡಿಕುಂ ನಾನಾಖಗಾಳೀಬಹಳಕಳಕಳಧ್ವಾನಸಂತಾನದಿಂದಂ ॥೧೬೫

(ಜಗನ್ನಾಥವಿಜಯಂ)

ಬಳಸಿರೆ ಜಳಖಾತಿಕೆ ತಳ ।
ತಳಸುವ ಪೊಸಪಳಕಿನೆಸೆವ ಕೋಂಟೆ ಕರಂ ಕ ॥
ಣ್ಗೊಳಿಪುದು ನೋಟಕರಂ ತಿಳ ।
ಗೊಳದೊಳಗುಳ್ಳಲರ್ದ ಧವಳಕಮಲಾಕೃತಿಯಿಂ ॥೧೬೬
ಎನ್ನಂತೆ ರತ್ನವಿತತಿಗೆ ।
ತಾನ್ನೆಲೆಯಾಯ್ತೆಂಬ ಸಮುಗುಣಪ್ರಣಯದಿನಾ ॥

§ ರೆಪ್ಪತ್ತೈಗಾ.

ಮುನ್ನೀರ್ ಬಂದಪ್ಪಿದುದೆನೆ ।
ತನ್ನಗರಮನವುಳಪರಿಖೆ ಬಳಸಿದುದೆತ್ತಂ ॥೧೬೭

ಅಂತಃಕೃತದೃಢಗುಣವೊ ।
ಕ್ರಾಂತಪಯೋಧರಮುದಗ್ರಕಾಂತಿ ಪ್ರಶಸ್ತೀ ॥
ಕಾಂತೆಯುಪಕಂಠದೊಳ್ ಹಾ ।
ರಂ ತಾನೆನೆ ಸೊಗಯಿಕುಂ ಕರಂ ಪ್ರಾಕಾರಂ ॥೧೬೮

(ಚಂದ್ರಪ್ರಭಪುರಾಣಂ)

ಇನಬಿಂಬಂ ಕೋಂಟೆಯ ಕ ।
ಟ್ಟನ ಕೊತ್ತಳದಂಬುಗಂಡಿಯಂ ನುಸುಳುತ್ತೊ ॥
ಯ್ಯನೆ ಸಿಕ್ಕಿ ನಿಂದುದಾಪುರ ।
ವನಿತೆಯ ನವಕರ್ಣಪೂರಕವುಳದ ತೆಱದಿಂ ॥೧೬೯

(ಅರ್ಧನೇಮಿಪುರಾಣಂ)

ತಾರಗೆಗಳ್ ತೆನೆಗೊನೆಗಳೊ ।
ಳೋರಂದದೆ ಬೆಳಪ ಸೊಡರ್ಗಳಂತಿರೆ ತತ್ಪ್ರಾ ॥
ಕಾರಂ ಭ್ರಮಮಂ ಪಡೆವುದು ।
ಪೌರರ್ಗಿರುಳಿರುಳಪೂರ್ವದೀಪೋತ್ಸವದಾ ॥೧೭೦

ಪರಿವ ರವಿರಥರಥಾಂಗದ ।
ಖುರನೇಮಿಯೊಳೊಂದಿ ತಱಿದ ಪೊಂದೆನೆಗೊನೆಯಿಂ ॥
ದೆ ರಜಂ ನಿಮಿರ್ದಪುವೆನಿಪುವು ।
ನಿರವಿಸಿದಟ್ಟಳೆಯ ನಿಮಿರ್ವ ಕೆಂಬಱಿಯಿಗೆಗಳ್ ॥೧೭೧

ಜನವಕ್ತ್ರೋನ್ಮುಕ್ತನಿರ್ಯದ್ವಿಮಪರಿಮಳತಾಂಬೂಲ§ಸಂಸಂಗಿಭೃಂಗೀ ।
ಸ್ವನದಿಂ ಪ್ರತ್ಯಂತರಾಜಾತ್ಮಜವಿಭವಸಮಾಕರ್ಣಿತೋತ್ತಾನಗಾನ ॥
ಧ್ವನಿಯಿಂ ‡ವಾಃಪಾನಮುಕ್ತದ್ವಿರದನಿಗಡನಿರ್ಘೋಷದಿಂ ಸಂಚರದ್ವಾ ।
ರನಿತಂಬಿನ್ಯಂದುಕಾರಾವದಿನತಿಮುಖರಂ ತತ್ಪುರೀಪಟ್ಟಮಾರ್ಗಂ ॥೧೭೨

(ಚಂದ್ರಪ್ರಭಪುರಾಣಂ)

---

§ ಸಂಪತ್ತಿ. ‡ ದುದ್ಧೃತ್ತವಾತ.

ಕಣ್ಗೆಂಬಾವುಮ ರಾಯಬೀದಿ ಮುಡಿಯಿಂದಂ ¶ಬೀೞ್ವ ಪೂಮಾಲೆಯಿಂ ।
§ತಣ್ಗೆಂಪಂ ಸವಿದಲ್ಲಿ †ಮಂಗಡದೆ ಪಾಡುತ್ತಿರ್ಪ ಪೆಣ್ದುಂಬಿಯಿಂ ॥
ನುಣ್ಗಾಲುಂಗರಮೀಯೆ ಮೆಲ್ಲುಲಿಯುಮನೆತ್ತಂ ಬರ್ಪ ‡ಬಲ್ವೆಂಡಿರಿಂ ।
ಜಾಣ್ಗೆಂಬಾದರಮೆಂಡಿರಿಂ ಪೊಗ*ೞ್ವರೋದಂ ಕೇಳ್ವ ಕೂರಾಳ್ಗಳಿಂ ॥೧೩೩

(ಕಬ್ಬಿಗರಕಾವಂ)

ಕಳೆ ಕರ್ಪೂರದ ರಜಮಂ ।
ತಳೆ ಕತ್ತುರಿನೀರನಿಕ್ಕು ಮುತ್ತಿನ ಕಡೆಯಂ ॥
ಬೆಳಗು ಮಣಿ$ದೀಪಮಂ ಪೊಗೆ ।
ಗೊಳಸಗರುಮನೆಂಬರಲ್ಲಿ ಸೂಳೆಮಳರ್ಗಳ್ ॥೧೩೪

(ಜಗನ್ನಾಥವಿಜಯಂ)

ಗರುವರ ಗೊಟ್ಟಿಗಾಱರ ನೆಗೞ್ತೆಯ ಮಿಂಡರ ಮೇಳಗಾಱರ ।
ಕ್ಕರಿಗರ ಸಂದ ಕಬ್ಬಿಗರ ಜೋಡೆಯ ಬಂಡರ ಸಾರ್ಪ ನೆತ್ತಗಾ ॥
ಱರ ಚತುರಂಗಕಾಱ††ರ ಚತುರ್ನುಡಿಗಾಱರ ಬೀಣೆಗಾಱರಾ ।
ಗರಮೆನೆ ಪೆಂಪುಸೊಂಪನೊಳಕೊಂಡೆಸೆದಿರ್ಪುವು ಸೂಳೆಗೇರಿಗಳ್ ॥೧೩೫

(ಕಬ್ಬಿಗರಕಾವಂ)

ಗಿರಿಜಾವಲ್ಲಭನೊತ್ತ¶¶ಯಿಟ್ಟ ಪೆಱೆಯಂ ಸೈತಿಕ್ಕಿದೇಬಂದಪಂ ।
ಹರಿ ಮುಂದಟ್ಟಿದನಿಂತು ಕೌಸ್ತುಭಮನಕ್ಕಂ ಕಂಡಳೇ ವಜ್ರಮಂ ॥
ಸುರರಾಜಂ ಬಿಡಿಸಲ್ಕೆ ಬಂದು ಪ್ರೌಢಿಗಿರ್ದಂ ಕಾಮದೇವಂಗೆ ಬೊ ।
ಸರಿಗಂ§§ಗೆಂದಱಿಮೆಂಬರಾಪುರದ ವೇಶ್ಯಾವಾಟದೊಳ್ ಚೇಟಿಯರ್ ॥೧೩೬

ನಡೆನೋೞ್ಪರ ಕಡೆಗಣ್ಣಂ ।
ಕಡುನಲ್ಲರ ಮನಮುಮೊಡನೆ ಪೊತ್ತುವು ಪುರದೊಳ್ ॥
ಮಡದಿಯರ ಮೊಲೆಯುಮಲ್ಲದೊ ।
ಡುಡಿಯುದೆ ಬಳ್ವಳಿಕೆವಡೆವ ಬಡನಡು ಭರದಿಂ ॥೧೩೭

(ಕವಿಕುಂಜರಲೀಲಾವತಿ)

¶ ಬಿರ್ದ. § ವಾಣ್ಗ. † ಕೂಪೊ-ದವಿ ‡ ಸವೆ.
$ ದೀಪ್ತಿಯಂ. †† ರರೊರೆಗಾಱರಬಾಜಿಪ.
¶¶ ಗೊಟ್ಟ ಪೆಱೆಯಂ ಸೈತಿಕ್ಕವೇೞ್ಬಂದಪಂ. §§ ಗಿಂದುಱಿ.

ಕಡೆದನ್ನವಪ್ಪ ವೊಲೆಗಳ ।
ನಿಡಿಯಲರ್ಗ*ಣ್ಗಳ ಬೆಡಂಗಿಯರ್ಕಳನರ್ಕಂ ॥
ನಡೆನೋಡಿ ಪೋಗಲಾಱದೆ ।
ತಡೆಯೆ ಪಗಲ್ ಪಿರಿಯುವಪ್ಪುವಾಪುರವರದೊಳ್ ॥೧೨೮

(ಶೂದ್ರಕಂ)

ಸುದತಿಯರಟ್ಟೆಯಿಂದಿರುಳೊಳೆಕ್ಕಿದ ಚಂದನಪಂಕದಣ್ಪು ಸೂ ।
ಡಿದ ಪೊಸಜಾದಿ ತೊಟ್ಟ ನವಮೌಕ್ತಿಕಮಂಡನಮೊಪ್ಪೆ ನೇತ್ರಕೌ ॥
ಮುದಿಯೊಳಮಾಸ್ಯಚಂದ್ರಮನೊಳಂ ಬೆಳಗುತ್ತಿರೆ ಶುಕ್ಲಪಕ್ಷಮು ।
ಲ್ಲದೆ ಸಲೆ ಕೃಷ್ಣಪಕ್ಷಪರಿವರ್ತನಮಿಲ್ಲೆನಿಕುಂ ಪುರಾಂತದೊಳ್ ॥೧೨೯

ಘನಕಾಳಾಗರುಧೂಪಧೂಮಮಳಿನವ್ಯೋಮಂ ತ್ರಿಸಂಧ್ಯಾನಕ ।
ಧ್ವನಿಶಬ್ದಾತ್ಮಕದಿಕ್ತಟಂ ಶಿಖರಮಾಣಿಕ್ಯಾತಪೋಜ್ಜೃಂಭಿತ ॥
ದ್ಯುನದೀವಾರಿಜಮೊಪ್ಪುತಿರ್ಪುದು ಸುಧಾಗಾರೋತ್ಕರಂ ನರ್ತಕೀ ।
ಜನ§ತೋಲ್ಲಾಸಿತಕೇಕರಂ ವಿವಿಧಲೀಲೋದ್ಯಾನಶೋಭಾಕರಂ ॥೧೩೦

ಉಟ್ಟ ನವಾಂಬರಕ್ಕಮರೆ ಪೂದೊಡಮಂ ತುಡುವಂತು ಕೌತುಕಂ ॥
ಪುಟ್ಟೆ ಮುರಾರಿಗೀಯಲರ ಕಂಪನೆ ಕಾಣಿಕೆಯಾಗಿ ಪೋಗಿ ನೀಂ ॥
ಕೊಟ್ಟೊಡಗೊಂಡು ಬರ್ಪುದೆನುತುಂ ದನುಜೇಂದ್ರನ ಮಾಲೆಗಾಱನೊ ।
ಳ್ದಟ್ಟಿದ ದೂತನಂತಿದಿ*ರ್ಗೆವಂದುದು ಪುಷ್ಪಸುಗಂಧಮಾರುತಂ ॥೧೩೧

(ಜಗನ್ನಾಥವಿಜಯಂ)

ನಯನಮರೀಚಿಗಳ್ ಪೊಳೆಯೆ ನೀಲದ ಮಾಲೆಗಳಂತೆ ಕೈಯ ಕಾಂ ।
ತಿಯ ಪುದುವಿಂದೆ ಮಾಣಿಕದ ಮಾಲೆಗಳಂತಿರೆ ನಿಚ್ಚವಚ್ಚಜಾ ॥
ದಿಯ ಪೊಸಮಾಲೆಗಳ್ವಡಿದು ಮಾಱುವ ನೀಱೆಯ ನಲ್ಲಿ ಮಾಲೆಗಾ ।
ರ್ತಿಯೊ ಮಣಿಗಾರ್ತಿಯೋ ಎನುತೆ ನೋಳ್ಪುದು ವಿಸ್ಮಯಭಾಜನಂ ಜನಂ॥

§ ತಾಹ್ಲಾದಿತ·

ನೋಡಿದೊಡಿಕ್ಕೆ ಪೊಚ್ಚಪೊಸನೆಯ್ದಿಲ ಮಾಲೆಗಳಾದುವೋತು ಮಾ ।
ತಾಡಿದೊಡಿಕ್ಕೆ ಬಂದುಗೆಯ ಮಾಲೆಗಳಾದುವು ಮಂದಹಾಸಮುಂ ॥
ಮಾಡಿದೊಡಚ್ಚಮಲ್ಲಿಗೆಯ ಮಾಲೆಗಳಾದುವಿದೊಂದು ಚೋದ್ಯಮಂ ।
ನೋಡಿರೆ ಮಾಲೆಗಾರ್ತಿಯೊ ದಿಟಕ್ಕಿವಳಗ್ಗದ ಮಾಯಕಾರ್ತಿಯೋ ॥೧೮೩

(ಧರ್ಮನಾಥಪುರಾಣಂ)

ಬಗೆಗೊಳ್ವೆಮ್ಮನಲೋಕಮಾತ್ರದೊಳ್ ಪೂಣ್ದಿಲೋಕಮಂ ಗೆಲ್ವ ಕಂ ।
ತುಗೆ ಪೂಜಾರ್ಥಮಿದೆಂದು ಸುಯ್ಗೞಗುವುನ್ಮತ್ತಾಳಿಯಿಂ ಬೀರದೆ ॥
ಱ್ಗಗಳಂ ಪಾಡಿಸುತುಂ ಜಯಧ್ವಜಮನೆತ್ತಿರ್ಪಂತಿರೆತ್ತಿರ್ಪ ಮಾ ।
ಲೆಗಳುಂ ತೊಳ್ಗುಳುವೊಪ್ಪೆ ಕಣ್ಗೊಳಿಸಿ ತೋರ್ಕುಂ ಪುಷ್ಪಲಾವೀಜನಂ ॥

(ಜಗನ್ನಾಥವಿಜಯಂ)

ನಱುಸುಯ್ಗಂ ಮಾಱ್ಗಂ ಸೋಱಱದೆಱಗುವಿನಂ ತುಂಬಿಗಳ್ §ನೋಡಿದರ್
ಮೆ । ಯ್ಮಱಿವನ್ನಂ ಬಾಹುಮೂಲಂ ಪೊಗರನುಗುಳ್ವಿನಂ ಕಣ್ಮಲರ್ ಬಳ್ಳಿ
ಮಿಂಚಂ ॥ ಕಱೆವನ್ನಂ ಮಾಲೆಪೂನಂ ನೆಗಪೆ ಸೊಗಯಿಕುಂ ನೀೞರೊಳ್
ಪುಷ್ಪಚಾಪಂ । ಗುಱಿಯೇಸಂ ತೋಱಲಂಬಂ ಪೊದೆಗೆದಱಿದವೋಲ್ ಪುಷ್ಪ
ಲಾವೀಕದಂಬಂ ॥೧೮೪ (ರಾಮಚಂದ್ರಚರಿತಪುರಾಣಂ)

ತಳ*ದೊರ್ಗಂಗಲ್ಪದಿವಂದದಿಂದಿರೆ ತಳಪ್ರದ್ಯೋತಿಯಿಂದುದ್ಗಮೋ ।
ಜ್ಜ್ವಳದಾಮಂ ತದುದಾರಸೌರಭಚಯಂ ಸುಯ್ಗಂಪಿನಿಂದಾಮಗಂ ॥
ದಳಮೇೞುತ್ತಿರೆ ಪೂತ ಜಂಗಮಲತಾಸಂದೋಹಮೆಂಬಂತೆ ಕ ।
ಣ್ಗೊಳಿಸುತ್ತಿರ್ದುದು ಮಾಲೆಪೂದಳೆದ ಮಾಲಾಕಾರನಾರೀಜನಂ ॥೧೮೫

ಚಳನಯನಾಂಶುಚಂದ್ರಿಕೆಯಿನೊಯ್ಯನೊಸರ್ತಱ ಪಕ್ಕೆಱಾನೆ ನೀ ।
ರ್ಗಳೆಯೆ ಪಟಚ್ಚನಪ್ಪ ಶಶಿಕಾಂತದ ಸಣ್ಣಿಗೆನೋಡಲೀಯದ ॥
‡ವ್ವಳಿಸೆ ಕುಚದ್ವಯಂ §ಪದನನುಣ್ಮುವ ಸುಯ್ಯೆಲರ್*ಗಂಪುಗಳ್ ದಳಂ ।
ಗಳನಧಿವಾಸಿಸುತ್ತುಮಿರೆ ಘಟ್ಟಿಮಗುಳ್ಚುವುವಂಗನಾಜನಂ ॥೧೮೬

(ಚಂದ್ರಪ್ರಭಪುರಾಣಂ)

$ ನೋಡಿಕ್ಕೆಯುಂಮಾಱ್. § ವ್ವಳಸ. ‡ ಪದದಿನುಣ್ಮುವಸುಯ್ನುಱುಗಂಪುಗಳ್.

ಬಳ್ಳಡು ಬಳ್ಕೆ ಪೆರ್ಮೊಲೆ ವಿಜೃಂಭಿಸೆ ಕಂಕಣಕಿಂಕಿಣೀರವಂ ।
ಗಳ್ಳಸು ಪೊಣ್ಮೆ ಹಾರಲತೆ ನರ್ತಿಸೆ ಸುಯ್ ನೆಲೆವೆರ್ಚೆ ಕುಂತಳಂ ॥
ಗಳ್ಳಮಿರ್ದಾಡೆ* ಘರ್ಮಜಲಮುಣ್ಮೆ ವಿರಾಜಿಸುತಿರ್ಪರಲ್ಲಿ ತೋ ।
ಳ್ಗಳ್ನಲಿದೊಪ್ಪೆ ನೀಳ್ದುಡುಗಿ ಘಟ್ಟಮಗುಳ್ಚುವ ಘಟ್ಟವಳ್ತಿಯರ್ ॥೧೮೮

ಭೀಕರಬಾಡಬಾಗ್ನಿಯು ದವಾಗ್ನಿಯು ತೀವ್ರತೆಗಳ್ಕಿ ಬಂದು ನಿ ।
ರ್ವ್ಯಾಕುಳಮಾಗಳಲ್ಲಿ ನೆಲಸಿತ್ತು ಜಡಾತ್ಮಕರೂಪವಾಗಿ ರ ॥
ತ್ನಾಕರಸಂಕುಳಂ ಶಿಖರಿನಾಮವಿವರ್ಜಿತವಾಗಿ ರೋಹಣಾ ।
ನೀಕ್ಷ್ಯಮೆನಲ್ಕೆ ರನ್ನವಸರಂ ಬಗೆಗೆಚ್ಚರಿಯಂ†ನೆಗಳ್ಚುಗುಂ ॥೧೮೯

ಸಲೆ ದೋಷಾಕರನಂ ಕಳಂಕಯುತನಂ ತಾಳ್ದಿರ್ಪುದೀವ್ಯೋಮಮುಂ ।
ಡಲಮೆಂಬಂತದನೊಲ್ಲದಪ್ರತಿಮವಾರಸ್ತ್ರೀಜನಾಸ್ಯೇಂದುಸಂ ॥
ಕುಲಮಂ ತಾಳ್ದುದಿಂತಿದೆಂದು ಪುರದೊಳ್ ಬಂದಿರ್ದ ತಾರಾಗಣಂ ।
ಗಳವೆಂಬಂತಿರೆ ಕಂಚುಗಾಜಿವಸರಂ ಮಾಳ್ಕುಂ ಮನೋರಾಗಮಂ ॥೧೯೦

(ಜಗನ್ನಾಥವಿಜಯಂ)

ಪುರದೊಳ್ ಗಂಧವಣಿಂಗಳೊಳ್ ಶಶವಿಷಾಣದ್ವೀಪಿನೀಸ್ತನ್ಯಮ ।
ಸ್ತುರಸಾದ್ಯಂಗಳೊಳಾವುದಿಲ್ಲ ವಲಮುಂಟಾಕೇರಿಯೊಳ್ ಲೋಹಸಿ ॥
ದ್ಧರಸಂ ದೇಹರಸಾಯನಂ ಮೃತಪುನಸ್ಸಂಜೀವನಂ ವಿಕ್ರಿಯಾ ।
ಪರದಿವ್ಯೌಷಧಿ ದೇವಲೋಕದಮೃತಂ ಪಾತಾಳಭೇದ್ಯಂಜನಂ ॥೧೯೧

(ಅನಂತನಾಥಪುರಾಣಂ)

ಪಸರಿಸುವ ಘಟ್ಟವಳ್ಳರ ।
ಪಸರದ ಪೊಸಗಂಪನಲಸದುಂಡಟ್ಟಿಮೆಯೆಂ ॥
ಪೊಸೆದು ಕಳೆವಂತೆ ಗಂದಿಗ ।
ಪಸರದ ಗಂಧಕ್ಕೆ ಪಾಯ್ವುವಳಿಗಳ ಬಳಗಂ ॥೧೯೨

(ಕವಿಕುಂಜರಲೀಲಾವತಿ)

§ ಮಿರ. † ನಿಮಿರ್ಚುಗುಂ.

ಒರೆಯುಂ ನೋಡದೆ ನೋಡಿ ಚಿನ್ನವನೆ ಕಂಡಾಬಣ್ಣಮಂ ಬಣ್ಣದಂ ।
ತರಮುಂ ತಪ್ಪದೆ ಪೇೞ್ವ ತೂಗದೆನಸುಂ ಕೈತೂಕದಿಂ ತೂಕದಂ ॥
ತರಮುಂ ಘಟ್ಟಿಗೆ ಪೇೞ್ವ ಮಚ್ಚಮನೆ ಲೀಲಾಮಾತ್ರದಿಂ ಕಟ್ಟುವ ।
ಚ್ಚರಿಯಿಂದಾಪುರದಲ್ಲಿ ಚಿನ್ನವರದರ್ ತಾವಿಂತು ವಿಭ್ರಾಜಿಪರ್ ॥೧೯೩

(ಶಾಂತೀಶ್ವರಪುರಾಣಂ)

ಒವವಿ ಪೊವಲ್ದಿ ಮೇಳೆಯುವ ಕೇತನಮಾಳಿಕೆ ವೀರಲಕ್ಷ್ಮಿ ದೂ ।
ರವ ಭಟರಂ ನಿಜೋಚ್ಚಲಪಟಾಂಚಲದಿಂ ಕರೆವಂತುಟಾಗೆ ಮ ॥
ತ್ತದು ಭೃಗುದೇವತಾಕಪಟಪರ್ವತಮೆಂಬಿನಮೊಪ್ಪುತಿರ್ಪುದಂ ।
ತವು ಕಣನಲ್ಲಿ ಬಿನ್ನಣವ ಬೀರರಿಳಾಪತಿ ಮೆಚ್ಚೆ ಕಾದುವರ್ ॥೧೯೪

ಗುರುಧರ್ಮಶ್ರವಣಾವಭಾಸಿ ನಭದೊಳ್ ನಿಷ್ಕಲ್ಮಷಾಶಾಂಬರ ।
ಸ್ಫುರಿತಂ ಶಾರವದೊಳ್ ಸುಧಾಧವಳಧಾಮಂ ಸೋಮನೊಳ್ ಚಿತ್ರವಿ ॥
ಸ್ಫುರಿತಂ ಮಂಡಿತಮಾನಿನೀನಿಟಿಲದೊಳ್ ನಿರ್ವಾಣಸೌಖ್ಯಕ್ರಿಯಾ ।
ನಿರತಂ ಸಾಮಜದೊಳ್ ಸಮಾನಮೆನಿಕುಂ ಪ್ರೋತ್ತುಂಗಚೈತ್ಯಾಲಯಂ ।

(ಪುಷ್ಪದಂತಪುರಾಣಂ)

ಶ್ರವಣರ್ ಸಾಧುಗಳೆಂದು ಪೋದೊಡುಡಿದೆನ್ನೀಬಿಲ್ಲನೊಳ್ಗಂಬಿಯುಂ ।
ಸವಿದೆನ್ನಗ್ಗದ ನಾರಿಯುಂ ಪಱಿದು ದಾರಂಮಾಡಿ ತಮ್ಮರ್ಪು ಪೊ ॥
ಣ್ಮಿನಂ ಪುಸ್ತಕದೊಳ್ ತೊಡರ್ಚಿ ರತಿಯುಂ ನಿರ್ದಾಟಿಪರ್ ಯೋಗಿಪುಂ ।
ಗವರೆಂದಾಜಿನಮಂದಿರಕ್ಕೆ ಮಱಿದುಂ ಪೋಗಂ ಪ್ರಸೂನಾಯುಧಂ ॥೧೯೫

(ಧರ್ಮನಾಥಪುರಾಣಂ)

ಜನವಿರಹಿತಮಿಲ್ಲೊಂದೆಡೆ ।
ಜನಮುಂ ಧನರ¶ಹಿತಮಿಲ್ಲ ಧನಮುಪಭೋಗಾ ॥
ರ್ಜನಶೂನ್ಯಮಿಲ್ಲ ಭೋಗಮು ।
ಮನಿರಂತರಮೆನಿಪುದೊಂದುಮಿಲ್ಲಾ ಪುರದೊಳ್ ॥೧೯೬

(ಚಂದ್ರಪ್ರಭಪುರಾಣಂ)

¶ ಹೀನ.

ಅದಱೊಳ್ ಪುಟ್ಟಿದ ಗಂಡರೆಲ್ಲರತಿವೀರರ್ ಪೆಂಡಿರೆಲ್ಲಂ ವಿಲಾ ।
ಸದ ಸೌಭಾಗ್ಯದ ಸೀಮೆಗಳ್ ಕಿಱುಕರೆಲ್ಲಂ ಪಂಡಿತರ್ ಸಟ್ಟುವ ॥
ಟ್ಟದರೆಲ್ಲಂ ಕಡುಚಾಗಿಗಳ್ ಬಡವರೆಲ್ಲಂ ಭೋಗಿಗಳ್ ಮೂಕರುಂ ।
ಚದುರರ್ ಚೆಂದರುಮಾಯಕಾಱರಧಮವ್ಯಾಪಾರಿಗಳ್ ಧಾರ್ಮಿಕರ್ ॥೧೯೮

(ಅರ್ಧನೇಮಿಪುರಾಣಂ)

ವಿಗಳನ್ನಿರ್ಝರಹರಿನೀ ।
ಲಗಿರೀಂದ್ರಮನೊಳಗುಮಾಡಿದುಜ್ಜ್ವಲತಾರಾ ॥
ನಗಮೆನಿಪ್ಪುದು ನಿರ್ವ್ಯದ್ಧ್ವ ।
ನಗಜಂಗಳ ಸೌಧಶಾಲೆ ನೃಪಮಂದಿರದೊಳ್ ।೧೯೯
ಕಾಂತಕನಕಾದ್ರಿವಿಪುಲಗು ।
ಹಾಂತರದೊಳ್ ನಿಂದ ತರುಣಕೇಸರಿವಿಸರ ॥
ಭ್ರಾಂತಿಯನೊದವಿಸುವುದು ಹಯ ।
ಸಂತತಿ §ನೆಲಸಿರ್ದ ಪೊನ್ನ ಹಮ್ರ್ಯಾಂತರದೊಳ್ ॥೨೦೦

(ಚಂದ್ರಪ್ರಭಪುರಾಣಂ)

ಮಸೃಣಮದಾಳಸ್ವನಮು ।
ತ್ಕುಸುಮಿತವನರಾಜಿಯಂತೆ ವಿಪ್ರಜನಾಳೀ ॥
ವಿಸರದ್ವೇದಸ್ವರದಿಂ ।
ದೆಸೆವಿಕುರ್ಗಂ ಬ್ರಹ್ಮಪುರಿಯ ಸೌಧಸಮಾನಂ ॥೨೦೧

(ಜಗನ್ನಾಥವಿಜಯಂ)

ವನಜಂ ಪಂಕಾಂಕಿತಂ ಗೋವಳತಿಯ ವೊಲೆಯೊತ್ತಿಂಗೆ ಪಕ್ಷಾಯ್ತು ಗೋವ । ರ್ಧನವಕ್ಷೋಭಾಗಮೌರ್ವಜ್ವಲನಬಹಲಧೂಮಾಕುಲಂ ಪಾಲ ಮುನ್ನೀ ॥ ಗನಪಾಯಸ್ಥಾನಮೆಂದಾಪುರವರದ ವಣಿಗ್ವಾಟಹಮ್ರ್ಯಂಗಳೊಳ್ ಮು । ನ್ನಿನ ಸಂಚಾರಸ್ವಭಾವಂ ಪಱಪಡೆ ಪಲಪಿಂ ಲಕ್ಷ್ಮಿ ನಿಶ್ಚಿಂತಮಿರ್ಪಳ್॥

(ರಾಮಚಂದ್ರಚರಿತಪುರಾಣಂ)

§ ನೆಲಸಿರ್ದ ಹೊನ್ನ ಹೊಸಮಂದುರೆಗಳ.

ಮಕರಾಂಕಧ್ವಜಮಾಲಿಕಾಪ್ರಕಟಿತಪ್ರದ್ಯುಮ್ನಪಕ್ಷಕ್ರಮಂ ।
ಶುಕಶಾರೀಪ್ರಕರಪ್ರಕಾಶಿತರತವ್ಯಾಪಾರಚಾತುರ್ಯಮು ॥
ತ್ರ್ಯಕಭೂಪಾಲಭುಜಂಗತಾಡಿತರಟದ್ಘಂಟಾರವಂ ವಿಸ್ತೃತಾ ।
ಧಿಕಸೌಭಾಗ್ಯಮದೇಂ ಬೆಡಂಗಮರ್ದುದೋ ಗಾಣಿಕ್ಯಸೌಧೋತ್ಕರಂ ॥ ೧೦೩
(ಚಂದ್ರಪ್ರಭಪುರಾಣಂ)

ಅವಱೊಳ್ ಚಂಡಾಂಶುಬಿಂಬಂ ತೊಡರ್ದು ಮಿಡುಕದಿರ್ದಪ್ಪುದೆಂಬಂ§ತೆ ಹರ್ಮ್ಯಾ । ಗ್ರದೊಳೊಳ್ಪಂಬೆತ್ತ ಚೆಂಬೊಂಗಳಸದೆಳವಿಸಿಲ್ ಸಂತತಂ ವ್ಯೋಮಗಂಗಾ ॥ ಬ್ಜದ ಪೆರ್ಚಂ ಮಾಡೆ ಕೂಟಧ್ವಜದ ದುಗುಲದಿಂ ಸಂಚರತ್ಸ್ವಶ್ಚರೀಲೋ । ಲಮುಕೂಲಭ್ರಾಂತಿಯುಂ ಪುಟ್ಟಿಸುತುಮೆಸೆವುದಭ್ರಂಕಷದ್ವಾರಹರ್ಮ್ಯಂ ॥ ೧೦೪ (ಜಗನ್ನಾಥವಿಜಯಂ)

ಚಿತ್ತರದ ಸೌಧಶಿಖರದೊ ।
ಳೊತ್ತಂಬದಿನಾಡುವಂದು ಕಂದುಕಮನುಗೆ ॥
ಟ್ಟುತ್ತಿತ್ತ ಪೋಗೆ ಪೊಯ್ವರ್ ।
ಮುತ್ತಿನ ಸೆಂಡೆಂದೆ ಮುಗ್ಧೆಯರ್ ಮೃಗಧರನಂ ॥ ೧೦೫
(ಧರ್ಮನಾಥಪುರಾಣಂ)

ನವಮಲ್ಲೀಜಾಳಮೋಹಾಕುಳಮಧುಕರಲೇಲಿಹ್ಯಮಾನೋದ್ಘಮುಕ್ತಾ ।
ನಿಸಹಂ ಕೃಷ್ಣಾಹಿಶಂಕಾ†ಕುಳಗೃಹಶಿಖಿಚಕೋಚುಂಬ್ಯಮಾನೇಂದ್ರನೀಲಾಂ ॥
ಶುವಿಶೇಷಂ ಚಂದ್ರಿಕಾಸಂಶಯಚಟುಲಚಕೋರೌಘಪೇಪೀಯಮಾನಾ ।
ಗ್ರವಿಭಾಗಸ್ಥೇಂದುಕಾಂತದ್ಯುತಿ ‡ಸೊಗಯಿಸುಗುಂ ಕಾಯಮಾನಂ §ಸಮಾಸಂ ॥ ೧೦೬
(ಚಂದ್ರಪ್ರಭಪುರಾಣಂ)

ಬಾಳತೃಣಂಗಳೆಂದೆಳಸುಗುಂ ಪಸುರ್ಗಲ್ಗಳ ಕಾಂತಿಯಂ ಮೃಗೀ ।
ಬಾಳಕನಲ್ಲಿ ಕೆಂಬರಲ ಕೆಂದಳರಂ ಬಿಸಿಲೆಂದು ನಟ್ಟರುಳ್ ॥
ಮೇಳಿಸುಗುಂ ರಥಾಂಗಮೆಳಲಿಕ್ಕಿದ ಮುತ್ತಿನ ಸೂಸಕಂಗಳಂ ।

§ ತಿರಾತ್ಮಾ. † ತುರಗ್ರಹ ‡ ಪೂರ § ವಿ.

ಬಾಳಮೃಣಾಳಮೆಂದೆ ಕರ್ದು*ಕಲ್ಬಗೆಗುಂ ಕಳಹಂಸಪ್ರೋತಕಂ ॥೧೦೭

(ಮಲ್ಲಿನಾಥಪುರಾಣಂ)

ಘನಮಾರ್ಗಾಸಕ್ತಿಯುಂ ಗಾರುಡಮಣಿಮಯದೊಳ್ ದಾವವಿಭ್ರಾಂತಿಯುಂ
ಕಾಂ । ಚನಭಿತ್ತಿವ್ರಾತದೊಳ್ ನಿರ್ಮಲಜಲರುಚಿಯುಂ ಸ್ಫಾಟಿಕಗ್ರಾವಬ
ದ್ಧಾ ॥ ವನಿಯೊಳ್ ವಾನೇಚರಸ್ತ್ರೀಭ್ರಮಮುಮತುಳನೀಳಾಶ್ಮಪಾಂಚಾಳಿಕಾ
ದ । ರ್ಶನದೊಳ್ ತಾಳುತ್ತುಮೆತ್ತಂ ಸುೞಿವುದು ಮಹಿಭೃದ್ಗೇಹದೇಶೋ
ಸಮೂಹಂ ॥೧೦೮

(ಚಂದ್ರಪ್ರಭಪುರಾಣಂ)

ಅಹಿರಾಜಂ ದ್ವಿಸಹಸ್ರಜಿಹ್ವನಱಿಯುಂ ವ್ಯಾವರ್ಣಿಸಲ್ಬಲ್ಲನೇ ।
ಮಹಿಯೊಳ್ ಮಾನವನೊಂದೆ ನಾಲಗೆಯೊಳಂ¶ತಾ ಭೂಭುಜಾಗಾರಮಂ ॥
ಬಹುವಿಸ್ತಾರಮನಿಂದ್ರಪುಷ್ಪಕವಿಮಾನಾಕಾರಮಂ ತನ್ಮಹಾ ।
ಮಹಿಮಾಧಾರಮನತ್ಯುದಾರಮನಿಳಾಚೇತಶ್ಚಮತ್ಕಾರಮಂ ॥೧೦೯

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಪುರವರ್ಣನಂ.

೩. ರಾಜವರ್ಣನಂ.

ಅತುಳಾನರ್ಘ್ಯಗುಣಂ ಪ್ರಸನ್ನವದನಂ ಸ್ವಚ್ಛಂ ಪ್ರತಾಪಾರ್ಜಿತೋ ।
ರ್ಜಿತತೇಜಂ ನಿರವದ್ಯಹೃದ್ಯನಬಲಾಹೃತ್ಕಾಂತರೂಪಂ ಸಮಾ ॥
ಶ್ರಿತಸರ್ವೇಷ್ಟಫಲಾಸ್ಪದಂ ಸಮುಚಿತಾಸ್ಥಾನಪ್ರದೀಪಂ ಜಗ ।
ನ್ನುತನಾನಾಯಕರತ್ನದಂತಿರಸೆನಂ ಸರ್ವೋರ್ವರಾನಾಯಕಂ ॥೧೧೦

ಸಕಲಜನೈಕನಿತ್ಯನನವದ್ಯಕಲಾಧರನಿಷ್ಟಶಿಷ್ಟಕ ।
ಲ್ಪಕುಜನುಪಾಶ್ರಿತಾಖಿಲಬುಧಂ ನಯವಾಕ್ಪತಿ ಸತ್ಕವೀಶರಂ ॥

¶ ತಾಂಭೂ.

ಜಕನಹುತಾದ್ರಿಸಂಗತಸುಹಾಶನಿ ಸಂತತಭೋಗಿ ರೂಪಕೌ ।
ತುಕಜಿತಮೀನಕೇತುವೆನೆ ಶಾಂತನವಗ್ರಹಭಾಸಿ ಲೋಕದೊಳ್ ‖೭೧೧

(ಪುಷ್ಪದಂತ ಪುರಾಣಂ)

ಪರರಾಜೋವಗ್ರತೇಜಂ ಕಿಡೆ ರಿಪ್ರಕುಮುದಂ ಕುಂದೆ ವಿದ್ವಿಟ್ಟಮಂ ಪಿಂ ।
ಗೆ ರಥಾಂಗಂ ಲೀಲೆಯಿಂ ಕೂಡಿರೆ ಕರಕಳಿತಂ ಮಂಡಲಾಗ್ರಂ ಮನಂಗೊಂ ‖
ಡಿರೆ ನಾನಾಪುಂಡರೀಕವ್ರಜಮಲರ್ದಿರೆ* ಪಾದಂ ಜಗತ್ಸೇವ್ಯಮಾಗು ।
ತ್ತಿರೆ ಪೆಂಪಂ ತಾಳ್ದಿ ನಿತ್ಯಾಭ್ಯುದಯದೊಳೆಸೆದಂ ಗೋಪಮಾರ್ತಂಡದೇವಂ ‖

(ಜಗನ್ನಾಥವಿಜಯಂ)

ವಿಲಸನ್ನಿತ್ಯೋದಯಾಲಂಕೃತನಸಮಹಯಪ್ರೌಢನಕ್ಷೀಣಲಕ್ಷ್ಮೀ ।
ನಿಲಯಂ ಸನ್ಮಂಡಲಾಗ್ರಸ್ಫುರಿತಕರಹತೋದ್ವೃತ್ತರಾಜಂ ಮಹೀಭೃ ‖
ತ್ಕುಲಮಸ್ತನ್ಯಸ್ತಪಾದಂ ಸಮುದಿತವಿನತಾನಂದನಂ ವೃತ್ತವೀತಾ ।
ಖಿಲದೋಷಂ ದ್ಯೋತಿತಾಶಾಂಬರಮುಖನೆಸೆದಂ ಭವ್ಯಲೋಕೈಕಮಿತ್ರಂ ‖

(ಪುಷ್ಪದಂತಪುರಾಣಂ)

ಅಮೃತಮಯೋಜ್ಜ್ವಲಾಶಯಮನಾಶ್ರಿತಗೋತ್ರಸಮೇತಮಂ ಮಹಾ ।
ಹಿಮಕರಸತ್ತ್ವಮಂ ಸುಜನಸಾಗರಮಂ ಸಲೆ ಪೆರ್ಚಿಸೆಯ್ದಿಪಂ ‖
ಕುಮುದವನಪ್ರಿಯಂ ಸಕಲಮಂಡಲಭಾಸಿ ಸದಾನಭೋಗನು ।
ದ್ಗಮರುಚಿ ಶರ್ವರೀವಿರಹಸಂಪದನಾನರಲೋಕಚಂದ್ರಮಂ ‖೭೧೪

(ಕವಿಕುಂಜರಲೀಲಾವತಿ)

ಎರೆದರ್ ಸಂತುಷ್ಟರಾದರ್ ಕದನದೊಳದಿರಂ ಮಿಾಱಿ ಮಾಱಾಂತು ನಿಂದಾಂ ।
ತರಿಭೂಪರ್ ಭಸ್ಮಮಾದರ್ ಭಯರಸದಿಂ ಕಂಡರಬ್ಜಾಸನಾಯು ‖
ರ್ಧರರಾದರ್ ಬಿರ್ದುಗೊಂಡಾಡುವ ಮದನಮದೋನ್ಮತ್ತೆಯರ್ ನಲ್ಲರಾದರ್ ।
ನರರಾರ್ ನಿನ್ನನ್ನರಿನ್ನೀಭುವನಭವನದೊಳ್ ಗಂಗಚಕ್ರಾಯುಧಾಂಕಾ ‖೭೧೫

(ಶೂದ್ರಕಂ)

ಕಮಠಂ ದುರ್ದರ್ಶನಂ ಭೀಷಣವಿಷವದನಂ ಶೇಷನತ್ಯಂತಮೂರ್ಖಂ ।
ಸಮದಾಶಾವಾರಣಂ ಕರ್ಕಶನಖಿಳಕುಳಾದ್ರೀಂದ್ರನೆಂದೊಲ್ಲದೆಂದುಂ ‖

ಕಮನೀಯಂ ಪೂರ್ಣಚಂದ್ರಾನನನತಿಚತುರಂ ಸ್ನಿಗ್ಧನೆಂದೊಲ್ದು ಧಾತ್ರೀ ।
ರಮೆಯಿರ್ಪಳ್ ತನ್ನರಾಧೀಶನ ಗುರುಭುಜದೊಳ್ ಪೆಂಡಿರಿಂತಾಗವೇಡಾ ॥

ಜಳನಿಧಿಯಲ್ಲಿ ಪುಟ್ಟಿ ಜಲಜಾಕ್ಷನ ಪೇರುರಮೆಂಬ ತೊಟ್ಟಿಲೊಳ್ ।
ಬಳೆದು ವಿಲಾಸದಿಂ ಜಲಜದೊಳ್ ನಲಿದಾಡಿ ಬೞಿಕ್ಕ ಯೌವನಂ ॥
ಮೊಳೆವುಮವಾರುಮಂ ಬಗೆಯದಾನೃಪನೊಳ್ ಸಿರಿ ಕೂರ್ತು ಬಂದು ಕೋ ।
ಮಳೆ ನೆರೆದಿರ್ದಳಂತೆ ವಧು ಕೂರ್ತೊಡೆ ಪೆತ್ತರ ಮಾತುಗೇಳ್ವಳೇ ॥೧೧೭

ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂ।
ಪದಮೆಂದುಂ ವರ್ಧಮಾನಂ ಗುಣತತಿ ವಿಮಲಂ ತನ್ನ ಪೆಂಪೊಂದನಂತಂ ॥
ಹೃದಯಂ ಸ್ವಾಧೀನಧರ್ಮಂ ಮತಿಪುರುಚರಿತಂ ಶೀತಳಂ ಸುವ್ರತಂ ಶಾ ।
ನದಱಿಂ ಪ್ರತ್ಯಕ್ಷತೀರ್ಥೇಶ್ವರನೆನೆ ನೆಗೞ್ದಂ ವಿಶ್ವವಿದ್ಯಾವಿನೋದಂ ॥೧೧೮

ಲಳನೆಯರಾತನಂ ಬಯಸಿ ನೋಡಲೊಡಂ ಮದನಾಗ್ನಿದಾಹಮು ।
ಗ್ಗಳಸದೆ ಮಾಣದೆಂದು ಕೃಪೆಯಿಂ ಪಡೆದಂ ಬಿದಿ ಚಂದ್ರಬಿಂಬಮಂ ॥
ಮಳಯಜಮಂ ಮೃಣಾಳಕುಳಮಂ ಕೊಳನಂ ಲತಿಕಾಗೃಹಂಗಳಂ ।
ತಳಿರ್ಗಳನೆಂದೊಡಂದಮನದೇವೊಗೞ್ವೆಂ ಕವಿತಾವಿಳಾಸನಾ ॥೧೧೯

(ಕವಿಕುಂಜರಲೀಲಾವತಿ)

ವನಿತೆಯರಂ ಮರುಳ್ಗೊಳಿಸುವಾಕೃತಿಗಾಗಿರೆ ಮೀನಕೇತನಂ ।
ತನಗಲರಂಬುಗಳ್ ತನಗೆ ಕರ್ಬಿನ ಬಿಲ್ ತನಗೇಕೆ ತನ್ನಿಮಾ ॥
ತನನೆನೆ ಬೆರ್ಚಿ ಪತ್ತು ಪೆಸರಿಟ್ಟು ಬೞ್ಮಂಕಿವನಲ್ತೆ ಕಂತು ನಂ ।
ದನವನಲಕ್ಷ್ಮಿಗಾದ ಮಗನಂ ಮಧುವೆಂದು ವಸಂತರಾಜನಂ ॥೧೨೦

(ಅನಂತನಾಥಪುರಾಣಂ)

ಬಳಸಿನ ಮಾತೇನಾನೃಪ ।
ತಿಳಕನ ವಾಗ್ವೈಭವಕ್ಕೆ ಮೂಱುಂ ಜಗಮಂ ॥
ತೊಳಸಿದೊಡೊರ್ವನೆ ಸಮನಾ ।
ಗುಱಿಪುದಱಿಂ ಶೇಷನೆನಿಪ ನಿಸ್ಮಂ ಶೇಷಂ ॥೧೨೧

(ಧರ್ಮನಾಥಪುರಾಣಂ)

ಹಿಮಕರನಿಂ ನೆಲಕ್ಕೆ ನಿಮಿ*ರ್ವುಜ್ಜ್ವಲಚಂದ್ರಿಕೆಯಂತಧೀಶನಿಂ ।
ನಿಮಿ*ರ್ದು ಕುಮಾರನತ್ತಲೆಳಸಿರ್ದಳಭಿನ್ನಪರಸ್ವರೂಪದಿಂ ‖
ಕುಮುದವರಾಭಿರಾಮೆ ಪರಚಕ್ರಭಯಂಕರಶೀಲೆ ವಾಹಿನೀ ।
ರಮಣಸಮೃದ್ಧಿ ಸಲ್ಲಲಿತೆ ರಾಜ್ಯರಮಾವಧು ಬಂದು ಲೀಲೆಯಿಂ ‖೧೧

(ಪುಷ್ಪದಂತಪುರಾಣಂ)

ಪರಿರಂಭಂಗೆಯ್ವೊಡೊಂದಲ್ಲದೆ ಕರಮೆರಡಿಲ್ಲೀವೊ ದಿಗ್ದಂತಿಗೊಲ್ದಾ । ದರದಿಂ ಬಾಯ್ಗೂಡಲಿಚ್ಛೈಪ್ಪೊಡೆ ಸುಡು ಪಲವುಂ ನಂಜುವಾಯ್ ಪನ್ನಗೇಂದ್ರಂ ‖ ಗಿರದಾನೋರಂತೆ ಬೆಂಬತ್ತಿಯುಮೆ*ರ್ದೆಗುಡದೆಗ್ಗಾಯ್ತು ಕೂರ್ಮಂಗೆನುತ್ತುಂ । ವರೆ ಬಿಟ್ಟಾಮಹೀವರಂ ಭೂವರನ ಭುಜದೊಳಿರ್ಪಳ್ ಮನೋರಾಗದಿಂದಂ ‖೧೪

(ಧರ್ಮನಾಥಪುರಾಣಂ)

ತಿಱಿಕಲ್ಲಾಡುವಳಷ್ಟಶೈಲಕುಲಮಂ ದಿಗ್ದಂತಿದಂತಂಗಳೊಳ್ ।
ನೆಱಿಕೈಯಿಂ ತೊನೆದಾಡುವಳ್ ಮುಗಿಲ ಪೂವಂ ಸೂಡುವಳ್ ತಾರೆಯಂ ‖
ತಿಱಿವಳ್ ಮುತ್ತುಗಳೆಂದು ಚಂದ್ರರವಿಯಂ ಕಂಚೋಲೆಯೆಂದಿಕ್ಕುವಳ್ ।
ನಿಱಿಯಂ ಸುತ್ತುವಳೇಳುವಾರ್ಧಿಚಯಮಂ ಶ್ರೀಕೀರ್ತಿ ರೇಚಾಂಕನಾ ‖

(ಚಾಟು)

ಬಳಕೆಯ್ದು ತೋರ್ಪುದನಿಮಿಷ ।
ಕುಳಮಂ ಕುವಳಯಮನುಚಿತಮೆನೆ ಪುಷ್ಕರಮಂ ‖
ಡಳಮಂ ತದ್ಧರಣೀಮಂ ।
ಡಳನಾಥನಪಾರಕೀರ್ತಿಗಂಗಾಪೂರಂ ‖೧೫

(ಚಂದ್ರಪ್ರಭಪುರಾಣಂ)

ಸ್ಫುರಿತೋದ್ವೃತ್ತಾರತಾರಾಚಲಹರಹಸನಾದಭ್ರಶುಭ್ರಾಭ್ರಹಂಸೀ ।
ಹರಿದಿಜ್ಮಾತಂಗಗಂಗಾಸರಲತರಲಕಲ್ಲೋಲಕರ್ಪೂರಪೂರಾ ‖
ಸುರರಾಜೋರ್ವೀಜರಾಜತ್ಕುಸುಮವಿಸರನೀಹಾರನೀರೇಜನೀರಾ ।
ಕರನೀರೇಜಾದಿಗೌರದ್ಯುತಿವಿಶದಯಶಃಕಾಂತನೀಶಾಂತಿವರ್ಮಗ ‖೧೬

(ಪುಷ್ಪದಂತಪುರಾಣಂ)

ವಿದಿತಯಶಸ್ಸ್ಫಟಿಕಮುಕು |
ರದೊಳೊದವಿದ ಸಕಲಜನಮನೋರಾಗಂ ಪ್ರೋ ||
ಗದೆ ನಿಂದತ್ತೆಂಬಿನಮೆಸೆ |
ದುದು ವಸುಧಾಧವನಭವನಭುಂಭುಕತೇಜಂ ||೧೭

(ಧರ್ಮನಾಥಪುರಾಣಂ)

ಅದು ಕಾಲಾನಲನೊಂದೆದಲ್ ವಿಷಮರಬ್ರಹ್ಮೇಶ್ವರಾಭೀಳಭಾ |
ಳದ ಚಕ್ಷುಶ್ಶಿಖಿಮುಖಂ ನಾಲ್ಕು ಬಲಸದ್ದಾನಾಗ್ನಿ ನಾಲ್ಕೈದಿರಂ ||
ಮದವೈದಾಜಿ ಲಯಾರ್ಕಮಂಡಲಮುಮಾಜ್ಯೌರ್ವಮೇಳೆಂಟು ಪು |
ಟ್ಟಿದುವೆಂಬಂತೆ ನೆಗಳ್ದಗುಂ ನರಕನಾಟೋಪಂ ಜಗದ್ದ್ವೇಷನಂ ||೧೮

(ಜಗನ್ನಾಥವಿಜಯಂ)

ಕರಿಸೇನಾಕರನುನ್ನವೈರಿವನದುರ್ಗವ್ರಾತನಶ್ವಾವಳೀ |
ಖುರಟಂಕಾಹತಿಪಾತಿತಾರಿಗಿರಿದುರ್ಗವ್ರಾತನನ್ಯೂನಸೈ ||
ನ್ಯರಜಃಕ್ರಾಂತಸಮೀಕೃತಾನ್ಯಜಲದುರ್ಗವ್ರಾತನುತ್ತಾನತೂ |
ರ್ಯರವಾಕಂಪಿತಶತ್ರುದಿಗ್ವಿಜಯಯಾತ್ರಾಕ್ರೀಡೆಯಂಮಾಡುವಂ ||೧೯

(ಚಂದ್ರಪ್ರಭಪುರಾಣಂ)

ಕುಳಭೂಭೃತ್ಕೂಟದೊಳ್ ಮಾಣಿಕದೆಳವಿಸಿಲೆಂತಂತೆದಿಕ್ಕುಂಭಿಕುಂಭ ||
ಸ್ಥಳದೊಳ್ ಸಿಂದೂರಮೆಂತಂತಮರನದಿಯೊಳಾರಕ್ತನೀರೇಜಪತ್ರ ||
ವಳಿಯೆಂತಂತಬ್ಧಿಯೊಳ್ ವಿದ್ರುಮಸಮುದಯಮೆಂತಂತೆ ಪರ್ವಿತ್ತು ರಾಗಾ |
ವಿಳಮಪ್ಪಂತುರ್ವಿಯೆಲ್ಲಂ ದಶರಥವಸುಧಾಧೀಶತೇಜೋವಿತಾನಂ ||೨೦

(ರಾಮಚಂದ್ರಚರಿತಪುರಾಣಂ)

ಪಗಲರ್ಕಂ ತಳೆದಬ್ಜಮಸ್ತಮಯಸಂಧ್ಯಾರಾಗವಿಭ್ರಾಂತಿಯಿಂ |
ಮುಗಿವನ್ನಂ ದಿಗಿಭೋತ್ಕರಂ ದವಭವಜ್ವಾಲಾವಳೀಶಂಕೆಯಿಂ ||
ಅಗಿವನ್ನಂ ರಿಪುಗಳ್ ದಿನಪ್ರತತಮುಗ್ರೋದ್ಯತ್ಪ್ರಭಾಭೀತಿಯಿಂ |
ಸುಗಿವನ್ನಂ ನಿಮಿರ್ದತ್ತು* ತನ್ನೃಪಮಹಾತೇಜಃಪ್ರಭಾಮಂಡಲಂ ||೨೧

(ಚಂದ್ರಪ್ರಭಪುರಾಣಂ)

ಧರೆಗಾನಿರ್ದಂತ ತಾನುಂ ಸಕಲಧರಣಿಭೃನ್ನಾಥನೆಂಬೊಂದು ಬಿಂಕಂ ।
ಬೊರೆದಿರ್ದತ್ತೆಂದು ಕಾಯ್ದಿಂ ಕಳುಪೆ ವಿಪುಳಬಾಹಾಪ್ರತಾಪಾಗ್ನಿ ಬಂದಾ ॥
ವರಿಸಲ್ ಸ್ವರ್ಣಾದ್ರಿ ಬೇಗಂ ಕರಗಿ ಪರಿದು ತೀವಿರ್ದುದೆಂಬನ್ನೆಗಂ ಭೂ ।
ಧರವೆಲ್ಲಂ ಕೆಂಕವಾಗಲ್ ಪಸರಿಸಿತು ಮಹಾಸೇನತೇಜೋವಿತಾನಂ ॥೨೩೦

(ಧರ್ಮನಾಥಪುರಾಣಂ)

ಅನತಕ್ಷತ್ರಿಯರೊತ್ತಿಗೊಂಡ ಗಿರಿದುರ್ಗಕ್ಕುಗ್ರವಜ್ರಾಸಿ ಕಾ ।
ನನದುರ್ಗಕ್ಕೆ ಮಹಾದವಾಗ್ನಿ ಜಲದುರ್ಗಕ್ಕುರ್ವಿದೌರ್ವಾಗ್ನಿ ಮೇಣ್ ॥
ವನದುರ್ಗಕ್ಕೆ ಬೃಹಲ್ಲಯಾಗ್ನಿಯೆನೆ ತನ್ನುದ್ವೃತ್ತಪ್ರತಾಪಾಗ್ನಿ ನೀ ।
ಳ್ದನಸುಂ ಪರ್ವಿ ವಿಗುರ್ವಿಸಲ್ ನೃಪಸುತಂ ವಿಕ್ರಾಂತಿಯುಂ ತಾಳ್ದಿದಂ ॥

(ಪುಷ್ಪದಂತಪುರಾಣಂ)

ಪರಮಪ್ರತಾಪತಪನ ।
ಸ್ಫುರಣೆಯೊಳಿರ್ದ* ಕಾಯ್ದು ಬಂದು ಸಂಗರಮುಖದೊಳ್ ॥
ಭರದಿಂದರಿನೃಪರಾಭೂ ।
ವರನಸಿಧಾರಾಜಲಕ್ಕೆ ಬಾಯ್ವಿಡುತಿರ್ಪರ್ ॥೨೩೪

ಮದನುಂ ಭದ್ರಗಜಕ್ಕೆ ರಾಜವೆಸರಂ ಚಂದ್ರಂಗೆ ತೀವ್ರಪ್ರತಾ ।
ಪದ ಪೆರ್ಚಂ ತಪನಂಗೆ ತೇಜದೊದವಂ ಸಪ್ತಾರ್ಚಿಗತ್ಯುಗ್ರಖ ॥
ಡ್ಗದಗುರ್ವಂ ಗಹನಕ್ಕನಮ್ರತೆಯನೇಱುಂ ಗೋತ್ರಭೂಭೃತ್ಕುಲ ।
ಕ್ಕದಟಂ ಸೈರಿಸುವಂ ಪೆಜರ್ಗೆ ಪೆಱತಂ ಲಂಕೇಶ್ವರಂ ಸೈರಿಸಂ ॥೨೩೫

(ರಾಮಚಂದ್ರಚರಿತಪುರಾಣಂ)

ಮದಗಜದ ಪೊರಜುವೊಯ್ದೇ ।
ಱ್ವ ದೊಡ್ಡಮಾರ್ಗದ ಕಿಱುಂಗಳಂ ಕಿಗ್ಗಣ್ಣೊಳ್ ॥
ಪದನತನೃಪರೀಕ್ಷಿಸಿ ನೃಪ ।
ನೊಡದೆದೇಱೆಂಬಂತೆ ತಲೆಯನಂಟಿಸದೇಱ್ವರ್ ॥೨೩೬

ಮೇರುವಿನ ಪಳ್ಳಿಗಂ ಭಂ ।
ಡಾರಕ್ಕೆನ್ನಾಣೆ ವಜ್ರಧಾರೆಗಳಿಂ ಟಂ ॥
ಕಾರಿಸಿ ಸಲಿಸದೊಡೆಂದು ಬ ।
ಲಾರಿಗೆ ದಿವಿಜಾರಿ ರಾಯಸಂಬರೆಯಿಸುವಂ ॥೩೭

ಬಱದೆ ತಿರುಗಿದೊಡೆ ಮೞೆಯಂ ।
ಕಱೆಯದೆ ವಕ್ರಿಸಿದೊಡುರ್ಚಿ ಮುಕ್ಕುವೆನೆಂದ ॥
ಳ್ಕುಱಿಸಿ ಮಧು ತನಗೆ ಪನ್ನೊಂ ।
ದಱೊಳಲ್ಲದೆ ಮಿಡುಕಲೀಯನೇೞುಂ ಗ್ರಹಮಂ ॥೩೮
(ಅನಂತನಾಥಪುರಾಣಂ)

ಮೇರು ಪೊಸಂತಿಲ್ ಕುಡಿತೆಯು ।
ನೀರಂಬುಧಿ ಗಗನತಳ†ಮೆ ಕೈ ದಿವಿಜಗಣಂ ॥
ಕಾರೊಕ್ಕಲೆಂದೊಡುೞದವ ।
ರಾರಾತನ ಮಸಪ ಮುಸಕದೆಸಕಮನಿೞಪರ್ ॥೩೯
(ಶೂದ್ರಕಂ)

ಮಸಕಂಗುಂದದರಾತಿಪಾರ್ಥಿವರ ಕಾಂತಾನೇತ್ರನೀರೇಜದೊಳ್ ।
§ಬಿಸುನೀರಂ ಸುಕುಮಾರಹೃತ್ಕುಸುಮದೊಳ್ ಶೋಕಾಗ್ನಿಯಂ ನೀಳ್ದ ಸು॥
ಯ್ವಿಸಿಲಂ ತನ್ಮುಖಚಂದ್ರಬಿಂಬಚಯದೊಳ್ ವಿಕ್ರಾಂತದಿಂ $ನಾಡೆ ಪು ।
ಟ್ಟಿಸುವಂ ತನ್ನೃಪನಂದನಂ ಪ್ರಭುಗಳೇನಂ ಮಾಱ್ಪೊಡಂ ತೀರದೇ ॥೪೦
(ಕವಿಕುಂಜರಲೀಲಾವತಿ)

ಅಮರೇಂದ್ರಂ ನಿಜಹಸ್ತದಿಂದಗೆಯುನಾಯುದ್ದ್ಯಾನದೊಳ್ ತಂದು ಕ ।
ಲ್ಪಮಹೀಜಂಗಳನಿಟ್ಟ ಕೇಳಿವನಮಾದ್ಯೈತ್ಯಂಗೆ ಬಂದಿತ್ತುವಂ ॥
ಕಮಲಪ್ರೋದ್ಭವನಬ್ಜವೀಧಿಗೆ ಸುಧಾರೋಚಿಃಕಲಾದ್ರೋಣಿಯಿಂ ।
ಹಿಮವದ್ಭೂಧರದೇತದಿಂ ಗಗನಗಂಗಾವಾರಿಪೂರಂಗಳಂ ॥೪೧

† ದ ಮೇಣ್. § ಬಿಸಿ. $ ನೋಡಿ.

ಬೆಸವೇೞ್ದಂ ದಿಗಧೀಶರಂ ಬನದ ಬಾಳ್ಗಂಭಂಗಳೊಳ್ ತಂದು ಕ ।
ಟ್ಟಸಲೇಂ ದೆಸೆಯಾನೆಯಂ ತನಗವಾಹ್ಯಾಳಿಕೆ ಸೂರ್ಯಂಗೆ ವಾ ॥
ಹಸನೂಹಂ ಪ್ರಗಿಸಿಂದು ಮುಂದುರಮನೆಂಬಂ ದೈತ್ಯನಿರ್ದತ್ತ ಸು ।
ಟ್ಟಿಸಿ ತೋಱ್ಪಾತನ ಬೊಟ್ಟು ಪಾರ್ಕೆವರೆಗಂ ಬೇಗುಂ ಪ್ರತಾಪಾಗ್ನಿಯಿಂ ॥
(ಅನಂತನಾಥಪುರಾಣಂ)

ಓದಿಸಿಯೆಮ್ಮನೇಕುಸಿರದಿರ್ಪೆಯೋ ಕುಡುಕಿಕ್ಕಲೊಲ್ಲ¶ದೆಂ ।
ತೋಱುವೆ ರಾಜ§ಪುತ್ರಿಯೆನೆ ಕಾಂಚನಪುತ್ರಿಕೆಯಂ ಶುಕಾಳಿ ಕೇ ॥
ಳ್ದದಮೆ ವಾನರಂ ತೆಱೆದ ಪಂಜರದಿಂದೆ ಬಿಡಾಲಭೀತಿಯಿಂ ।
ಪೋದುವು ಪಾಱಿ ಕೀರತತಿ ತದ್ವಿಷಮುದ್ವಿಷಮಂದಿರಂಗಳೊಳ್ ॥೭೪೩

(ಕವಿಕುಂಜರಲೀಲಾವತಿ)

ಪಡಿವಾತೆಱನೆಡೆಗೆಟ್ಟು ಪೇರಡವಿಯಂ ಪೊಕ್ಕಾಗಳಾಗಳ್ ಬೞಿ ।
ಲ್ಮಡಿಯಂ ಕಂಡು ಮಯೂರಿ ಪಾಱಿ ನಗೆಗಣ್ಗಂಡೆಯ್ದುಗುಂ ವ್ಯಾಘ್ರವೊ ॥
ಳ್ಳಡುವಂ ಕಂಡು ಮದೇಭವೋಡೆ ಮೊಲೆಗಂಜಾರ್ದನುರ್ಗುಂ ಸಿಂಗವೊಂ ।
ದೆಡೆಯೊಳ್ ನಿಂದಿರಲಿಱಯದಂಗನೆಯರಂ ತದ್ವೈರಿಭೂಪಾಲರಾ ॥೭೪೪

ಗಜಕುಂಭಂಗಳ ಮುತ್ತುಗಳ್ ಬಱಿಸೆ ವಲ್ಕಪಾತ್ರಮೇನಾದುವೀ ।
ಭುಜಗಪೃಥುಫಣಾಮಣಿಪ್ರಚುರದೀಪಂ ಪೋದುವೇ ಪಣ್ಫಲಂ ॥
ಕುಜದೊಳ್ ಬೀತುವೆ ಭೀತಿಗೆಟ್ಟಿ*ರ್ದೆಗಿಡಲ್ಬೇಡೆಂದು ತದ್ವೈರಿಭೂ ।
ಭುಜರಂ ಮೆಯ್ಗಿಡದಂತೆ ಸಂತವಿಡುವರ್ ಕಾಂತಾರದೊಳ್ ಕಾಂತೆಯರ್ ॥
(ಧರ್ಮನಾಥಪುರಾಣಂ)

ಬಗೆಯುದಿದಿರ್ಚೆ ಸಾವುದು ಮರುಳ್ತನಮುಳ್ಳುದನಿತ್ತು ತೆತ್ತು ಕೈ ।
ಮುಗಿದು ಬ*ರ್ದಂಕುವಂ ಹರಣ‡ಮುಳ್ಳೊಡೆ ಹಾಡಿಯುಣಲ್ಕೆ ಬರ್ಪುದೊ ॥
ರ್ಮೆಗೆ ತಱಿಸುತ್ತು ಪೋಗೆ ತಲೆಯಿರ್ದೊಡೆ ಸಾಲ್ವುದು ಕಾದಿ ಸತ್ತೊಡೆ ।
ತ್ತುಗುಮೆ ಸಮಸ್ತವಸ್ತುತತಿ ಸಾವುದಱಿಂ ಸಿರಿ ಪೋಗಲಾಗದೇ ॥೭೪೬
(ಪುಷ್ಪದಂತಪುರಾಣಂ)

¶ ದಂ। ತಾದುದೆ. § ಕೀರನೆನೆ. ‡ ಮುಳ್ಳರೆ.

ಅಡಸಿದರಿಕರಿಯ ಘಟೆಯಂ ।
ಪೊಡೆದೊಡೆ ಖಿಣ್ಪಳಿಗಳಡರೆ ಸೊರ್ಕಿನ ಸೊವಡಿಂ ॥
ದಡಕಿಲಿಡೆ ಪಣ್ತು ನೇಱಲ ।
ನಿಡುಗೊಂಬೆನಿಸಿದುದು ತೋಳ ಬಾಳ್ ತೈಲಪನಾ ॥೮೩

ನರಸಿಂಹೋದ್ಭವನಾಜಿಯೊಳ್ ಜಡಿವ ಬಾಳೆಂತಿರ್ದುದೋ ಜನ್ನ ಕೇ ।
ಳರಿಭೂಪಾಲರ ರಕ್ತಮಂ ಸವಿದು ಮತ್ತೇಭಂಗಳಂ ತುತ್ತಿ ಭೂ ॥
ವರರಂ ನುಣ್ಣನೆ ನುಂಗಿ ವಾಜಿಚಯಮಂ ತಿಂದಟ್ಟಿ ಸಲ್ಕೆಂದು ಮೆಯ್ ।
ಮುರಿವಂತಿರ್ದುದು ಖಡ್ಗಕಾಳಭುಜಗಂ ಬಲ್ಲಾಳಭೂಪಾಲನಾ ॥೮೪

ಧನಧಾರಾಪ್ಲವಮಂ ವಿರೋಧಿನೃಪಕೋಶಾಕೂಪದಿಂ ಯಂತ್ರಮಂ ।
ತ್ರನಿಬದ್ಧಪ್ರಭುಶಕ್ತಿಸಂಭೃತಘಟೀಸಂದೋಹದಿಂ ತೋಡಿ ತೋ ॥
ಡಿ ನವತ್ಪಾರ್ಥಿವಮೌಳಿಭೃತ್ಯಸುಹೃದಾಪ್ತಾನೇಕಸತ್ಪಾತ್ರನಂ ।
ದನಮಂ ವರ್ಧಿಸುತಿರ್ಕುಮಾನೃಪನ ಬಾಹಾಸಾಹಸೋದ್ಯಾನಿಕಂ ॥೮೫
(ಅನಂತನಾಥಪುರಾಣಂ)

ಧೃತಶೈತ್ಯಂ ಧಾರಾಜಲ ।
ಯುತಮನುಕಂಪಾನ್ವಿತಂ ದಲೆನಿಸಿಯುಮಂತಾ ॥
ಕ್ಷಿತಿಪತಿಯ ವಿಜಯಭುಜದಸಿ ।
ಲತೆ ರಿಪುನೃಪರ್ಗೀವುದಧಿಕತಾಪೋದಯಮಂ ॥೮೬
(ಚಂದ್ರಪ್ರಭಪುರಾಣಂ)

ಪಿರಿದುಂ ಸಂಗರರಂಗದೊಳ್ ಕವಿವ ಧಾರಾಪಾತದಿಂ ಪೂರ್ವದ ।
ಚ್ಚರಿಯುಲ್ಲುದ್ಧತರಾಜಹಂಸನಿವಹಂ ತದ್ವಾಹಿನೀಜೀವನಂ ॥
ಪರಿಗೆಟ್ಟುಂ ಗಡ ಭಂಗಮಂ ತಳೆವುದೋರಂತೆಂದೊಡೇಸಿಂದಿನ ।
ಚ್ಚರಿಯಂ ಪುಟ್ಟಿಸದೇ ನೃಪೇಂದ್ರಕರವಾಲಾಮೋಘಮೇಘಾಗಮಂ ॥೮೭
(ಧರ್ಮನಾಥಪುರಾಣಂ)

ಪಲನಾಲಾಪಲ್ಲವೋಲ್ಲಾಸಿತೆ †ಮಲಮಲಿನಚ್ಛಾಯೆ ಭಿನ್ನೇಭರಕ್ತಾ ।
ವಿಲಮುಕ್ತಾಪ್ರಾಜಗುಂಜಾಭರಣೆ ದ್ರುತದಳತ್ಖಂಡಪಾಲಾಶಪುಷ್ಪೇ ‖
ಜ್ವಲೆ ತದ್ಭ್ರೂಪಾಲಶಸ್ತ್ರೀ ಶಬರಿ ಸುಭಟಸೇನಾಟವೀಶೀರ್ಷತಾಳೀ ।
ಫಲಮಂ ಪ್ರತ್ಯರ್ಥಿಭೂಭೃತ್ಕಟಕದೊಳದಟಿಂ §ಪೊಯ್ದು ಕೊಯ್ಯುತ್ತು
ಮಿರ್ಪಳ್ ‖೨೫೧ (ಕವಿಕುಂಜರಲೀಲಾವತಿ)

ಚಪಲವಿಶಾಲಲೋಚನೆ ಜಯಾಂಗನೆ ಧಾರೆಯೊಳಿರ್ದು ನೋಡಿ ಮ ।
ಸ್ನಿಪಳನೆ ತೀಕ್ಷ್ಣಖಡ್ಗಭಿದುರಾಭಮರೀಕ್ಷಣದತ್ತಚಿತ್ತನಾ ‖
ನೃಪನ ಕೃಪಾಣಪಟ್ಟಿಕೆಯುನೋಲಗಿಪಂ ವಿಕರಾಳಕಾಳಕಾ ।
ಲಪನವಿಚಂಡಿಚಂಡಿವೆರಸಂತಕನುಜ್ಜ್ವಲಕಾಂತಿದಂತಕಂ ‖೨೫೨

ಹಾರದ ಕಟ್ಟಳೆ ವಿಜಯಯ ।
ಶೋರಮಣಿಯರಾಗಿ ನೆಲಸೆ ನೃಪನುದ್ಧರಿಸ ‖
ಲ್ಬಾರವ ವಿತರಣದ ಮಹಾ ।
ಭಾರತುಲಾದಂಡವಾಯ್ತು ಬಾಹಾದಂಡಂ ‖೨೫೩

ನೆರೆವಲ್ಲಿಗಿಱಿವಲ್ಲಿಗೆ(?)ಪೋಱಗಿದೇಕೆಂದಾತ್ರಿಲೋಕೀಧುರಂ ।
ಧರವಾಗೋತ್ರಮಹೀಧರೋದ್ಘದ್ರಢಿಮಂ ಕೂರ್ಮೋನ್ನತಾಂಸಂ ದಿಶಾ ‖
ಕರಿಪಸ್ತಾಯತಮಾಂಸಲಂ ಭುಜಗರಾಜದ್ರಾಘಿಮಂ ವಿಶ್ವಭೂ ।
ಭರಮಂ ತಾಳ್ದಿದುದೊಂದೆ ದಕ್ಷಿಣಭುಜಾದಂಡಂ ಧರಾಧೀಶನಾ ‖೨೫೪
(ಅನಂತನಾಥಪುರಾಣಂ)

ಬಗೆಯೊಳ್ ಬೆರ್ಚದೆ ಬಂದು ತಾಗಿದರಿರಾಜೋರ್ವೀಶರಂ ಕಂಡು ನೆ ।
ಟ್ಟಗೆ ಕಣ್ಬೇಟದೊಳಾದಮುಚ್ಚರದಲಂಪಿಂ ಪೋರ್ವ ದಿವ್ಯಾಂಗನಾ ‖
ಳಿಗೆ ನಣ್ಪಂಗಿವನಿಂತನೀತನೆನುತುಂ ಕೈಯಾಱಿ ತಾನೊತ್ತುವಂ ।
ಡಿಗೆಗೋಲಂತೆಸೆದಿರ್ದುದಾಂತಿಱಿವ ಕುಂತಂ ಧಾರಿಣೀಕಾಂತನಾ ‖೨೫೫

† ಮದ. § ದಾಯ್ದು.

ಪ್ರರುಡೇ ಪುಣ್ಯಾಕ್ಕೆ ತವಪ್ಪ್ರಭುಜನ ವಿಪುಳದೋಃಖಡ್ಗನಿರ್ಘಾತದಿಂ ಸಿಂ ।
ಧುರಕುಂಭಂ ನುಚ್ಚುನೂಱಾಗೆ ಪಟುತುರಂಗಾಂಘ್ರಿಸಂಘಾತದಿಂ ಸಂ ॥
ಗರಭೂಭಾಗಸ್ಥಳೀವೇದಿಕೆ ವಿದಳಿಸೆ ವಿದ್ವಿಷ್ಟವೀರಾಂಗನಾಕ್ರಂ ।
ದರವಂ ಕೈಗಣ್ಮಲೇನುಣ್ಮಿದುದೊ ಜಯವಧೂದ್ವಾಹಮಾಂಗಲ್ಯಕರ್ಮಂ ॥

(ಧರ್ಮನಾಥಪುರಾಣಂ)

ಅಮರಾರಾತಿಬಲಂಗಳೆಂಬ ತೃಣಮಂ ಸೊಲ್ವನ್ನೆಗಂ ಮೇವ. ದು ।
ರ್ದಮದೈತ್ಯೇಂದ್ರರ ಜೀವಮೆಂಬ ತಿಳನೀರಂ ತೃಪ್ತಿಪರ್ಯಂತಮೀಂ ॥
ಟ ಮಹಾಂಭೋಜಭವಾಂಡಮೆಂಬ ¶ಘಟಮುಂ ತೀವಲ್ಕೆ ಸತ್ಕೀರ್ತಿದು ।
ಗ್ಧಮನೀನಂದಕಖಡ್ಗಧೇನು ಕಱೆಯಲ್ ಬೇಡಿರ್ದುದಿಂದಚ್ಯುತಾ ॥೨೫೭

(ಜಗನ್ನಾಥವಿಜಯಂ)

ಬಲಭಾರಕ್ಕಹಿನಾಥನಳ್ಕಿ ತಲೆದೊಂಗಲ್ ಪಿಂಗಲಲ್ಲಾಡೆ ಭೂ ।
ವಲಯಂ ಬಾಲದ ಮೇಲೆ ಬಿರ್ದ ಕಡುನೊಂದೋರಂತೆ ಪಾತಾಳದೊಳ್ ॥
ತಲೆವಾಲಂಗಿಡುವಂ ಗಡೆಂದೊಡಿದಿರೊಳ್ ಮಾಱಾಂತಸಿಕ್ಷೇಪದಿಂ ।
ತೞಿನಾಲಂಗಿಡುವರ್ ವಿರೋಧಿಗಳವಂಗೆಂದೆಂಬುದಾಶ್ಚರ್ಯಮೋ ॥೨೫೮

ಆಜನನಾಯಕನಸಿಧಾ ।
ರಾಜಲವಗಱಾಣೆ ಕೋಂಟೆ ತೋಳ್ವಲಮೆ ಬಲಂ ॥
ಸಾಜಮೆನಲಿಂತು ದೊರೆವಡೆ ।
ದೀಜಗತೀಭರಮನೊಂದೆ ಪುರಮೆನಲಾಳ್ವಂ ॥೨೫೯

(ಧರ್ಮನಾಥಪುರಾಣಂ)

ತುರಗಾರೋಹಣದಿಂದಮೊರ್ಮೆ ಗಜಶಿಕ್ಷಾಲೀಲೆಯಿಂದೊರ್ಮೆ ಕಾ ।
ವ್ಯರಸಾಸ್ವಾದದಿನೊರ್ಮೆ ವೈಣಿಕಕೃತಪ್ರಸ್ತಾವದಿಂದೊರ್ಮೆ ಗ ॥
ರ್ಘರಿಕಾಸ್ಫಾಲನದಿಂದಮೊರ್ಮೆ ವನವಾರಿಕ್ರೀಡೆಯಿಂದೊರ್ಮೆ ಚಿ ।
ತ್ರರುಚಿವ್ಯಾಪೃತಿಯಿಂದಮೊರ್ಮೆ ಕಳೆವಂ ಪೊತ್ತಂ ಮಹೀಪಾಲಕಂ ॥೨೬೦

(ಚಂದ್ರಪ್ರಭಪುರಾಣಂ)

¶ ಘಟಮಾದಂತೀವೆ.

ಅಕಲಂಕಾಗಮವೇದಿ ನೀತಿನಿಪುಣಂ ಕಾಲಕ್ರಿಯಾಲೋಕಲೌ ।
ಕಿಕವಿಜ್ಞಾನವಿಚಕ್ಷಣಂ ಸಕಲಶಾಸ್ತ್ರಾರ್ಥಪ್ರವೀಣಂ ಗುಣಾ ॥
ಧಿಕನಾರಾಜ†ತನೂಭವಂಗೆ ಗುಣಗಂಧಾಖ್ಯಪ್ರಧಾನಾತ್ಮಜಂ ।
ಮಕರಂದಂ ಪ್ರಿಯಮಿತ್ರನಾದನುಪಧಾಶುದ್ಧಂ ವಿಶುದ್ಧಾತ್ಮಕಂ ॥೨೬೧
(ಕವಿಕುಂಜರಲೀಲಾವತಿ)

ಇಂತು ಕಾವ್ಯಸಾರದೊಳ್

ರಾಜವರ್ಣನಂ.

೭. ಸ್ತ್ರೀರೂಪವರ್ಣನಂ.

ಪೂಸುವ ಬೂದಿಗಂಗಭವನಂ ಭವಸಾರನ§ನಾಯ್ದು ಸುಟ್ಟ ಭೂ ।
ತೇಶನ ಬುದ್ಧಿಗುದ್ದವರಿದಾಂ ಪೊಗೞ್ಕಂ ಪೊಗೞ್ವೆಂ* ಮನೋಜನಂ ॥
ಕೇಸುರಿಯಂತೆ ಪರ್ವಿ ಪಟುವಾಗಿ ಪೊದಳ್ದೞ್*ರ್ದಂತರಂಗಮಂ ।
ಕಾಸಿ ಕಪಾಲಿಯಂ ಪಿಡಿದೊಱಲ್ದರೆವೆಣ್ಣನೆ ಮಾಡಿಬಿಟ್ಟನಂ ॥೨೬೨
(ಕವಿಕುಂಜರಲೀಲಾವತಿ)

ಹರಿಯುರದಲ್ಲಿ ಗೋಪವಧುವಿಂ ಮದನಂ ವಿಜಯಪ್ರಶಸ್ತಿಯಂ ।
ಬರೆಯಿಸಿದಂ ಹರಂಗರುಣಲೋಚನಮಂ ಪಡೆದಂ ಲಲಾಟದೊಳ್ ॥
ಗಿರಿಜೆಯ ಪಾದಯಾವಕದೆ ಮಾಡಿಸಿದಂ ಮೊಗಮಿಟ್ಟು ದೇವಸಾ ।
ದರಿಗೆ ಸರೋಜಗರ್ಭನನೆನಲ್ ಪೆಱರಂ ಕೊಱಚಾಡಿ ಕಾಡನೇ ॥೨೬೩
(ಮಲ್ಲಿನಾಥಪುರಾಣಂ)

ಮನದ ವಿವೇಕಂ ಪೀನ ।
ಸ್ತನದೊಳ್ ನಾಲಗೆಯ ಮಾತು ಕಣ್ಗಳ್ ಕರತ ॥
ರ್ಜನಮಡರೆ ನಿಮಿರ್ದ* ಪುರ್ವಿನ ।
ಕೊನೆಯೊಳ್ ನೆಲಸಿದುದು ಜೌವನಂ ನೆಲಸಲೊಡಂ ॥೨೬೪
(ಚಂದ್ರಪ್ರಭಪುರಾಣಂ)

---

† ಕುಮಾರಕಂಗೆ. § ನಾಥನ.

ಮದನನ ಕೈದು ಕೂರ್ಪನೊಳಕೊಂಡುದೊ ಕಾಮನ ಕಲ್ಪವಲ್ಲಿ ಪೂ ।
ತುದೊ ಕುಸುಮಾಸ್ತ್ರರಾಜನ ಜಯಧ್ವಜಪಟ್ಟಿಕೆ ಚಿತ್ರಿಸಿತ್ತೊ ಹೃ ॥
ತ್ಸದನನ ಪುಷ್ಪಚಾಪಲತೆ ಪೂಗಣೆ‡ವೊಯ್ದುದೊ ಕಂತುದಂತಿ ಪ ।
ಣ್ಣಿದುದೊ ದಿಟಕ್ಕೆನಲ್ ಬಲಿಸುತಾತ್ಮಜೆ ಯೌವನದಿಂದಮೊಪ್ಪಿದಳ್ ॥೨೬೫

(ಜಗನ್ನಾಥವಿಜಯಂ)

ಕರುವಿಟ್ಟಂ ಕಾಮದೇವಂ ರತಿಯತಿಶಯದಿಂ ಬಣ್ಣವಿಟ್ಟಳ್ ಬಸಂತಂ ।
ಬರೆದಂ ಸರ್ವಾಂಗಮಂ ಕಣ್ದೆಱೆದನೊಸೆದು ಶೀತಾಂಶು ಚೈತ್ರಾನಿಲಂ ತೀ ॥
ವಿರೆ ಜೀವಂಬೊಯ್ದನಂತಲ್ಲದೊಡೆ ಸೊಗಯಿಪೀರೂಪಮೀಬಣ್ಣಮೀಮೈ ।
ಯ್ಸಿರಿಯೀಕಣ್ಣೊಳ್ಪಮೀಭಾವಕಮೊಗೆಯದೆನಲ್ ಕಾಂತೆ ಕಣ್ಗೆಡ್ಡಮಾದಳ್ ॥

(ಕವಿಕುಂಜರಲೀಲಾವತಿ)

ಕನಕಾಂಭೋಜರಜಂ ವಸಂತಪವನಂ ಚಾಂದ್ರೀಕಳಾಮಾಲೆ ಮೋ ।
ಹನಯಂತ್ರಸ್ಥನಭಂ ಸುಧಾರಸಮಿವುರ್ವೀವಾಯುತೇಜೋಂಬರಾಂ ॥
ಬುನಿಕಾಯಪ್ರತಿ†ಗೂಪಭೂತನಿಚಯಂ ತಾಮಾಗೆ ಕಾಮಾಂಬುಜಾ ।
ಸನನಾಕಾಂತೆಯ ಕಾಯದೊಳ್ ನೆರಪಿದಂ ರೂಪಕ್ರಿಯಾಪ್ರೌಢಿಯಂ ॥೨೬೬

(ಚಂದ್ರಪ್ರಭಪುರಾಣಂ)

ಅಲಗಂಬಂ ಶಶಿಬಿಂಬದಿಂ ಸಮೆದವೋಲ್ ಕೂರ್ಪಿಂಗಡರ್ಪಾದ ಕ ।
ಣ್ಮಲರ್*ಗಳ್ ದರ್ಪಣರತ್ನಮಂ ತಿರುಳ ಮಿಂಚಿಂದೊಪ್ಪವಿಟ್ಟಂತಿರು ॥
ಜ್ಜ್ವಲಿಪಾಸ್ಯಂ ಪೊಸನುತ್ತನಾಯ್ದು ಮ*ರ್ದಿನೊಳ್ ತೊಯ್ದಂತೆ ನೇರ್ಪಟ್ಟ ನಿ ।
ರ್ಮಲದಂತಚ್ಛವಿ ಬೇಡಿದರ್ಗೆ ವರವೀವಂತಾಯ್ತು ಮಾಕಾಂತೆಯಾ ॥೨೬೭

ತಳ*ರ್ಗಳ್ ಬೀೞುಡೆ ಹಸ್ತಪಾದತಳರಾಗಶ್ರೀಗೆ ಕಣ್ಗೊಳ್ವ ಕ ।
ಣ್ಗಳ ನಿರ್ಮಾಲ್ಯದ ಮಾಲೆ ಕೈರವವನಂ ಸ್ಮೇರಾಸ್ಯಬಿಂಬಕ್ಕೆ ಮಂ ॥
ಗಳನೀರಾಜನಭಾಜನಂ ಬಿದು ಮರಾಳಂ ಮಂದಯಾನಕ್ರಮಂ ।
ಗಳ ಕಾಲ್ಗಾಪೆನೆ ಬಣ್ಣಿಸಲ್ ಪವಣೆ ರೂಪಂ ಭೂಪನರ್ಧಾಂಗಿಯಾ ॥೨೬೮

---

‡ ಪೋದುದೊ. † ಪನ್ನ.

ತರಳಾಪಾಂಗಿಯ ರೂಪವಿಭ್ರಮವಿಲಾಸಾಶ್ಚರ್ಯಮಂ ನೋಡಿ ತ ।
ದ್ವಿರಹಾವಸ್ಥೆಯೊಳಂಗಜಂ ಕರಗಿದಂ ದೋಷಾಕರಂ ಕಂದಿದಂ ॥
ಮರವಟ್ಟಂ ಮಧುವಿಂತನಂಗತೆ ಕಲಂಕಿತ್ವಂ ವನಾಸಕ್ತಿ ನಿ ।
ರ್ನಿರವೇಕಾಯ್ತೆನೆ ತಲ್ಲತಾಂಗಿ ತಳೆದಳ್ ಸೌಶೀಲ್ಯಸೌಭಾಗ್ಯಮಂ ॥೧೭೦

(ಅನಂತನಾಥಪುರಾಣಂ)

ಮೊಗಮುಂ ತಾವರೆ ಕಣ್ಣನುತ್ಪಲಗಳಂ ಧಮ್ಮಿಲ್ಲಮುಂ ಸೋಗೆ ಸೆ ।
ಳ್ಳುಗುರಂ ಕೇದಗೆ ಪುರ್ಬನಂಗಜನ ಬಿಲ್ ದಂತಾಳಿಯುಂ ಮುತ್ತು ಕೈ ॥
ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ ।
ಸ್ತುಗಳಂ ಪೋಲಿಸುವಂತುಟಾಂ ಮರುಳನೇ ರೂಪಂ ವಿಜಿತಾಂಗಿಯಾ ॥

(ಆದಿಪುರಾಣಂ)

ಎಳಮಿಂಚಿಂಗೊಪ್ಪವಿಟ್ಟಂತಮೃತದ ಕಳೆ §ರೂಪಾದುದೆಂಬಂತೆ ಮುತ್ತಂ ।
ತೊಳೆದಿಟ್ಟಂತಂಗಜಾತಂ ಮಸೆದು ಪಿಡಿದ ಕೂರ್ವಾಳದೆಂಬಂತೆ ಡಾಳಂ ॥
ಪೊಳೆಯುತ್ತುಂ ಸುತ್ತಲುಂ ನೋಳ್ಪರ ಬಗೆಗೆ ಭಯಂ ಪುಟ್ಟೆ ತಳ್ತ¶ಯ್ತೆ
ತತ್ತೋ । ಮಳೆ ಚೆಲ್ವಿಂದೊಪ್ಪಿ ಬರ್ಪಂಗಜನ ಗಜದವೋಲ್ ಕಾಂತೆ ಕಣ್ಗೆ
ಡ್ಡವಾದಳ್ ॥೧೭೨ (ಕವಿಕುಂಜರಲೀಲಾವತಿ)

ವಚನದೊಳಲ್ಲ ಪೆರ್ಮೆಲೆಯೊಳಲ್ಲದೆ ಕರ್ಕಶವೃತ್ತಿ ವಕ್ರಮುಂ ।
ಸುಚರಿತದೊಳ್ ವಿಚಾರಿಸುವೊಡಿಲ್ಲಳಕಾಳಿಯೊಳಲ್ಲದೆಲ್ಲಿಯುಂ ॥
ವಿಚಳತೆಯಿಲ್ಲ ಚಿತ್ತದೊಳಪಾಂಗದೊಳಲ್ಲದೆ ಸಾರಸದ್ಗು†ಣ ।
ಪ್ರಚಯದೊಳಲ್ಲ ಮಾಂದ್ಯಮದು ಯಾನದೊಳಲ್ಲದೆ ತಲ್ಲತಾಂಗಿಯಾ ॥೧೭೩

(ಚಂದ್ರಪ್ರಭಪುರಾಣಂ)

ಬೆಳತಿಗೆಗಣ್ಣನಾಂತ ಲತೆಯೋ ಲಲಿತಾಂಗಿಯೊ ಮುದ್ದುಗೆಯ್ತವೊ ।
ಲ್ದೆಳಸಿದ ಪೊಸ್ನ ಪುತ್ತಳಿಯೊ ಕಾಂತೆಯೊ ಸೋಮರ್ಮಿಡಿ ಬಿಟ್ಟ ಬೆಸ್ನನ ॥
ಪ್ಪೆಳಸಿದ ಸೈಪಿನಬ್ಜಿನಿಯೊ ಕಾಮಿನಿಯೋ ಮೊಲೆವೆತ್ತ ಭಾಗ್ಯಮಂ ।
ತಳೆದೆಳಮಿಂಚೊ ಕೋಮಳೆಯೊ ಪೇಟನೆ ಬಾಲಕಿಯಾದವೊಪ್ಪಿದಳ್॥೧೭೪

§ ರೂಪಾಂತು. ¶ ಲಾಕೋ. † ಣೋ । ಪಚ.

ಮನವಂ ಸೋಲಿಸಲಂಗಜಂ ಬಯಸೆ ಕಾಂತಾರೂಪದಿಂ ತಳ್ತ ವೋ |
ಹನವೋ ಸುವ್ರತಿಯಾಗಿ ಪೆತ್ತನೊ ವಸಂತಂ ಪೆಣ್ಣ ರೂಪಂ ಗಿರೀ ‖
ಶನನಾರಾಧಿಸಿ ಮೇಣ್ ವರಂ ಬಡೆದನೋ ಪೆಣ್ಗಾಡಿಯಂ ಚಂದ್ರನಿ |
ನ್ನನೆಯಂಬಾಂತನೊ(?) ನೋಂತು ಪೆಣ್ಬರಿಜನೆಂಬಂತಾಕೆ ಕಣ್ಗೊಪ್ಪಿದಳ್ ‖
(ಕವಿಕುಂಜರಲೀಲಾವತಿ)

ಉರವಿಂಬಿಲ್ಲ ಪಯೋಧರದ್ವಯದ¶ಗುರ್ಬಿಂಗಾಸ್ಯಮಿಂಬಿಲ್ಲ ಭಾ |
ಸುರನೇತ್ರದ್ವಿತಯಪ್ರಚಾರತೆಗೆ ಬೆನ್ನಿಂಬಿಲ್ಲ ಧಮ್ಮಿಲ್ಲಬಂ ‖
ಧುರಸೀಮಾವಲಯಕ್ಕೆ ನೋಡೆ ನಡುವಿಂಬಿಲ್ಲೊಪ್ಪವೀಬಾಸೆಗಂ |
ಗಿರಿಜಾಯೌವನಸಂಪದಕ್ಕೆ ತನುವಿನ್ನೆಂತಪ್ಪುದೋ ರುದ್ರನಾ ‖೧೨೬
(ಗಿರಿಜಾಕಲ್ಯಾಣಂ)

ತಳಿರೊಳ್ ತಾರಗೆ ಮೂಡಿದಂದು ತರದಿಂ ಪೂಂಬಾೞಿಗಿಂಬಾದ ಕೋ |
ಮಳಭಾವಂ ಪೊರೆದಂದುಮಾನೆದಲೆ ನುಣ್ಪಂ ಪೆಂಪನಾಳ್ದಂದು ಪೊಂ ‖
ಬೆಳಗಂ ಕಂಬುಗಿದಂದು ಕನ್ನಡಿಗೆ ಕಣ್ಬಂದಂದು ಬಾಲೇಂದು ಪಿಂ |
ಡಳಿದಾಳ್ವಂದಡಿಯಿಂದಮಾನುಡಿವರಂ ಬಣ್ಣಿಪ್ಪುದಾಕಾಂತೆಯಂ ‖೧೨೭
ಕೞಿಗೞಿಗೆಂದಿದಂ ಮೊಗದ ಮೆಯ್ಸಿರಿಗಂಡಮೃತಾಂಶು ಲಜ್ಜೆಯಿಂ |
ತುೞಿತುೞಿಗೊಂಡು ಕಾಲ್ವಿಡಿದುದೊಳ್ನಡೆಗಳ್ಕಿ ಮರಾಳಮಾನಗಂ ‖
ಪೆೞಿನೞಿಯಾಯ್ತು ಪಜ್ಜಳಿಪ ಮೆಯ್ವೆಳಗಿಂಗೆಳಮಿಂಚೆನೆಲ್ಕದಾ |
ರೞಿವಭಿವರ್ಣಿಪರ್ ಸತಿಯ ರೂಪಿನ ರೂಢಿಸಿದೊಂದು ಗಾಡಿಯಂ ‖೧೨೮
(ಧರ್ಮನಾಥಪುರಾಣಂ)

ಮಸೆದೆಳಮಿಂಚೊ ರಂಜಿಸಿದ ರತ್ನಶಲಾಕೆಯೊ ಕಾಮದೇವನ |
ರ್ಚಿಸಿದರಲಂಬೊ ಪೂತ ಲತೆಯೋ ನನೆಯೇೞ್ ಮೊಡಲ್ತ ಮಾವೊ ನೆ ‖
ಣ್ಣಿಸಿದಮೃತಾಂಶುಲೇಖೆಯೊ ವಿಲೋಕನಮಿಟ್ಟ ಸಜೀವಚಿತ್ರಮೋ |
ಪೊಸನನೆದೊಟ್ಟ ಪದ್ಮಿನಿಯೊ ಕಯ್ಗೆಯೆ ಕಣ್ಗೆಸೆದಿರ್ದ ಕಾಂತೆಯೋ ‖೧೨೯
(ಕವಿಕುಂಜರಲೀಲಾವತಿ)

¶ ಕೊರ್ವಿಂ.

ನೆಲೆವೊಲೆ ಹಾರವುಂ ಕೆಲಕೆ ನೂಂಕಿದುದೆಯ್ದೆ ವಿಲೋಲಲೋಚನಾಂ
ಚಲಮುವತಂಸಮುಂ ಮುಸುಳಿಸಿತ್ತು ಗತಿಸ್ಖಲಿತಂ ನಿತಂಬಮುಂ ॥
ಡಲಕಟಿಸೂತ್ರಮುಂ ಪಱಿದು ಸೂಸಿದುದಾಕೆಗೆ ತನ್ನ ಚೆಲ್ವನ ।
ಗ್ಗಲಿಸುವ ಯೌವನಾಭಿನವಲಕ್ಷ್ಮಿಗವೇಂ ಮಱೆಯಾಗದಿರ್ಕುಮೋ ॥೭೮೦

(ವರ್ಧಮಾನಪುರಾಣಂ)

ಸಣ್ಣಂ ನಡು ತಿಣ್ಣಂ ಮೊಲೆ ।
ಬಣ್ಣಂ ಪಸುರ್ವೆಸಱ ಬಣ್ಣವಧರಂ ಮಧುರಂ ॥
ಕಣ್ಣಲರ್ಗಣ್ಣೆಮೆ ಮಂದಂ ।
ಬಣ್ಣಿಸಲರಿದಬ್ಜಜಂಗಮಾಕೆಯ ರೂಪಂ ॥೭೮೧

(ಶೂದ್ರಕಂ)

ಮದಕಲಮರಾಳಗಮನೆಯ ।
ಪದಮುಂ ಪಲ್ಲವದೆ ಪೋಲ್ವೆನೆಂಬರ ನುಡಿಯುಂ ॥
ಪುದಿದಿರ್ದಶೋಕವಲ್ಲರಿ ।
ಸುದತಿಯುರೆಡಗಾಲೊಳೊದೆಯೆ ಕೊಂಡಪುದಿನ್ನುಂ ॥೭೮೨

(ಧರ್ಮನಾಥಪುರಾಣಂ)

ಉನ್ನತನಿತಂಬಭರದಿಂ ।
ಮುನ್ನುಂಡಲತಗೆಯ ರಾಗಮುಂ ಕಾಣುವವೋಲ್ ॥
ಮುನ್ನಂ ಸೊಗಯಿಸಿದುವು ತ ।
ತ್ಕನ್ಯೆಯ ಕನದರುಣಚರಣಕೋಕನದಂಗಳ್ ॥೭೮೩

ನೆರಮುಳ್ಳೊಡೆ ನಡೆಯೊಳ್ ಮ ।
ಚ್ಚರಮುಳ್ಳೊಡೆ ಬರ್ಪುದೆಂದು ಬಾಳಮರಾಳೋ ॥
ತ್ಕರಮಂ ಬಯಲ್ಗೆ ಕರೆವಂ ।
ತಿರೆ ಸುದತಿಯ ಚರಣರಣಿತನೂಪುರಮೆಸೆಗುಂ ॥೭೮೪

(ಕವಿಕುಂಜರಲೀಲಾವತಿ

ಸ್ತನಸಂಗಮಿರಲ್ ಸದ್ಯ ।
ಸ್ತನಸಂಗಂ ನೆಗಟ್ಟ್ದವೆವ್ರ್ಮಳಧಿಪತಿಗೆ ಕುಚ ॥
ಕ್ಕನಿಸುನ್ನತಿಯೇಕೆನುತುಂ ।
ಕನಿಸುವವೊಲ್ 'ಮಲರ್ದ ಕನ್ನೆಯುಂಗುಟಮೆಸೆಗುಂ ॥೧೪೪

ಕುಂದದರಸ್ಮಿತೆಯ ಮಡಂ ।
ಕುಂದದ ಚೆಲ್ವಿಂ ಮನೋಜರಾಜಕ್ರೀಡಾ ॥
ಕಂದುಕಮೆನೆ ಜನದ ಮನ ।
ಕ್ಕಂದು ಕರಂ ಮುದಮನೊದವಿಕುಂ ಮೃದುಗತಿಯಿಂ ॥
(ಜಗನ್ನಾಥವಿಜಯಂ)

ಮೃಗಲೋಚನೆಯೊಳ್ದೊಡೆಗಳ ।
ನಗಲದೆ ನೋಡಿದರ ನಯನರುಚಿಗಳ್ ನುಣ್ಪಿಂ ॥
ಜಗುಟ್ಟ್ದ ಕೆಡೆದಿರ್ದುವೆನೆ ಕಾ ।
ಲುಗುರ್ಗಳ ಕಿಱುವೆಳಗು ಕೆನೞ್ ಕಣ್ಗೆಸೆದಿರ್ಕುಂ ॥೧೪೨
(ಕವಿಕುಂಜರಲೀಲಾವತಿ)

ಕಾಮನ ತಿಳಗೊಳನೆನಿಪ ನಿ ।
ಕಾಮನವದ್ಯುತಿಜಲಪ್ರವಾಹದೊಳೆಸೆವಾ ॥
ವಾಮೆಯ ಮೇಗಾಲ್ಸೊಗಯಿಸು ।
ವಾಮೆಯನನುಕರಿಸಿ ಮನಮನಿರ್ಕುಳಗೊಳ್ಗುಂ ॥೧೪೪
(ಜಗನ್ನಾಥವಿಜಯಂ)

ಲಪನೇಂದುರುಚಿಗೆ ಮೈಮಱ್ ।
ದುಪಕರಿಸಿದ ಘನಪಯೋಧರಂಗಳನೊಸೆದೀ ॥
ಕ್ಷಿಪ ಪದಪಯೋಜಲಕ್ಷ್ಮಿಯ ।
ಚಪಲಾಕ್ಷಿಗಳೆನಿಪ್ಪುವವಳ ಚರಣನಖಂಗಳ್ ॥೧೪೯
(ಪುಷ್ಪದಂತಪುರಾಣಂ)

೧ ಮಾರಳ್ಳ.

ನಡೆ ನೋಡಿ ನಾಣ್ಚಿ ಕೈಕಾ ।
ಲೊಡಲೊಳ್ಪುಗೆ ತಳಯನೆತ್ತಲಣ್ಮದೆ ಕೂರ್ಮಂ ॥
ಮಡುವಂ ಬಿದಿರ್ದಗೆನಲ್ಕಾ ।
ಮಡದಿಯ ಮೇಗಾಲ ಮಾಂಗನದು ಪೋಲ್ತಪುದೇ ॥೧೯೦

ಕಣ್ದಣಿಯೆ ನೋಡಿ ಕಾಂತೆಯ ।
ನುಣ್ದೊಡೆಗುಗ್ಗಡದ ಗೆಲವನಿತ್ತಂಗಭವಂ ॥
ಪೂಣ್ದುಡಿಸಿ ನಾರನಟ್ಟಿದೆ ।
ಮೂಣ್ದನೆ ಪೇೞ್ ಬನಕೆ ಕನಕಕದಳಿಯನಿಳೆಯೊಳ್ ॥೧೯೧

ತುಂಗಕುಚಭರೆಯ ನಡುವಂ ।
ಭಂಗುರಯೌವನವನೈಕಲತೆಯೆನ್ನದೆ ನೀಂ ॥
ಸಿಂಗದ ನಡುವೆಂದೊಡೆ ಪೋಱ ।
ಪಿಂಗದೆ ಕರಿಕುಂಭಮೆಂತು ಮೇಲಿರ್ದಪುದೋ ॥೧೯೨

(ಧರ್ಮನಾಥಪುರಾಣಂ)

ಸ್ತನದುನ್ನತಿಯುಂ ಜಘನದ ।
ತನಿವೆರ್ಚಂ ನೋಡಿ ನೋಡಿ ಬಡವಾಯ್ತೆನೆ ಕಾ ॥
ಮಿನಿಯ ನಡುವೆಸೆವುದಲ್ಪಂ ।
ಘನವೆನಿಸಿದ ನೆರೆಯ ಸಿರಿಯ ಸೈರಿಸಲಾೞಂ ॥೧೯೩

(ಕವಿಕುಂಜರಲೀಲಾವತಿ)

ಮೊಲೆವಿಣ್ಪಿಂ ಮುಱದಪುದೀ ।
ಲಲನೆಯ ಬಡನಡುವಿದೆಂದು ಕುಸುಮಶರಂ ಕೈ ॥
ಯ್ವಲದಾಂಕೆಗೊಟ್ಟ ನೀಲದ ।
ಸಲಗೆಯಿದೆನೆ ರೋಮರಾಜಿ ರಾಜಿಸಿ ತೋರ್ಕುಂ ॥೧೯೪

(ಅರ್ಧನೇಮಿಪುರಾಣಂ)

ಶೈವಾಳಜಾಲವಲ್ಲರಿ ।
ಪೀವರಕುಚಕೋಕಮಿಥುನಯುಗವೊಂದೊಂದ ॥
ಕ್ರೀವಲ್ಲಿ ಜಗು*ಳ್ದುದೆನೆ ರೋ ।
ಮಾವಲಿ ರಂಜಿಸಿದುದಾಸರೋಜಾನನೆಯಾ ॥೧೯೫

(ಕವಿಕುಂಜರಲೀಲಾವತಿ)

ತರದಿಂದೆ ಮೂಱು ಸೊಬ್ಬರ ।
ಮರಲಂಬಂ ತದಧಿಪತಿಯು ಕಣ್ಗಂ ಮನಕಂ ॥
ಗೆರೆಯಾಣೆಯಿಟ್ಟ ರೇಖೆಗ ।
ಳಿರವಂ ವಳಿರೇಖೆ ತಳೆದುವಳಕುಂತಳೆಯಾ ॥೧೯೬

(ಚಂದ್ರಪ್ರಭಪುರಾಣಂ)

ನೆಲೆವೊಲೆಯೆರಡಱ ಸಂದಂ ।
ಸಲೆ ಭೇದಿಸಲೆಂದು ಮದನನತಿಸಾಹಸದಿಂ ॥
ಸಲಿಸಿದ ನೀಲದ ಸಲಗೆಯು ।
ನಿಲವೆನಿಪುದು ರೋಮರಾಜಿ ರಾಜಾಂಗನೆಯಾ ॥೧೯೭

(ಕವಿಕುಂಜರಲೀಲಾವತಿ)

ಕೋಮಳೆಯ ಕನಕಕಾಂಚೀ ।
ದಾಮದ ಕೆಂಬರಲ ನುಣ್ಗದಿರ್ ತೀವಿರೆ ನಾ ॥
ಭೀಮಂಡಳಮಿಱಿಸಿದುದಭಿ ।
ರಾಮತೆಯಿಂದುಳ್ಳಲರ್ದ ಬಂದುಗೆಯಲರಂ ॥೧೯೮

(ಚಂದ್ರಪ್ರಭಪುರಾಣಂ)

ಬಿಟ್ಟು ಬಳಸಿದೊಡೆ ಬಾನೆಡೆ ।
ಗೆಟ್ಟಪ್ಪುದೆಂದಡರೆ ನೋಡಿ ಜಘನಸ್ಥಲಮಂ ॥
ನೆಟ್ಟನೆ ಬಿದಿ ಬಿಗಿದಂ ಪೊಂ ।
ಗಟ್ಟನೊಳೆನೆ ಕಾಂಚಿ ಕಣ್ಗೆವಂದುದು ಸತಿಯಾ ॥೧೯೯

(ಮಲ್ಲಿನಾಥಪುರಾಣಂ)

ಕಡುಚೆಲ್ವವಯವಮಂ ಸ್ಮರ ।
ನಡರೆ ಕರಂ ಗುಣಿಸಿ ನೋಡಿ ನಡುವಿಲ್ಲೆಂದಾ ॥
ಗ್ಗಡಿಸಿಟ್ಟ ಸೊನ್ನೆಯಂತೇ ।
ನೊಡರಿಸಿದುದೊ ಚೆಲ್ವನವಳ ನಾಭೀವಲಯಂ ॥೩೦೦

(ಧರ್ಮನಾಥಪುರಾಣಂ)

ಸುದತಿಯ ತನುರುಚಿಜಲದೊಳ್ ।
ವದನಾಂಬುಜರೇಣುವುದಿರ್ದು* ವಳಿವೀಚಿವಿಘಾ ॥
ತದಿನೇಱುಗಟ್ಟಿತೆನೆ ಪೊಳೆ ।
ದುದು ಕಾಂಚನಕಾಂಚಿ ಜಘನಪುಳಿನಸ್ಥಳದೊಳ್ ॥೩೦೧
ಚಿತ್ತಭವಚಕ್ರವರ್ತಿಗೆ ।
ತತ್ತರುಣಿಮಚಕ್ರವೊಗೆಯೆ ದಿಗ್ವಿಜಯಕ್ಕೆಂ ॥
ದೆತ್ತಿದವುಳಗ್ಗಡಾರದ ।
ಬಿತ್ತರವಂ ಪೋಲ್ತುವವಳ ವೃತ್ತಕುಚಂಗಳ್ ॥೩೦೨
ಮದನಾನಳನೇಱದೆ ಮಾ ।
ಣದೆಂದು ಮನಮೆಂಬ ಮನೆಯ ಮೇಗಬ್ಜಜನೆ ॥
ತ್ತಿದ ಕೊಡಗಳಂತಿರೆಸೆವುದು ।
ಸುದತಿಯ ಲಾವಣ್ಯವಾರಿಪೂರ್ಣಕುಚಂಗಳ್ ॥೩೦೩

(ಕವಿಕುಂಜರಲೀಲಾವತಿ)

ಮದನೇಂದ್ರಜಾಲಿಗಂ ಟೊ ।
ಕದ ಬಗೆಸೆಂಡುಗಳನಗಲದಿಟ್ಟಳವಡೆ ಮು ॥
ಚ್ಚಿದ ಮಿಸುನಿವೆಸದ ಕರ್ಪ್ಪ ।
ಯೆದ ಕೊಳಗಳೆನಿಸಿ ಮೆಱೆದುವವಳ ಕುಚಂಗಳ್ ॥೩೦೪

ಸೆಡು ಸೆಡೆವಂತು ಮೇಲುದೊಡೆವಂತು ಮೊಗಕ್ಕಡರ್ದ* ಂತು ಮುಯ್ಯ್ವುಗಳ್ । ಬಿಡೆ ನೆಗೆವಂತು ಬೀಗಿ ನಳತೋಳ ಮೊದಲ್ ಪೆಱುವಂತು ಕೊರ್ವಿ ತ ॥

ಳ್ತೊಡೆಗಿಱಿದೊಂದನೆಱಂದಮರ್ದ್ದ ಪೆಂಪಿನ ಸೊಂಪಿನ ನಣ್ಪನಾಳ್ದ ಪೊಂ ।
ಗೊಡನನಮರ್ಚಿದಂತೆಸೆವುವಾಲಲಿತಾಂಗಿಯ ಪೀವರಸ್ತನಂ ॥೩೦೫॥

ಅಣಿಯರದಿನತನು ತನುಲತೆ ।
ಗೆಣಿಸದೆ ಲಾವಣ್ಯರಸಮನೆತ್ತುವ ಪೊಸಱಾ ॥
ಟಣವಾಲೆಯಂತಿರೆಸೆಸದು ।
ಮಣಿಹಾರಂ ನಾಭಿಸರಸಿವರಮಂಗನೆಯಾ ॥೩೦೬

(ಧರ್ಮನಾಥಪುರಾಣಂ)

ತನುಲತೆಗೆ ಶಾಖೆ ಕರತಳ ।
ವನಜಕ್ಕೆ ಮೃಣಾಳನಾಳಮಕ್ಷಿಭ್ರಮರ ॥
§ಕ್ಕೆನಸುಂ ನವೀನಸರಸಿಜ ।
ಮೆನೆ ವನಿತೆಯ ದೋರ್ಯುಗಕ್ಕೆ ಪರ್ಯಾಯಂಗಳ್ ॥೩೦೭

(ಚಂದ್ರಪ್ರಭಪುರಾಣಂ)

ಪರಿಕಿಸೆ ಕಲಾವಿಲಾಸನ ।
ಪರಿರಂಭಕ್ಕಮರ್ದ ಚುಂಬನಕ್ಕಿಂಬಾಗಿ ॥
ರ್ದರಸಿಯ ಕೊರಲ್ಗಟಕ ।
ಣ್ಗುರುಡರ ಕೈವಾಸೆಗ್ಗ ಬರ್ಪ ಶಂಖಂ ಸರಿಯೇ ॥೩೦೮

(ಧರ್ಮನಾಥಪುರಾಣಂ)

ಅಲರ್ಪಡಿಯೆತ್ತಿದ ಪೆಱಯಿಗೆ ।
ಮೆಲಗದ ಕಿವಿಯೋಲೆ ಬರಿಯಗಾಲಿಗಳೆನಲಾ ॥
ಜಲಜಾಕ್ಷಿಯ ಮುದ್ದುಮೊಗಂ ।
ಗೆಲೆವೆಂದುದು ಕುಸುಮಶರನ ಪೂವಿನ ರಥಮಂ ॥೩೦೯

(ಕವಿಕುಂಜರಲೀಲಾವತಿ)

ಕಂದರ್ಪನ ಪ್ರೊಳೆವಸುಕೆಯ ।
ಕೆಂದಳದಿಂ ಸಮೆದ ತೆಸ್ನ ಕೈಪ್ರೊಡೆಯಂ ಪೂ ॥

§ ಕ್ಕೆನವೀನಶರೀಷವ್ರಜ.

ರ್ಣೇಂದುಗೆ ತಾಂ ಕೈಯೆ-ಡೆಗೊ ।
ಟ್ಟಂದದಿನಾಚಂದ್ರಮುಖಿಯ ಬಾಯ್ದೆಱೆಯೆಸೆಗುಂ ॥೩೧೧
(ಧರ್ಮನಾಥಪುರಾಣಂ)

ಪದೆದು ಸರೋಜಜಂ ಸುದತಿಯಾನನಮಂ ಸಮೆದುಳ್ಳೆ ಚಂದ್ರಬಿಂ ।
ಬದ ನಡುವಿರ್ದ ಕೋಮಳಕಳಾವಳಿಯಂ ನೆಱೆ ತೋಡಿ †ಕೊಂಡನಂ ॥
ತದು ಬಯಲಾಗೆ ತದ್ಗಗನಕಾರ್ಷ್ಣ್ಯವನಾಲಮಿದೆಂದು ಪುತ್ತಿದೆಂ ।
ದಿದು ಮಿಗವೆಂದು §ಶಂಕಿಸುತುಮಿರ್ಪುದು ಸಂಶಯಭಾಜನಂ ಜನಂ ॥೩೧೨
(ಚಂದ್ರಪ್ರಭಪುರಾಣಂ)

ಮಿಱುಗುವ ಮಿಂಚಿನ ಗೊಂಚಲ ।
ಮಱೆಗಳವೆನಿಪವಳ ಧವಳದಶನಾವಳಿಯೆ ॥
ಬ್ಬಱಿಸಿದುದು ವದನಸದನದೊ ।
ಳುಱುವ ಸರಸ್ವತಿಯ ಕೊರಲ ಹೀರಾವಳಿಯಂ ॥೩೧೩
(ಧರ್ಮನಾಥಪುರಾಣಂ)

ಪೊಳೆವ ದಶನಾಳಿ ಮುಕ್ತಾ ।
ವಳಿ ಮಧ್ಯದ ತರಳಮಣಿ¶ಯದೆಂಬೆಂ ತತ್ಕೋ ॥
ಮಳೆಯಧರಮಣಿಯನವಯವ ।
ಕುಳಚೂಡಾಮಣಿಯನತನುಚಿಂತಾಮಣಿಯಂ ॥೩೧೪
(ಚಂದ್ರಪ್ರಭಪುರಾಣಂ)

ಪಿರಿದುಮನುರಾಗದಿಂ ಬೀ ।
ಗಿರೆ ಸೊಗಯಿಪ ಸೊಬಗುಗಂಡು ನಿಜಪರಿಮಳದಿಂ ॥
ಪೊರೆದು ಮುಖಲಕ್ಷ್ಮಿ ಬಂದುಗೆ ।
ಯರಲಂ ಸೂಡಿದವೊಲಾಯ್ತು ಬಾಯ್ದೆಱೆ ಸತಿಯಾ ॥೩೧೫
(ಧರ್ಮನಾಥಪುರಾಣಂ)

ಸ್ಮರನ ಬಿಸದಕ್ಕೆ ಲೋಚನ ।
ಕರಿಗಳ್ ಕೈಯಿಕ್ಕಲೆಂದು ನಿಲೆ ಸಂಪಗೆಯೊ ।

† ಕೊಂಡೊಡಂ. § ಬಣ್ಣಿ. ¶ ಯಿದೆಂಬನೆ.

ಳ್ಬರಿಮುಗುಳ್ ತೊಳಪ ತಳಯೆನೆ ।
ಕರಮೆಸೆದುದು ಕಮಳಮುಖಿಯ ನಾಸಾಮುಕುಳಂ ‖೩೧೬
(ಕವಿಕುಂಜರಲೀಲಾವತಿ)

ಮೊರೆಯುದಳ ಮುಗಿಯುದಬ್ಜಂ ।
ಕೊರಗದ ನನೆಯಂಬು ನೀರ್ಗೊಳಾಡವ ಮೀನಂ ‖
ಚಿರಮೆನೆ ಮಿಸುಗದ ಮಿಂಚಂ ।
ಬರಚರಮಲ್ಲದ ಚಕೋರಮಲರ್ಗಣ್ ಸತಿಯಾ ‖೩೧೭
(ಚಂದ್ರಪ್ರಭಪುರಾಣಂ)

ಬಂದೊಂದಱ ಸೌಂದರ್ಯವು ।
ನೊಂದೀಕ್ಷಿಸಲೆಂದು ಬಯಸೆ ನಾಸಿಕೆಯಡ್ಡಂ ‖
ಬಂದಿರೆ ಪೊಱವಳಸಿಂದಂ ।
ಬಂದಪುವೆನೆ ನಿರ್ನಿದ್ಧ್ರವವಳ ನಿಡಿಯಲರ್ಗಣ್ಗಳ್ ‖೩೧೮
(ಕವಿಕುಂಜರಲೀಲಾವತಿ)

ಚಕ್ಕನೆ ಚಕೋರವಕ್ಕಿಗ ।
ಳಿಕ್ಕೆಕ್ಕೆಯೊಳುಂಡು ತಣಿದು ತಿಂಗಳ ಬೆಳಗಂ ‖
ಮುಕ್ಕುಳಿಸಿ ಮಗುೞೆ ಮಗುೞ್ದುಗು ।
ವ್ವಕ್ಕಜಮಂ ಪಡೆದುದವಳ ಧವಳಾಪಾಂಗಂ ‖೩೧೯
(ಧರ್ಮನಾಥಪುರಾಣಂ)

ಬಾಲೆಯ ಕಡೆಗಣ್ಣೋಟಮೆ ।
ಸೋಲದೆ ನನೆಗಣೆಗಳೇವುವೆಂದು ಮನೋಜಂ ‖
ಶೂಲಿಯ ನೊಸಲುರಿಗಣ್ಣಂ ।
ಪೀಲಿಯ ಕಣ್ಣಂಬನಾವನೆನಗಿದಿರೆಂಬಂ ‖೩೨೦
(ರಾಮಚಂದ್ರಚರಿತಪುರಾಣಂ)

ವಿಶಾಂಬೋಣರಂ ಪೋಲಿಪ ಬೆ ।
ಳ್ಳಂಬಮನಾನಱಿಯೆನವಳ ಧವಳಕಟಾಕ್ಷಂ ‖
ತುಂಬಿಗೆ ಬೆಳ್ಗಱ ಮೂಡಿದು ।
ದೆಂಬಿನಮಾನನಸರೋಜದೊಳ್ ಕರಮೆಸೆಗುಂ ‖೩೨೧
(ಧರ್ಮನಾಥಪುರಾಣಂ

ಅವಲೋಕನದಿಂದಾರ್ಗಂ ।
ಕಿವಿವೇಟವನುಂಟುಮಾಡುವಚ್ಚರಿಗೆಡೆಯಾ ॥
‡ದವಳಿಸೆವ ಕರ್ಣಯುಗಲ ।
ಕ್ಕವತಂಸೋತ್ಪಲಮೆನಿಪ್ಪವೆಲ್ಲರ ಕಣ್ಗಳ್ ॥೩-೧೨

(ಮಲ್ಲಿನಾಥಪುರಾಣಂ)

ಸ್ಮರನಂ ಕೂರ್ಪೇಱಸಲ್ ಸೊಲ್ದಲರ್ಗೆಣೆ* ಕಡುಗೂರ್ಪೇಱರಲ್ ತನ್ನ ಕೂರ್ಪಿಂ । ತರದಿಂದಂ ಮಿಂಚು ಮಿಂಚಂ †ಪಿಡಿದು ಪರೆದುದೋ ಕಾಮನಂ ಬಂಬನಟ್ಟ್ಯಂ ॥ ಬರಿ$ಗೊಂಡೆಟ್ಟಿಟ್ಟತೋ ಕೇದಗೆಯೆಸಳೆಸಳಂ ಕರ್ಚೆ ಪಾಱ ತ್ತೊ §ಪೇಟ । ಚ್ಚರಿಯೆಂಬಂತಾಗೆ ನೀಳ್ದತ್ತು¶ವಳ ಧವಳನೇತ್ರತ್ರಿಭಾಗಾವಲೋಕಂ ॥೩-೧೩

(ಜಗನ್ನಾಥವಿಜಯಂ)

ತರುಣಿಯ ಮುಖಚಂದ್ರಮನೊಳ್ ।
ಹರಿಣನುಮಂ ಬರೆಯಲೆಂದು ಭಾವಿಸಿ ಬಿದಿ ಸುಂ ॥
ದರತೆಗೆ ಮರುಳ್ದು ಬಱಗೊಂ ।
ಬೆರಡನೆ ಬರೆದಂತಿರಸಿಯಪುರ್ವುಗಳೆಸೆಗುಂ ॥೩-೧೪

ಅರ್ಚಿಸಲೆಂದವನೋಜಿಯಿಂ ।
ಮರ್ಚಿದ ಕೂರಲಗಿವೆನಿಸಿ ಕಣ್ಗೊಣರವು ಮೆ ॥
ಯ್ವರ್ಚಿದೊಡೆ ಮದನನಲ್ಲಿಯೆ ।
ಸಾರ್ಚಿದ ಕಾಳೊಜಗಳಂತೆ ಪುರ್ಬುಗಳೆಸೆಗುಂ ॥೩-೧೫

ಇಂಬಾದುದವಳ ಧವಳಚ ।
ಳಾಂಬಕವಿಷಮಾಂಬಕಂ ಕರಂ ಕೊಂಕಿದ ಪು ॥
ರ್ಬಿಂಬ ಜಡೆಯಲ್ಲಿ ತೊಳಗೆ ತು ।
ಱುಂಬಿದ ಪೆಜಯಂತೆ ಪೆಱನೊಸಲ್ ಬಾಲಕಿಯಾ ॥೩-೧೬

(ಕವಿಕುಂಜರಲೀಲಾವತಿ)

‡ ದವಳಿಸುವ. † ತುಡುಕಿಪಿಡಿದುದೋ. $ ಗೊಟ್ಟಂಬಟ್ಟ. § ಕೇಳ. ¶ ಮಳ

ನುಂಗಿ †ಮಗುೞ್ದುಗುೞ್ದಪುದು ನೆಱ |
ದಿಂಗಳನಾರಾಹುವೆಂಬ ತೆಱದಿಂ ಕುರುಳೊಳ್ ||
ಸಂಗಳಿಸಿ ಕಣ್ಗೆ ನಾಡೆ ಬೆ |
ಡಂಗಂ ಬೀಱದುದು ಮಿಸುಪ ನೊಸಲಂಗನೆಯಾ ||೨೧೭

(ಚಂದ್ರಪ್ರಭಪುರಾಣಂ)

ಲಲನೆಯ ಕದಪುಗಳೊಳ್ ಮಾ |
ರ್ಮಲೆದೊಡಱಂ ‡ಪಿಂಗವೇೞ್ದ ಮೂಗರಿದುದಱಿಂ ||
ದೆಲೆಗಳ ಲೋಕದೊಳೆಲ್ಲಿಯುಂ |
ಮೆಲೆಗಳ ಮೂಗರಿವುದಾದುದಂದಿಂಬೞಿಯಿಂ ||೨೧೮

(ಶೂದ್ರಕಂ)

ವದನವಿಧುವಿಧುರಿತಂ ಕಾ |
ಳದ ಕತ್ತಲೆ ಪುತ್ತನೇಱಿತೆನೆ ಬಿಣ್ಪಂ ಬಿ ||
ಟ್ಟೊದೆದು ನಿತಂಬಾಗ್ರಮನೇ |
ಱದ ನಿಱಿವಿಣಿಲೆಸೆದುದಮೃತಮಧುರಾಧರೆಯಾ ||೨೧೯

(ಕವಿಕುಂಜರಲೀಲಾವತಿ)

ಅಳವಡೆ ಪರಭಾಗಂಬಡೆ |
ದೆಳೆಯುಳ ಪರಭಾಗದಲ್ಲಿ ಸೋರ್ಮುಡಿ ಸೊಬಗಂ ||
ತಳೆದೆಸೆದುದು ಕನಕಶಿಲಾ |
ತಳಾಗ್ರದೊಳ್ ಮುರಿದು ಪರಿವ ಜಗುನೆಯ ಪೊನಲಂ ||೨೨೦

(ಚಂದ್ರಪ್ರಭಪುರಾಣಂ)

ಮುಡಿ ಬಿಟ್ಟು ಬಂದು ಪಸರಿಸಿ |
ಮುಡಗಾಲ್ಗಿೞಿದಿರೆ ಮೃಗಾಕ್ಷಿ ನಿಂದೀಕ್ಷಿಸುತಿ ||
ರ್ಪಡೆಯೊಳ್ ಪ್ರೋಲ್ತಳ್ ನೀಲದ |
ನಿಡುಗಂಭದೊಳಮರ್ದ ಪೊನ್ನ ಪೊಸಪುತ್ತಳಿಯುಂ ||೨೨೧

(. . . . .) ?

---

† ಯುಗ, ‡ ಪಿಳ್ಕುವೇಳೆ.

ಭ್ರೂಚಾಪಕೇಶಪಾಶವಿ ।
ಲೋಚನಶರದಶನಕುಲಿಶಕುಚಚಕ್ರವಿಳಾ ॥
ಸೋಚಿತನಾದೇವಿ ಮನೋ ।
ಭೂಚಕ್ರಿಯ ಜಯನಶಾಲೆಯಂದದಿನಿರ್ಪಳ್ ॥೩೨೦
(ಚಂದ್ರಪ್ರಭಪುರಾಣಂ)

ಸ್ತ್ರೀರೂಪಮೆ ರೂಪಂ ಶೃಂ ।
ಗಾರಮೆ ರಸಮಮಳಸುರತಗಂಧಮೆ ಗಂಧಂ ॥
ಸಾರಸ್ಪರ್ಶಮೆ ಗುರುಕುಚ ।
ಭಾರಸ್ಪರ್ಶಂ ಗಳಪ್ರಶಬ್ದಮೆ ಶಬ್ದಂ ॥೩೩೩
(ಕವಿಕುಂಜರಲೀಲಾವತಿ)

ಇಂತು ಕಾವ್ಯಸಾರದೊಳ್

ಸ್ತ್ರೀವರ್ಣನಂ.

೪. ಪುತ್ರದೋಹಲವರ್ಣನೆ.

ಸುತರಿಲ್ಲದ ಸಿರಿ ತುಹಿನೋ ।
ದ್ಗತಿಯಿಲ್ಲದ ವಾರಿ ಬೇಟವಿಲ್ಲದ ಕೂಟಂ ॥
ವ್ರತಮಿಲ್ಲದಱಿವು ನವಪದ ।
ಗತಿಯಿಲ್ಲದ ಲಾಸ್ಯಮೆಂತುಮೇಂ ಮೆಱೆದಪುದೇ ॥೩೩೪
(ಚಂದ್ರಪ್ರಭಪುರಾಣಂ)

ಕಳಹಂಸಂ ಸುಳಿಯದ ಪೂ ।
ಗೊಳನಮೃತಮರೀಚಿ ಬೆಳಗದಂಬರಚಕ್ರಂ ॥
ಕಳಭಂ ಸಂಚರಿಸದ ವನ ।
ವಳಯಂ ಸುತನಾಡದಂಗಳಂ ರಂಜಿಕುಮೇ ॥೩೩೫

ಮೊಗವಂ ನೋಡುವ ಬಲ್ಲಿಗೆಯ್ವ ಮೊಲೆಯುಂಬಬ್ಬಬ್ಬ ಜೂಬೆಂಬಲ್ಕೆ ।
ವ್ಮಗೆ ಕಾಲ್ಪತ್ತುವ ದೂರದಿಂದೆ ಪರಿತಂದಪ್ಪಪ್ಪೆನುತ್ತಪ್ಪುವೊ ॥

ಕ್ಷ ತಾಂ । ಮಿಗೆ.

ಯ್ಯಗೆ ಚೆಯ್ಯಾಡುವ ಮೇಲುದಂ ಮುಸುಕಿಡುತ್ತೀಯೆಂಬದಾಯೆಂಬ ಮು।
ದ್ದುಗಳಂ ಬೀಱುವ ಕಂದನೊಳ್ ನಲಿವಪೆಣ್ಣಿಂ ನೋಂಪಿಯುಂನೋಂತಳೋ॥
(ಜಗನ್ನಾಥವಿಜಯಂ)

ಪದೆದಮರ್ದಪ್ಪಿಕೊಂಡು ಬಿಗಿಯಪ್ಪೆ ತನೂಜನ ಮೆಯ್ಯ್ಯ ದೂಳಿ ಪ ।
ತ್ತಿದ ನಳತೋಳ್ಗಳೇಕೆ ಪೊಲೆಯುಂಬ ಕುಮಾರನ ಕಣ್ಣ ಕಜ್ಜಲಂ ।
ಪುದಿಯೆ ಮುರೋಜಮೇಕೆ ಪರಿಚುಂಬಿಸಿ ಕಂದನ ಕೈದೊಡಂಕೆ ಸೂ ।
ಸದ ಕುರುಳೇಕೆ ಬೇಱೆ ¶ಪುರುಳೇಕಿವಱಿಂ ಕುಲವೆಣ್ಗೆ ಲೋಕದೊಳ್ ॥
(ಅನಂತನಾಥಪುರಾಣಂ)

ಮೆಲ್ಲನೆ ಮಲಗಿರೆ ಕದಪಂ ।
ಮೆಲ್ಲನೆ ಜಕ್ಕುಲಿಸೆ ನಕ್ಕು ಮಗನಗಿದೊದೆಯಲ್ ॥
ಮೆಲ್ಲಡಿಗೆ ಸಿಲ್ಕಿ ಹಾರಂ ।
ಜಲ್ಲನೆ ಪರಿದೊಕ್ಕು ಮುತ್ತನೆಂದಾಯ್ದಪೆನೋ ॥೩೩೮
(ಧರ್ಮನಾಥಪುರಾಣಂ)

ಇಂತು ಕಾವ್ಯಸಾರದೊಳ್

ಪುತ್ರದೋಹಲವರ್ಣನಂ.

೯. ಪುಷ್ಪವತೀವರ್ಣನೆ.

ನೊಗರಸರಾಗವೇಱೆ ನೊಸಲಚ್ಚತರಂ ಪೊಱಯೇಱೆ ಗಾತ್ರದಿಂ ।
ದೊಗೆದು ಮುದಶ್ರು ಜಾಱೆ ತೆಳುವಟ್ಟೆಯೊಳೊಯ್ಯನೆ ಸೂಲೆದೋಱಲಿಂ ॥
ತೊಗಡಿಪ ಗಂಧಮುಂ ಸೊಗಡುನಾಱೆ ರಜಸ್ವಲೆಯಪ್ಪ ಭಾವಮುಂ ।
ಬಗೆಗೊಳುತಿರ್ಪ ಭಾವಕಿಯ ಬಣ್ಣಿಸಿದಂ ಕವಿಪಂಚಮಾರ್ಗಣಂ ॥೩೩೯
(. . . . .) ?

ಚಿಕುರಂ ಪಜ್ಜಳಪಿಂದ್ರನೀಲನಿಕರಂ ಬಾಯ್ವಿದ್ರುಮಂ ಛಾಯೆ ಮಾ ।
ರಕತಚ್ಛಾಯೆ ನಖಾಳಿ ವಜ್ರಮಮಲಂ ದಂತೋತ್ಕರಂ ವ್ಯಕ್ತಮಾ ॥

¶ ಪೊಱಯೇ.

ಕ್ತಿಕವಾಗಲ್ಕೆ ಪರಾರ್ಥ್ಯವಾಗೆ ನೆಗೞ್ದ* ಪೆಣ್ಮಾಣಿಕಂ ಮಾಣ ಮಾ ।
ಣಿಕಗೆಂಟೆಂದೊಡೆ ಮಾಣ್ದನಂಪರಸನಾಸ್ತ್ರೀಮಾಯೆಯುಂ ಮೀರ್ವರಾರ್ ॥

ತೊಳಗುವ ಮೆಯ್ಗಳೊಳ್ ತಿಮಿರ್ದು* ಕುಂಕುಮದಿಂ§ದಮರ್ದುಟ್ಟ ಮು
ತ್ತಿನಿಂ। ದಳವಡೆ ತೊಟ್ಟ ಪೊಂದೊಡಿಗೆಯುಂ ಚಲಕೋಮಲಹಸ್ತಶಾಖೆಯೊಳ್॥
ಸೆಳೆಸೆಗೊಂ‡ಬನಂತೆ ತಳೆದೊಂದು ವಿಲಾಸದಿನಗ್ಗಳಂ ತಳ ।
ರ್ತೆಳಲತೆಯಂತೆ ¶ತೋಱೆವರುಣಾಧರೆ ಪುಷ್ಪಿತೆ†ಯೆಂಬುದೊಪ್ಪದೇ ॥೩೪೧

(ಅರ್ಧನೇಮಿಪುರಾಣಂ)

ತನಿರಸದಿಂಪು ಕಂಪಮರೆ ಮಾಣಿಕದೊಳ್ ಶತಖಂಡಮಾದ ಮು ।
ತ್ತಿನ ಪುಡಿಯಲ್ಲಿ ಪೊಚ್ಚಪೊಸಪೊಂದಗಡಂ ತಱಿದಿಕ್ಕಿದಂತಿರ ।
ಲ್ಕಿನಿಯನ ಬಾಯ ಕಪ್ಪುರದ ತಂಬುಲಕೊಯ್ಯನೆ ಕೈಯ ನೀಡಿದಳ್ ।
ತನುಲತೆ ಕೊಂಕೆ ಪುಷ್ಪವತಿ ಲಜ್ಜೆಯ ಪಜ್ಜೆ ತೊಡಂಕೆ ಕೊಂಕಿನೊಳ್ ॥

(ಅನಂತನಾಥಪುರಾಣಂ)

ದುಂಡಿಸಿ ಬಿಂಕದಿಂ ಬಿಗಿದ ಪೆರ್ಮೊಲೆಗಳ್ ಮಱಿದುಂಬಿಗಳ್ ಮರು ।
ಳ್ಗೊಂಡು ಮರಲ್ವ ಮೆಯ್ಯ ಸೊವಡುಣ್ಮುವ ಲಜ್ಜೆ ದರಸ್ಮಿತಂ ಮನಂ ॥
ಗೊಂಡಿರಲೊಯ್ಯನೋಸರಿಪ ಪೆಂಡಿರ ಮಾಣಿಕದೊಂದು ಮಾಣಿಕಂ ।
ಗಂಡ ಬೆಡಂಗದೇಂ ಮನಮನಾವರಿಸಿತ್ತೊ ಕಲಾವಿಲಾಸನಾ ॥೩೪೩

ಮಳಯಜಗಂಧಿ ಮಜ್ಜನದ ಮಂದಿರದೊಳ್ ಪೊಸಪೊನ್ನ ಬೊಂಬೆಯಂ।
ಪುಳದೊಳೆದೊಪ್ಪವಿಟ್ಟ ತೆಱದಿಂ ತನುಕಾಂತಿ ದುಕೂಲದಿಂದಮು ॥
ಚ್ಚಳಿಸೆ ಕರಾಗ್ರದಿಂ ಮುಱಿಯುತುಂ ಮುಡಿಯಂ ಮುಱಿದೀಕ್ಷಿಸುತ್ತೆ ಬಂ ।
ದೊಳಪುಗುವಂದು ಕೌತುಕಮೆ ಕಣ್ಗಿನಿದಾಯ್ತು ಕಲಾವಿಲಾಸನಾ ॥೩೪೪

ಮಿಱುಗುವ ಮಿಂಚಿನೋಲೆ ನಸುಗೆಂಪಿನ ಸಾಲೆಯ ಸೀರೆ ಮೇಲುದಂ ।
ಪೊಱಮಡುವಂತೆ ಪೊಂಗಿದ ಕುಚಂ ತೊಡೆಪಂ ತೊಡೆದಂದಮಾದ ಮೆಯ್ ॥
ನಿಱಿನಿಱಿಗೊಂಡ ತುಂಬಿಗುರುಳೊಪ್ಪಿರೆ ಪುಷ್ಪಿತೆಯಾಗಿ ಮಿಂದು ಬಂ ।
ದೆಱೆಯಳ ಸುಣ್ಮೊಗಂ ಮೊಗಕೆ ಕನ್ನಡಿಯಾಯ್ತು ಕಲಾವಿಲಾಸನಾ ॥೩೪೫

(ಧರ್ಮನಾಥಪುರಾಣಂ)

§ ತೆಗೆದುಟ್ಟಮುಳ್ಪನಿಂ, ‡ ಬನಂತೆಪೊಳೆವೊಂದಾ. ¶ ತೋಱುವ. † ಯುಷ್ಪ.

ಧೃತಮುಕ್ತಾಭರಣಂ ಪಯಃಕಣಗಣಂ ಶ್ರೀಖಂಡಲಿಪ್ತಾಂಗದೀ ।
ಧಿತಿ ತೋಯಪ್ರಸರಂ ದುಕೂಲವಸನಂ ಫೇನೋದ್ಗಮಂ ಮಲ್ಲಿಕಾ ॥
ನುತದಾಮಂ ತೆರೆಮಾಲೆಯಾಗೆ ವಿಮಲಕ್ಷೀರಾರ್ಣವಶ್ರೀಯುನಾ ।
ಶತಪತ್ರಾನನೆ................................. ॥೨೪೬

(ಚಂದ್ರಪ್ರಭಪುರಾಣಂ) ?

ಮಿಸುಪ ದುಕೂಲ§ದುಳ್ಪಿಡೆ ಸುಚಂದನಕರ್ದಮದಣ್ಪು ಮಲ್ಲಿಕಾ ।
ಕುಸುಮಮನಾಂತ ಕುಂತಳ§ಭರಂ ಸುಲಿಪಲ್ಗಳ ಕಾಂತಿಯಿಂ ಬೆಳ ॥
ರ್ತಸೆವಧರಂ ತಳತ್ತಳಪ ಮುತ್ತಿನ ಪಚ್ಚಮನಂಗಕೀರ್ತಿಯಂ ।
ಪಸರಿಸೆ ಕೊಂಡ ಬೆಳ್ಪಸದನಂ †ಬಗೆಗೊಂಡುದು ಕೋಮಳಾಂಗಿಯಾ ॥೨೪೭

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಪುಷ್ಪವತೀ ವರ್ಣನಂ.

೧೦. ಸ್ವಪ್ನವರ್ಣನೆ.

ವಿಳಸತ್ಕೈಗವನೇತ್ರೆ ಚಂದ್ರಮನನಂಭೋಜಾಸ್ಯೆ ಬಾಲಾರ್ಕಮಂ ।
ಡಳಮಂ ಕಲ್ಪಲತಾಂಗಿ ಕಲ್ಪಕುಜಮಂ ಗಂಭೀರೆಯಂಭೋಧಿಯಂ ॥
ಕುಳಮಾನೋನ್ನತೆ ಮೇರುವಂ ಕಮಲಲೀಲಾಹಸ್ತೆ ಸಲ್ಲಕ್ಷ್ಮಿಯಂ ॥
ಬೆಳಗಪ್ಪಾಗಳನೂನಪುಣ್ಯದೊದವಿಂ ಕಂಡಳ್ ಶುಭಸ್ವಪ್ನಮಂ ॥೨೪೮

ಗಗನಮಣಿಮುಕುರದೊಳಗೆ ।
ಮೃಗಲೋಚನೆ ಸುರುಳಗುರುಳ ಕುಡಿವುರ್ವಿನ ಕ॥
ರ್ಪುಗಳೆ ಕಜ್ಜಿಯೆಂಬಿನಂ ನಗೆ ।
ಮೊಗದ ನೆಟಿಲ್ಗೆತ್ತು ನೋಡಿದಳ್ ಚಂದ್ರಮನಂ ॥೨೪೯

(ಅನಂತನಾಥಪುರಾಣಂ)

ಇಂತು ಕಾವ್ಯಸಾರದೊಳ್
ಸ್ವಪ್ನವರ್ಣನಂ.

---

§ ಮಂ ಕೆದುಡಲ್ ನನಚಂದನದಣ್ಪು. § ಕುಳಂ. † ಖುಶುಕಾಲದೆ.

೧೧. ಗರ್ಭವರ್ಣನೆ.

ಅಸಿತಪಯೋಧರಾನನಮುಪಾತ್ತವಿಜೃಂಭಮುಖಾಂಬುಜಂ ಸಮು ।
ಲ್ಲಸಿತಜಡತ್ವಮುಚ್ಛ್ವಸಿತಬನ್ಧುರಗಂಧಸಮೀರಣಂ ಮನ ॥
ಕ್ಕೆಸೆವಮು ಕಾರುಮಂ ಪೊಸಬಸಂತನುಮಂ ನೆಱೆ ಪೋಲ್ತುದೊಲ್ದು ಭಾ ।
ವಿಸೆ ಮದವನ್ಮರಾಳಮೃದುಯಾನೆಯ ನಿರ್ಭರಗರ್ಭವಿಭ್ರಮಂ ॥೩೫೦

(ಚಂದ್ರಪ್ರಭಪುರಾಣಂ)

ಸೆಳೆನಡುವನುಡಿವ ಭರದಿಂ ।
ಬಳೆವಂತಿರೆ ಬಳೆಯೆ ಮೊಲೆಗಳವಱಿಯೆ ಚಲದಿಂ ॥
ಬಳೆವಂತೆ ಬಳೆಯೆ ನಡುವು ।
ಮ್ಮಳಿಸಿ ಕರಂಗಿಕೊಂಡುವವಱ ಮೊಗಂಗಳ್ ॥೩೫೧

ನೆಗೆದ ಪಯೋಧರದ್ವಯದೊಳಾಕೆಯ ಗರ್ಭದ ರಾಜಪುತ್ರನಾ ।
ರೊಗಿಸುವ ಪಾಲ್ಗಳಂ ಮಡಗಿ ಮುದ್ರಿಸಿದಂತೆ ವಿಧಾತ್ರನೊಯ್ಯಗೊ ॥
ಯ್ಯಗೆ ಕುಚಚೂಚುಕಂಗಳೊಳೆ ಕಣ್ಗಳೊಳಂಗನೆಯೆಚ್ಚಿಕೊಳ್ವ ಕಾ ।
ಡಿಗೆಯುದಿರ್*ದಂತೆ ಕರ್ಪು ಕವದಿಂದಡಿಯಿಟ್ಟುದು ಭೃಂಗಭಾಸುರಂ ॥೩೫೨

ಬಿದಿ ಪೆಚ್ಚಿಯ ಕಾವಿನ ನೀ ।
ಲದ ಕಳಸವ ಸವಡಿಗೊಡೆಯನಾವನಿತೆಯ ಗ ॥
ರ್ಭದ ಬಾಲಂಗೆತ್ತಿದನೆನಿ ।
ಸಿಮದು ಸರೋಜಮಾಳ ಕುಚಯುಗಂ ಕೃಷ್ಣಮುಖಂ॥೩೫೩

ಉದರೋದ್ದೇಶದೊಳಿರ್ದ ಮಂಡಳಿಕಮಾರ್ತಂಡಂಗೆ ಮೈದೋಱಲ ।
ಣ್ಮದೆ ಮಟ್ಟಂ ಪೊಱಮಟ್ಟು ನೆಟ್ಟನೆಸೆದಿರ್ದೀನಾಭಿರಂಧ್ರಪ್ರದೇ ॥
ಶದಿನೋಡುತ್ತಿದೆ ನೋಡೆ ಚಿತ್ತದ ತಮಂ ವಕ್ಷೋಜದೊತ್ತಿಂಗೆನಲ್ ।
ಸುದತೀರಾಜಿತರೋಮರಾಜಿ ನಿಮಿ*ರ್ದಿರ್ಕುಂ ಕೋಮಲಶ್ಯಾಮಲಂ ॥೩೫೪

ಅಮೃತೋದ್ಭವಮೆನಿಪಾಹಾ ।
ರಮಿರಲ್ ಸೇವಿಸುವರಾರೊ ಕನಕಮಸನೆ ಹೇ ॥
ಮಮಯಗ್ರೈವೇಯಕಭಾ ।
ರಮನೊಲ್ಲದೆ ತಳೆದಳರಸಿ ಮುತ್ತಿನ ಸರಮಂ ॥೩೫೫

(ಪುಷ್ಪದಂತಪುರಾಣಂ)

ಸಂಗಳಿಸಿದ ಜಡಗತಿಯಿಂ ।
ಪಿಂಗದೆ ಕರ್ಪೂರದವಿದುರುಪಯೋಧರಮುಖದಿಂ ॥
ದಂಗನೆ ಮೞೆಗಾಲದ ಚೆ ।
ಲ್ವಿಂಗೆಣೆಯಾದಳ್ ತದೀಯಗರ್ಭದ ಕೊರ್ಬಿಂ ॥೩೫೬

(ಶಾಂತೀಶ್ವರಪುರಾಣಂ)

ಮೊಲೆಗೆ ವಿಚಿತ್ರಪತ್ರಲತೆ ದುರ್ವಹಮೆಂಬ ವಿಲೋಚನಕ್ಕೆ ಕ ।
ಜ್ಜಲರುಚಿ ಭಾರಮೆಂಬ ತನುಲೇಖೆಗೆ ಚಂದನದಣ್ಪು ಬಿಣ್ಪಿದೆಂ ॥
ಬಲಸಪದಕ್ಕಲಕ್ತಕರಸಂ ಪ್ರೊಱೆಯೆಂಬನಿತೊಂದು ಚಿತ್ತವಾ ।
ಲಲನೆಗೆ ದೇವಕೀವನಿತೆಗಾದುದು ನಿರ್ಭರಪೂರ್ಣಗರ್ಭದೊಳ್ ॥೩೫೭

ಎಳವಸಿಱಿಂದೆ ಬೆಳರ್ತಂ ।
ಗಳೇಖೆ ಕರ್ಪಡ*ರ್ದ ಬಾಸೆಯಂ ತಳೆದೆಸೆದ ॥
ತ್ತೞನೀಮಾಳೆಯ ತಿರುವಂ ।
ತಳೆದಂಗಜಪುಷ್ಪಚಾಪಮೆನೆ ದೇವಕಿಯಾ ॥೩೫೮

ಮೇದಿನಿಯ ಭಾರಮಮರರ ।
ಖೇದಂ ಖಳರೆಸಕಮೆಂಬನಿಷ್ಟತ್ರಯಮಿಂ ॥
ಪೋದಪುದೆಂದಱಿಪುವವೋಲ್ ।
ಪೋದುವು ಮಧ್ಯದ ವಳತ್ರಯಂ ದೇವಕಿಯಾ ॥೩೫೯

(ಜಗನ್ನಾಥವಿಜಯಂ)

ಬೆಳರೆ ಮುಖಾಬ್ಜಮಾಯ್ತು ಡಸಿದೊಳ್ಳಲೆಯುಂತೆ ಪಯೋಧರದ್ವಯಂ ।
ಗಳ ತುದಿ ಕರ್ಗಿ ತೋಱಿತನುಲೇಂಮುವ ಲಾಂಛನ§ದಂದದಂತೆ ನಿ ॥
ರೊಳಗಣ ರೇಖೆಯುಂತೆ ಕಿಡೆ ಚಾರುವಳಿತ್ರಯುಮಾಶಿರೀಷಕೋ ।
ಮಳೆ ನವಮೇಘದಂತೆ ಗುರುಗರ್ಭ¶ಭರಾನ್ವಿತೆಯಾದಮೊಪ್ಪಿದಳ್ ॥೧೬೦

(ಶೂದ್ರಕಂ)

ಇಂತು ಕಾವ್ಯಸಾರದೊಳ್
ಗರ್ಭವರ್ಣನಂ.

೧೩. ಕುಮಾರೋದಯವರ್ಣನೆ.

—ಕುಮಾರಂ—

ಮರುಣಂ ವಾರ್ಧಿಯಿನಬ್ಜಜಂ ಕಮಲದಿಂ ದೈತ್ಯಾಲಯಸ್ತಂಭದಿಂ ।
ನರಸಿಂಹಂ ಘಟದಿಂ ಘಟಾತ್ಮಜನಿನಂ ಪೂರ್ವಾದ್ರಿಯಿಂ ತಿಂಗಳಂ ॥
ಕಿರಣಂ ಧಾರಿಣಿಯಿಂ ಫಣೀಂದ್ರನೊಗೆವಂತುತ್ಸಾಹದಿಂ ಲೋಕಮಂ ।
ಪೊರೆಯಲ್ಕೆಂದಸಹಾಯಶೌರ್ಯನೊಗೆದಂ ಶ್ರೀಗಂಗಚಕ್ರಾಯುಧಂ ॥೭೬೧

(..................) ?

ಯದುವಂಶಾಭರಣಂಗೆ ರಾಜ್ಯಭರಧುರ್ಯಂಗುಗ್ರಸೇನಂಗೆ ಪು ।
ಟ್ಟಿದನಭ್ರಕ್ಕೆ ಸಿಡಿಲ್ ಸುಧಾಬ್ಧಿಗೆ ಮಹಾಹಾಲಾಹಲಂ ಕಾನನ ॥
ಕ್ಕೆ ದವೋಗ್ರಾಗ್ನಿ ಕಡಂಗಿ ಪುಟ್ಟಿದವೊಲಂತಾಕಂಸದೈತ್ಯಂ ವಿಲಾ ।
ಸದಿನಿರ್ದಂ ಸೆಱಗೆಯ್ದು ತಜ್ಜನಕರಂ ಸಾಮ್ರಾಜ್ಯಸಂಪತ್ತಿಯೊಳ್ ॥೭೬೨

(ಜಗನ್ನಾಥವಿಜಯಂ)

—ಕುಮಾರಿ—

ಲತೆಯುಂ ನಂದನಲಕ್ಷ್ಮಿ ದೀಪಿಕೆಯುನಗ್ನಿಜ್ವಾಲೆ ರತ್ನಾಕರ ।
ಕ್ಷಿತಿ ಮಾಣಿಕ್ಯಶಲಾಕೆಯುಂ ಪ್ರತಿಭೆ ಕಾವ್ಯಪ್ರೌಢಿಯುಂ ವೀಣೆ ಸಂ ॥
ಶ್ರುತಿಯುಂ ಪದ್ಮಿನಿಯುಂ ಮಹಾಸರಸಿ ಕಂದರ್ಪಾಗ್ನಿಯುಂ ಕಾಮದೇ ।
ವತೆ ಪೆಂಪಿಂ ಪಡೆವಂತೆ ಕಾಂತೆ ಪಡೆದಳ್ ಲೀಲಾವತೀದೇವಿಯುಂ ॥೭೬೩

(ಕವಿಕುಂಜರಲೀಲಾವತಿ)

§ ಬಿಂಬ. ¶ ಭರಾನತೆಯಾಗಿಯೊ.

ಮಸಕದ ಹಾಲಾಹಲದೊಡ ।
ನೆಸೆವಿಂದುವ ಲೇಖೆ ಪುಟ್ಟುವಂದದಿನಾರಾ ॥
ಕ್ಷಸನೊಡನೆ ಪುಟ್ಟಿ ದೇವಕಿ ।
ವಸುದೇವಂಗರಸಿಯಾಗಿ ಸುಖದಿಂದಿರ್ದಳ್ ॥೩೬೪

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಕುಮಾರೋದಯವರ್ಣನಂ

೧೩. ಜನ್ಮಾಭಿಷವ ವರ್ಣನೆ.

ಕಾರವನೀರದಂ ಮೊಗೆಯಲೀಕವಿತಂಪುವೆ ಪೊಲನೆಂಬಿನಂ ।
ತಾರಘಟಾಳಿಗಳ್ ಮೊಗಸಿ ಬಂದುವು ಚಂದ್ರನ ಪೆರ್ಚೆ ಪೆರ್ಚೆ ದಲ್ ॥
ವೈರಿ ಗಳೆಂದು ರಾಹುಗಳ್ ಮುತ್ತಿದುವೆಂಬಿನಮಿಂದ್ರನೀಳಭೃಂ ।
ಗಾರವುಪಾರವಾನರಿಸಿ ನಿಂದುವು ದುಗ್ಧಪಯೋಧಿತೀರವಂ ॥೩೬೫

ಭುವನದೊಳನ್ನ ಜೀವನಮೆ ಪಾವನಮೆನ್ನನಪೇಕ್ಷೆಗೆಯ್ದನೀ ।
ಸವನದೊಳಿಂದ್ರನೆಂದು ನೆಲೆವೆರ್ಚಿದ ರಾಗದ ಬಳ್ಳಿವಳ್ಳಿವೋಲ್ ॥
ಪವಳದ ಬಳ್ಳಿ ಕಣ್ಗೆಸೆಯೆ ಕೈನಿಱಿದಾಡುವ ಮಾರ್ಪಿಯಿಂ ಸುಧಾ ।
ರ್ಣವಮೆಸೆವತ್ತು ಗತ್ನವಲಯಾಂಚಿತತುಂಗತರಂಗಭಂಗದಿಂ ॥೩೬೬

ಸುರಸೇನೋದ್ಧತಕುಂಭಸಂಭವಭಯಾಕ್ರಾಂತಂ ಸರಿದ್ವಲ್ಲಭಂ ।
ಹರಿನೀಲಚ್ಛವಿಯಂ ತೊವಲ್ವಿಡಿದು ವೀಚೀಹಸ್ತದೊಳ್ ಘೂರ್ಣಿತಾ ॥
ತುರನಿರ್ಘೋಷಣಮುಣ್ಮೆ ಪುಯ್ಯಲಿಡುವಂತಿರ್ದುತ್ತು ನಿರ್ನೀರಗ ।
ಹ್ವರದೀನಾನನವಿದ್ರುಮಾಧರದಳಾಂತಶ್ಯುಕ್ತಿಕಾದಂತುರಂ ॥೩೬೭

† ದಳೆ.

ಎಮ್ಮ ಮಗನಲ್ಪತನು ಪೇ ।
ರ್ದಮ್ಮನ್ನಮಗಸ್ತ್ರನೆನಗಿದೇಂಗಹನಮೆನು ॥
ತ್ತುಮ್ಮತ್ತಿದಂತನೇಕಘ ।
ಟವ್ಮೊಗೆದುವು ಜಲಧಿಯಂ ಮಹಾಕಾಯಂಗಳ್ ॥೨೬೮

(ಮಲ್ಲಿನಾಥಪುರಾಣಂ)

ಕುರುಳೊಳ್ ಸೂಸಿದ ಸೇಸೆಯಂತೆ ಕೊರಲೊಳ್ ಮುಕ್ತಾಫಲಶ್ರೇಣಿಯಂ।
ತುರದೊಳ್ ಚಂದನಚರ್ಚೆಯಂತೆ ಕಟಿಯೊಳ್ ತಳ್ಪುಟ್ಟ ಬೆಳ್ವಟ್ಟೆಯಂ ॥
ತೆರಡುಂ ತೋಳ್ಗಳೊಳ್ ಮೃಣಾಳವಳಯಶ್ರೀಯಂತೆ ಚೆಲ್ವಾಯ್ತು ಮಂ।
ದರಧಾರಾಗತಿಯಿಂ ಜಿನೇಂದ್ರನಭಿಷೇಕಸ್ನಿಗ್ಧದುಗ್ಧಪ್ಲವಂ ॥೨೬೯

(ಅನಂತನಾಥಪುರಾಣಂ)

ಜಿನತನುಗೆ ಕಾಂತಿಯಿಂ ಸೋ ।
ಲ್ತು ನಾಣ್ಚಿ ನೀರಾಗಿ ಕರಗಿ ಪರಿಯುತ್ತಿರ್ದ ॥
ಪ್ಪನೊ ಚಂದ್ರನೆನಿಸಿಪುದು ಪಳ ।
ಕಿನ ಕೊಡದಿಂ ಸುರಿವ ದುಗ್ಧಧಾರಾಪೂರಂ ॥೨೭೦

(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್
ಜನ್ಮಾಭಿಷವವರ್ಣನಂ.

೧೫. ಬಾಲಕೇಳೀವರ್ಣನೆ

ಅನಿಮಿತ್ತದರಸ್ಮಿತದಿಂ ।
ದನಕ್ಷರಾಳಾಪದಿಂದೆ ಸಂಕೇತವಿಲೋ ॥
ಕನದಿಂದಕಾರಣಾನಂ ।
ದನದಿಂದುತ್ತಾನಶಯನದಿಂ ಹರಿಯೆಸೆದಂ ॥೨೭೧

ಪರಮಸುಖಾದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ।
ದರನಿದಾರ ಮಾಣಿಕಮಿದಾರ ನಿಧಾನಮಿದಾರ ಮುದ್ದಿದಾ ॥

ರರಸನಿದಾರ ಬಲ್ಲಹನಿದಾರ§ಧಿದೈವಮಿದಾರ ಸಿಂಹಮೆಂ ।
ವಿರದಮರ್ದಪ್ಪಿದಳ್ ಪದಪಿನಿಂ ಮೊಲೆವಾಲ್ ತೊಱೆದೆಚ್ಚು ಪಾಯ್ವಿನಂ॥೩೭೦

ಉದರಮೆ ತೊಟ್ಟಿಲಾಗೆ ಭುವನತ್ರಯಮುಮಂ ನೆಱೆ ತಾಳ್ದ ದೇಹಿವ ।
ರ್ಗದ ಕೃತಪುಣ್ಯಪಾಪಫಲಮಂ ಸಲೆ ತೂಗುವ ಕರ್ಮಸಾಕ್ಷಿಯುಂ ॥
ಪದುಳದೆ ತೊಟ್ಟಿಲೊಳ್¶ ಪಡಿಸಿ ತೂಗಿದರಚ್ಯುತ ಜೋ ಮಹಾತ್ಮ ಜೋ।
ಸದಮಳಬೋಧ ಜೋ ಪರಮ ಜೋ ಹರಿ ಜೋಯೆನುತುಂ ಲತಾಂಗಿಯರ್॥

ಘನಕುಚೆ ಗೋಪಿ ಪಾಲ್ಗಡೆಯುತುಂ ಮನವಾರ್ತೆಗೆ ಪೋಗೆ ಗೆಜ್ಜೆಯಿಂ।
ದನಿ ನಸು ಪೊಣ್ಮದಂತು †ನಡೆತಂದೆಡಗೈಯೊಳ್ ತೋಡಿ ಬೆಣ್ಣೆಯಂ ॥
ತಿನುತಿರೆ ಗೋಪಿ §ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ ।
ವೆನೆ ಕಟವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ ॥೩೭೪

ಶಕಟವಿಮರ್ದಿ ನೀಂ ಮುಸಲಿ ಬಾರದ ಮುಂ ಕುಡಿ ನಮ್ಮ ಹೇಮಘಂ ।
ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ್ನ ಚಂ ॥
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡಿದಿರ್ಗ‡ಳಂಬ ಚೆಂ ।
ಡಿಕೆಯೆನಿತುದ್ದಮಾದುದೆನುತುಂ ಬೆಸಗೊಳ್ವ ಮುಕುಂದನೊಪ್ಪಿದಂ ॥೩೭೫

ಕತೆಯುಂ ಕೇಳೆಲೆ ಕೃಷ್ಣ ಹುಂ ರಘುಜನೆಂಬಂ ಹುಂ ಸಕಾಂತಂ ವನ ।
ಸ್ಥಿತನಾದಂ ಗುರು ಪೇಳೆ ಹುಂ ದಶಶಿರಂ ಕೊಂಡುಯ್ದನಾರಾಮನಾ ॥
ಸತಿಯಂ ತಾನೆನೆ ಪೂರ್ವಮಂ ನೆನೆದು ಹುಂ ಹುಂ ಕೊಳ್ಳದುತ್ಕೋಪಹುಂ।
ಕೃತಿಯಂ ಮಾಡುತುಮಾಂಡುಗೆಚ್ಚಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ॥೩೭೬

ಪರಿಮುಱಿ ಪಾಱುಂಬಳ್ ಮರ ।
ಗೆರಸಿ ಕುಣಿಲ್ ಸೆಂಡು ಬಟ್ಟು ತಿರಿಕಲ್ಲಾಟಂ ॥
ಗೆರೆ ಪೊಣೆಗುಂಡೆಂಬಿವನಾ ।
ಮುರಹರನಲ್ಲಲ್ಲಿಗಾಡುತುಂ ಬರಲಿದಿರೊಳ್ ॥೩೭೭

---

§ ಕವೀಂದ್ರನಿ. ¶ ೪೦ಸಿ. † ಪರಿ. § ಬಂದೆ. ‡ ಳಚ್ಚ.

ಗುರುವಿನ ವಿದ್ಯೆ ನಿತಾಂತಂ ।
ಪುರುಷೋತ್ತಮನಂತರಂಗದೊಳ್ ಕೋಟಿವಿಧಂ ॥
ಸ್ಫುರಿಯಿಸಿದುದಭ್ರಶಶಿಕಳ್ ।
ತರಂಗಿತಾರ್ಣವದೊಳೆಸೆವವೋಲ್ ಬಹುವಿಧದಿಂ ॥೩೭೮

(ಜಗನ್ನಾಥವಿಜಯಂ)

ಜನಕನೊಳನುರೂಪತೆಯುಂ ।
ತನೂಭವಂ ತಾಳ್ದಿದಂ ತನುಸ್ಸಂಹೃತಿಯುಂ ॥
ಘನತೇಜಮನುನ್ನತಿಯುಂ ।
ಕನತ್ಪ್ರದೀಪೋಪಜಾತದೀಪಾಕೃತಿವೋಲ್ ॥೩೭೯

(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್
ಬಾಲಕೇಳೀವರ್ಣನಂ.

೧೬. ಪುರುಷರೂಪವರ್ಣನೆ.

ಅತಿಮೃದು ಸುಸ್ನಿಗ್ಧಂ ಸೂ ।
ಕ್ಷ್ಮತರಂ ನೃಪಸುತನ ಮನಮುದೆಂದಱಿಪುವವೋಲ್ ॥
ಅತಿಮೃದು ಸುಸ್ನಿಗ್ಧಂ ಸೂ ।
ಕ್ಷ್ಮತರಂಬಡೆದೆಸೆದುದಾಶಿರೋಜಸಮಾಜಂ ॥೩೮೦
ಕುಂದದ ಕಳೆಗಳನೆರೆದಪೆ ।
ನೆಂದು ಮುಖೇಂದುವನೆ ಸಾರ್ದನರ್ಧೇಂದುವೆನಿ ॥
ಪ್ಪಂದದಿನೆಸೆದುದು ಖೇಚರ ।
ನಂದನನ ಲಸತ್ಪ್ರಭಾವಿಶಾಳಂ ಭಾಳಂ ॥೩೮೧

ಕಮಳಂ ಸದ್ವಿಜರಾಜವೈರಿ ಸತತಂ ಚಂಡಾಳಕಾಪೀಂತಶೀ ।
ಷಮಧುವ್ರಾತದ ಭಾಜನಂ ಕುವಳಯಂ ದೋಷಾನುಬಂಧಪ್ರಭಾ ॥

ವಮಿನಾರಾತಿಯೆನುತ್ತಮಂ ಪಱಿದು ರಾಗಂಬೆತ್ತುವೆಂಬಂತೆ ಕೆಂ ।
ಪಮರ್ದಿರ್ದೊಪ್ಪಿದುವಾಕುಮಾರಕನ ದೀರ್ಘಾಲೋಲಲೀಲಾಕ್ಷಿಗಳ್ ॥೨೮೧

ಛಂದೋಲಂಕಾರದ್ವಯು ।
ದಂದದಿನೆನಸುಂ ಸುವೃತ್ತಶೋಭಾಯುತದಿಂ ॥
ಸೌಂದರ್ಯಕಾಂತಿಸಂಯುತ ।
ದಿಂದೆಸೆವತ್ತು ಕುಮಾರನೂರುದ್ವಿತಯಂ ॥೨೮೨

ಕಡುಕೆೊರ್ವಿ ಕಾಯದೀಧಿತಿ ।
ಕುಡಿಯಿಟ್ಟುದು ಕೋಮಲಾಂಗುಲಿವ್ರಜಮುಖದಿಂ ॥
ಗಡಮೆಂಬ ತೆಱದಿನೆಸಕಂ ।
ಬಡೆದುದು ಖೇಚರಸುತಾಂಘ್ರಿನಖರುಚಿನಿಚಯಂ ॥೨೮೪

ಜೊನ್ನದ ರಾತ್ರಿ ನೇತ್ರಕುಮುದಕ್ಕಿನಕಾಂತಿ ಮುಖಾಂಬುಜಕ್ಕೆ ತೈ ।
ಲನ್ನವಕಾಂತಿದೀಪಿಕೆಗೆ ಕಾರ್ಮುಗದೇೞ್ಗೆ ಶಿರೋಜಕೇಕಿಗು ॥
ತ್ಪನ್ನವಸಂತಮಂಗಲತೆಗುಗ್ರಮದಂ ಭುಜದರ್ಪದಂತಿಗೆಂ ।
ಬನ್ನೆಗಮೆಂದು ತಂದುದು ಕುಮಾರನ ಜೌವನದೇೞ್ಗೆ ಲೀಲೆಯಂ ॥೨೮೫
(ಪುಷ್ಪದಂತಪುರಾಣಂ)

ಇಂತು ಕಾವ್ಯಸಾರದೊಳ್
ಪುರುಷರೂಪವರ್ಣನಂ.

೧೭ ಆಸ್ಥಾನವರ್ಣನೆ.

ನತನಾನಾಮರಮೌಲಿರತ್ನಕಿರಣಂ ನಾನಾಪ್ಸರಃಕೇಕರ ।
ದ್ಯುತಿನಾನಾಚಮರೀಜವಾಯು ಸಭೆಯಂ ತಳ್ಪೊಯ್ಯುಲಿರ್ದಂ ಜಗ ॥
ತ್ಪತಿ ಯೊಡ್ಡೋಲಗದೊಳ್ ಚತುರ್ಮುಖನತರ್ಕ್ಯಬ್ರಹ್ಮತೇಜಶ್ಶಿಖಂ ।
ಶ್ರುತಿಗಾನೈಕಸುಖಂ ನಮುಚ್ಚತಮುಖಂ ವಾಣೀವಧೂಟೀಸಖಂ ॥೨೮೬
(ಜಗನ್ನಾಥವಿಜಯಂ)

¶ಮುಂದಿರೆ ಭೂಭುಜರ್ ಪಿಡಿಯು ಮೇಲೆ ವಿಲಾಸಿನಿಯರ್ ವಿಲಾಸದಿಂ ।
ಬಂದಿರೆ ಸೊರ್ಕಿದಾನೆಗಳನೇಱ ಕುಮಾರಕರಿರ್ಕೆಲಂಗಳೊಳ್ ॥
†ಬಂದಿರೆ ಸುತ್ತಲುಂ ಪುಲಿಯ ಜಂಗುಳಿಯುಂದದಿನಂಗರಕ್ಷಕರ್ ।
§ನಿಂದಿರೆ ಕೌಸ್ತುಭಾಭರಣನಾಯಕವಂತೆವೊಲಿರ್ದನಾನೃಪಂ ॥೩೮೭

(ಮಲ್ಲಿನಾಥಪುರಾಣಂ)

ಮದಿರಾಪಾಂಗವಧೂವಿಳಾಸರಸತೋಯಂ ಸಂಚಲಚ್ಚಾಮರೋ ।
ನ್ಮದಹಂಸಂ ಪ್ರತಿಹಾಗಸಾರಸರವಂ ನಾನಾಮಹೀಪಾಲಮಾ ॥
ಳದಳತ್ಕೋಕನದಂ ಸಭಾಂಬುರುಹಷಂಡಂ ರುಕ್ಮಿಣೀಲಕ್ಷ್ಮಿಗಾ ।
ಸ್ಪದಮಪ್ಪಂತೆವೊಲೊಪ್ಪಿದೋಲಗದೊಳಿರ್ದಂ ದೇವಕೀನಂದನಂ ॥೩೮೮

(ಜಗನ್ನಾಥವಿಜಯಂ)

ಲಳನಾಲಾವಣ್ಯವಾರಿಪ್ರಸರದೊಳಬಲಾಪಾಂಗರೋಚಿರ್ಮೃಣಾಳೀ ।
ಕುಳದೊಳ್ ಕಾಂತಾನನಾಂಭೋರುಹಪರಿಕರದೊಳ್ ಕಾಮಿನೀಹಾಸಫೇನಾ ॥
ವಳಿಯೊಳ್ ಸೀಮಂತಿನೀಕುಂತಳಮಧುಕರದೊಳ್ ಪ್ರೇಯಸೀದೋಸ್ತರಂ
ಗಾ । ಕುಳದೊಳ್ ತಾನಿರ್ದನಾಸ್ಥಾಯಿಯೊಳಮಳಸರಃಕಲ್ಪದೊಳ್ ರಾಜ
ಹಂಸಂ ॥೩೮೯　　　　　　　　　　　　(ಚಂದ್ರಪ್ರಭಪುರಾಣಂ)

ಪೊಳೆವೆಳದುಂತುರಂ ತುಱುಗೆ ಸೂಸುವ ದುಗ್ಧತರಂಗಮಾಲೆ ಕೆಂ ।
ದಳಿರ್ಗಳೊಳಂಚೆ ಸಂಚರಿಸನಂಗನ ಜಂಗಮಕಲ್ಪವಲ್ಲಿ ಮಂ ॥
ಜುಳಕರಪುಂಜಮಂ ಕೆದಱುವೆಂದವಕೋರಕಜಾಳಮೆಂಬಿನಂ ।
ಬಳಸಿದುದಾಮಹೀಪತಿಗೆ ಚಾಮರಮಿಕ್ಕುವ ಕಾಮಿನೀಜನಂ ॥೩೯೦

(ಅನಂತನಾಥಪುರಾಣಂ)

ಅಮಲಮುಖೇಂದುಗಳ್ಕ ನಭಮಂ ಪುಗೆ ಕೀರ್ತಿಯಿನಟ್ಟ ಮತ್ತಮಾ ।
ಕ್ರಮಿಸುವನೀತನಲ್ಲಿ ಪಗೆ ಸಲ್ಲದು ಕಾಣ್ಬುದು ಕಜ್ಜಮೆಂದು ಬಂ ॥
ದಮೃತಮರೀಚಿ ಕಂಡು ನಡೆತರ್ಪನೆನಲ್ ಮನುಜೇಂದ್ರಮಂದರಂ।
ಗಮರ್ದೆಸೆದಿರ್ದುದಾದಲೆಯೊಳೆತ್ತಿದ ಮುತ್ತಿನ ಮೇಘಡಂಬರಂ ॥೩೯೧

(ಪುಷ್ಪದಂತಪುರಾಣಂ)

¶ ನಿಂದಿರೆ.　　† ಬಂದಿರೆ.　　§ ನಿಂದಿರೆ.

ಸಿರಿಸದ ಮಾಲೆಯೊಳ್ ತೊಡ*ರ್ದನೆಯ್ದಿಲ ಮಾಲೆಯೊ ಪದ್ಮಕೋಶದೊಳ್ ।
ಮೊರೆಯದೆ ನೀಳ್ದ ತುಂಬಿಗಳ ಮಾಲೆಯೊ ಚಂದನಶಾಖೆವತ್ತಿನಿಂ ॥
ದುರಗಿಯೊ ಪೇೞೆನಲ್ ನೃಪನ ದಕ್ಷಿಣಪಾರ್ಶ್ವದೊಳೊಪ್ಪಿ ತೋರ್ಪ ತ ।
ತ್ತರುಣಿಯ ಕೈಯ ಖಡ್ಗಲತೆ ಮೂವಳಿಸಿತ್ತು ಮನಕ್ಕೆ ಮೂರ್ಛೆಯಂ ॥
(ಮಲ್ಲಿನಾಥಪುರಾಣಂ)

ಅಳವಡೆ ಕೊಂಡ ನುಣ್ಪುಸದನಂ ಪೊಸಜಾಣ್ನುಡಿ ಜಾಣರಂ ಮರು ।
ಳ್ಗೊಳಿಸೆ ಪೊವಲ್ದ ಮುದ್ದುನುಡಿ ಭಾವಕರೊಳ್ ಮದನಾನುರಾಗಮಂ ॥
ಬಳೆಯಿಸೆ ರೂಪು ನೋಟಕರ ಕಣ್ಗಮೃತಾಂಜನಪುಂಜಮಂ ಪ್ರದುಂ ।
ಗೊಳಿಸೆ ನೃಪೇಂದ್ರನೋಲಗದೊಳಿರ್ದುದು ವಾರವಿಲಾಸಿನೀಜನಂ ॥೩೯೩
(ಅನಂತನಾಥಪುರಾಣಂ)

ನಗೆಮೊಗದಿಂ ಮುಗುಳ್ನಗೆ ತುಳುಂಕೆ ಬೞಲ್ಮಿಡಿಯಿಂದರಲ್ಗಳ ।
ಲ್ಲುಗೆ ನಿಡುಗಣ್ಗಳಿಂ ಪೊಳೆಪು ಸಾಲಿಡೆ ನೀಳಚಳಾಳಕಾಳಿಯಿಂ ॥
ಮೃಗಮದರೇಣು ಸೂಸೆ ಲತೆ ತೆಂಬೆಲ*ರ್ಗೊಯ್ಯನೆ ನರ್ತಿಪಂದದಿಂ ।
ಸೊಗಯಿಸೆ ಗೋಪಿ ಡಕ್ಕೆಯ ಲಯಕ್ಕೆ ಪೆಱಳ್ ಜತಿಮೆಟ್ಟುತಾಡಿದಳ್ ॥೩೯೪

ಅಲಕಚಯಂಗಳಾಡೆ ನೊಸಲೊಳ್ ಕಬರೀಭರಮಾಡೆ ಬೆನ್ನೊಳು ।
ಜ್ಜ್ವಲತರಹಾರಮಾಡೆ ಕುಚದೊಳ್ ಮಿಸುಪೋಲೆಗಳಾಡೆ ಗಂಡಮಂ ॥
ಡಲದೊಳದೊಂದು ಕಂದುಕದ ಬೆಂಬೞಿಯೊಳ್ ಪೊಣ*ರ್ದಾಡೆ ಕಣ್ಬೊಣರ್ ।
ಸುಲಲಿತೆ ಸೆಂಡನಾಡಿ ಮುೞುಗಾಡಿಸಿದಳ್ ಹರಿಯಂ ಸುಖಾಬ್ಧಿಯೊಳ್ ॥೩೯೫

ಯುಗಪತ್ಕರ್ಮವಿಧಾನದಿಂ ಯುಗದುತ್ಥಾನಾಂಗಸಂಸ್ಥಾನದಿಂ ।
ಯುಗಪದ್ವಿಭ್ರಮವೇಗದಿಂ ಯುಗಪದಭ್ಯಾಯಾತಚಾತುರ್ಯದಿಂ ॥
ಯುಗಪದ್ದಂಡ¶ಖಣಕ್ಖಣಕ್ವಣಿತದಿಂ ಕೋಲಾಟದೊಳ್ ಕೃಷ್ಣನಂ ।
ಬಗೆಗೊಂಡರ್ ಸಮಸತ್ವವಿಭ್ರಮಣೆಯರ್ ಶ್ರೀರೂಪಿಯರ್ ಗೋಪಿಯರ್ ॥
(ಜಗನ್ನಾಥವಿಜಯಂ)

¶ ಖಣಿಲ್ ಖಣಿಲ

ಸವಿಯುಂ ಸಾಲಿಡೆ ಪೊಯ್ದು ನೋಡಿ ಸುತಿಯಂ ಮೇಣ್ತಂತಿಯುಂ ನೂಂಕಿ ಕೂ|
ಡುವ ಪಾಂಗಿಂ ಪ್ರತಿದಂಡಿತಾಪ್ರಕರಮಂ ಮೇಳೈಸಿ ಪೀನಸ್ತನಾ ॥
ಗ್ರವನಾಲಿಂಗಿಸೆ ತುಂಬಿ ಸಾರ್ಚೆ ಕಳೆಯಂ ತೀರ್ದತ್ತು ಮಿರ್ದತ್ತು ನೋ|
ಡುವಿಳಾಕಾಂತನ ವಾಮಪಕ್ಕದೆಡೆಯೊಳ್ ವೀಣಾಧರೀಸಂಕುಳಂ ॥೩೯೭

ಪರಿಜನಜೀವನಂ ಸಕಳಭೂಹಿತವೃತ್ತಿ ಸಮಸ್ತ ಭೂತಳೇ|
ಶ್ವರಧನವೃದ್ಧಿ ರಾಜಗೃಹಕರ್ಮಕಳಾಪಸಮುಚ್ಚಯಂ ನಿರಂ ॥
ತರಮಿವರೊಂದು ಕಂಟಮೊನೆ ಬಾಳ್ಮೊನೆಯಾಗಿರೆ ಸಲ್ವುದೆಂಬಿನಂ|
ಕರಣಗಣಾಗ್ರತಸ್ಸರರ ಮಾಲೆ ಮನಕ್ಕೆಸಗಿತ್ತು ಲೀಲೆಯಂ ॥೩೯೮

ಕ್ಷಮರಾಪ್ತರ್ ನಯಕೋವಿದರ್ ಸಕಲಶಾಸ್ತ್ರಜ್ಞರ್ ಸ್ವಕೀಯಾನ್ವಯ|
ಕ್ರಮಸಿದ್ಧರ್ ಮತಿಬುದ್ಧಿವೃದ್ಧರುಪಧಾಶುದ್ಧರ್ ಕುಲೀನರ್ ನೃಪೇಂ॥
ದ್ರಮೃಗೇಂದ್ರಾಸನಪಾರ್ಶ್ವವಿಷ್ಟರದೊಳಿರ್ದರ್ ಸಂದ ಪಂಚಾಂಗಮಂ|
ತ್ರಮೆ ಮಾನ್ಯಾಕೃತಿವೇಷಮಂ ತಳೆದವೋಲ್ ಪಂಚಪ್ರಧಾನೋತ್ತಮರ್॥

ತನಿಗಂಪುಂ ಕಡುಸೊಂಪುಮುಗ್ಗಳದ ಪೆಂಪುಂ ಕೂಡೆ ಕೈವಂದ ನಂ|
ದನವಂತೋಲಗಮಿರ್ದ ದೂರಿವುರಿವಾಗಾಬ್ಜೈಸಜಾವಿಹಳೂ ॥
ವಿನವೀಸಾವಿಸಸಾವ್ರಷೇವ್ರುಷೆವ್ರಷೇಹೋಜಾಗುಬೊಲ್ಲೆಂಬ ಗೋ|
ಸನೆಯುಂ ತಾಳ್ದತು ಗಂಡುಗೋಗಿಲೆಯ ತಂಡಂ ಪ್ರಾತಿಹಾರಸ್ವನಂ ॥೪೦೦

(ಅನಂತನಾಥಪುರಾಣಂ)

ಗಜದಾನಸ್ರಾವಪಂಕಂ ನೃಪಕುಲಮಣಿಭೂಷಾವಳೀಪುಷ್ಪರೇಣು|
ವ್ರಜದಿಂದಂ ತರ್ಗೆ ತೂರ್ಯತ್ರಯಮುರುಗಣಿಕಾನೂಪುರಧ್ವಾನಶೋಭಾ ॥
ವ್ರಜದಿಂದಂ ಮುಗ್ಗೆ ಮಂತ್ರಾಕ್ಷತೆಯ ನಿವಹದಿಂ ಸಪ್ತಲಕ್ಷಪ್ರವಾಳೀ|
ಪ್ರಜೆಗಂ ಬೀಯಂ ಕರಂ ತಾನೆನೆಲಧಿಕತರಾಲಂಕೃತಂ ಕೌರವೇಂದ್ರಂ ॥

(ವಿಕ್ರಮಾರ್ಜುನವಿಜಯಂ)

ಜಿನಪತಿ ಬಿನ್ನಪಂ ಜಗದ ಮಾಯೆಗಿವಂ ನೆಲೆ ಕೌತುಕಕ್ಕಿವಂ ।
ಜನನಗೃಹಂ ಚಮತ್ಕೃತಿಗಿವಂ ಕಣಿ ವಿದ್ಯೆಗಿವಂ ವಿಧಾತ್ರನೆಂ ॥
ಬಿನಮದೆ ಮಂತ್ರಸಿದ್ಧಿಗಮರೇಂದ್ರನನಳ್ಳಱುವಂತೆ ನೀಳ್ದಗು ।
ರ್ವಿನ ಗರ್ಬಿಯೆತ್ತಿ ಬಂದನವನೊರ್ವನಪೂರ್ವಿಗನಿಂದ್ರಜಾಲಿಗಂ ॥೪೦೩

ತಿರುಪುತ್ತುಂ ಕುಂಚಮಂ ಸೆಳ್ಳುಗುರೆಳವೆಳಗಂ ಸೂಸುತುಂ ಪಲ್ಲ ಮಿಂಚಂ।
ಪರಪುತ್ತುಂ ಭಾಳಬದ್ಧಾಕ್ಷತಮನಮರೆ ಪತ್ರೋತ್ತುತುಂ ಯೋಗಪಟ್ಟೋ॥
ದರಮಂ ಸೈತಿಕ್ಕುತುಂ ಕುಂಕುಮರಜನಿರಜೋರಂಜಿತಾಂಗಂ ಮದಪ್ರ ।
ಸ್ಫುರಿತಾಕ್ಷಂ ಬಂದು ಪೊಕ್ಕಂ ನೃಪಸಭೆಯನಹಂಕಾರಿ ಮಾಯಾಭುಜಂಗಂ ॥

ಗರುಡನೆಱಂಕೆಯುಂ ಮುಱಿದು ಕೆಂಬಿಸಿಲಂ ತಿಱಿದಿಂದುಬಿಂಬಮಂ ।
ಬರೆ ತೆಗೆದಿಟ್ಟು ಕಟ್ಟಿದವೊಲೊಪ್ಪಿರೆ ಸೀಗುರಿ ರಕ್ತಚಾಮರಂ ॥
ಸುರುಚಿರದರ್ಪಣಂ ಕುಡಿಯೊಳುತ್ಪಟಚಿತ್ರಪಟಂ ಬೆಡಂಗನಾ ।
ಳ್ದರೆ ಕಳಕಿಂಕಿಣೀಕ್ವಣಿತದದ್ಭುತಮಾದುದು ಕೌತುಕಧ್ವಜಂ ॥೪೦೪

ಉರಿಪುವುದೋ ಪೊದಱ್ದರಿಗಳಂ ಜಳಮಂ ತಿಮಿರಂಗಳಂ ದಿವಾ ।
ಕರನನಡರ್ತು ಬೆಂಕೊಳಿಪುದೋ ಮಣಿದರ್ಪಣಮಾಗೆ ಮಾಱ್ಪುದೋ ॥
ಪರಿಣತಚಂದ್ರನಂ ನಿನಗೆ ತಾರಗೆಯುಂ ತರದಿಂದೆ ಕೊಂದಳಂ ।
ಕರಿಪುದೊ ದೇವ ನಿನ್ನ ವನಿತಾಜನಪೀನಪಯೋಧರಂಗಳಂ ॥೪೦೫

(ಕವಿಕುಂಜರಲೀಲಾವತಿ)

ಇಂತು ಕಾವ್ಯಸಾರದೊಳ್

ಆಸ್ಥಾನವರ್ಣನಂ.

೧೨. ಶೌರ್ಯವರ್ಣನೆ

ವ್ಯಸ್ತಾಲಂಕೃತಕನ್ಯೆಯರ್ ಪ್ರವಿಗಳದ್ಬಾಷ್ಪಾಂಬುಲೋಲಾಕ್ಷಿಯರ್ ।
ಸ್ರಸ್ತಾನೀಳಕಚೌಘೆಯರ್ ಪ್ರಚುರಹಾಹಾನಿಸ್ವನಾಕ್ರಂದೆಯರ್ ॥
ಹಸ್ತೋರುಸ್ಫುಟತಾಟಿತೋದರೆಯರತ್ಯಂತಾರ್ತೆಯರ್ ಕಂಡ¶ರಂ ।
ದಸ್ತಿಪ್ರಾಸ್ತಿಯರೆಂಬ ಕಂಸಸತಿಯರ್ ವಿಖ್ಯಾತನಂ ತಾತನಂ ॥೪೦೬

$ ನಕ್ರಾಂತೆಯರ್ ಹಸ್ತಾಗ್ರಸ್ಫುಟಮೋದಿತೋದರಿ. ¶ ರಿಂತಸ್ತಿಪ್ರಾಪ್ತಿಗಳೆ.

ಗರ್ವಿತನೃಪಾಲಕಾಳಿಯು ।
ದುರ್ವಿಳಸಿತಜನಿತಭೂರಿಭಾರದಿನೆಸಸುಂ ॥
ನಿರ್ವಿಣ್ಣೆಯಾಗಿ ಭೂವಧು ।
ಗೀರ್ವಾಣಾವೃತವಿರಂಚಿಸಭೆಯುಂ ಪೊಕ್ಕಳ್ ॥೪೦೭

ತಾರಗೆದುಱುಗಲ್ ನವಸಂ ।
ಧ್ಯಾರಾಗದೊಳೆಸೆವ ತೆಱದೆ ಪದನಖರುಚಿಗಳ್ ॥
ಚಾರುಮಣಿಮುಕುಟರುಚಿಯೊಳ್ ।
ರಾರಾಜಿಸೆ ವಿಷ್ಣುಗೆಱಗಿ ನುಡಿದಂ ಬ್ರಹ್ಮಂ ॥೪೦೮

ಉದರಾಬ್ಜದಿಂ ನಿಜಾಸ್ಯಾ ।
ಬ್ಜದ †ಕಂಪಿಂಗೆಱಗುವಳಿಗಳುಂ ಬೆಳ್ಪಳು*ವರ್ಣಂ ॥
ತೆಱದವೆ ದಶನಾಂಶು ಪಾಲ್ಗಡ ।
§ಲಿದೊಂದೆನಲ್ಪುದಿಯೆ ಹರಿವಿರಂಚಿಗೆ ನುಡಿದಂ ॥೪೦೯

(ಜಗನ್ನಾಥವಿಜಯಂ)

ಕವಡೆ ಕಲಂಕದಿಕ್ಕರ್ಗಮೆ ಮರುನ್ನದಿಯುಂ ಪೊಸೆದಿಕ್ಕೆ ಕಂಪು ನಾ ।
ಱದೆ ಪೊಸಪೂವುಮೇನೆಱಿಯೆ ಚಂದನದೊಳ್ ಕಿಡಿ ಪುಟ್ಟದೇ ಸುರರ ॥
ಸೊದೆಗಡಲಂ ಕರಂ ಕಡೆಯೆ ಪೆರ್ವಿಷಮೇೞದೆ ಶಾಂತರಪ್ಪರಂ ।
ಮದಮುದಿತಾತ್ಮರೇಳಿಸೆ ವಿಕಾರಮನೆಯ್ದದದೇಕೆ ಸ್ವೈರಿಪರ್ ॥೪೧೦

(ಅರ್ಧನೇಮಿಪುರಾಣಂ)

ಇಱಿಯದೆ ಕೆಮ್ಮನುಂತೆ ಭುವನಂಗಳಸುಂಗೊಳೆ ತಕ್ಕುದೆಂದೊಡೇ ।
ವಱುಕಮನೆಂಬುದೇವಿರಿದಿದೆನ್ನ ಭುಜಾಸಿಗೆ ತೇದು ಪೊಸಲುಂ ॥
ನೆಱೆಯದು ನೀನಿರಾನೆ ರಿಪುಸೇನೆಗೆ ಸಾಲ್ವೆನವುಂಕಿ§ಪೇಡಿಪಾಡಿಗ ।
ಟ್ಟಿಱಿವೆಡೆಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಪುದೇ ॥೪೧೧

(ಶೂದ್ರಕಂ)

---

† ಕಂಪಿಂಗೆಱಗುವಂಚೆವಿಂಡುಗಳೆನೆಪೆಳ್ಪಾದವೆ.   § ಲಿದೆನಲ್ ನೆರ ಪುದಿಯು.

§ ಪೇಡೆನನಿಟ್ಟೊಱ್.

ಕಾರಾಗಾರದೊಳಿಂದ್ರನಂ ಸೆಱೆಯಿಡಲ್ ಗೋತ್ರಾದ್ರಿಯಂ ಚಾಳಿಸಲ್ ।
ತಾರಾಮಂಡಲಮಂ ನೆಲಕ್ಕೆ ನೆಲನಂ ವ್ಯೋಮಕ್ಕೆ ಪಕ್ಕಾಗಿಸಲ್ ॥
ಪಾರಾವಾರದ ನೀರನೀಂಟಲಕೀಳಾಶಾದಂತಿದಂತಂಗಳಂ ।
ಬೇರಿಂದಂ ಕಿೞಲಂದದೇಂ ಬಗೆದನೋ ರಕ್ತೇಕ್ಷಣಂ ಲಕ್ಷ್ಮಣಂ ॥೪೧೨

(ರಾಮಚಂದ್ರಚರಿತಪುರಾಣಂ)

ತಿಱಿಕಲ್ಲಾಡುವೆನೋ ಕುಲಾದ್ರಿ†ಕುಲಮಂ ವಾರಾಶಿಯಂ ತಾಯ್ಮೞ ।
ಲ್ದಿಱಿವಂತೀಂಟುವೆನೋ ಕೞಲ್ಚುವೆನೊ ಚಂದ್ರಾದಿತ್ಯರಂ ಶಕ್ರನಂ ॥
ಸೆಱೆಗೆಯ್ದಾಳ್ವೆನೊ ಕೀೞ್ವೆನೋ ದಿಗಿಭದಂತವ್ರಾತಮಂ ಮೇರುವಂ ।
ಪೆಱತೇನೂದಿಸಿ ಬೆಂಡುವಾಱಿಸುವೆನೋ ಬ್ರಹ್ಮಾಂಡಮಂ ಪೋೞ್ವೆನೋ ॥

ತೊಡೆವೆಂ ಶಕ್ರನ ನಾಮಮಂ ‡ತುಡುಕಿ ನೀರೊಳ್ಮೆಟ್ಟುವೆಂ ವಹ್ನಿಯಂ ।
ಪೊಡೆವೆಂ ಕಾಲನನಿಕ್ಕಿ ಡೊಕ್ಕರಿಸುವೆಂ ದೈತೇಯನಂ ಕಟ್ಟುವೆಂ ॥
ಜಡರಾಶೀಂದ್ರನನೆಯ್ದುವೆಂ ಪವನನಂ ಸರ್ವಸ್ವಮಂ ಕೊಂಡು ¶ಕೂ ।
ಗಿಡುವೆಂ ವಿತ್ತಪನಂ ಪರಾಭವಿಸುವೆಂ ದಕ್ಷಾಧ್ವರಧ್ವಂಸಿಯಂ ॥೪೧೩

ಪೊಗ*ೞ್ವಂಗಗ್ಗಳಮೇನನೆಂಬೆನಖಿಳಬ್ರಹ್ಮಾಂಡಭಾಂಡಕ್ಕಮಾ ।
ವಿಗೆಗಿರ್ಚೆಂಬಿನೆಗಂ ನಿಶಾಚರನ ಕೋಪೋಗ್ರಾನಲಂ ಪೊತ್ತುತುಂ ॥
ಪೊಗೆಯುತ್ತುಂ ಕಿಡಿಗುಟ್ಟುತುಂ §ಮಸಗುತುಂ ದಳ್ಳೆಂಬ ಭೋರೆಂಬಭೋ ।
ರ್ಭುಗಿಲೆಂಬೇೞ್ಗೆಯನಾಂತು ಕೇಸುರಿಗಳಂ ಸೂಸಿತ್ತುಗುರ್ವಪ್ಪಿನಂ ॥೪೧೫

ಜವನುಗ್ರಂ ಮಾರಿಯಿಂ ಮಿತ್ತುವೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ । ರವನಾಕಲ್ಪಾಂತದೊಳ್ ರೌದ್ರನೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ ॥ ರವನಿಂ ಕಾಮಾರಿ ತಾಂ ಕ್ರೂರನೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ । ರವನಿಂ ಕಾಮಾರಿಯಿಂ ಚೈದ್ಯನೆ ಗಡ ಜಗಮಂ ತಿಂದು ತೇಗಲ್ ಸಮರ್ಥಂ ॥೪೧೬

† ಚಲ. ‡ ಪುಡುಕು. ¶ ಕೂಗಿಡಿಪೆಂ. § ಮಸೆಯುತುಂ.

ನುಡಿಯೇಂ ಭಾನುವಿನಗ್ನಿ ತೀವ್ರತರನಂತಾಭಾನುವಿಂದಗ್ನಿಯಿಂ ।
ಸಿಡಿಲತ್ಯಂತದುರಾಸದಂ ಬಗೆವೊಡಂತಾಭಾನುವಿಂದಗ್ನಿಯಿಂ ॥
ಸಿಡಿಲಿಂ ರುದ್ರಲಲಾಟನೇತ್ರಮರಿದಂತಾಭಾನುವಿಂದಗ್ನಿಯಿಂ ।
ಸಿಡಿಲಿಂ ರುದ್ರಲಲಾಟನೇತ್ರದಿನತರ್ಕ್ಯಂ ಚೈದ್ಯಕೋಪಾನಲಂ ॥೪೧೭

ಹರಿಯೊಳ್ ಬೇಡ ವಿರೋಧಮೆಂಬವರ ಮಾತಂ ಮೀಱುವೆಂ ಮೀಱುವೆಂ।
ಧುರದೊಳ್ ರಾವಣನಂಧಕಾಸುರನ ಕೂರ್ಪಂ ತೋಱುವೆಂ ತೋಱುವೆಂ ॥
ಪರಸೈನ್ಯಾಮಿಷಮಂ ಪಿಶಾಚನಿವಹಕ್ಕಾಂ ಬೀಱುವೆಂ ಬೀಱುವೆಂ ।
ಸುರಗರ್ವಂ* ಬೀರಮನೆನ್ನ ಚಾಪರವದಿಂದಂ ಸಾಱುವೆಂ ಸಾಱುವೆಂ ॥೪೧೮

ಧುರದೊಳ್ ಬಂದಿದಿರೊಡ್ಡಿ ಕಂಸಹರನೊಡ್ಡಂ ತುತ್ತುವೆಂ ತುತ್ತುವೆಂ ।
ಮುರವಿಧ್ವಂಸಕನಂಜಿ ಮೆಯ್ಸೆಡೆಯೆ ಬೆನ್ನಂ ಪತ್ತುವೆಂ ಪತ್ತುವೆಂ ॥
ಹರಿಮೇಣ್ ಪೊಕ್ಕಿರೆಕೋಂಟೆಯುಂ ಮಧುರೆಯುಂ ಪೋ ಮುತ್ತುವೆಂ ಮುತ್ತುವೆಂ। ಪರಭೂಚಕ್ರಮನೆನ್ನ ತೇಜದುರಿಯಿಂದಂ ಸುತ್ತುವೆಂ ಸುತ್ತುವೆಂ॥೪೧೯

ನರನಾಥರ್ ಬೆಸಕೆಯ್ವ ಪೆಂಡಿರೆಳಸಿರ್ಪೀರೂಢಿಯುಂ ಗಾಡಿಯುಂ ।
ಧರೆಯುಲ್ಲಂ ತಣಿವನ್ನಮುಂ ಮನದೆಗೊಳ್ವೀಚಾಗಮುಂ ಭೋಗಮುಂ ॥
ಸುರರಳ್ಕಾಡುವ ಮೇರುವಕ್ಕಳಿಸುವೆನ್ನೀಶೌರ್ಯಮುಂ ಧೈರ್ಯಮುಂ ।
ಹರಿಯೊಳ್ಕಾದೆ ಕೃತಾರ್ಥಮಪ್ಪುದಿದು ಲೋಕಸ್ತುತ್ಯಮುಂ ಕೃತ್ಯಮುಂ ॥
(ಜಗನ್ನಾಥವಿಜಯಂ)

ಗತದೋಷಿಗೆ ಕೃತದೋಷಿಗೆ ।
ಹಿತಹತಿಮಾಳ್ಪಲ್ಲಿ ಸರಿಯೆ ಮೊಗರಾಗಂ ಭೂ ॥
ಪತಿಗೆಂತೆನೆ ಪಾಲ್ ದೋಷೋ ।
ದ್ಧತರಂ ಕೊಲ್ವಲ್ಲಿ ತನ್ನ ಮೆಯ್ಗುಂದಿದುದೇ ॥೪೨೦

* ಗಂಯೊಳ್ ಕಾದಿ

ಕರಿಯುವೊಲಪ್ಪುದಾಳ್ದನರಸರ್ಕ(?)ಗಿವಲ್ಲಿ ನರೇಂದ್ರನರ್ಥಮಂ ।
ಪೊರೆದಿರವಲ್ಲಿ ಪಂಕರುಹಪತ್ರದ ನೀರವೊಲಪ್ಪುದೆಲ್ಲಿ ಸು ॥
ಟ್ಟುರೆಯುವೊಲಪ್ಪುದರ್ಥಮನುಪಾರ್ಜಿಸುವಲ್ಲಿ ನಿಜಾಭಿಮಾನಮಂ ।
ಧರಿಯಿಸುವಲ್ಲಿ ಚಾವಗೆವೊಲಪ್ಪುದು ತಪ್ಪದಮಾತ್ಯಲಕ್ಷಣಂ ॥೪೨೨

ಒಡನೆ ದರಿದ್ರರೆಲ್ಲಮಭಿಮಾನಿಗಳಪ್ಪೊಡಮಾಳ್ವನಿಚ್ಚೆಯಂ ।
ನುಡಿವವರೆಲ್ಲಮಾತನೆಡೆಯೊಳ್ ನಿಲಲಾರ್ಪೊಡಮರ್ಥರಾಶಿಯಂ ॥
ಪಡೆವವರೆಲ್ಲಮೋಗಡಿಸದಿರ್ಪೊಡಮಾಜೆಯೊಳುರ್ಚಿ ಕೈದುವಂ ।
ಪಿಡಿವವರೆಲ್ಲಮಣ್ಮೊಡಮಿದಾಯುಗಮೇಕೆ ಕನಿಷ್ಟಮಪ್ಪುದೋ ॥
(ಶೂದ್ರಕಂ)

ವರವೀಣಾಸಂಗತಿಯಿಂ ।
ಸೊರೆಯೆರಡುಂ ಗ್ರಾಮದೊಳ್ಪನಾಳ್ದುದು ಗಡ ಬ ॥
ಲ್ಸೊರೆಯಂಗೀಕರಿಸಿದೊಡಾ ।
ನರಾಧಮರ್ ನಾಡನಾಳ್ವುದೇನಚ್ಚರಿಯೇ ॥೪೨೪

ಮುನಿನಸ್ಮತ್ಸಹಜಾತರಂ ಶಿಶುಗಳಂ ಕೊಂದುಗ್ರಸೇನಂಗೆ ಬಂ ।
ಧನಮಂ ತಂದು ತದೀಯರಾಜ್ಯ†ಭರಮಂ ಕೊಂಡಾತನಂ ತಾತ ಕೊ ॥
ಲ್ವನಮೋಘಂ ದನುಜಾವತಂಸನನತಕ್ಯೈರ್ಶ್ವರ್ಯಕಾಸಾರಹಂ ।
ಸನನತ್ಯಂತನೃಶಂಸನಂ ಸುರಬಲಪ್ರಧ್ವಂಸನಂ ಕಂಸನಂ ॥೪೨೫

ಈಕೃತಕಿಯೇಕೆ ಪುಟ್ಟಿದ ।
ಳೇಕಾರಣದಿಂದೆ ಪಾಱಿ ಪೋದಳ್ ಗಗನ ॥
ಕ್ಕೀಕೆಯದಾವಳೊ ಮಿಱುತ್ತ್ವೊ ।
ಮಾಕಾಳಿಯೊ §ವಿಳಯಸಮಯದಧಿದೇವತೆಯೋ ॥೪೨೬
(ಜಗನ್ನಾಥವಿಜಯಂ)

ಗರುಡನ ಮೂಗು ಕೊಂಕಿದೊಡೆ ತಿರ್ದುದಿಲ್ಲ ಮುರಾರಿ ಚಂದ್ರನೊಳ್ ।
ಪೊರೆದ ಕಲಂಕಮಂ ಕಳೆದುದಿಲ್ಲ ಮಹೇಶ್ವರನರ್ಕನಟ್ಟಿಯಂ ॥

† ಪದದೊಳ್ ನಿಂದಾ. § ಚಂಡಿಯೋ ಮಹಾಭೈರವಿಯೋ.

ವರುಣನ ಕಾಲ್ಗಳಂ ಪಡೆದಸಿಲ್ಲನುದೆಂತೆನೆ ಪುಣ್ಯಹೀನನೇ ।
ದೊರೆಗಳನಾಸೆಗೆಯ್ದೊಡವುಗಲ್ವುದೆ ಪೂರ್ವದ ಕರ್ಮಬಂಧನಂ ॥೪೦೭

(............)?

ಉದಯಿಸೆ ಭಾನು ಭಾನುಮಣಿಯೊಳ್ ಕಡುಗಾಯ್ಪೊಗೆವಂದದಿಂದಮಾ ।
ಸ್ಪದಮತಿತಿಣ್ಣಮಾಗೆ ದೊರೆಕೊಂಡುದು ಗಂಡಗುಣಂ ಯದುಪ್ರತಾ ॥
ನದೊಳದಱಂ ಪ್ರೌಢರ್ಪ ನಿಜವಲ್ಲದ ಯಾದವ*ರ್ಗಂಜೆನಂಜೆನಂ ।
ಜೀಪನೆನಧೋಕ್ಷಜಂಗೆ ಮೊಳೆಗಂಜದೊಡಂ ಪುಲಿಗಂಜುವಂದದಿಂ ॥೪೦೮

ಅಸುಹೃ‡ದ್ವಿಷಾಂಕುರಂ ಜನಿ ।
ಯಿಸಲವನುಗುರೊಳ್ ಚಿವುಂಟುವುದು ಕೊಡಲಿಗೊಳ್ ॥
ಲ್ಬುಸಮಲ್ಲಮ ಬೆಳೆದೊಡೆ ಬಳಿ ।
ಯಿಸುವುದು ನೀತಿಯ ವಿರೋಧಿಯಂ ವ್ಯಾಧಿಯುಮಂ ॥೪೦೯

ನೀವರ್ಮಾನಿಸಂ ನದೀಜಂ ।
ನೀವರ್ಮಾನಿಸನಬ್ಧಿಶಯನನದುಕಾರಣದಿಂ ॥
ಧರ್ಮಜ ಕೇಳ್ ಭೀಷ್ಮರ್ ಸಹ ।
ಧರ್ಮದೆ ಕೇಳ್ ಕೊಂಡು ಕೊನೆವರಿಕೇಶವನಂ ॥೪೧೦

ಹರಿಗಂ ನಿನಗಂ ಹರಿಗಂ ।
ಹರಿಣಂಗಂ ಹರಿಗಮುಡುಗಮಂತರಮೆಂತಂ ॥
ತುರುಹಸ್ತಿಮಶಕಪರ್ವತ ।
ಪರಮಾಣುಸಮುದ್ರಶೀಕರಾಂತರಮಲ್ತೇ ॥೪೧೧

ಕೋಗಿಲೆ ಕಾಗೆಯುಂ ಪೊರೆದ ಕಾರಣದಿಂ ಪರಪುಷ್ಟನಾದವೋ ।
ಲಾಗದ ಜಾತಿ ಗೋವಳತಿ ರಕ್ಷಿಸೆ ನೀಂ ಪರಪುಷ್ಟನಾದೆ$ಯಿಂ ॥

‡ ದ್ವಿಷದಂಕುರಮುದಯಿಸಿದತ್ತುಗುರೊಳ್. $ ನೋಡೀ.

ತೀಂಗಳದರ್ಕೆ ನಿನ್ನ ತನುಕಾಷ್ಣ್ಯ್ಯವೆ ಸೂಚಕಕ್ಕವಾಗಿರಲ್ಮಹಾ ॥
ಯಾಗದೊಳಗ್ರಪೂಜೆಗೆ ವಿಜಾತಿ ಕರಾಗ್ರಮನೇಕೆ ನೀಡುವೈ ॥೪೩೨

(ಜಗನ್ನಾಥವಿಜಯಂ)

ಮುಂ ಕೊಟ್ಟಟ್ಟುವುದುತ್ತಮಂ ರಿಪುಬಲಂ ವಾರಾಶಿಯುಂ ದಾಂಟದ ।
ನ್ನಂ ಕಲ್ಪಾಂತಕೃತಾಂತದೂತಸದೃಶಂಗಳ್ ರಾಮರೌದ್ರೇಷುಗಳ್ ॥
ಲಂಕಾದ್ವಾರಕವಾಟಮಂ ಮುಱಿಯದನ್ನಂ ಲಕ್ಷ್ಮಣಜ್ಯಾಲತಾ ।
ಟಂಕಾರಂ ಕಿವಿಗೆಯ್ದದನ್ನಮಖಿಲಪ್ರಖ್ಯಾತೆಯಂ ಸೀತೆಯಂ ॥೪೩೩

(ರಾಮಚಂದ್ರಚರಿತಪುರಾಣಂ)

ಪೆಸರ ಗಿರಿದುರ್ಗಮೊಲೆಗ ।
ಲ್ಗೆ ಸರ್ಗಂ* ಜಲದುರ್ಗಮಿಂಧನಕ್ಕೆಯ್ದಿಯುಗು ॥
ಬಿಸುವ ವನದುರ್ಗಮೆನೆ ಮ ।
ದ್ದಸುವಾಧೀಶ್ವರನ ಬಲಮನಾಂಪವನಾವಂ ॥೪೩೪

(ಪಾರ್ಶ್ವನಾಥಪುರಾಣಂ)

ಆರ ನೆಗೞ್ತೆಯುಂ ಬಲಮುಮಾಯತಿಯುಂ ಚಲಮುಂ ಪ್ರಭುತ್ವಮುಂ।
ದೂರದೊಳಿರ್ದು ನೋಡೆ ಸೊಗಯಿಪ್ಪುದು ಬೆಟ್ಟದ ನುಣ್ಪಿನಂತೆ ಪೊ ॥
ಕ್ಕಾರಯೆ ಕಾಣಲಾಗದಱನಲ್ಲಿರೆ ಬಲ್ಲಿದರಲ್ಲದಂತೆ ಕಾ ।
ವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ ॥೪೩೫

ಜಗದೀಶಂ ಲಯವಾರ್ಧಿಯಂತೆ ಕವಿತಂದೊಟ್ಟೈಸಿ ಬಂದಲ್ಲಿಯುಂ ।
ಪುಗುವಾಗಳ್ ಪುಗಲೀಯೆವೆಂದನಿಬರುಂ ವೀರರ್ಕಳೇಂ ಕಾಪರೇ ॥
ಪಗೆವಂ ಬಲ್ಲಿದನೆಂದೊಡಂಜದವರಾರ್ ಕಾವನ್ನರಾರ್ ಪನ್ನಗಂ ।
ಪುಗೆ ಪುತ್ತಂ ಪುಗಲೀಯೆವೆಂದೊಱಲೆಗಳ್ ಕಾಯಲ್ ಸಮರ್ಥಂಗಳೇ ॥೪೩೬

ಪೞಿಯ ಧರಾತಳಮಂ ಗುಣ ।
ದ ಜೀವಸೊಡಂಬಡದ ಕಾಮುದಂಗೀಯದದ ॥
ರ್ಕಱಿಪೆ ದೆಸೆಗಳ್ಗೆ ಕೆಮ್ಮನೆ ।
ನೊಱಗುವಿರೇಂ ಮೊಱಗಿದಂತೆ ಕೊಳ್ವವೆ ಮಱಿಗಳ್ ॥೪೩೭

(ಶೂದ್ರಕಂ)

§ ಮಲ್ಲದೇವ.

ಬಗೆವೊಡೆ ಕಿಚ್ಚಿನ §ವೊಲ್ಲಾ ।
ಲಗೆಯತಿಪಟುವೆನಿಪ ನಿಮ್ಮ ದೊರೆಯರ್ ಸಚಿವರ್ ॥
ಮಿಗೆ ಪೊರ್ದಿರೆ ನಿಮ್ಮಯ ರಾ ।
ಜ್ಯಗೃಹಂ ಪಿರಿದುಂ ವಿಭೂತಿಮಯಮಿನ್ನಕ್ಕುಂ ॥೪೩೮

(ಚಂದ್ರಪ್ರಭಪುರಾಣಂ)

§ಕಲಿಗೇಂ ಶಂಕೆಯೆ ಚಾಗಿಗಂ †ಬಱಮೆ ಕಟ್ಟಾಳ್ಗೆ ನೆರಂಬಾರ್ವನೇ ।
‡ಕುಲವೆಣ್ಗೇಂ ಮಱುವಾೞ್ತೆ ¶ಸೂಳೆತನಕೇಂ ಕಣ್ಸನ್ನೆಯೇ ಮೋಕ್ಷಿಗೇಂ ॥
ಕೊಲೆಯೇ ಮಂತ್ರಿಗಮಿಚ್ಛೆಕಾಱತನಮೇ ತಕ್ಕಂ ಪಿಸುಣ್ಪೇೞ್ವನೇ ।
ಚಲನುಂ ಗಂಡುಮನಪ್ಪ ††ಕೆಯ್ದು ತನಗೇಂ ಕೌಂತೇಯರೊಳ್ ಸಂಧಿಯೇ ॥

(ಗದಾಯುದ್ಧಂ)

ಇಂತು ಕಾವ್ಯಸಾರದೊಳ್
ಶೌರ್ಯವರ್ಣನಂ.

೧೮. ದೂತವರ್ಣನೆ.

ಗಗನಕ್ಕಂಭೋಧಿ ತುಳ್ಕಾಡಿದುದವನಿಗೆ ತಾರಾಳಿ ಸೂಸಿತ್ತು ದಿಕ್ಪಾ ।
ಲಗಣಕ್ಕಾಶಂಕೆ ಪುಟ್ಟಿತ್ತಿದು ಮಗಧನ ಭೇರೀರವಂ ಕೆಟ್ಟೆವಾತಂ ॥
ಗಗಿದಾವಾವಾಳ್ವೆಸಂಗೆಯ್ದಪೆವೆನೆ ಮಹಿಪರ್ ಪೊಣ್ಮಿತುಚ್ಛೃಂಖಲಂ ಗೋ ।
ತ್ರಗಿರಿಚ್ಛಾತ್ರಾನುವಾದ್ಯಾಧ್ಯಯನಗುರು ಜರಾಸಂಧಭೇರೀನಿನಾದಂ ॥೪೪೦

(ಜಗನ್ನಾಥವಿಜಯಂ)

ಲಂಕಾಧೀಶ್ವರ ಕಾಳೆಗಂ ನಿನಗೆ ಲೇಸಲ್ತೆಂತೆನಲ್ ವಾಸುದೇ ।
ವಂ ಕೊಲ್ವಂ ಪ್ರತಿವಾಸುದೇವನನಿದೇಂ ಸಂದೇಹಮೋ ಸೀತೆಯಂ ॥
ನೀಂ ಕೊಟ್ಟಟ್ಟು ಬರ್ದು*ಂಕಲಾಟಿಸುವೊಡೆಂಬಂತಷ್ಟದಿಗ್ಭಿತ್ತಿಗಂ ।
ಧಿಂಕಿಟ್ಟಿತ್ತು ರಘುಪ್ರವೀರವಿಜಯಪ್ರಸ್ಥಾನಭೇರೀರವಂ ॥೪೪೧

(ರಾಮಚಂದ್ರಚರಿತಪುರಾಣಂ)

§ ಬಲ್. § ಕಲಿಗಂಕಜ್ಜವೆ. † ಜರಗೆ. ‡ ಕುಲಜಂಗಂ.
¶ ಸಜ್ಜನಿಕೆಗೇಂ ಕಳ್ಳೋಜೆಯೋ ಧರ್ಮಿಗಂ. †† ಯ್ವೆನಗವಾ.

ದಿತಿಸುತನ ರಾಜಧಾನಿಯು ।
ಚತುರೆಯರಂ ಕಂಡೊಡೆನ್ನುನೀಗ್ರಾಮೆಯರಂ ॥
ದಿತಿಜಾರಿ ನೆನೆಗುಮೋ ಮಾ ।
ಲತಿಗೆಱಗಿದ ತುಂಬಿ ನೆನೆಗುಮೋ ಮಿಕ್ಕರಲಂ ॥೪೪೨

(ಜಗನ್ನಾಥವಿಜಯಂ)

ನಡೆವಾಡಂ ನಡೆಗೊಪ್ಪುವಶ್ವತತಿ ಚೆಂಬೊನ್ನಂದಣಂ ವಾಜಿ ಪೆ ।
ರ್ವಿಡಿ ಪೇರಾನೆ ಸುಖಾಸನಂ ತುಱುಗೆ ಬಂದರ್ ಮಾವಕರ್ಗಾಯಕರ್ ॥
ನುಡಿಕಾಱರ್ ಬಗೆಕಾಱರೊಳ್ಗವಿಗಳೊಳ್ಪೆಂಡಿರ್ ಕುಮಾರರ್ ಮನಂ ।
ಬಡೆದಂತಃಪುರಕಾಂತೆಯರ್ ಬಹುಕಳಾಸಂಪನ್ನೆಯರ್ ಕನ್ನೆಯರ್ ॥೪೪೩

(ಮಲ್ಲಿನಾಥಪುರಾಣಂ)

ವಾರಿಧಿ ಮೇರೆಯಂ ಪ್ರಳಯದೊಳ್ ತಳರ್ವಂತೆವೊಲಾಗಳಾಪುರ ।
ದ್ವಾರಚತುಷ್ಕದಿಂ ಯದುಬಲಂ ತಳರ್ದತ್ತು ಮದೇಭಘೋರಘಂ ॥
ಟಾರವಮಶ್ವಹೇಷಿತರವಂ ಭಟಸಿಂಹರವಂ ಮರೂಥಚೀ ।
ತ್ಕಾರರವಂ ಪದಿರ್ಮಡಿಸೆ ಕಾಹಳದುಂದುಭಿಶಂಖನಾದದಿಂ ॥೪೪೪

ಎಣಿಕೆಗಳುಂಬಮೀಬಲಮಿದೊಂದು ವಿಚಿತ್ರಮಿದೊಂದಗುರ್ಬಿದೊಂ ।
ದಣಕಮಿದೊಂದತರ್ಕ್ಯಮೆನೆ ರೌದ್ರರಸಂ ಮಿಗೆ ಪಣ್ಣಿದಾನೆ ಪ ॥
ಲ್ಲಣಿಸಿದ ವಾಜಿ ಪೂಡಿದ ರಥಂ ವಿಧೃತಾಯುಧಮಾದ ಪತ್ತಿ ಸಂ ।
ದಣಿಸಿರೆ ಬಂದುದಂತು ಚತುರಂಗಬಲಂ ಮಗಧಾಧಿರಾಜನಾ ॥೪೪೫

(ಜಗನ್ನಾಥವಿಜಯಂ)

ಬಳಭರದಿಂ ನೆಲಂ ಕುಸಿಯೆ ಶೇಷನ ಪೆರ್ಬೆಡೆ ತರ್ಗೆ ಕಂಠಕಂ ।
ದಳದೊಳಗಲ್ದಡಂಗಿದುದು ಕೂರ್ಮನ ಖರ್ಪರದೆಲ್ವು ನುರ್ಗಿ ಬೆ ॥
ನ್ನೊಳೆ ಮುಱುಗಿತ್ತು ಬೆಟ್ಟುಗಳ ಮೂಳಶಿಲಾತಳಸಂಧಿ ಬಿಟ್ಟುದಾ ।
ಕುಳತೆಯನಾಳ್ದು ಕಿಬ್ಬೆ ಕಿಱಿಂದಲೆಯಾದುದು ಕುಗ್ಗಿ ದಿಗ್ಗಜಂ ॥೪೪೬

ಬಳೆದುದೊ ಭೂಮಿಯಿಂ ಬೆಸಲೆಯಾಯ್ತೊ ದಿಶಾವಳಿ ಮೇರೆದಪ್ಪಿತೋ।
ಬಳವಮಯವಾಗಿ ವಾರ್ಧಿ ಭುವನತ್ರಯವಾಸಿಗಳೆಲ್ಲಮಿಲ್ಲಿಗೀ ॥
ಗಳೆ ನೆರವಾಗಿ ಬಂದು ನಡೆತಂದರೊ ಪೇೞಮೆನಲ್ಕಗುರ್ವಿನಾ ।
ಳ್ದಳವಿಗಳುಂಬವಾದುದು ಬಲಂ ಪ್ರಬಲಂ ಜಯತುನ್ನದೇವನಾ ॥೪೪೭

(ಪುಷ್ಪದಂತಪುರಾಣಂ)

ಘನಬಾಹಾವಿಕ್ರಮಂ ಮುನ್ನವೆ ತನಗೆ ನಿಜಂ ಮತ್ತೆ ಚೇದೀಶದುರ್ಯೋ।
ಧನವಾದ್ರಾಂಗಾಧಿರಾಜಪ್ರಭೃತಿನೃಪವರರ್ ಕೂಡಿದರ್ ತನ್ನೊಳೀಮೀ ॥
ರನೊಳನ್ನಾರಾಂಪರಿನ್ನಾರ್ ಚಲದೆ ಮಲೆವರಿನ್ನಾರ್ ಭರಂಗೆಯ್ವರಿನ್ನಾರ್ ಮೊ।
ನೆಯೊಳ್ ಮಾರ್ಕೊಳ್ವರೆಂಬೊಂದೆಸಕಮೆಸೆಯೆ ಬಂದಂ ಜರಾಸಂಧಭೂಪಂ॥

ಬಲವತ್ಸೈನ್ಯಪದೋತ್ಥಪಾಂಸುಚಯದಿಂ ಸೇನಾಮಹಾಭಾರದಿಂ ।
ಬಲಕೋಳಾಹಳದಿಂ ವಿಯಚ್ಚರಗಣಂ ಶೇಷಂ ದಿಶಾಪಾಲಕರ್ ॥
ಪೊಲೆಗೆಟ್ಟೋಡಲಳುರ್ಕೆಗೆಟ್ಟು ಕಿವಿ ಶಬ್ದಂಗೆಟ್ಟು ನಿಲ್ವನ್ನೆಗಂ ।
ತಳರ್ದಂ ಸಾಹಸಕೀರ್ತನಾಚತುರಸೇನಾಮಾಗಧಂ ಮಾಗಧಂ ॥೪೪೯

ತಿದಿವೋಲ್ ದಿಗ್ಗಜರಾಜಿ ಗೋಣ್ಣಿಸಿಮು ವಕ್ತ್ರಶ್ವಾಸಮಂ ಬೀಱುತಿ।
ರ್ದುದು ನಾಲ್ಬಟ್ಟೆಯ ಪಿಟ್ಟೆವೋಲ್ ಕುಲನಗೌಘಂ ಮುಗ್ಗಿದತ್ತಾನೆ ಮೆ ॥
ಟ್ಟಿದೆಸಮುರ್ಚಿಟ್ಟವೊಲಾಗಿ ಕೂರ್ಮನೆಡೆಸಂ ಶೇಷಂ ಫಣಂಬಳ್ಕಿ ಸು ।
ರ್ಕಿದಪಂ ಸೀರೆಯ ಸಿಂಬೆವೋಲ್ ಖಳನೃಪಾಲಾಕ್ಷೋಹಿಣೀಭಾರದಿಂ ॥೪೫೦

(ಜಗನ್ನಾಥವಿಜಯಂ)

ಬಿಸಿಲಂ ನಾನಾತಪತ್ರಂ ಮುಸುಳಿಸೆ ಸಿತಖಡ್ಗಪ್ರಭಾಮಂಡಲಂ ಕೊ।
ರ್ವಿಸೆ ರೋದೋವಾತಮಂ ಕೇತುತತಿ ತೆರೆಯೆ ತಚ್ಚಾಮರೋತ್ಥಾನಿಲಂ ಪ॥
ರ್ವಿಸೆ ಮಾರ್ಗಾನೇಕತೋಯಾಶಯಮನುರುರಜಂ ಪೀಱೆ ದಾನಪ್ರವಂ ಪೂ।
ರಿಸೆ ತೋಱಿತ್ತೆತ್ತ ಮಾವಂ ಹರಣಭರಣಚಾತುರ್ಯಮಂ ಚಾತುರಂಗಂ ॥೪೫೧

(ಚಂದ್ರಪ್ರಭಪುರಾಣಂ)

ನವನದ್ಯೌಘಾಂಬುಪೂರಂ ಬಲಪದಹತಿಯಿಂ ಬತ್ತಿ ಬಾಯ್ವಿಟ್ಟು ಧೂಳೀ |
ಎದ್ದುದು ಭೂಜಶ್ರೇಣಿ ನುಗ್ಗಾಗಿಯೆ ಪುಡಿವಿಟ್ಟತ್ತಲುಂ ಸುತ್ತಿ ಸೀರೇ ||
ಎದ್ದುದು ಕಾೞ್ಗಿಚ್ಚಲ್ಲಿಯುಂ ಕುಟ್ಟಿದ ತೆಱದೆ ಕರಂ ಪಿಟ್ಟುಪಿಟ್ಟಾಗೆ ಪಾಱೀ ||
ಎದ್ದುದಿದೇಂ ಬಾಹುಲ್ಯಮೋ ಭೂಪತಿಯ ಪಟುತರಾನೂನಸೇನಾಪ್ರತಾನಂ ||

(ಶಾಂತೀಶ್ವರಪುರಾಣಂ)

ದಿಗಧೀಶರ್ ಜಗದೀಶರೊಳ್ ಪೊಲಗೆಡಲ್ ದಿಗ್ದಂತಿಗಳ್ ಸೈನ್ಯದಂ |
ತಿಗಳೊಳ್ ಪಲ್ಲಟಮಾಗಲಬ್ಧಿಗಳುಮಶ್ವಾನೀಕಲಾಲಾಜಲಾ ||
ಬ್ಧಿಗಳೊಳ್ ತಳ್ತಿರಲರ್ಕಕೇತು ರಥಕೇತುವ್ರಾತದೊಳ್ ಕೂಡಲಿಂ |
ತಗಲಂಬೆತ್ತು ಮಹತ್ವಮಂ ತಳೆದು ಬಂದೆೞ್ತಂದನಬ್ಜೇಕ್ಷಣಂ ||೪೫೩

(ಜಗನ್ನಾಥವಿಜಯಂ)

ಪೆಡೆಯೊಳಡಂಗೆ ವಾಸುಕಿಯ ನೆತ್ತಿಯ ಮಾಣಿಕವಾೞ್ಗೆ ಕಂಠದೊಳ್ |
ಪೆಡೆಗಳ ಗೊಂಪಣಂ ಸರವಿಸುತ್ತಿದವೋಲಿರೆ ಕೂರ್ಮಪೃಷ್ಠದೊಳ್ ||
ಪಡಲಿಡೆ ಖರ್ಪರಂ ಕುಸಿದು ಕೂರ್ಮಶಿರಂ ಪೊಱಪಾಯ್ದು ಕಣ್ತೆಮು |
ಳ್ದಡೆನನಿತಾಗೆ ತನ್ನ ಭರದಿಂ ನಡೆನತ್ತು ನರೇಂದ್ರಸೈನಿಕಂ ||೪೫೪

ನೞಿದಿರ್ದ ಕೂರ್ಮಪೃಷ್ಠದ |
ಕುೞಿಯೊಳ್ ಮಂಡಳಸಿ ಕೆಡೆದು ಬಳಭರದಿಂ ಪಾ ||
ಡೞಿದ ಫಣಿನಾಯಕಂ ಸು |
ತ್ತೞಿಯುದ ಪೇೞಿಗೆಯ ಪಾವಿನಂತೆವೊಲಿರ್ದಂ ||೪೫೫

(ಮಲ್ಲಿನಾಥಪುರಾಣಂ)

ಭರದಿಂ ಶೇಷನನೆತ್ತಿ ಪೊತ್ತಿ ಪೊಗೆಯಲ್ಕುಚ್ಛ್ವಾಸದಿಂದುಣ್ಮಿದು |
ದ್ಧರಧೂಮೌಘಮೊ ಮೇಣ್ ನಿಜಪ್ರಿಯತಮಂ ಸೌಂದರ್ಯಕಂದರ್ಪನೇ ||
ೞ್ತಿರೆ ಭೂವಲ್ಲಭೆಯೆನ್ನೊಳಿರ್ದು ಪದಪಿಂ ಬರ್ಪಂದಮೋ ಪೇೞಿಮೆಂ |
ಬರಮಾತೊಪ್ಪೆ ಪೊದೞ್ದಂದು ಬಲಪಾದೋತ್ಥಂ ರಜೋಮಂಡಲಂ ||೪೫೬

ಎಡೆ ನೆಱೆಯದೀಬಲಕ್ಕಾ ।
ನೆಡೆ ಮಾಡುವೆನೆಂದು ನೆಲನನೊದವಿಪ ತೆಱದಿಂ ॥
ಕಡಲಂ ಪೀರ್ದುದು ರಜಮೋ ।
ವಡೆದುದೊ ಯುವರಾಜನಲ್ಲಿ ಪಡೆವಳವೆಸರಂ ॥೪೫೩

ಅದು ಸನ್ಮಾರ್ಗವಿಶುದ್ಧಿಯಂ ಕಿಡಿಸಿಗತ್ತಾಶಾಂಬರಸ್ವಚ್ಛಭಾ ।
ವದ ಪೆಂಪಂ ಪೆಱಗಾಗಿಸಿತ್ತು ಜನಸಮ್ಯಗ್ದರ್ಶನಜ್ಞಾನಸಂ ॥
ಪದಮಂ ಕೀೞ್ಪಡಿಸಿತ್ತು ತಾಂ ಜಡಧಿಗಳ್ಗಂತಸ್ಥಮಾಗಿರ್ದುದೆಂ ।
ಬುದು ಯುಕ್ತೋಕ್ತಮುಮಾರ್ಗನಿರ್ಗತರಜೋಜಾತಕ್ಕಿದಾಶ್ಚರ್ಯಮೋ ॥
(ಪುಷ್ಪದಂತಪುರಾಣಂ)

ಘನವೀಧೀಸಿಂಧು ಪೂೞ್ದಂಬರತಳದೊಳಪೂರ್ವಾವನೀಚಕ್ರಮಾಗಿ ।
ರ್ಪಿನೆಗಂ ವಾರಾಸಿಗಳ್ ಪೂೞ್ದಿಳೆಯೊಳಭಿನವದ್ವೀಪರೂಪಂಗಳಾಗಿ ॥
ರ್ಪಿನೆಗಂ ಬ್ರಹ್ಮಾಂಡಭಾಂಡಂ ನಿಜಬಹಳತೆಯಿಂ ಮೃತ್ತಿಕಾಭಾಂಡದಂತಿ ।
ರ್ಪಿನೆಗಂ ಪರ್ಬಿತ್ತುದೆತ್ತಂ ಮಗಧನೃಪಬಲೋದ್ಧೂತಧೂಳೀಪ್ರತಾನಂ॥
(ಜಗನ್ನಾಥವಿಜಯಂ)

ಸುರಶೈಲಂ ಪೂೞ್ದುಪೊಂಬುಟ್ಟಿವೊಲಿರೆ ಸಕಲೋದನ್ವದಂತಸ್ಥಕೂರ್ಮೋ।
ತ್ಕರಮುರ್ವೀಚಕ್ರಮುಂ ತಾಳ್ದಿದ ಕಮಠನವೋಲೊಪ್ಪೆ ಸಾರಂ ರಥಂ ಮೃ ॥
ಗಧರಯುಗ್ಯೋತ್ಥಕಟಾಕಾರದಿನೆಸೆಯೆ ಜಗದ್ವ್ಯಾಪಿಯಾದತ್ತು ಯುದ್ಧೋ ।
ದ್ಧುರತತ್ಸೇನಾದ್ವಯಾಭ್ಯುಚ್ಚಳನದಳದಿಳೋತ್ಥಾನಪಾಂಸುಪ್ರತಾನಂ ॥೪೬೦
(ಚಂದ್ರಪ್ರಭಪುರಾಣಂ)

ಪೆದಪಿಂ ಮೇಳಿಸೆ ಧೂಳಿ ಸಿಜ್ಜರಮಿದೆಂದಾಶಾಗಜಂ ಭೀತಿಯಿಂ ।
ದಿದು ಸೂಱೊಂದೆನಿಸಿರ್ದ ಕೇತುವೆರಸೇಗಳ್ ರಾಹು ಮೇಲೆತ್ತಿ ಬಂ ॥
ದುದೆನುತ್ತಂ ರವಿಮಂಡಳಂ ನಡುಗೆ ಹೆವ್ಯಾಸಕ್ತಿಯಿಂ ದೇವರಿಂ ।
ತಿದು ಹೋಮಾನಳಧೂಮಮೆಂದೆಳಸೆ ಪರ್ವಿತ್ತುರ್ವಿ ಸೇನಾರಜಂ ॥೪೬೧

ಅನುಕೂಲಶ್ವಸನಂ ಹಯಾನನಸಮೀರಂ ಚಕ್ರದಂಶಃಪ್ರವ ।

ರ್ತನಸಂಜಾತಸಮೀರಣಂ ಘಳಕಸಂಚಾರಾನಿಳಂ ವಾಳವೀ ‖
ಜನವಾತಂ ಕರಿಕರ್ಣತಾಳಪವನಂ ಚಂಚತ್ಪತಾಕಪ್ರಭಂ ।
ಜನನೊಂದಾಗಿ ತೆರಳ್ಚಿ ತೂಳ್ದಿದುದು ತತ್ಸೇನಾರಜೋಜಾಳಮಂ ‖೪೬೨

(ಮಲ್ಲಿನಾಥಪುರಾಣಂ)

ನೆಲನನಿತುಂ ತೆರಳ್ದಡೆಸೆ ಬಿಟ್ಟಣೆಯುಂ ತಮದೊಂದಮಾಳ್ಕೆಯಿಂ ।
ನೆಲೆ ನೆಲೆವೆರ್ಚೆ ಮಱುಂ ಪರಿವ ಪೆರ್ದೊಱೆಗಳ್ ನೃಪನೀತಿಮಾರ್ಗಭೂ ‖
ತಲಪತಿವೊಲ್ ಕಱುತ್ತೆಱಗೆ ತಾಗಿದರಾತಿವೊಲಂತೆ ಮಾಣ್ದು ಪೆ ।
ರ್ಬಲವೊಡಮಾಯೆ ಕಪ್ಪುಕವಿವಂತಿರೆ ಕಾಲೊಳೆ ತಪ್ಪವೆಲ್ಲಿಯುಂ (?) ‖೪೬೩

ಬಲರಿಪು ತನ್ನದೊಂದು ಬಲಗರ್ವದಗುರ್ವಿನೊಳೆಮ್ಮ ಱಂಕೆಯುಂ ।
ಕುಲಿಶದಿನೊರ್ಮೆ ಖಂಡಿಸಿದನಿಂ ಮಗುೞ್ದಲ್ಲಿಗೆ ಬರ್ಪುದೆಂಬುದಂ ‖
ನೆಲೆಗೊಳಸಲ್ಕೆ ಬಂದ ನಿಜಮೇರುವನಿಂದ್ರನೆಗೆತ್ತು ಬೆಟ್ಟುಗಳ್ ।
ನೆಲದೊಳಡಂಗುವಂತೆ ನೆಲದೊಳ್ ಸಮನಾದುವು ಸೈನ್ಯಘಾತದಿಂ ‖೪೬೪

ಪೞುಗಳ್ ಪೆರ್ಬಯಲಾಗೆ ದರ್ಕಳನಿಸುಂ ಪಲ್ಗುತ್ತಲೀಲೆಂಬಿನಂ (?) ।
ಕುೞಿಗಳ್ ತೀವಿರೆ ಗೋರೆಯಾಯ್ತು ನೆಲನೆಂಬಾಕಂಕೆಯುಂ ಮಾೞ್ಪಿನಂ ।
ಪುೞುವೊಲ್ಪಾಯೆ ಮೃಗಂಗಳೋಡಲವಕಾಶಂ ತಾನದಿಲ್ಲೆಂಬಿನಂ ।
ಸುೞಿದಂಭೋನಿಧಿ ಮೇರೆದಪ್ಪಿದ ತೆಱಂ ಬಂದತ್ತನೀಕಾರ್ಣವಂ ‖೪೬೫

ಅಮಿತಬಲದೆರಡುಕಡೆಗಂ ।
ನಿಮಿರ್ವ ಜವಂಗುಂದಿ ಪಾಯ್ದು ಕಳವಳಿದು ತುರಂ ‖
ಗಮಸಮಿತಿಯೊಳೆಯೊಳಂ ಪ ।
ಙ್ಕಿಮದೊಳಮೇಱಿದ ಶತಲೆಯೊಳಂತೆ ಹಗೆಂಗಳ್ (?) ‖೪೬೬

(ಶೂದ್ರಕಂ)

ಇಂತು ಕಾವ್ಯಸಾರದೊಳ್

ದೂತವರ್ಣನಂ.

೧೯ ಅಶುಭ ವರ್ಣನೆ.

ಹಯನಯನಾಂಬುಗಳ್ ಸುರಿಯೆ ಹರ್ಷದಿನುಣ್ಮಿದುವೆಂದು ನಚ್ಚಿನಾ ।
ನೆಯ ಮದವೆತ್ತಿ ಕಟ್ಟೆ ಪಿಕಳತ್ವಮನೊಕ್ಕುವಿವೆಂದಕಾರಣಂ ॥
ಜಯರಥವೆಾರ್ವೆರ್ದಲ್ ಮುಱಿಯೆ ಶತ್ರುಬಲಂ ಮುಱಿದಪ್ಪುದೆಂದು ದು ।
ರ್ಣಯಮನೆ ದರ್ಪದಿಂ ಸುನಯಮಾಗೊಣರ್ದಂ ದುರ್ತವಿಗ್ರಹಾಗ್ರಹಂ ॥
(ಚಂದ್ರಪ್ರಭಪುರಾಣಂ)

ಬಯ್ಯನೆ ಬಂದಂಬರದೊಳ್ ।
ಕಯ್ಯಂ ಪಱಿಮಾಡಿ ಕಲಸಿದಮೃತದ ತುತ್ತಂ ॥
ಸುಯ್ಯದೆಱಿಮಂಬ ತನ್ನಯ ।
ಕಯ್ಯನೆ ನಿಮಿರ್ದತ್ತು ರಾಹು ಶಶಿವಿಡಿವೆಡೆಯೊಳ್ ॥೪೬೮

ಅದು ನೋಡಲ್ ನೋಡಲಡಂ ।
ಗಿಪುದರಸನ ಮುಂದೆ ಕೊಳ್ವ ರಾಹುವಿನ ಮಹಾ ॥
ವದನೋದಪಾತ್ರದೊಳ್ ಪುಂಖ ।
ಗಿಪ ಗಳಗೆಯ ಬೆಳ್ಳಿವಟ್ಟಲೆನೆ ವಿಧುಬಿಂಬಂ ॥೪೬೯

ತಳ್ವದೆ ತವೆಕಿಪ ರಾಹುಗೆ ।
ಬಳ್ವಳವಡೆದಿರ್ದ ತಾರೆ ಮುಸುಳ್ದಿರೆ ಚಂದ್ರಂ ॥
ಕೊಳೆಕ್ವೊದನೆಂದೊಡಿಳೆಯೊಳ್ ।
ಕೇಳ್ವರ್ ಮರುಳಲ್ತೆ ಚಂದ್ರತಾರಾಬಲಮಂ ॥೪೭೦
(ಧರ್ಮನಾಥಪುರಾಣಂ)

ಅತ್ತ ನಿಶಾಚರೇಶ್ವರನ ವಾಮವಿಲೋಚನವಾಮಬಾಹುಗಳ್ ।
ಕೆತ್ತಿದುವೆತ್ತಿ ಕಟ್ಟೆ ಮದದಂತಿಯ ಸೋರ್ವ ಮದಂ ಕರೇಣುಗಾ ॥
ದತ್ತು ಹಯಾಳಿ ಕಣ್ಬನಿಯನಿಕ್ಕಿದುವಂದೊಱೆಯಿಂದಮುರ್ಚಿ ಬಿ ।
ರ್ದತ್ತು ಸಿಧ್ಧನು ಸೂಸಿದುವು ಕೇಸುರಿ ಬೀಸುವ ಚಾಮರಂಗಳಂ ॥೪೭೧

ಪುಟ್ಟಿದುವಲ್ಲಿಗಲ್ಲಿಗೆ ಶಿಳೀಂಧ್ರಚಯಂ ಕರುವಾಡದಲ್ಲಿ ಜೇ ।
ನಿಟ್ಟುದು ಬಳ್ಳು ಮೂಡವೊಗದೂಱುದು ಮಂದಿರದೇವತಾಳಿ ಗೋ ॥
ಳಿಟ್ಟುದು §ಪೋದಿರುಳ್ ನೆಗೆದುದಿಂದ್ರನ ಬಿಲ್ ದಿವಸೋಳ್ಕಸಂಕುಳಂ ।
ತೊಟ್ಟನೆ ಬಿರ್ದುವುಣ್ಮಿದುವು ಕಾವಳ ಕೊಂಡುವು ರಕ್ತವೃಷ್ಟಿಗಳ್ ॥೪೨೦
(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಅಶುಭವರ್ಣನಂ.

೨೦. ಕೋಂಟೆಗಾಳೆಗದ ವರ್ಣನೆ.

ಅದನಾಗಳ್ ಕಂಡು ಕಣ್ಣಿಂದುರಿ ಬರೆ ಪೊಗೆ ಪುರ್ವಿಂದಮುರ್ವೇ
ಱೆ ಭೋಂಕಲ್ । ಮದಮಾತಂಗಾರಿಪೂರ್ವಾಸನಮನಿೞಿದು ಮೆಯ್ವೆತ್ತ ವ
ಜ್ರಾಂಗಿ ಕೈಸ್ವೆ ॥ ತ್ತಿದ ಕೊಂತಂ ದಂಡೆಗೊಂಡಡ್ಡಣಮೆನೆ ವಸುಷೇಣಂ
ಭರಂಗೆಯ್ವುದುಂ ಪೋ । ದುದು ಪೊತ್ತಿಂ ಕಾಲಿಡಲ್ಕತ್ತಲೆ ಕದಡಿದುದೆಂ
ದಾಪ್ತರಡ್ಡೈಸಿ ನಿಂದರ್ ॥೪೨೩

ನೊಣೆಯಲ್ ನುಂಗಲಿಳಾತಳಂ ಮುಱಿದು ಮೂಱುಟ್ಟಂತೆ ದುರ್ಗಕ್ಕೆ ನಿ ।
ಚ್ಚಣಿ ಸಾಚರ್ದಂದಲೆ ವೀರಸೇತು ನಡೆನಾರಂಬದ್ದರಂ ಗೆಗ್ಗಡೆಂ ॥
ಕಣೆಗುಂಪುಂ ಪಟಗೋಂಟೆಯೆಂಬ ಬಹುಕೋಟಾಯಂತ್ರಸಾಮಗ್ರಿತಿಂ ।
ತಿಣಿಗೊಂಡಾಂತಿರೆ ಲಗ್ಗಗಾದರ್ ವಸುಷೇಣಂ ಸಾದರ್ ಸೂೞ್ಸೈಸಿದಂ ॥೪೨೪
(ಅನಂತನಾಥಪುರಾಣಂ)

ಬಿಡುವುರಿಯೆಣ್ಣೆ ಸೂಸುವ ಕವಲ್ಗಿಡಿ ಬೀಸುವ ಪಾಶವೋರೆಯಿಂ ।
ದಿಡುವಱೆ ¶ಪೊಯ್ವ ಕೊತ್ತಳಿಕೆ ಕುತ್ತುವ ಕೊಂತಮುರುಳ್ವ ಪೊಡ್ಡುಗಲ್ ॥
ಕಡೆ ಸೆಱಿಗೆಯ್ದು §ತೂಂಕದಿೞಯಿಕ್ಕುವ ಬಲ್ದಸಿ ಭೀತಿಯಂ ಮನ ।
ಕ್ಕೊಡರಿಸೆ ಲಗ್ಗೆಯಟ್ಟಳೆದೊ†ಳಟ್ಟೆಡೆಯಾದುದು ಕೋಂಟೆಗಾಳೆಗಂ ॥೪೨೫

ಇಡಿಸುವ ಡೆಂಕಣಕ್ಕೆ ನೆಲವಾಳಗೆಗೊತ್ತಳದಂಬುಗಂಡಿಯಿಂ ।
ದುಡುಗದೆ ಪಾಯ್ವ ಕೂರ್ಗಣೆಗೆ ‡ಬದ್ದರವೊಡ್ಡಿಪ ಕೋಂಟೆಗಾವಗಂ ॥

---

§ ನಟ್ಟಿರುಳ್. ¶ ಪೊಯ್ಲು ಕನ್ನಳಿಕೆ. § ನೂಂಕುವದಿ. † ಳಿಪ್ಪಳಮಾ.
‡ ಬದ್ದರಗೊಟ್ಟಿತು.

ಕೆಡಪುವ ಗೆಗ್ಗ ವಂಕವರದಿಂ ಪೊಱಮಟ್ಟಱವಾಳ್ಗಳಾಂಕೆಯೊಳ್ ।
ಗಡಣಿಸಿ ಕಾದುತಿರ್ದುದು ಮಹೇಂದ್ರಪತಾಕಿನಿ ಮುತ್ತಿ ಸುತ್ತಲುಂ ॥೪೭೬
(ಚಂದ್ರಪ್ರಭಪುರಾಣಂ)

ಸರಿಗೆ ವರಲಾರುಮಿಲ್ಲನೆ ।
ಸರಿಗೇೞ ಬೆಡಂಗುವಡೆದು ಸುಗ್ಗಿಯ ಗಿಳಿಯುಂ ॥
ತಿರೆ ತನೆಗಳನೆಡೆಗಲಿಸಿದು ।
ದುರುಕೋಪಾರುಣಿತತುಂಡಮುದಟರ ತಂಡಂ ॥೪೭೭
(ಪಾರ್ಶ್ವನಾಥಪುರಾಣಂ)

ಇಂತು ಕಾವ್ಯಸಾರದೊಳ್

ಕೋಂಟೆಗಾಳೆಗದ ವರ್ಣನಂ.

೩೧. ಯುದ್ಧವರ್ಣನೆ.

ಯದುಮಗಧಸೈನ್ಯಯುಗದೊಳ್ ।
ಕದನಂ ಮಸೆ+ಯಲ್ಕೆ ಮರುಳ್ಗಳಡಸಿರ್ದತ್ತಾ ॥
ಹದೆ ಪಲ್ಲಂ ಮಸೆದುವು ನಾ ।
ರದನುಗುರಂ ಮಸೆವು ನೋಡುತಿರ್ದಂ ನಭದೊಳ್ ॥೪೭೮

ಇದು ‡ಸಪ್ತಾರ್ಣವಘೋಷವೊಂದೆಡೆಗೆ ಬಂದಂತಾಯ್ತೆ ನಿಪ್ಪನ್ಯಸೈ ।
ನ್ಯದ ಘೋಷಂ ಕಿವಿಗೆಯ್ದೆ ಮಾಗಧನ ಸೇನಾಘೋಷಮೆಂದಚ್ಯುತಂ ॥
ಕದನೋತ್ಸಾಹದೆ ಸೂಜಿಸೂೞಡರೆ ಮುಯ್ವಂ ನೋಡುತುಂ ಬಾಹುಕಾಂ ।
ಡದ ಕಂಡೂತಿಗಳಂ ತೆರಳ್ಚಲೆಡೆಯಾಯ್ತೆಂದೆಂದು ಮೆಯ್ವೆರ್ಚಿದಂ ॥೪೭೯

ಅವನೀಕಂಪನಮಬ್ಧಿಶೋಷಣಮುರಸ್ಸ್ಯೋನ್ಮೂಲನಂ ಭೂಮಿಭೃ ।
ನ್ನಿವಹಕ್ಷೇಪಣಮಿಂದ್ರಿನಸ್ಖಲನಮುಭ್ರಾಲೋಡನಂ ತಾರಕಾ ॥
ಚ್ಯವನಂ ಪದ್ಮಭವಾಂಡನಿರ್ದಳನಮಾಯ್ತೆಸ್ಮದ್ಬಲಾಟೋಪದಿಂ ।
ನವಗಿನ್ನುಂ ಪೊಱಲಳ್ಕದೆಂದು ಮಗಧೇಶಂ ಕ್ರೋಧಮಂ ತಾಳ್ದಿದಂ ॥೪೮೦

+ ದೊಡೆಮರುಳ್ಗಳಡದಿಂಬುತ್ತಾ. ‡ ಸಪ್ತಾಂಬುಧಿ.

ನರನಾಥಾಗ್ರಣಿ ನೀಂ ಮೊಗಕ್ಕೆ ಮುಳಿಸಂ ತರ್ಪನ್ನಮೇನುಂಟೆ ಸಂ ।
ಗರಮೆಮ್ಮೊಮ್ಮನೆ ದೇವ ನೀಂ ಬೆಸಸಿದರ್ಕಾವಾವೆ ಹೋ ಸಾಲ್ವೆವೆಂ ॥
ಮ ರಣ§ಕ್ಷೋಭವಿಜೃಂಭಿತಾಂಬಕರಿಳೇಶರ್ ಗರ್ಜಿಸಲ್ ಭೂರಿವಿ ।
ರರಸಾಂಭೋಧಿಯೆ ಗರ್ಜಿಪಂತಿರಲಗುರ್ವಾಯ್ತಾ ಸಭಾಮಂಡಲಂ ॥೪೬೧

ಪ್ರತಿಕಾರೋಪಾಯಮೇನಿಲ್ಲಿಗೆ ನುಡಿಯಿಮೆನಲ್ ಕರ್ಣದುರ್ಯೋಧನಾದಿ।
ಕ್ಷಿತಿಪರ್ ತಂತಮ್ಮುಪಾಯಂಗಳನುಸಿರ್ವುದುಮುತ್ತಾನಿತಾಸ್ಯಂ ಸಮುತ್ತಂ ॥
ಭಿತಬಾಹಾದಂಡನಾಂದೋಳಿತಕರಯುಗಲಂ ಮಾಣಿಮೆಂದಂದು ಮಾರ್ಕೊ।
ಡತಿಮಾತ್ರೋಪಾಯಮಂ ತಾನಱಿಪುವ ಬಗೆಯಿಂ ಚೈದ್ಯನಿಂತೆಂದನಾಗಳ್ ॥

ಇದನೊಂದಂ ಮಾಡಮೆಂದಿಂ ಪೆಱಪೇವು ಮತಂ ವಾಹನಾರೂಢರೆಂದೆ ।
ನ್ನದೆ ¶ಶಸ್ತ್ರಪ್ರಧರೆಂದೆನ್ನದೆ ಪರಿದು ಭವತ್ತ್ರಿಂಶದಕ್ಷೋಹಿಣೀಸೈ ॥
ನ್ಯದ ವೀರಕ್ರೋಡಿ ಕಾಂತಾರದ ತರುತತಿಯಂ ಕಿೞ್ತು ತಂದೊಟ್ಟಿಗೀಸೈ ।
ಲವ ಸುತ್ತಂ †ಶೈಲಮಂ ನಾಮುರಿಪಲಱೊಳಳ್ಕಾಡುಗುಂ ರಾಮಕೃಷ್ಣರ್॥

ಪೊಸತೊಂದಾಯಿತ್ತಿದೇಂ ಕಾರಿರುಳಿನೆ ಶಿಖಿಗಳ್ ಸಂಜೆಗೆಂಪಂ ಸ್ಫು
ಲಿಂಗಪ್ರಸರಂ ತಾರಾಳಿಯುಂ ಕಬ್ಬೊಗೆ ತಮದೊಪಮಂ ‡ಪ್ರೋಲ್ತುಗುರ್ವಾ
ದೊಡಂದೆ ॥ §§ದೆಸೆವೆಣ್ಗಳ್ ತೊಟ್ಟ ಕರ್ಣೋತ್ಪಲಮುಲರ್ದುವು ಸಪ್ತಾಬ್ಧಿ
ವೇಲಾ§ತರಂಗಂ । ಬಿಸುಸುಯ್ದತ್ತಭ್ರಗಂಗಾಬ್ಜಿನಿ ಮುಗಿವುದಿದೇನುಗ್ರ
ಮೋ ಶೈಲದಾಹಂ ॥೪೬೪

ಭರದಿನೆರ್ಬಲಂಗಳ ಪದಾತಿ ಪದಾತಿಯೊಳಶ್ವಮಶ್ವದೊಳ್ ।
ಕರಿ ಕರಿಯೊಳ್ ರಥಂ ರಥದೊಳಾರ್ದು ಪಳಂಚೆ ನಭಂ ದಿಶಾತಟಂ ॥
ಧರೆ ಕಡು§§ಗೆಂಕಮಾಯ್ತೊಗೆವ ಶೋಣಿತದಿಂದೆ ಜಗನ್ಮಹಾಮನಾಂ ।
ತರಮೆ ಪೊದಳ್ದ ರೌದ್ರರಸಸೇಚನದಿಂ ತಳಿರ್ತೆಂಬಿನಂ ॥೪೬೫

§ ಕ್ರೋಧ ¶ ಬಂದೆಯ್ದಿಪೇಗಂ ಗಿರಿಮನುರುಮುದಂ ಶಸ್ತ್ರಸ್ಪ್ರಧರನ್ನದೆಗೀಯನಿ ದಂತ್ರಿಂ. † ಮತ್ತದಂ. ‡ ಪೊತ್ತಗುರ್ವಾಗಲಂದೆ § ಲತಾಂಗಂಬಿಸುಸುಯ್ದತ್ತು. §§ ಕೆಂಪನಾಂತೊ.

ಮುಳಿಸಿಂದಿಸಲೊಡವಾೞುವ ।
ಶಿಳೀಮುಖಂಗಳೆ ಶಿಳೀಮುಖಂ ಕಂಜಾತಂ ॥
ಗಳೆ ಕಂಜಾತಮೆನಲ್ ಪೂ ।
ಗೊಳನಂ ಪೋಲ್ತುದು§ರಣಂ ಧನುರ್ಧರಧುರದೊಳ್ ॥

ಕರುಳೊಕ್ಕೆಕ್ಕರ್ವಿಯೊಳ್ ಕುಪ್ಪಳಿಸೆ ನೆಣದೞರ್ ಸೂಸೆ ಬಂಬಲ್ಮಿ
ದುಳ್ಪ । ಯ್ತರೆ ನೆತ್ತರ್ ಸುೞ್ಜುನುತ್ತುಂ ನಿಮಿರೆ ಕೆದಱ ಖಂಡಂ ಕೊರಲ್
ಸೆಕ್ಕೆವೊಗು ॥ ತ್ತಿರೆ ತೋಳ್ ಬೇೞಾಗೆ ಕಾಲ್ ಖಂಡಿಸೆ ¶ತೊಡೆ ಕಡಿವೋಗ
ಲ್ಕೆ ಜೇರೇೞ ಮೂರ್ಧಂ । ಕರವಾಳೊಳ್ ಬಾಳ್ ಪಳಂಚುತ್ತುರಿಯುನುಗು
ೞ ಕಾದಿತ್ತು ಖಡ್ಗಿಪ್ರತಾನಂ ॥೪೮೭ (ಜಗನ್ನಾಥವಿಜಯಂ)

ಮದಗಂಧಕ್ಕೆ ಪರಸ್ಪರಂ ಮಸಗಿ ಕೋಪಾಟೋಪದಿಂ ತಳ್ತು ತಾ ।
ಗಿದ ದಂತಂಗಳ ಕಿಚ್ಚು ಪತ್ತಿ ಗುಡಿಮುಂ ದಳ್ಳಿಂಬಿನಂ ಬೂದಿ ಪಾ ॥
ಱದ ಕೆಂಡಕ್ಕೆಣೆಯಾಗೆ ಮೇಲೆ ಕಡುಕೆಯ್ದಾರೋಹಕರ್ ಬೇಗೆ ಪ ।
ತ್ತಿದ ಬೆಟ್ಟಂ ಪೊಣರ್ವಂತೆ ಪೋರ್ದುವು ಗಜವ್ಯೂಹಂ ಗಜವ್ಯೂಹದೊಳ್ ॥
(ಅನಂತನಾಥಪುರಾಣಂ)

ಮೋದೆ ಶಿತಾಸಿಯಿಂ ಪಱಿಯೆ ಕೈ ಕೆಲವಂದು ಮಹಾವರಾಹನಂ ।
ತಾದುವು ಕೂಡೆ ಕುಕ್ಕುಱಿಸೆ ಪಿಂದೊಡೆಗಳ್ ಕೆಲವೇಕದಂತನಂ ॥
ತಾದುವು ಬೀೞೆವಂತಯುಗಲಂ ಕೆಲವಾಕರಿಣೀಕದಂಬದಂ ।
ತಾದುವಗುರ್ಬಿನಾನೆಗಳದೇನತಿಕೌತುಕಮಾಯ್ತೊ ಕಾಳೆಗಂ ॥೪೮೯
(ಚಂದ್ರಪ್ರಭಪುರಾಣಂ)

ತೆಱಪಂ ನಿಟ್ಟಿಸಿ ಪೊಕ್ಕು ಪಾಯ್ದಱುವ ಘೋಟಾಯ್ಲರ್ಗಳಂ ವಾಜಿ ಕು।
ಕ್ಕುಱಿಸುತ್ತಿರ್ಪಿನಮಟ್ಟೆಯಿಟ್ಟಳತೆವಾಯ್ತಿರ್ಪಿನಂ ಬಾಳ ಬ ॥
ಲ್ಮಿಱಿಯುಂ ನೆತ್ತರ ಪೂರಮುಂ ಕೆದಱ ಕಣ್ಗಿಂಬಾಯ್ತು ಬಾನೆಂಬ ಪೆ ।
ರ್ಗೆಱ ಬೆಂಡೆದ್ದು ಕಲಂಕೆ ಮೀನಿಡುಕುಮಂತತ್ಯುಗ್ರಸಂಗ್ರಾಮದೊಳ್ ॥೪೯೦

§ ನಭಂಧನುರ್ಧರನಭದೊಳ್. ¶ ನಡು.

ಕೆಂಬಲಗೆಯು ಪೊಳಪಿಂ ಸಂ ।
ಧ್ಯಾಂಬುದವಂ ಪಡೆವು ಜಡಿದು ಕಡಿತಲೆದೂಗು ॥
ತ್ತಂ ಬಿಡದೆ ಸಿಡಿಲ ಬಳಗವಿ ।
ದೆಂಬಿನೆಗಂ ತಾಗಿದತ್ತು ಭಾರ್ಗವಸೈನ್ಯಂ ॥೪೯೧

(ಅನಂತನಾಥಪುರಾಣಂ)

ತುಱಿಲಾಳ್ ವಾಜಿಗಜಾಕ್ಷಯುಗ್ಮಗತಶೂಲಾಗ್ರಂಗಳೊಳ್ ನಟ್ಟು ಕೋ ।
ದೆಱಲುತ್ತಿರ್ಪಿನವಂಬು ತೀರ್ದು ರಥಿಕರ್ಗೇಣ್ಗೆಣ್ಗಳೊಳ್ ಕುತ್ತಿ ಕೈ ॥
ದೊಱಸುತ್ತಿರ್ಪಿನವೊರ್ವರ್ದಲ್ ಜವನ ಜಕ್ಕಂದೋಳದೊಡ್ಡಿದ್ದು ವು ।
ಣ್ಮಿಱಿಯುಪ್ಪಂತಿದಿರೇಱಿ ತಳ್ತುವು ರಥಾನೀಕಂ ರಥಾನೀಕದೊಳ್ ॥೪೯೨

(..............)?

ಪೊಂಗಾಲಿ ಮಿಱುಗೆ ಪೞಯಿಗೆ ।
ಬಾಂಗೆ ಪಡೆಂ ಮಗುಱಿ ಸೂತರೆಸಗುತ್ತಿರೆ ವಾ ॥
ಹಂಗಳತಿಜವದೆ ಪರಿಯೆ ರ ।
ಥಂಗಳ್ ಪರಿದುವು ಬಲಾಬ್ಧಿನಕ್ರಾಕೃತಿಯೊಳ್ ॥೪೯೩

ಭರದಿಂ ಗೋತ್ರಾದ್ರಿಗಳ್ ‡ಕೀಱಲೆಗಳ ತೆಱದಿಂ ಪಾಱೆ $ದಿಕ್ಚಕ್ರ ವುಂ ಕೋ । ವರ ಚಕ್ರಾಕಾರದಿಂ ತಿಱ್ಱನೆ §ತಿರುಗೆ ಸಮುದ್ರಂಗಳಘ್ರಾಂಬುವ್ರೋಲ್ ತು ॥ ಳ್ಕೆ ರವಿ ಶ್ವೇತಾಂಶುಬಿಂಬಂ ಧರಣಿಗೆ ಕಳವಣ್ ಗಾಳಿಯಿಂ ಬೀೞ್ವವೊಲ್ ಬೀ । ೞ್ತರೆ ಮೂಱುಂ ಲೋಕವಂ ಪರ್ವಿದುದತಿ†ಭಯದಂ ಶರ್ವಮೌರ್ವೀನಿನಾದಂ ॥೪೯೪

ಅಮರಾರಾತಿಬಲಕ್ಕೆ ನೈಕಸುರಚಾಪಂ ತಾನಿದೆಂಬಂತು ವಿ ।
ಕ್ರಮದಿಂದೇಱಿಸಿದಂ ಮುರಾರಿ ಜನಿತಾನಿಸ್ತ್ರೀಮನಸ್ತಾಪಮಂ ॥
ದಮಿತದ್ರೋಹಬಲಾವಲೇಪಮನುದಗ್ರಾಟೋಪಮಂ ಚಂಡರೂ ।
ಪಮನಸ್ತಾಸುರಕೋಪಮಂ ಸಜಯವೃಕ್ಷಾರೋ¶ಪಮಂ ಚಾಪಮಂ ॥

‡ ತೂಱೆಕೆಗಳ. $ ಭೂಮಂಡಲಂ. § ತಿರಿಯೆ. † ಶಯದಿಂ ¶ ವಾಪಮಂ.

ಮಗಧನೃಪಾದಿಭೂಭುಜರ್ಗೆ* ಪಲ್ಮೊರೆವಂತಿರೆ ಭೂರಿಭಾಂಕೃತಂ ।
ನೆಗೞೆ ಪೊದಳ್ದು ಬೆಳ್ಮಸೆವಿಸಿಲ್ ರಣದೇವತೆಯಟ್ಟಹಾಸವಂ ।
ತೊಡಗೆಯು ವಿರೋಧಿಸೇನೆಗಿದು ಸೂಸುವ ಜೀವನಮೌಲ್ಯನಿಷ್ಕರಾ ॥
ಶಿಗಳೆನೆ ವಿಸ್ಫುಲಿಂಗ§ಮಲಗಿಂ ಕೆದಱುತ್ತಿರೆ ಪಾಯ್ದುವಂಬುಗಳ್ ॥೪೯೬

ತಕ್ಕೈಸಿ ಸುರಿವ ಬಲದಿಂ ।
ದುರ್ಕಂಬುಗಳೆಱಗಿ ರೋಮರೋಮಕ್ಕೆ ನೆಳಲ್ ॥
ನೆಕ್ಕು ಚಳಲ್ ಚಕ್ಕು ದೊಗ ।
ಲ್ದೊಕ್ಕನೆ ನಾಂಟಿದುವರಾತಿಭಟರವಯವಮಂ ॥೪೯೭

ಅಂಬಂಬಂ ಬಿಡೆ ಕಾಱುತಿರ್ಪ ತೆಱನಾಯ್ತಂಬಂಬನಿಂಬಂತುಟಾ ।
ಯ್ತಂಬಂಬಂ ¶ಸುರಿವಂತುಟಾಯ್ತು ಒಗೆವಂತಲ್ತು ಮೋಣೀತನೆ ॥
ಚ್ಚಂಬೊಂದೊಂದೆ ಸಹಸ್ರರೂಪಮನೆ ಕೈಕೊಂಡ‡ಪ್ಪುವೋಱಂದದಿಂ ।
ದೆಂಬನ್ನಂ ಲಘುಚಿತ್ರವೇದಿ ಕಱೆದಂ ಕೃಷ್ಣಂ ಶರಾಸಾರಮಂ ॥೪೯೮

ಪುದಿಯೆ ಘನಾಧ್ವಮಂ ಸರಳಪಂಜರದಿಂ ಪರಿಗಾಳೆಯೆತ್ತವೋ ।
ದುದು ದೆಸೆಯೆತ್ತವೋದುದು †ದಿವಾಕರಮಂಡಲನಮೆತ್ತವೋ ॥
ದುದು ನಭಮೆತ್ತವೋದುದೆನಿಸಲ್ ನಡೆಗೆಟ್ಟುದು ಗಾಳಿ ರೂಪುಗೆ ।
ಟ್ಟುದು ದೆಸೆ ತೋರ್ಕೆಗೆಟ್ಟುದಿನಮಂಡಲಮಾಕೃತಿಗೆಟ್ಟುದಾಗಸಂ ॥೪೯೯

ತೆಗೆನೆಱೆವಬ್ಜನಾಭನಿಸೆತೋಮರವುರ್ಚಿಸಿಡಿಲ್ದು ವೈರಿದಂ ।
ತಿಗಳ ಶರೀರದೊಳ್ ಸುೞಿದು ಕೆತ್ತುವ ಪುಣ್ಗಳ ಬಾಯ್ಗಳಿಂದಮೆ ॥
ಚ್ಚೊಗೆವರುಣಾಂಬುಧಾರೆಗಳಗುರ್ವಿಸುತಿರ್ದುವು ದಿಟ್ಟಗೊಡ್ಡಿದಾ ।
ವುಗೆಯು ಘಟಂಗಳಾನನದಿನುಣ್ಮುವ ಕೇಸುರಿಯೊಂದು ಮಾೞ್ಕೆಯಿಂ ॥೫೦೦

---

§ ದಳವಂಕಟ್ಟೆಯು. ¶ ಕರೆವಂದವು. ‡ ಪಿರ್ದು.
† ಇನಮಂಡಲಕಾಂತಿವಿಕಾಸ; ಇನದೀಧಿತಿಜಾಲವಿಕಾಸ.

ಪೆಣಸೆ ಬಣಂಬೆ ಕೋೞ್ಮಿದುಳ ಕೋೞ್ಕಿಸಱ್ಪಿನ ಪರ್ವತಂ ಕುರು |
ಳ್ಪಣಿಲ ಪೊವಳ್ಕೆ ರುಂಡವಡಕಿಲ್ ನರದುರ್ಬು ಕಪಾಲದೋಳ್ ಬ ||
ಲ್ಪೆಣದೆಡೆ ಖಂಡದಿಂಡೆ ಬಿಸುನೆತ್ತರ ಪೆರ್ಪೊನಲುರ್ವಿಸಲ್ಕೆ ಮಾ |
ರ್ಗಣಗಣಘಾತದಿಂ ತವಿಸಿದಂ ದನುಜಾರಿ ವಿರೋಧಿಸೈನ್ಯಮಂ ||೫೦೧

ಗಗನಂ ಬಾಣಾತ್ಮಕಂ ಮಾರ್ಪಡೆ ಪೆಣಮಯಮಾದತ್ತು ದೆಂತಿತನಂಬಂ |
ತೆಗೆವಂಬಂ ಪೂಡುವಂಬಂಬಿಡುವದಱಿಯದಾಯ್ತಿಲ್ಲ ಕರ್ಣಾಗ್ರದೊಳ್ಪೂ ||
ರ್ದುಗೆವೆತ್ತಾಮುಷ್ಟಿಯುಂ ಮಂಡಳಿಸಿದ ಧನುವುಂ ನಿಟ್ಟಿಪಾಲೋಕಮುಂ ನೆ|
ಟ್ಟಗೆ ತೋಱುತ್ತಿರ್ದುವೆಂಬಂತಗಧರಸಿಸುತಿರ್ದಂ ಸುದುರ್ಲಕ್ಷ್ಯವೇಗಂ ||

ಶರವರ್ಷಮನ¶ತ್ಯುದ್ಧುರ |
ಧುರಧರೆಯೊಳ್ ಕೃಷ್ಣಕೃಷ್ಣಮೇಘಂ ಕಱಿಯಲ್ ||
ಪರಬಲಜೀವನಜೀವನ |
ಮರೆಯಾಗುತ್ತಿರ್ದುದಂತದೇನಚ್ಚರಿಯೋ ||೫೦೩

ಲಘುಸ§ವೇದಿತ್ವದಿನರ್ಧಚಂದ್ರಶರದಿಂದೆಚ್ಚಾಡಿ ಕೃಷ್ಣಂ ಮದೇ |
ಭಘಟಾಕೋಟಿಗಳತ್ತಿ ಬರ್ದ ಖರದಂಡಂಗಳ್ ವಿಖಂಡಂಗಳಾ ||
ಗೆ ಘನಧ್ವಾಂತಮನೆಯ್ದೆ ಪಾಱಿ ಪುದಿದಿರ್ದಾಕಾಶವಾರಾಶಿ ಘೋ |
ರಘನೋರ್ಮಿಪ್ರಕರಂಬೊಲೇನಿನಿಸುವೇಗಂ ಕಣ್ಗೆ ಗುರ್ವಾದುದೋ ||೫೦೪

ತಂಡದೆ ಪೊಯ್ದು ಕೋಟಿಪರಿಸಂಖ್ಯೆಯ ಕೈಟಭಸೂದನಾಸ್ತ್ರದಿಂ |
ಖಂಡಿಸಿ ಪಾಱುವನ್ಯಬಳಯೋಧೃಶಿರಶ್ಶತಕೋಟಿಗಳ್ ಮನಂ ||
ಗೊಂಡುವದೊಂದು ಬೇಗಮಸುರಾರಿಜಯೋತ್ಸವದೊಳ್ಸುರರ್ ನಭೋ |
ಮಂಡಲದಲ್ಲಿ ಕಟ್ಟಿದ ಫಲಾವಳಿಗಳ್ ದಿಟಮಿಂತಿದೆಂಬಿನಂ ||೫೦೫

ಕೆವಱಿದುದು ಶಿಳೀಮುಖಮಾ |
‡ತದಿನಪರಪರಾಗರಜಮುಮಾಪದ್ಮವ್ಯೂ ||

¶ ತ್ಯದ್ಭುತ. § ವೇಗಿ. ‡ ತದಿಂದೆಸೇನಾಪರಾಗರಜ.

ಹದಿನೆನೆ ಕೃಷ್ಣಶರಾಪಾ ।
ತದಿನೊಗೆವುದು ದೈತ್ಯಬಲದೊಳರುಣಜಲೌಘಂ ॥೫೦೭

ಉಗಿಬಗಿಮಾಡಿ ದಂತಿಘಟೆಯಂ ಹಲಪಾಣಿ ಹಲಪ್ರಹಾರದಿಂ ।
ನೆಗೆದ ತದೀಯಮಸ್ತಕದ ಮೌಕ್ತಿಕರಾಜಿಯನಿತ್ತನಾಜಿಯೊಳ್ ॥
ಗಗನತಳಕ್ಕೆ ತಾರಗೆಗಳಂ ಜಲರಾಶಿಗೆ ರತ್ನರಾಶಿಯಂ ।
ದಿಗಿಭಗಣಕ್ಕೆ ಶೀಕರಮನುರ್ವಿಗೆ ಪುಷ್ಪಚಯೋಪಹಾರಮಂ ॥೫೦೭

—ಮಲ್ಲಯುದ್ಧಂ—

ಇಳೆಯುಂ ಪಾತಾಳಮುಳಕ್ಕಿಱಿವುದ ಕಡಲಂ ಪೀರ್ವ ಗೋತ್ರಾದ್ರಿಯಂ ಕೀ। ಳ್ವಳವಿಂ ದಂಷ್ಟ್ರಾಕರಾಳಭ್ರುಕುಟಿಕುಟಿಳರುಜ್ಜೃಂಭಿತಾತಾಮ್ರನೇತ್ರರ್ ॥ ಜಳದೌಘಶ್ಯಾಮದೇಹರ್ ಸಮುಚಿತಯತಿತೂರ್ಯಸ್ವನರ್ ಬಂದು ರಂಗ। ಸ್ಥಳದೊಳ್ ನಿಂದರ್ ಭುಜಾಸ್ಫಾಲನರುತಿ ಮಿಗೆ ಚಾಣೂರಮುಷ್ಟ್ಯಾದಿಮಲ್ಲರ್ ॥೫೦೮

ಪ್ರತಿಮಲ್ಲರ್ ಗಿರಿಕಲ್ಪನೆಂದಿತರರೆಲ್ಲರ್ ಬಾಲನೆಂದಂಗನಾ ।
ತತಿ ಪುಷ್ಪಾಯುಧನೆಂದು ಗೋಪನಿವಹಂ ಸಾಮಾನ್ಯನೆಂದಾಕುಲಾ ॥
ಕೃತಿ ಕಂಸಂ ಲಯಕಾಲನೆಂದು ದಿವಿಜರ್ ವಿಶ್ವಾತ್ಮನೆಂದೀಕ್ಷಿಸಲ್ ।
ದಿತಿಜಾರಾತಿ ವಿಚಿತ್ರಮೂರ್ತಿ ಪುಗುತಂದಂ ಮಲ್ಲರಂಗಾಗ್ರಮಂ ॥೫೦೯

(ಜಗನ್ನಾಥವಿಜಯಂ)

ರಸೆಯಂ ನುಂಗೆಂಬುದೇನಾಗಸಮನಡಸಿ ಕಟ್ಟೆಂಬುದೇನರ್ಕನಂ ನೀಂ ॥
ಪೊಸೆದೀಡಾಡೆಂಬುದೇ ನೀದಿಗಿಭದೊಡನೆ ಪೋರೆಂಬುದೇ ನಕ್ಕಟಯ್ಯೋ ॥
ಪಶುವಂ ಕಾವಂಬ†ಪಾಲಿಲ್ಲಿಲ್ಲದ ಪಸುಳೆಗಳಂ ಕೊಂದುಬಾಯೆಂದುಪೇಳ್ವೋ ।
ಬೆಸನಂ ಚಾಣೂರಮಲ್ಲಂಗಿದೆ ಬೆಸಸಲದೆಂತಪ್ಪುದೈ ಕಂಸರಾಜಾ ॥೫೧೦

(ಅರ್ಧನೇಮಿಪುರಾಣಂ)

ಕಡುಮುಳಿಸೇಱಿ ಮಲ್ಲವೆಸರಿಂ ಗಜವಾಂತೊಡವುರ್ಚಿದಾಯಿಯೊಳ್ ।
ನಡೆಪದೊಡೇಕೆ ಮಲ್ಲತನಮೊಲ್ಲದೆ ತಾನಕದೊಳ್ಪ್ಪರಳ್ದ್ಪುಡಂ ॥

---

†. ಪಾಲ್ಬಲ್ಗಳ ಪಸುಳೆಯ ನಿಕ್ಕೆಂದು ಬಾಳರ್ಗೆ.

ಪಿಡಿದುದು ಕರ್ತರಂ ಕರವೊಡಂ ಸಿರಿವತ್ತಣಿಹತ್ತಡೊಕ್ಕರಂ ।
ಚಡಿಕೆ ತುಳಾಡೆ ಪಟ್ಟಮುಗುಡಂ...ದಣುವಿದ್ವಿಪಟ್ಟಸಂ (?) ॥೫೧೧

(ಅನಂತನಾಥಪುರಾಣಂ)

ಉರಗರ್ ಜೀರೆಲ್ ಪಾತಾಳದೊಳಖಿಳದಿಶಾಚಕ್ರಮುಂ ಗೆಲ್ಲವಾಱು ।
ತ್ತಿರೆ §ಪೊಯ್ದತ್ತಬ್ಧಿ§ಯಂ ಬಾಡಬನವೊಗೆಯೆ ಪಳಂಚಿತ್ತು ನಕ್ಷತ್ರಮಾ
ರ್ಗಂ ॥ ¶ತರವಂ ಬೆಂಡೇೞ್ವಿನಂ ಪೋಗೊದೆದುದು ದಿನಮಂ ಸ್ಫುರತ್ಸ್ಫೋ
ತ್ಕಾರಶಂಕಾ। ಭರಲೋಕಂ ರಾಮಕೃಷ್ಣಪ್ರಬಲತರಭುಜಾಸ್ಫಾಲನಾಭೀಳ
ನಾದಂ ॥೫೧೨

ಕ್ಷಿತಿ ಕಂಪಂಗೊಳೆ ಕೃಷ್ಣಪಂಚಜನಯುದ್ಧಂ ನಾಡೆಯುಂ ಬೇಗಮು।
ದ್ಭುತಮಾವತ್ತಿತರೇತರಕ್ಷುಭಿತನೇತ್ರಾಲೋಕಮನ್ಯೋನ್ಯಹ॥
ಸ್ತತಳಾಘಾತಪರಸ್ಪರಪ್ರಮಥನಂ ಕಣ್ಗುರ್ವಿಸಲ್ ಪುಂಗವಾ ।
ಯಿತಸಿಂಹಾಯಿತಕುಂಜರಾಯಿತನಿಯುದ್ಧಂ ತಾನಿದೆಂಬನ್ನೆಗಂ ॥೫೧೩

(ಜಗನ್ನಾಥವಿಜಯಂ)

‡ಎಸೆವ ಮಹುದ್ಗಳಂ ಛದಕಿ ಕಕ್ಷವಡಂ ಮುಹುಳಂತುಳಾಡೆ ಸಂ ।
ದಸುವಿದಿವಟ್ಟಸಂ ಗುಣಪಳಂ ಬಗೆ ಪಾಸಗೆ ವಹ್ನಿಮುಟ್ಟ ಬೆ ॥
ಟ್ಟು ಸೆದಣುವಟ್ಟೆ ಬಾಹು ಧಣೆ ಖಂಮರಿ ಕತ್ತರಿ ಖೋಡವಂಕುಶಂ (?) ।
ಶಸಿಕುಮೆನಿಪ್ಪ ಜಟ್ಟಗಳ ನಚ್ಚಿನ ಬಿನ್ನಣವೊಪ್ಪೆ ಕಾದಿದರ್ ॥೫೧೪

(ಚಂದ್ರಪ್ರಭಪುರಾಣಂ)

ಪೊಣರ್ದ*ಕ್ಕೆಕ್ಕೆಯಿನಿಕ್ಕುವಿಕ್ಕೆ ಜವದಿಂ†ದಾರ್ದೇೞುತುಂ ಘೂರ್ಣವಾಃ ।
ಕಣಮಂ ರಂಗದ ಧೂಳಯಿಂ ತೊಡೆದು ಮತ್ತಂ ಪೋರ್ವಪೋರ್ದಾರ್ದುರ್ಬಿ॥
ನ್ನಣಮಂ ಕೊಳ್ವ ಕೊಳಲ್ಕೆ ತಪ್ಪಿದುದು ಮಾಣೆಂಬೇೞ್ಗೆಯಿಂ ತಂದುದೀ ।
ಕ್ಷಣಕೌತೂಹಳಮಂ ಸಭಾವಳಿಗೆ ಯುದ್ಧಂ ಕೃಷ್ಣಚಾಣೂರರಾ ॥೫೧೫

§ ಪಾಯ್ದು. § ಘಂಭಾರವ. ¶ ತರದಿಂಬೆಂಡೇೞ್ವಿನಂಪೋಗೊಡೆದುದು.
‡ ಎಸೆವುವುಹಗ್ಗಳಂಚಡಕಕ್ಷನಡಂ ಮುಹುಡಂತುಳಾಡೆಸಂ । ದಸುವಿಡಿವಟ್ಟಸಂ ಗುಣವನಂ ಖಗೆಪಾಸಗೆವಂಗಿವುಟ್ಟೆಬೆ ॥ ಟ್ಟುಸಿರಣವಟ್ಟಬಾಹುದಣೆ ಕುಂಮರಿ ಕತ್ತರಿ. † ದೇೞ್ವೇೞ್ವ ಘೂರ್ಣಾಂಬು.

ಕಡುಪಿಂ ಪಟ್ಟಿಸವೆಂಬ ಬಿನ್ನಣದೆ ಕೃಷ್ಣಂ ಗೆಲ್ದು ಪಿಂಗಾಲ್ಗಳಂ ।
ಪಿಡಿದಾರ್ದೆತ್ತಿ ನಿಶಾಟನಂ ತಿರುಪೆ ತದ್ಘ್ರಾಣ್ಯನ್ನಿಶಾಟಾಸ್ಯಜಂ ॥
ಪ್ರೊಡರ್ವ*ಸ್ರಾಂಬು §ಕುಲಾಲಚಕ್ರಮೆನೆ ವೃತ್ತಾಕಾರದಿಂದುಣ್ಮುತುಂ ।
ಪಡೆವತ್ತಾಗಸವೆಣ್ಗೆ ಪೊನ್ನ ಕಟಿಸೂತ್ರಶ್ರೀಯನಾವೇಗದೊಳ್ ॥೫೧೬

ಜವನೊಡವುಟ್ಟು ಮಾರಿಯೊಡನಾಡಿ ಲಯಾಗ್ನಿಯ ನಂಟು ಕಾಳಮಿ ।
ಟ್ಟುವ ಗುರು ಕಾಳಕೂಟದೆಣೆ ಸಿಂಗದ ಸಂಗತಿ‡ತದ್ಯುಗಾಂತಭೈ ॥
ರವನ ಪರಿಗ್ರಹಂ ಸಿಡಿಲ ಸಂಗಡ§ಮುಗ್ರನ ಬೆಂಕೆಗಣ್ಣ ಬಾಂ ।
ಧವನೆನೆ ಶೌರಿ ಮರ್ದಿಸಿದನಪ್ರತಿಮಲ್ಲರೆನಿಪ್ಪ ಮಲ್ಲರಂ ॥೫೧೭

(ಜಗನ್ನಾಥವಿಜಯಂ)

ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ ಮತ್ಸಹೋ
ದರರಂ †ತಿಂದ ಪರಾಭವಕ್ಕೆರಡುಗೊಳ್ ದುಶ್ಶಾಸನೋರಸ್ಸ್ಥಲ ॥
¶ಕ್ಷರದಸ್ರಾಂಬುವನಾರ್ದು ಪೀರ್ದ ಮುಳಿಸಿಂಗಂಮೂಱುಗೊಳ್ಳೆಂದು∥ಮು।
ತ್ಸರದಿಂ ದೇವದೆ ಪೊಯ್ದನೆತ್ತಿ ಗದೆಯಿಂ ದುರ್ಯೋಧನಂ ಭೀಮನಂ॥೫೧೮

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನ††ಕ್ಕಿದಾನಾಡ ಜೂದಿಂ ।
ಗಿದು ಪಾಂಚಾಳೀಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ॥
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದು*ರಮಂ ಕೆನ್ನೆಯಂ ನೆತ್ತಿಯಂ
ಕೋ । ಪದಿನೈದುಂ ದುರ್ನಯಕ್ಕೈದೆಡೆಯನುರುಗದಾದಂಡದಿಂ ಭೀಮ
ಸೇನಂ ॥೫೧೯ (ಗದಾಯುದ್ಧಂ)

ಬಲಮುಱಿಯೆ ವಜ್ರವೀರಂ ।
ತಲಮಂ ದೋರ್ವಲಮನುಱಿದು ಜೀವನದೊಳ್ ತ ॥
ನ್ನೊಲವಿರೆ ರಂಜಿಸ ಸಂಜೆಯ ।
ಬಲದಿಂದಂ ಪಾರ್ವನಂತಿರೊರ್ವನೆ ಸರಿದಂ ॥೫೨೦

(ಪಾರ್ಶ್ವನಾಥಪುರಾಣಂ)

§ ವಿನಾದ. ‡ ಯುಂ. § ವಿಾಕನ. † ತಿಂದುದರ್ಕೆ. ¶ ಸ್ಫುರಿತಾಸೃಗ್ಜಲ ಪಾನಮಂ ಕುಡಿದುದರ್ಕಂ. ∥ ಚೆಚ್ಚರದಿಂ ಜಚ್ಚದೆ. †† ಕ್ಕೆನೀನಾಳ್ದ.

ಕುಡು ಸಾಂದೀಪನ ಪುತ್ರನಂ ಯಮ ಕುಡಲ್ಕೇಂ ತೀರದೇ ಯುದ್ಧಮಂ ।
ಕುಡು $ನೀನೀಗಳದರ್ಕಮಳ್ಕಿ ಭಯದಿಂ ಪಾತಾಳಮಂ ಪೊಕ್ಕೊಡಂ ॥
ಕಡಲಂ ಪೊಕ್ಕೊಡಮಂತರಿಕ್ಷತಲಮಂ ನೀಂ ಪೊಕ್ಕೊಡಂ ನಿನ್ನ ಪೊ ।
ಕ್ಕೆಡೆಯಂ ಪೊಕ್ಕಿನಬಿಂಬಮಂ ‡ಪುಗಿಸಲಾರ್ಪೆಂ ನಿನ್ನನಾರ್ಕಾರ್ವೊಡಂ ॥

ಹರಿಯುಂ ಬ್ರಹ್ಮನುಮೆಯ್ದರಾರಥದ ಮೇಲಿರ್ದಂದು ತನ್ನೊಳ್ ದಿಟ ।
ಕ್ಕೆ ರಣಕ್ರೀಡೆ§ಗಮಿರ್ಪುದಂ ಮಱೆವ ¶ಕಟ್ಟಣ್ಮಿಂ ಸೃಗಾಲಂ ರಥಾಂ ।
ತರದಿಂ ತೊಟ್ಟಗೆ ಪಾಯ್ದು ಕಟ್ಟದಲಗಂ ಕಿತ್ತೆಯ್ದಿ ಕೃಷ್ಣಾಸಿಯಿಂ ।
ಧರೆಯೊಳ್ ಬಿದ್ದನದಂತೆ ಬುದ್ಧಿ ಕಿಡುಗುಂ ಕೇಡೆಯ್ದುವಂದಾರೊಳಂ ॥೫-೨

ಮಕುಟಮಣಿ ಸೊ*ಡರ್ಗಳೆನೆ ಮ ।
ಸ್ತಕಸಹಿತಂ ನೆಗೆದು ತಿರುಗುವಾಪರಿಯಣಮೇಂ ॥
ಪ್ರಕಟಿಸಿದುದೊ ಕೃಷ್ಣನ ವಿಜ ।
ಯಕಾಂತೆಗಾಕಾಶಲಕ್ಷ್ಮಿ ನಿವಳಿಪ ತೆಱದಿಂ ॥೫-೩

ಮುಱಿದಪ್ಪೆಕ್ಕಿದ ಗಡ್ಡಮೀಸೆ ಮುಡಿಕಟ್ಟಂ ತಳ್ತ ಕೆಂಬಟ್ಟೆ ಕ ।
ತ್ತರಿಯಂ ತೊಱುವ ಚುಂಚುಮೀಸೆ ಸುಲಿಸಲ್ ದಷ್ಟಾಧರಂ ಭ್ರೂಕುಟಿ ॥
ಸ್ಫುರಿತಂ ಕೈಮಿಗೆ ಭೂತಳಕ್ಕೆ ಪರಿವೇಷಂಗೊಂಡು ಬೀಳ್ತಂದ ಭಾ ।
ಸ್ಕರನಂತಿರ್ದುದು ಸಿಂಹಚೂಡನ ಶಿರಂ ಪೊಂಬಟ್ಟನೊಳ್ದಟ್ಟನೊಳ್ ॥೫-೪
(ಜಗನ್ನಾಥವಿಜಯಂ)

ಸುಲಿಸಲ್ ತಪ್ಪಿಲ ತಾರಕಾವಯವಮಂ ಪೀನಂ ಲಲಾಟಾಗ್ರದೊಳ್ ।
ನೆಲೆಗೊಂಡೊಪ್ಪುವ ವೀರಪಟ್ಟಮುಮಯಂಗೆಯ್ವಂದಮಂ ತೋರ್ಪ ತೊಂ ।
ಗಲೆ ಜಂಬೂವಿಟಪಪ್ರಹಾರರುಚಿಯಂ ವಕ್ತ್ರಾರುಣಾಂ ಸಂಜೆಯಂ ।
ಗೆಲೆ ಪೊರ್ಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ ॥೫-೫
(ಶೂದ್ರಕಂ)

ರವಿಯುಂ ಮುಂ ನುಂಗಿ ಮತ್ತಂತುಗುಳ್*ವು ಸಹಜಂ ರಾಹುವಿಂಗಂ
ತುಟಲ್ತೀ । ರವಿಬಿಂಬಂ ರಾಹುಸಂದೋಹಮು †ನುಗುಳ್ವುದಿದಾಶ್ಚರ್ಯಮೆಂ

$ ಮೇಣೀ. ‡ ಪುಗಿಪೆನಿಂದಾಂ. § ಯಾನಿಪ್ಪ ¶ ಕಟ್ಟಾಳ್ಮಿಂ. † ನುಗುಳ್ದಪುದಾ

ಬನ್ನಗಂ ಚ ॥ ಕ್ರವಗುರ್ವಿಂ ಬಾಣಬಾಹಾವನನಮನನಿತುವಮಂ ಛೇದಿಸಲ್
ಬಿರ್ದ ತದ್ಬಾ । ಹುವಿತಾನಂ ಯುದ್ಧರಂಗಾರ್ಣವದ ತೆರೆಗಳೆಂಬಂತೆ ತಳ್ತು
ದುರ್ವೆತ್ತಂ ॥೨೬ (ಜಗನ್ನಾಥವಿಜಯಂ)

§ —ರಣರಂಗಂ—

ನೆಗೞ್ದ*ಭಾರತನುಲ್ಲಶಂತನುಜಬಾಣಾಘಾತದಿಂ ಭೀಮಭೀ ।
ಮಗದಾದಂಡವಿಘಾತದಿಂ ಕುರು‡ನೃಪಾನೀಕಂ ಪಡಲ್ವಟ್ಟು ಜೀ ॥
ರಗೆಯೊಕ್ಕಲ್ಗೆಣೆಯಾಗಿ ಬಿದ್ದ ಭಟರಿಂ ಬೀಳ್ವಶ್ವದಿಂ ಬೀಳ್ವ ದಂ ।
ತಿಗಳಿಂದಂ ಜವನುಂಡು ಕಾಱಿದವೊಲಾಯ್ತುತ್ತಂ ಕುರುಕ್ಷೇತ್ರದೊಳ್ ॥೨೭
(ಗದಾಯುದ್ಧಂ)

ಮಿದುಳೆಳಱಿಂದವೊಕ್ಕ ಕರುಳಿಂದವುಗುರ್ವಿಪ ಚಿಕ್ಕಿನಿಂದವೊ ।
ಟ್ಟವ ನೆಣದಿಂ ಪೊರಳ್ವ ಪೆಣದಿಂ ಬಿಡೆ ಬಳ್ಕುವ ಮಸ್ತಕೌಘದಿಂ ।
ಕೆದಱಿದ ಮಾಂಸದಿಂದೆ ಮಡುಗಟ್ಟಿದ ರಕ್ತದೆ ತೇಂಕುತಿರ್ಪ ಖಿಂ ।
ಡದೆ ಜವನುಂಡು ಕಾಱಿದವೊಲಿರ್ದುದು ಮಾರಣರಂಗ ನೋೞ್ಪಡಂ॥೨೮
(ಕವಿಕುಂಜರಲೀಲಾವತಿ)

ವಾಕ್ಯಂ ॥ ಸಂಗರಾರ್ಜುನಂ ಸಿದ್ಧನಂತಾಸಿದ್ಧಕ್ಷೇತ್ರಮಂ ಪುಗುತಂದನದೆಂತಪ್ಪುದೆಂದೊಡೆ–ಇಂದ್ರಜಾಲಿಗನಂತುರಿಯುಮುಗುಳ್ವ ಬಳ್ಳಗಳಿಂ, ವಾತಪೂರಣಂಗಳಿಂ ನೆಱಂದಂತೆ ದೆಸೆದೆಸೆಗೆ ಪೊಂಗುವ ಗೂಗೆಗಳಿಂ, ಬೆದೆಕಾಱಿರೆ*ರ್ದಯಂತೆ ಬೆಱಯುತಿರ್ಪ ಪೆಣಂಗಳಿಂ, ಜೆಗುೞಿಯಂತೆ ನೆತ್ತರನೆ ಪೀರ್ವ ಡಾಕಿನಿಯರಿಂ, ಭೈರವನಂತೆ ಭಾಂಕಾರಂಗುಡುತಿರ್ಪ ಸಾಧಕರಿಂ, ಗೋದಾಮೆಯಂತೆ ಬಗೆವ ಬಣ್ಣಮಪ್ಪ ರಣಜಟ್ಟಿಗರಿಂ, ನಾರಾಯಣನಂತೆ ಬಲಿಯಂ ಬೇಡುವ ಬ್ರಹ್ಮರಾಕ್ಷಸರಿಂ, ಬಲದೇವನಂತೆ ಪೆಣನಂ ಪೊತ್ತು ತೊೞಲ್ವ ಕ್ಷೇತ್ರಪಾಲರಿಂ, ಈಶ್ವರನಂತೆ ಪಾವಂ ತೊಟ್ಟಿರ್ದ ಬೇತಾಳರಿಂ, ಮೀನ್ಗಳಂತೆ ಗಾಳದೊಳ್ ತೊಡರ್ದಿರ್ದ ಪಾಪರಿಗರಿಂ, ಮಹಿಷಾಸುರನಂತೆ ಸೂಲ

§ ಗದಾಯುದ್ಧವರ್ಣನೆ, ಎಂದು ಪುಸ್ತಕಪಾಠ. ‡ ಬಲಂ.

ದೊಳ್ ನೊಂದು ನರಳ್ವ ಕಳ್ಳರಿಂ, ಬೊಂತಿಯಂತೆ ದಕ್ಕಿನೊಳಿರ್ದ ಪಂದ
ಲೆಗಳಿಂ, ಬಂದಿಕಾಱನಂತೆ ತೆಱಪುಗಾಣ್ದುರ್ದ ಪಿಡಿವ ಶಾಕಿನಿಯರಿಂ, ಮೃಗಯಾ
ಪತಿಯಂತೆ ಕೀಲಾಲಜಲದೊಳೋಲಾಡುವ ಲಲಾಮೆಯರಿಂ(?), ಸೋಂಬಸಂ
ಮೆಚ್ಚಿ ಬೇಱೂರ್ಗೆ ಪೋಪ ಸೂಳೆಯಂತುಯ್ಯಲಾಡುವ ರಣದೇವತೆಯರಿಂ
ಪತಿಭಯಂಕರಾಕಾರಮಪ್ಪುದದಱೊಳಗೆ ॥೫೯ (ಶೂದ್ರಕಂ)

ತೆರೆತೆರೆಗೊಂಡು ಬಾನ್ಗಡರ್ವ ಕರ್ವೊಗೆ ಕರ್ಗಿದ ನೀರ ಕೊರ್ವುವಂ ।
ತಿರೆ ವಿಚಳಚ್ಚಿತಾನಳಶಿಖಾವಳಿ ವಿದ್ರುಮವಲ್ಲಿ ಪರ್ವುವಂ ॥
ತಿರೆ ತಲೆಯೋಡಿನೊಳ್ ಪೊಳೆವ ಪಲ್ಗಳೆ ಸಿಪ್ಪಿನ ಮುತ್ತು ತೋಱುವಂ ।
ತಿರೆ ಪರೆದಾಪರೇತವನಮಂಬುಧಿಯಂತಿರೆ ಭೀಕರಂ ಕರಂ ॥೬೦

(ಅರ್ಧನೇಮಿಪುರಾಣಂ)

ದಳ್ಳುರಿಯುಗ್ಗಡಂ ಪೊಗೆಯ ಕತ್ತಲೆ ಬೂದಿಯ ತೋರ್ಕೆವೆಟ್ಟು ಪೆ ।
ಗ್ಗೊರ್ಗಳ್ಳಿಯ ಪೇರ್ಮಡಲ್ ಬಸಿವ ನೆತ್ತರ ಸುಟ್ಟುರೆ ಖಂಡದೊಳ್ಗೆಸರ್ ॥
ಕಳ್ಳರೊಡಲ್ಗಳೊಟ್ಟು ರಜನೀಚರಿಯರ್ಕಳ ಮಿಕ್ಕ ಪೆಕ್ಕಣಂ ।
ಬಳ್ಳುವ ಸಾಹಣಂ ತಲೆಯ ಪುಂಜಿಗೆ ಕುಂಪವು ತತ್ಪ್ರದೇಶದೊಳ್ ॥೬೧

(ಶೂದ್ರಕಂ)

ಪಂದಲೆಯೋಳಿದೋರಣದ ಸೀಯದರಂ ಪೊಸದೂವೆದೂಪತೂ ।
ಗುಂದಲೆ ಪೋಳ್ವೆಣಂ ಪೊಡರೆ ಬಳ್ಕುವ ಬೊಮ್ಮನ ಸೂಲಮಾಗಲಾ ॥
ಸಂದಣಿಗೊಂಡು ನೀಳ್ವ ಪೆಣನೊಂದಿರೆ ನಿಂದುರಿಯುಯ್ಯಲೇಱೆ ಕೈ ।
ರಂದಿಱಿಯಲ್ಕೆ ಮಾಡಿದೊಡೆ ಮುಂಚಿಗೆ ಮಿಂಚಿಪುದಾ ಶ್ಮಶಾನದೊಳ್ ॥೬೨

(ಅರ್ಧನೇಮಿಪುರಾಣಂ)

ಸುತ್ತಿಗೆಗಗ್ಗರಂ ಕರುಳ ಬಕ್ಕಳೆ ಮಿಂಟಿದ ಕಣ್ಗಳೈಸರಂ ।
ಸುತ್ತಿದ ಬಾಳದುಳ್ಕಿವಿಯ ಸೂಂಟಗೆ ಪಂದಲೆಯೊಂದು ಬಾಸಿಗಂ ॥
ನೆತ್ತರ ತಳ್ತಬಲ್ದಲೆಯ ಬಿಂದಿಗೆ ಪಾವುಗೆ ಪಂಚಮುಸ್ವನಂ ।
ಬೆತ್ತದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ ॥೬೩

ಆರ್ವರ್ ಪಿಶಾಚಿಯರ್ಕಳನಸುಂಗೊಳೆ ಬೇವ ಪೆಣಕ್ಕೆ ಕೋಪದಿಂ ।
ಪೋರ್ವರ್ ಮರುಳ್ಗಳಂ ಪಿಶಿತಭೋಜನದಲ್ಲಿಗೆ ನಿಲ್ಲದೆಕ್ಕೆಯಿಂ ॥
ಸಾರ್ವರ್ ನಿಶಾಚರೀಜನಮನಂತದನಿಕ್ಕುವುದಂ ನಿರಂತರಂ ।
ಪಾರ್ವರ್ ಪುರಾಣರಾಕ್ಷಸರನೀಕ್ಷಿಸಿದಂ ಪ್ರತಿರೂಪಶೂದ್ರಕಂ ॥೫೩೪

ಕಾಸೆಯನುಟ್ಟು ಜನ್ನವಿರನುಂ ಪೆಗಲೊಳ್ ತೆಗೆದಿಕ್ಕಿ ವೇದದ ।
ಭ್ಯಾಸಮನುಂಟುಮಾಡಿ ಪೊಲಸಂ ಪಸುತಿರ್ಪ ನಿಶಾಚರರ್ಕಳಂ ॥
ಗ್ರಾಸಮನುಣ್ಬುದೆಂದೊಡಣಮೋಳಿಯ ರಕ್ಕಸಪಾರ್ವರಿರ್ದೆಡೊಂ ।
ದಾಸೆಗೆ ವಿಸ್ಮಯೋದಿತವಶೀಕೃತನಾದನುದಾರಮನ್ಮಥಂ ॥೫೩೫

ಸೀಯೆ ತಲೆ ಬೇಯೆ ಮೆಯ್ ಮೋ ।
ಲ್ವಾಯೆ ಕರಂ ಪಸಿದ ಪುಲ್ಮರುಳ್ ಪಿಱಿತಿನಿಗಳ್ ॥
ಬೇಯುತ್ತುಮಿರ್ದ ಪೆಣನಂ ।
ನಾಯುಗಿನಂತುಗಿದು ತಿಂಬುವೋರೊಂದೆಡೆಯೊಳ್ ॥೫೩೬
(ಶೂದ್ರಕಂ)

ನಾಲಗೆ ಬಾಯಾ‡ಡಿಸುತುಂ ।
ಲಾಲನನುಗುಳುತ್ತೆ ಶುಷ್ಕತನು ಬೇತಾಳಂ ॥
ಸ್ಥೂಲಶಿರನಾರ್ದು ಕುಣಿದಂ ।
ಶೂಲದ ತಲೆ ಕುಣಿವ ತೆಱದೆ ಕುಣಪಾಲಯದೊಳ್ ॥೫೩೭

ನೆಗೆದುರಿಸಿಡಿಗೆಯ ತಲೆಯಂ ।
ಮೊಗವಿಡೆ ಮರುಳಲ್ಲಿ ಮೊಳಗೆ ಪೆಣವಱ ಬೇತಾ ॥
ಳಗಣಮುಗಿದಾಡೆ ರಕ್ಕಸ ।
ಮಗರಣಮಾಡಿದುದು ನೋಡೆ ಶೂಲದ ಪೆಣಗಳ್ ॥೫೩೮

ಊಡಿದೆನೋದಲಿಟ್ಟೆನುಡೆ ಕಲ್ಪುದುಮಣ್ಣನ ಕೂಸುದಂದೆ ನಾಂ ।
ಬೇಡೆನೆ ಮೀಱ ಕಳ್ಳನೊಡನಾಡಿಯೆ ಪೆತ್ತ ಬಸಿರ್ಗೆ ಸಂತಸಂ ॥

‡ ಡಿಸಿಕುಂ । ಕೀಲಾಲಮನುಗುತ್ತೆ.

ಮಾಡಿದೆಯಿಂದಿದೇಂ ಮಗನೆ $ಪಣ್ಣನೆ ನುಣ್ಮೊಗದಲ್ಲಿ ಮೀಸೆಗಳ್ ।
ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸಸೂಲಮದೆಂತು ಮೂಡಿತೋ ॥

ಪಣವುಂಡೆಂ ಬಂದಿಯೊಳ್ ಬಾಲಕನೆ §ಪಲಗೆಯಾಡಿದೆಂ ಸೋಗೆಯ್ದೆಂ ।
ಪಣಿವಂಬೊಯ್ದೆಂ ತೊಳಲ್ದೆಂ ¶ಪಿರಿಯಕಳವುಮಂ ಕಳ್ದೆನಿಂದಣ್ಮಿ ಸಾಯಲ್ ।
ಮಣಿದೆಂ ಪೊತ್ತತ್ತ ಶೂಲಂ ಬಲವ ಪೆಗಲೊಳಾಂಬೀರನಾದೆಂಮರುಳ್ಗಾ ।
ಯ್ದುಗ್ಗಣಿಸಾದೆಂ ಮೆಚ್ಚಿದಂತುಳ್ಳವರನೆ ಪಿಡಿದುಂಡಪ್ಪೆನೆಂ‡ದುಣ್ಮುತಿರ್ದೆಂ ॥೩೪೦
(ಅರ್ಧನೇಮಿಪುರಾಣಂ)

ಇಂತು ಕಾವ್ಯಸಾರದೊಳ್
ಯುದ್ಧವರ್ಣನಂ,

೨೨. † ಪುರಪ್ರವೇಶವರ್ಣನೆ.

ವಿಳಸತ್ಪುಷ್ಕರಶೀಕರಪ್ರಕರದಿಂ ಸೇಸಿಕ್ಕುತಿರ್ಪಂತೆ ಮಂ ।
ಜುಳಘಂಟಾರವದಿಂದಮೊಲ್ದು ಪರಸುತ್ತಿರ್ಪಂತೆ ದಾನಭ್ರಮ ॥
ತ್ಕಳಭೃಂಗೀರವದಿಂದೆ ಗಾವರಿಸುತಿರ್ಪಂತುದ್ಘಮಾಂಗಲ್ಯಮಂ ।
ತಳೆದೊಪ್ಪಿರ್ದುದನೇಱಿದಂ ದ್ವಿರದಮಂ ವ್ಯಾಲೇಭವಜ್ರಾಂಕುಶಂ ॥೩೪೧
(ಪುಷ್ಪದಂತಪುರಾಣಂ)

ಅತಿನಿಮ್ನಾಂಸಮುಖಂ ವಿಶಾಲಜಘನಂ ವಿಸ್ತೀರ್ಣವಕ್ಷಂ ಸುಸಂ ।
ಗತಪಾರ್ಶ್ವಂ ಮೃದುಕೇಸರಂ ನಿಬಿಡಜಂಘಾಕಾಂಡನುದ್ಬದ್ಧಕು ॥
ಕ್ಷಿ ತನುಸ್ನಿಗ್ಧತನೂರುಹಂ ಸರಳವಾಳಂ ಬಂಧುರಸ್ಕಂಧನು ।
ದ್ಧೃತಕರ್ಣಂ ತುರಗಂ ಮನಂಗೊಳಿಸಿದತ್ತುತ್ತಾನಹೇಷಾರವಂ ॥೩೪೨

ಸರಮಂ ಮೆಲ್ಲನೆ ತೋಱಿ ದಕ್ಷಿಣಕರಾಂಭೋಜಾತದಿಂ ಸ್ನಿಗ್ಧಕೇ ।
ಸರಮಂ ನೇರ್ಪಡೆ ನೀವಿ ಕಂಧರಕೆ ಕೈಯುಂ ನೀಡಿ ರತ್ನಾಂಶುಭಾ ॥

$ ಸುಣ್ಣನೆ. § ನಲಗಿ. ¶ ಪಿಂಯುವುಕಳವಂಕಳ್ದಸಿಂದ. ‡ ದೋವುತಿರ್ದೆಂ.
† ವಾಜಿಲಕ್ಷಣಂ—ಎಂದು ಪುಸ್ತಕಪಾಠ.

ಸುರವುಂ ಲಾಘವದಿಂದಪುಂಕವಣೆಯುಂ ಪಾದಾಗ್ರದಿಂ ಮೆಟ್ಟಿ ತ ।
ತ್ತುರಗಾಧೀಶನ ಬೆಂಗೆ ವಂದನನವದ್ಯಂ ರಾಜವಿದ್ಯಾಧರಂ ॥೫೪೩

ಇದಱ ಜವಕ್ಕೆ ಸೋಲ್ತು ಗರುಡಂ ಗಱಿಯಿಂ ಕಡುನೊಚ್ಚನಾದನೇ ।
ಱದನಿಸಱೊಳ್ ಕಡಂಗಿ ಪರಿದಾಱದೆ ಕಾಲ್ನಡೆಗೆಟ್ಟು ಗಾಳಿ ಮಾ ॥
ಳದ ಮಱವುಳ್ಳ ವೋರಿಯುನೆನಲ್ ಪೆಱದೇಂ ಪಡಿಮಾತೊ ಮಾಡದಿ ।
ರ್ದುದೆ ಜವದೇಳ್ಗೆಯಿಂ ಪೆಱವು ವಾಜಿಗೆ ಭಂಗವನಿತ್ತುರಂಗಮಂ ॥೫೪೪

ತುರಗಕ್ಕೆ ಜವದೊಳೆಣೆಯೆಂ ।
ಬರೊಳೇಂ ಸಂಗ್ರಾಮಯೋಗ್ಯಮಲ್ತು ವಿಮಾನಂ ॥
ಗರುಡಂ ವಿಜಾತಿ ಪವನಂ ।
ವಿರೂಪವೇಷಂ ಮನಂ ನಪುಂಸಕಮಲ್ತೇ ॥೫೪೫

ಮಾಣದೆ ನೋಡಿ ಕಣ್ಗೊಳಲಿ ಕೈಮಿಗೆ ಸೇಸೆಗೆ ಸುತ್ತಿ ವಾರುವಂ ।
ಸಾಣೆಯು ನೇಣವೊಲ್ ಪರಿಪೆ ವಾಹಳಿಯೊಳ್ ಪರಿವೇಷವಾದ ಪ ॥
ಲ್ಯಾಣದ ಪಂಚರತ್ನರುಚಿಯಿಂದಱವರ್ ಬೆಱಗಾಗೆ ಬಲ್ಮೆ ನಿ ।
ರ್ವಾಣಿಸಿತೆಂದು ಬಿಚ್ಚಳಿಸೆ ಪಂಚಮಧಾರೆಯೊಳೇಱದಂ ನೃಪಂ ॥೫೪೬
(ಮಲ್ಲಿನಾಥಪುರಾಣಂ)

ಖುರಟಂಕಾಘಾತದಿಂ ಭೂತಳಮನಿತನಿತುಂ ತೂಂತುಮಾದಲ್ಲಿ ಭೋಗೀ ।
ಶ್ವರಚೂಡಾರತ್ನದೀರ್ಘದ್ಯುತಿ ನೆಗೆದು ಮಹಾಸೇನರಾಜಪ್ರತಾಪಾಂ ॥
ಕುರಮಾಪಂ ತಿದಾನೋದಕದೊಳ್ ತಳರೇಱರ್ದುದೆಂಬನ್ನೆಗಂ ತ ।
ತ್ತುರಲೆತ್ತಂ ಧಾತ್ರಿಯೊಳ್ ಸೈವರಿವುದು ನಿರಾಘಾಟಧಾಟೀತುರಂಗಂ ॥೫೪೭
(ಧರ್ಮನಾಥಪುರಾಣಂ)

ಚಿತ್ರಿಯಮಪ್ರಗಲ್ಭಹಯವಲ್ಗನದಿಂ ಮಣಿಕುಂಡಲಾಂಶುಗಳ್ ।
ಚಿತ್ರಿಸೆ ಗಂಡಭಿತ್ತಿಯನುರಸ್ಸ್ಥಳರಂಗದೊಳಂಗಹಾರಮಂ ॥
ಸೂತ್ರಿಸೆ $ತಾರಹಾರರುಚಿಮಂಜರಿಗಳ್ ತಳರ್ದಂ ಪುರಾಂಗನಾ ।
ನೇತ್ರಚಕೋರಮುಗ್ಗಲಿಸೆ ಸನ್ಮದಮಂ ಮನುಜೇಂದ್ರಚಂದ್ರಮಂ ॥೫೪೮
(ಮಲ್ಲಿನಾಥಪುರಾಣಂ)

$ ತೋರ.

ಮುಸುಳಿಸಿದುದಜಿತಸೇನನ ।
ಮಿಸುಪ ಮೊಗಂ ರತ್ನಕುಂಡಲಪ್ರಭೆ ತನ್ನೊಳ್ ॥
ಪಸರಿಸುತಿರೆ ಸೊಗಸಿನ ಕೆಂ ।
ಬಿಸಿಲೆಳಸಿದ ಕನಕಕಮಳಕಮನೀಯತೆಯಂ ॥೫೪೯

(ಚಂದ್ರಪ್ರಭಪುರಾಣಂ)

ಮರಕತರತ್ನಾಂಗದ ರ ।
ಶ್ಮಿರಾಜಿ $ಯಿಂ ಪಸಲೆಗವಿದ ಭುಜಶಿಖರದೊಳಾ ॥
ಧರಣೀಶಂ ತಾಂಗುವುದ ।
ಚ್ಚರಿಯೆ ಲತಾಂಗಿಯರ ಚಕಿತಹರಿಣೇಕ್ಷಣಮಂ ॥೫೫೦

(ಮಲ್ಲಿನಾಥಪುರಾಣಂ)

ನಲ್ಲಂಬಿಂದಿಸೆ ಪುಷ್ಪಬಾಣನೆರ್ದೆಯಂ* ಬೆಂಬಿಬ್ದು ಬೆಳ್ಳಾಗಿ ತ ।
ಕ್ಕೆಲ್ಲಂ ಕೆಟ್ಟೆರ್ದೆಗೆಟ್ಟು* ಜಂಗಮಲತಾಸಲ್ಲೀಲೆಯರ್ ಬಾಲೆಯರ್ ॥
ಚೆಲ್ಲಂ ಬೇಂಟವ ತೋಂಟಯೊಳ್ ತೊಡರೆ ಕಂಡತ್ತಿತ್ತಜೊಳ್ ನೋಡೆ ಮೆ ।
ಯ್ಯೆಲ್ಲಂ ಜಿಟ್ಟಗಳಾದೊಡಿಂದ್ರನೆನಿಸಲ್ಕಾರ್ತಂ ಮಹೇಂದ್ರಾಂತಕಂ ॥೫೫೧

(ಶೂದ್ರಕಂ)

ಅಳಕಂ ಕಸ್ತೂರಿಯಿಂ ಸಾಲಿಡೆ ನಸುನಗೆ ಬೆಳ್ದಿಂಗಳಂ ಬೀಱೆ ನೇತ್ರಾಂ ।
ಚಳಪಾತಂ ಕಾಮನಂಬಂ ಕಱೆಯೆ ಕನಕಮಂಜೀರಕಾಶಿಂಜಿತಂ ಚಂ ॥
ಚಳಕಾಂಚೀಕೂಜಿತಂ ಕಂಕಣ §ಝುಣಝುಣಿತಂ ಪೊಣ್ಮೆ ಬಂದತ್ತನೂನಂ ।
ಕಳಹಂಸೀಯಾನ †ಮಾಸ್ಯಶ್ವಸಿತಮಧುಪಗಾನಂ ಪುರಸ್ತ್ರೀಪ್ರತಾನಂ ॥
ಜಲಜಾತಾಕ್ಷನನೀಕ್ಷಿಪುತ್ಸುಕತೆಯಿಂ ಕೈಗೈಯುತಿರ್ದಂತೆ ಬಂ ।
ದೊಲವಿಂ ನೋಡುವ ಕಾಂತೆಯೊಪ್ಪಿದಳದೊರ್ವಳ್ ಪರ್ಣೋಪೇತಹ ॥
ಸ್ತ ಲಸನ್ಮೌಕ್ತಿಕಭೂಷೆ ಕುಂಕುಮರಜೋರಮ್ಯಾಂಗಿ ಪೂರ್ಣೇಂದುಮಂ ।
ಡಲಮಂ ತಾರಕಕೋಟಿಯುಂ ತಳೆದ ಸಂಧ್ಯಾಲಕ್ಷ್ಮಿಯೆಂಬಂ ¶ದದಿಂ ॥೫೫೨

(ಜಗನ್ನಾಥವಿಜಯಂ)

$ ಯೊಳ್. § ರಣರ † ಮಾನಿಶ್ವ. ¶ ತೆನ್ನೋಲ್.

ಬಂದೆ ಶಶಿಬಿಂಬವಿಱಜಗ ।
ದಿಂದೀವರತತಿಯನೆಯ್ದೆ ತಣಿಪುವ ತೆಱದಿಂ ॥
ದೊಂದೆ ನೃಪಾಸ್ಯಂ ತಣಿಪಿದು ।
ದಂದಖಿಳಪುರಾಂಗನಾವಿಲೋಕನಚಯಮಂ ॥೫೫೪

(...................) ?

ತಳವಜ್ರಾಘಾತದಿಂ ಮರ್ದಿಸಿ ರಜಕನನಾತ್ಮಪ್ರವೇಶಕ್ಕೆದೇ ವಂ ।
ಗಳವೆಂಬಂತಾಪುರದ್ವಾರದೊಳವನಡಗಿಂ ಬುತ್ತಿಯಿಟ್ಟೆಲ್ವಿನಿಂ ಪೂ ॥
ವಳಗೆಯ್ದಸ್ರಾಂಬುವಿಂ ಚೆಟ್ಟೞಿದು ಕರುಳಿನಿಂ ತೋರಣಂಗಟ್ಟಿ ಕೋಳಾ ।
ಹಳನಾದಂ †ಪೆರ್ಚೆ ಪೊಕ್ಕಂ ದನುಜನ $ಪೊಱಲಂ ಸಾಗ್ರಜನ್ಮಂ ಮು
ಕುಂದಂ ॥೫೫೫ (ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಪುರಪ್ರವೇಶವರ್ಣನಂ.

೨೩. ಪುರುಷವಿರಹವರ್ಣನೆ.

ಧಾತ್ರೀಶನ ಸಾರ್ವ ಮನ ।
ಸ್ಸ್ವಾತ್ರದೊಳಾಸತಿಯ ಸಸ್ಗಗೋದ್ಗಮತತಿಯಂ ॥
ಚಿತ್ರವಿಧದಿಂ ತೊಡರ್ಚಿದ ।
ಧಾತ್ರಂ ಮುಂ ಮಾಲೆಗಾಱನೊಡನಾಡಿದನೋ ॥೫೫೬

(ಚಂದ್ರಪ್ರಭಪುರಾಣಂ)

ಉಪಯಿಪ ನೇಸಱಿಂ ಕಿಡುವ ಕತ್ತಲೆ ಕಿತ್ತಲಗಿಂ ಕಡಂಗಿ ಕು ।
ತ್ತದ ಕಡಲಿೞವೆ(?)ಯಂತಕನೆ ಬಾರಿಗೆ ಬಾರದ ಸಾಳು ಕಳ್ಳನು ॥
ಣ್ಣದ ಕಡುಸೊರ್ಕು ಕಿಚ್ಚನುರಿ ಪತ್ತದೆ ಪೊತ್ತುವ ಬೆಗೆಪಾವುತಿ ।
ನ್ನದ ತನಿನಂಜು ತನ್ವಿಯರೊಳಾದಳಪಿಂ ಪೆಱತೆಂಟೆ ಲೋಕದೊಳ್ ॥೫೫೭

(ಅರ್ಧನೇಮಿಪುರಾಣಂ) ?

---

† ಬಂದು. $ ಗೃಹಮಂ.

ಶ್ರೀಕಂಠರಿಪುವಿನಸ್ತ್ರಾ ।
ನೀಕಂ ಬಗೆವುಗಲದೊರ್ಮೆ ಸತ್ರಾಜಿತ್ತ್ಯ ॥
ನ್ಯಾಕಾರಂ ಬಗೆವೊಕ್ಕುದು ।
ಲೋಕಜನಸ್ತುತಿಗಳಂ ಗರುತ್ಮದ್ಧ್ವಜನಾ ॥೫೫೮

ಅನಿಶಂ ಪಾಠಕಪಾಠದಿಂ ಕಥಕರತ್ಯಾಳಾಪದಿಂ ಪಂದಿವಂ ।
ದನದಿಂ ಗಾಯಕಗೇಯದಿಂ ನೆಗಟ್ದ* ಸತ್ರಾಜಿತ್ಸುತಾರೂಪಯು ॥
ವನಲಾವಣ್ಯವಿಲಾಸ ¶ಲಕ್ಷಣಗುಣಂಗಳ್ ಮಾಡಿ ಸಂಮೋಹವಂ ।
ಮನಮಂ ಧೈರ್ಯಮನೀಜಿಶ್ಕೊಳಲ್ ಮುರಹರಂ ವಿಭ್ರಾಂತಿಯಂ ತಾಳ್ದಿದಂ ॥
(ಜಗನ್ನಾಥವಿಜಯಂ)

ನನೆಗೋಲ್ ನಟ್ಟ ಕೊನರ್ತವೋಲ್ ಪುಳಕಮುಣ್ಮಿತ್ತಲ್ಲಿ ರಕ್ತಾಂಬುಗಳ್ ।
ಪನಿಸಂ §ತಿರ್ದುವು ಘರ್ಮವಾರಿ ದಿಟದಿಂ ಹೃದ್ಗೇಹಮಂ ತನ್ನಿತಂ ॥
ಬಿನಿ ಪೊಕ್ಕಂತಿರೆ ಕಂಪನಕ್ಕೆ ತನು ಕೈಗೊಟ್ಟತ್ತು ಧೀರತ್ವಮಂ ।
ಮನದಿಂ ಸುಯ್ ಪೊಜಗಣ್ಗೆ ಪೊತ್ತಡುಕುವಂತಿರ್ದತ್ತು ಭೂಪಾಲನಾ ॥೫೬೦

ಮುಗುಟ್ದಂ* ಮುಗುಟ್ದಂ* ಕನಸಿಂ ।
ಮುಗುಟ್ದಂ* ವಧುವೆಂದು ನೆಲೆಯನೀಱಿಪನೊಳಗಂ ॥
ಪುಗುವಂ ಪಪಡಿಸಿ ಕಣ್ಣಿಂ ।
ಮುಗಿವಂ ಮುಸುಕಿಡುವನಸಿಯುಳಂ ಭಾವಿಸುವಂ ॥೫೬೧

ಅವಿವೇಕಂ ಮೃಗತೃಷ್ಣೆವೋಲ್ ಪೊಳೆವಿನಂ ಗಾಂಭೀರ್ಯವಾರಾಶಿ ಬ ।
ತ್ತುವಿನಂ ಧೈರ್ಯಧರಾಧರಂ ಬಿರಿವಿನಂ ವಿದ್ಯಾವನಶ್ರೇಣಿ ಪೊ ॥
ತ್ತುವಿನಂ ತಪ್ತಶರೀರಸೂರ್ಯಮಣಿಯಿಂ ಜ್ವಾಳಾಕಳಾಪಂಗಳು ।
ಣ್ಮುವಿನಂ ಪೊಣ್ಮಿದುದೀಜಗತ್ತ್ರಯದೊಳಂ ಕಾಮೋಗ್ರಘರ್ಮಾಗಮಂ ॥

ಅಳಿನೀಜ್ಯಾಮೃದುಮಂಜುಶಿಂಜಿತಸಮಂ ಸಣ್ಣಿಂಚರಂ †ಬಂಚರ ।
ದ್ದಳಿಯೊಳ್(?,ತಳ್ತುಡನುಣ್ಮಿ ನುಣ್ಚರದೆ ಮಿಂಚಂ ಸೀಟ್ದವೋಲ್ ಪೊಣ್ಮೆ ಕಾ॥

¶ ವಿಭ್ರಮವಿದಂಗಳ್ಕೂಡೆಸಂದೋ. § ತೆ. † ಬಂಚರಧ್ವನಿ.

ಕಳಯೊಳ್ ಕೂಡಿದ ಸೀಯುನಪ್ಪ ರಸಗೇಯಮಂ ಚಿತ್ತಮಂ ತಾಗೆ ಪೂ।
ಗಳ ಬಾಣಂಗಳ್ ತಾಗಿದಂ ಶಿರಗಿದಂ ಶೃಂಗಾರಕಾರಾಗೃಹಂ ॥೫೬೩

ತಳರದೆ ತನ್ನ ಕಣ್ಣ ಮೊದಲೊಳ್ ಸುಱಿವಾಕೆಯ ‡ ರೂಪಕಂ ತಳ।
ತ್ತಳಸಿದೊಡಾಕೆಗೆತ್ತು ರಸಚಿತ್ರದ ಪೆಂಡಿರನಾಕೆಗೆತ್ತು ಪು॥
ತ್ತಳಿಗಳನಾಕೆಗೆತ್ತಲಗೆ ಬಾಯೆನುತುಂ ನಿಡುದೋಳನೆತ್ತಿ ಕೋ।
ಮಳಕರಕಂಜದಿಂದೆಳವಿ ನೋಡಿದನಾರತಿರಾಗದೋಹಳಂ ॥೫೬೪

ಕಡೆಗಣ್ಣಿಂ ಸೋಲವಂ ಸೂಸುವ ಸತಿಯಸಿತಸ್ನಿಗ್ಧದೃಗ್ದಾಮದಿಂ ಪೂ।
ಯ್ವಡೆದೆನ್ನೀಚಿತ್ತಮಿನ್ನುಂ ಬೆದಱದಪುದು ನಟ್ಟಲಿಗೊಂಡಪ್ಪುದಿನ್ನುಂ॥
ನಿಡುಸುಯ್ಸುಯ್ತಾಱದಿನ್ನುಂ ಬೆಮರ್ವನಿ* ಬೇಗಾದಂತೆ ಮೆಯ್ ಕಂಪವಂ
ಪುಂ। ದಿಡೆಯುಂ ರೋಮಾಂಚಮಿನ್ನುಂ ಕಡೆಯದು ಕನಸೆಂದೆಂತಿಂದಂ
ನಂಬಲಕ್ಕುಂ ॥೫೬೫

ನೋಡದ ಚಿತ್ರಮಾಡದಡೆ ಕೇಳದ ಬೇಟದ ಮಾತು ಮೆಯ್ಯನೀ।
ಡಾಡದ ತಣ್ಬುಱಿಲ್ ಬರ್ಗೆ ಬಾರದ ಕಲ್ಪನೆ ಕಾಡದಿಚ್ಛೆಯೋ॥
ಲಾಡದ ಪೂಗೊಳಂ ಪುಗದ ನಂದನಮಿಲ್ಲನೆ ಕಾಮದೇವನೊ।
ಲ್ದಾಡಿಪ ಜಂತ್ರಮಾತನೆನಲಾಡಿದನಾರತಿರಾಗದೋಹಳಂ ॥೫೬೬

ಸವಿಯಂ ನೇಹದೊಳತ್ತಳಕ್ಕುಮವಳಂ ಲಾವಣ್ಯಸರ್ವಸ್ವದಿಂ।
ಸವೆಸಂ ಪದ್ಮಜನಕ್ಕುಮಾಕೆ ಸೊಬಗಿಂಗುತ್ಪತ್ತಿಯಕ್ಕುಂ ಮನೋ॥
ಭವನಾಕಾಂತೆಗೆ ಮೇಳಗೊಂಡು ಬೆಸನಂ §ಪೂರ್ಣೋದ್ಧರ್ನಕ್ಕುಂ ಮರ।
ಳ್ದವ ¶ನಂತಲ್ಲದೊಡೇಕೆ ಸೇದೆವಡು †ವಂ ಶೃಂಗಾರಕಾರಾಗೃಹಂ ॥೫೬೭

ಬಗೆ $ಯೆೊಳಪ್ಪೊಕ್ಕ ಕೋಮಳೆಯನೀಕ್ಷಿಸುವಂತೆ ಬೞಲ್ದ ಕಣ್ಮಲರ್।
ಮುಗಿದಿರೆ ಚುಂಬನಕ್ಕೆಳಸುವಂತಧರಂ ತನಿಗೆತ್ತ ಪೂಪಿನಂ॥

‡ ರೂಪುಗಂಡುದಕ್ಕೆಳಸಿ. § ಮಾಣಿಪ್ಪ. ¶ ನಿಂ. † ಗುಂ. $ ದೊ.

ಬುಗಳುಗಿವಂತೆ ಬಾಯ್ದೆಱೆ ಕರಂ ☫ಮಿಡುಕುತ್ತಿರೆ ಸುಯ್ಗುಳುಸ್ಕೆ ಮೂ।
ರ್ಛೆಗೆ ¶ನೆಗೆದಂತೆ ‡ಮೆಯ್ಮಱೆದು ನಿದ್ರೆಯೊಳೊಪ್ಪಿದನಾಕುಮಾರಕಂ॥೩೬೮
(ಕವಿಕುಂಜರಲೀಲಾವತಿ)

ಸುಡದೆ ಕನಲ್ವ ಕಿಚ್ಚಿನೊಡನಾಡಿದ ಕೆಂಬೆಲರಾತಪಂಗ †ಳೊಳ್।
§ಪೊಡರ್ವ* ಸರೋರುಹಂ ಸುಡದೆ ನುಂಗುವ ಪಾವಿನ ಪಲ್ಲ ನಂಜುಗಿ॥
ಚ್ಚಿಡರ್ವ*ಮೃತಾಂಶುಮಂಡಲಮದೇಂ ಸುಡದೇ ಹಿಮ $ವುಂಡು ಬಾಳ್ವ ತ।
ಣ್ಮಡುವಿನ ಪೂವೆ ಸುಟ್ಟಪುದಿದಯ್ಯ ವಿಯೋಗಿಗಳೆಂತು ಬಾಳ್ದಪರ್॥೩೬೯

ಸಂತಸದಂತನೆಯ್ದೆ ಸುರತಾಮೃತದೊಳ್ ತಣಿವಳ್ಕಱಂ ಬೆಗಿ।
ಲ್ತಂತಿರೆ ಪತ್ತಿ ಮೆಯ್ಗೆಳರಸಾದೊಡೆಮೇನಸುವೊಂದೆ ನೋಱಪ್ಪೆಡೆಂ॥
ಬಂತಿರೆ ಕೂಡಿ ನಿನ್ನೊಡನೆ ಭೋಗಿಸಲಿಯದೆ ಕೆಮ್ಮನೆನ್ನನು।
ಯ್ವಂತಕನೆಂಬ ಬೂತನೆಲೆ ಬಾರಿಸಲಾಗದೆ ಪೇಳ್ ಸ್ವಯಂಪ್ರಭೇ॥೩೭೦
(ಆದಿಪುರಾಣಂ)

ಕಳಹಂಸಾಲಸಯಾನೆಯುಂ ಮೃಗಮದಾಮೋದಾಸ್ಯನಿಶ್ವಾಸೆಯುಂ।
ತಳರೇ ತಾವರೆಯೆ ಮದಾಳಕುಳಮೇ ಕರ್ನೆಯ್ದಿಲೇ ಮತ್ತಕೋ॥
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯುಂ ಭೃಂಗಕುಂ।
ತಳೆಯುಂ ಕೈರವನೇತ್ರೆಯುಂ ಪಿಕರವಪ್ರಖ್ಯಾತೆಯುಂ ಸೀತೆಯುಂ॥೩೭೧

ಮಳಯಜಗಂಧಬಂಧುರಸರೋರುಹಮಂ ದರಹಾಸಚಂದ್ರಿಕಾ।
ವಿಳಸಿತಚಂದ್ರಮಂಡಲಮನಾರಮಣೀರಮಣೀಯಲೋಚನೋ॥
ತ್ಪಳಸಹಪ್ರಸನ್ನಕಮಳಾಕರಮಂ ಸ್ಮರರಾಜರಾಜ್ಯಮಂ।
ಗಳಮಣಿದರ್ಪಣೋಪಮಮನೋಪಳ ವಕ್ತ್ರಮನೆಲ್ಲಿ ಕಾಣ್ಬೆನೋ॥
(ರಾಮಚಂದ್ರಚರಿತಪುರಾಣಂ)

☫ ಮುಸುಕುತ್ತಿರೆ; ಮಿಸುಗುತ್ತಿರೆ. ¶ ನೆರೆ. ‡ ನಿದ್ರೆನೊಳಮೆಯ್ಮಱೆದೊಪ್ಪಿದ.
† ಕೆಂಕುಡಿವ. § ಶರೀರಮಂ. $ ಮುಂತೆ.

ಇನಿಯಳ್ ಪೋದ ಬೞಿಕ್ಕಮೆನ್ನಿರವು ತಾರಾಮಂಡಲಂ ಪೋದ ಲೋ ।
ಚನಮಿರ್ಪಂತೆ ಸುಗಂಧ ಪೋದ ಕಳವೂಮಿರ್ಪಂತೆ ತೀವಿರ್ದ ಜೇ ॥
ವನಮೆಲ್ಲಂ ನೆಱೆ ಪೋದ ಪೊಟ್ಟಗೆಱೆ ತಾನಿರ್ಪಂತೆ ದೈನ್ಯಕ್ಕೆ ಭಾ ।
ಜನಮಿನ್ನೇನಸು ಪೋದ ಬಾಳ್ವೆಣನಿದೇಕಾನಿರ್ದೊಡೇಂ ಬಿಟ್ಟೊಡೇಂ ॥

(ಅನಂತನಾಥಪುರಾಣಂ)

ಚಂದುಟಿವಾಯನೀಂಟಿ ನಳತೋಳಡೆಯೊಳ್ ಸಲೆ ತೆಕ್ಕೆಗೆಯ್ದು ನು ।
ಣ್ಪಿಂದಿನ ಬಿಣ್ಪುವೆತ್ತ ಮೊಲೆಯೊಳ್ ಮೊಗಮಂ ಮುೞಿದಿಟ್ಟು ಮೋಹದಾ ॥
ನಂವವ ಸುಗ್ಗಿಯುಂ ಬೆಳಸಿ ಸಂತಸದಿಂ ಪರಿದೆಯ್ದಿ ಕೂಡುವಾ ।
ಸೌಂದರರೂಪಿಯುಂ ನೆನೆದು ಸಾಯುದೊಡೇಂ ಒಡಮಾಗಲಿಲ್ಲವೇ ॥೫೨೪

ಎಲೆ ಮೃಗನೇತ್ರೆ ಕೇಳ್ ಸರಸಿಜಾನನೆ ನಿನ್ನ ಕಟಾಕ್ಷರೋಚಿನಿ ।
ರ್ಮಳಜಳದಲ್ಲಿ ಮಿಂದಧರಸೇವನೆಯೆಂಬಮೃತಾನ್ನಮಂ ಸಮಂ ॥
ತೊಲಿವಿನಮುಂಡು ನಿನ್ನ ಕುಚಮಧ್ಯದೊಳೊಯ್ಯನೆ ಪೞಿಗೆಯ್ದು ನಾ ।
ನೆಳಸಿ ಸುಖಂಗಳಂ ಸವಿವ ಕಾಲಮದೆಂದೆನಗಪ್ಪುದಂಗನೇ ॥೫೨೫

ಆಡುವರಾಪ್ತರಿಲ್ಲಱಿವೊಡೆನ್ನೊಳಗಾನಿನಿಸಿಲ್ಲ ಸೌಖ್ಯದೊಳ್ ।
ಕೂಡುವೆನೆಂದೊಡಂಬುರುಹಲೋಚನೆ ನೀನೆನಗಿಲ್ಲ ದುಃಖಮಂ ॥
ತೋಡುವೆನಾರ ಕೂಡೆ ತೃಣದಿಂ ಲಘುವಾದೆನಿದರ್ಕೆ ಕಾಂತೆ ಕೈ ।
ನೀಡಿ ನಿರಂತರಂ ತೆಗೆದು ಪಾಲಿಸು ವಾರಿಜಲೋಲಲೋಚನೇ ॥೫೨೬

ರಸಮಂ ಬೀಱುವ ಲಲ್ಲೆಮಾತು ಸೊಗಸಿಂ ರೋಮಾಂಚನಂಗೆಯ್ವ ಕ ।
ಣ್ಣಸಕಂಗುಂದದ ಮಂದಹಾಸದೊಲವಿಂ ಬೆಳ್ದಿಂಗಳಂ ಬೀಱಲೆ ॥
ಣ್ದೆಸೆಯೊಳ್ ಕಾಣದ ರೂಪನಾಂತ ಸತಿಯಂ ಬಿಟ್ಟನ್ಯರೊಳ್ ಕೂಡಿ ಹಾ ।
ಬಿಸಿಲೊಳ್ ಶೈತ್ಯಕೆ ಕಾಯ್ದ ಲೋಹಮಿಡಿದಂತಾಯ್ತೆನ್ನ ಪುಣ್ಯೋದಯಂ ॥

---

§ ವೃಣಾ೪.

ಅದನಿನ್ನೇವೊಗಳ್ವೆಂ* ವಿನೋದಭವನಂ ಚಾತುರ್ಯಜನ್ಮಸ್ಥಳಂ ।
ಮೃದುಮಾಧುರ್ಯವಚಸ್ಸುಧಾಂಬುಧಿಗೆ ಪೆರ್ಚಂ ಮಾಳ್ಪ ಚಂದ್ರೋದಯಂ॥
ಮದನಂ ಪೂಜಿಸ ಮಂತ್ರದೇವತೆಯೆನಿಪ್ಪಾನಲ್ಲಳಂ ಬಿಟ್ಟು ಹಾ।
ಬಿದಿರಂ ಕರ್ಬಿನ ಪೋಲ್ಕೆಗೆಂದು ಸವಿವಂತಾಯ್ತೆನ್ನ ಪುಣ್ಯೋದಯಂ ॥೫೭೮

ಮದವತ್ಕೋಕಿಲನಾದದಿಂ ಮಧುರಮಪ್ಪಾಳಾಪದಿಂ ಚಿತ್ತಸಂ ।
ಪದಮಂ ಪುಟ್ಟಿಸಿ ಕೂರ್ಪ ಕೂಟದೊಳನೇಕಪ್ರೌಢಿಯಂ ತೋಱಿ ಕಾ ॥
ಮುದಿಯೊಳ್ ಕ್ರೀಡೆಗೊಳಲ್ಕೆ ಬೆಳ್ಪಸದನಂಗೊಂಡಿರ್ಪಳಂ ಬಿಟ್ಟು ಹಾ ।
ಬಿದಿರಂ ಕರ್ಬಿನ ಪೋಲ್ಕೆಗೆಂದು ಸವಿವಂತಾಯ್ತೆನ್ನ ಪುಣ್ಯೋದಯಂ ॥೫೭೯

ಕನಕಕ್ಕೊಳ್ಗಂಪು ಸಾರ್ದಂದದ ತನುಲತೆ ಮಾಣಿಕ್ಯದೊಳ್ಸ್ವಾದು ಪುಟ್ಟಿ।
ತ್ತೆನಿಪೋಷ್ಠಂ ಚೆನ್ನ ಕರ್ನೆಯ್ದಿಲ ಸಿರಿಗೆ ಪಗಲ್ ಕೂರ್ತುದೆಂಬಂದದಾಲೋ ॥
ಕನಮಾಗಳ್ ಸೋಲಮಂ ಸಾಲಿಡೆ ಸರಸರತಿಪ್ರೌಢಿಯೊಳ್ ಸಂದ ಸತ್ಕಾ ।
ಮಿನಿಯೊಳ್ ಕೂರ್ತಲ್ಲದೇನೊಲ್ವನೆ ಸುಕವಿಕಲಾವಲ್ಲಭಂ ಫುಲ್ಲನೇತ್ರೇ ।

(ಮುಕ್ತಕಂ)

ಮನದನ್ನನೆನಿಸುವೆನ್ನೊಳ್ ।
ಮಿನಿತುಮರಂ ನಾಣ್ಚಲೇಕೆ ಮಿಥ್ಯಾಮೋಹ ॥
ಕ್ಕಿನಿವಿರಿದು ವಿಕಲನಪ್ಪುದೆ ।
ಕನಸಿನ ಭತ್ತಕ್ಕೆ ಗೋಣಿಯಾಂಪ್ಪೈ ನೃಪತೀ ॥೫೮೧

ನಗೆಗಣ್ ಮಿಂಚಿನ ಗೊಂಚಲಂ ವಳಿ ತರಂಗಶ್ರೇಣಿಯಂ ವೇಣಿ ಕಾ ।
ರ್ಮುಗಿಲಂ ಭ್ರೂಲತೆ ಶಕ್ರಚಾಪಲತೆಯಂ ಬಿಂಬಾಧರಂ ಸಂಜೆಯಂ ॥
ಮಿಗೆ ಚಾಂಚಲ್ಯಮನಾಂತ ಕಾಂತೆಯುರಸತ್ಯಸ್ನೇಹಮಂ ಸ್ವಪ್ನದಂ ।
ತೆಗಡೆಂಬರ್ ಬುಧರಂತದುಂ ಕನಸೆನಲ್ಕಾರ್ ನಚ್ಚುವರ್ ಮಚ್ಚುವರ್ ॥೫೮೨

(ಕವಿಕುಂಜರ ಲೀಲಾವತಿ)

ಇಂತು ಕಾವ್ಯಸಾರದೊಳ್
ಪುರುಷ ವಿರಹವರ್ಣನಂ.

೨೪. ಸ್ತ್ರೀವಿರಹ ವರ್ಣನೆ.

ಸತ್ರಾಜಿನ್ನೃಪನಲ್ಲಿಗೆ ।
ಮೈತ್ರೀಮಿಷದಿಂದೆ ಪೋಗಿ ತನ್ನಯ ರೂಪಂ ॥
ಗೋತ್ರಧರಂ ತೋಱಲ್ ತ ।
ತ್ಪುತ್ರಿಗೆ ತೋಱಿದನನಂಗನಿಷುಕೌಶಲಮಂ ॥೫೮೩

ಪರಮುಕ್ರೋಧಾದಿದೇವಾರ್ಚನಮೆನೆ ತಱಿದೊಟ್ಟುತ್ತೆ ಲೀಲಾಬ್ಜಪತ್ರೋ।
ತ್ಕರಮಂ ಚಿಂತಾಲತಾವೃದ್ಧಿಯನೊಡರಿಸಲೋರಂತೆ ನೀರ್ವೊಯ್ವ ಪಾಂಗಿಂ॥
ಸುರಿಯುತ್ತುಂ ಬಾಷ್ಪಧಾರಾಜಲಪರಿಕರಮಂ ಸ್ನೇಹಶಾಸ್ತ್ರಕ್ಕೆ ಟೀಕಂ ।
ಬರೆಯುತ್ತಿರ್ಪಂದದಿಂ ಮುಂಗುಟದೆ ಬರೆಯುತುಂ ಭೂಮಿಯಂ ಭಾಮೆಯಿ
ರ್ದಳ್ ॥೫೮೪

ಸ್ತನಮಂ ಚಿತ್ರಿತಪತ್ರಲೇಖೆ ನೊಸಲಂ ಬಾಲೇಯಕಂ ಲೋಲಲೋ ।
ಚನಮಂ ಕಾಡಿಗೆ ಕಂಠಮಂ ತರಳಹಾರಂ ಕೇಶಮಂ ಪುಷ್ಪಮಾ ॥
ಲೆ ನಿತಂಬಸ್ಥಲಮಂ ಸುರತ್ನಕಟಿಸೂತ್ರಂ ಸಾರ್ದು †ವಿಲ್ಲೋವೊಕ್ಕಾ।
ಮನ ಕಾಟಕ್ಕೊಳಗಾದೆ ನೀಂ ಪೇೞ್ತಿದಲ್ತಂಭೋಜಪತ್ರೇಕ್ಷಣೇ ॥೫೮೫
(ಜಗನ್ನಾಥವಿಜಯಂ)

ಮನಸಿಜವಹ್ನಿಯೆನ್ನ ತನುವಂ ಸುಡಲಾನದನಾನದನ್ನಮೆ ।
ನ್ನಿನಿಯನುಮೆನ್ನ ಚಿತ್ತದೊಳಗಿರ್ದಪನಾತನನೆಂತು ಕಾವೆನೆಂ ॥
ಬೆನಗಿದು ಚಿಂತೆ ಬೇರ್ಪಡಿಸಿ ಬೇಂಟದ ಕೇಡರಿಸಿಟ್ಟನಪ್ಪೊಡಾ।
ತನುವೊಡಸಾಗುಮೆಂದಱಿಯದೇನುಮನಾಂ ಬೆಱಗಾದಪೆಂ ಸಖೀ ॥೫೮೬

ಸುದತೀ ಮತ್ಪತಿ ಕಣ್ಣೊಳಂ ಮನದೊಳಂ ತಾನಿರ್ಪನಿರ್ದಂ ಮಱುಂ ।
ಕಿದನಿಲ್ಲಶ್ರುಜಲಂಗಳೊಳ್ ಪುದಿದ ಹೃತ್ಕಾಮಾಗ್ನಿಯಿಂ ಬೆಂದನಿ ॥
ಲ್ಲಿದು ಚೋದ್ಯಂ ಬಗೆವಾಗಳೆಂದಿನವನೋ ಮಾಯಾವಿ ಪೇೞೆಂದು ಪು ।
ಟ್ಟಿದನೆಂದೋದಿದನೆಂದು ಕಲ್ತನೊ ಜಲಾಗ್ನಿಸ್ತಂಭಮಂತ್ರಂಗಳಂ ॥೫೮೭
(ಅರ್ಧನೇಮಿಪುರಾಣಂ)

---

† ವೀಲೋಲ; ವಿಲ್ಲಕ್ಕ.

ಮದನಂ ಬೆಳ್ಮುಗುಳಂಬಿನಿಂದಿಸೆ ಜೆಗಿಲ್ತಿರ್ದಂಬುಗಳ್ ಚಿತ್ತದೊಳ್ ।
ನೋದೆಯುಂ ಬೈತವೊಲಾಗೆ ಮನ್ಮಥಶಿಖಿಜ್ವಾಲಾಳಿ ತಳ್ತೇಱೆ ಬೇ ॥
ಯುದೆ ಕಾಯ್ದೋಡಿನ ಜೋಳದಂತಲರ್ದೊರ್ಡಾಕಂಪುಂ* ಮನಸ್ತಾಪಮುಂ ।
ಪುದಿದೆತ್ತಂ ಬರೆ ಸುಯ್ ಪೊದಳ್ದು ಬಿಸಿದುಂ ಕಮ್ಮಿತ್ತು ಮಾಯ್ತೋಪಳಾ ॥

(ಶೂದ್ರಕಂ)

ಮೇಳಿಸಿ ಪೊರ್ದಿದಾಳಿಯುರ ಮೈ ಬಿಸುಪೇಱೆ ಬೆಮರ್ತುರ್ವಂಗದೊಳ್ ।
ಬಾಳಮೃಣಾಳಕಾಸವಿತಿ ಚುಯ್ಯೆನುತುಂ ನೊರೆಯಿಟ್ಟುದಶ್ರುಧಾ ॥
ರಾಳಿ ಕಪೋಲದೊಳ್ ಕುದಿದು ಬತ್ತಿದುದೊಯ್ಯನೆ ಬೀಸುತಿರ್ಪ ಪೊಂ ।
ಬಾಳೆಯ ಚಾಮರಂಗಳರೆಸೀದುವು ತನ್ವಿಯ ದೇಹದಾಹದಿಂ ॥೫೮೯

ಲಲನೆ ಹಿಮೋಲ್ಲಸದ್ಭವನದೊಳ್ ವನದೊಳ್ ವನದೊಳ್ ಪೊರಳ್ದು ನಿ ।
ಚ್ಚಲುಮಿಸೆ ಕಂತು ನಿಷ್ಪಸರದಿಂ ಸರದಿಂ ಸರದಿಂಪುದೋಱೆ ಕೋ ॥
ಗಿಲೆ ಬಿದು ಬೀಱೆ ಭೀತಿಕರಮಂ ಕರನುಂ ಕರಮಂ ಕಪೋಲದೊಳ್ ।
ನಿಲಿಸುವಳೈದೆ ನೋವಳಧಿಪಾಂಗದಪಾಂಗದ ಪಾಂಗದಗ್ರಳಂ ॥೫೯೦

(ಜಗನ್ನಾಥವಿಜಯಂ)

ನಗೆಗಣ್ಣಂ ಪೋಲ್ತುದೆಂದೆನ್ನಯ ಮೊಗರಸಮಂ ಪೋಲ್ತುದೆಂದೆತ್ತಿ ಕಂಪಂ । ಮಿಗೆ ಸುಯ್ಯಂ ಪೋಲ್ತುದೆಂದೀಕೆಗೆ ಮಸುಗುವ ಪೂವಿಂಗೆ ಚಂದ್ರಂಗೆ ತೆಂಗಾ ॥ ಳಗೆ ಕಾಯ್ದೀನಿನ್ನನಾಪೂಗಳ್ ಮನಸಿಜನಂಬಾಗಿಯಾ ಚಂದ್ರನೇ ತಾ । ನೊಗೆದಿಕ್ಕಿಚ್ಚಾಗಿಯಾತೆಂಬೆರಲೆ ಮುಳಿದು ನಂಜಾಗಿ ಕೊಂದಪ್ಪುವೀಗಳ್ ॥೫೯೧

ಎಲರಿಂದೆಚ್ಚೆತ್ತು ಲೀಲಾವತಿ ನಿಜಪತಿಯಂ ಮಂಚದೊಳ್ ಕಾಣದಾಗಳ್ । ಚಲೆಯಾದಳ್ ಮೂರ್ಛೆವೋದಳ್ ಮಱೆದಳೆಱಗಿದಳ್ ಕಂದಿದಳ್ ಕುಂದಿದಳ್ ಕೋ ॥ ಟಲೆಗೊಂಡಳ್ ಸಾವುಗಂಡಳ್ ಕಳವಳಿಸಿದಳಾಸತ್ತಳತ್ತಳ್ ಬೆಮರ್ತಳ್ । ನೆಲೆಯಿಂದಂ ಬಿಳ್ದುಳ್ದಳ್ ವಿರಹದುರಿಯೊ ಸಂತಾಪ §ವಿಭ್ರಾಂತಿಯಿಂದಂ ॥

(ಕವಿಕುಂಜರಲೀಲಾವತಿ)

§ ದಿಂ ಕಾಂತೆಯಾಗಳ್.

ಸ್ಮರಶಿಖಿತಾಪದೊಳ್ ತರುಣಿ ಚಂದನಪಂಕಮನಾತ್ಮವಕ್ಷದೊಳ್ ।
ಧರಿಯಿಸೆ ತುಂಬಿ ಕುಳ್ಳಿರೆ ಪದಂ......ಮುಳ್ಕುರಿಯಿಂದೆ(?) ಪಾಱ್ ಚ ॥
ಚ್ಚರವಡೆದೋಡಲಾಱದದು ಪಕ್ಕಮನೆತ್ತಿ ಮನೋಜನೆಚ್ಚ ಕೋಲ್ ।
ಪಿರಿದೊಳನಟ್ಟಿರಲ್ ಪೊಱಗೆ ತೋಱುವ ನುಣ್ಗಱಿಯಂತಿರೊಪ್ಪುಗುಂ ॥೪೩
(... ....)?

ಅನಲಸಹಾಯನಪ್ಪ ಯಮನುದಿಙ್ಮುಖದಿಂ ನಡೆತರ್ಪ ತೆಂಬೆಲರ ।
ಮನಸಿಜವಹ್ನಿಯುಂ ಬಿಡದೆ ಪೆರ್ಚಿಪುದುಂ ಕಡುನೋವನೀವುದುಂ ॥
ವನರುಹವಕ್ತ್ರೆ ವಿಸ್ಮಯಮೆ ತಾಪಹರಂ ಜನಸೌಖ್ಯಕಾರಿ ನಂ ।
ದನವೆನಗಂಗತಾಪಮನುಮನೋವದೆ ನೋವುಮನೀವುದದ್ಭುತಂ ॥೪೪

ತನು ತನಗಲ್ಲದಂಡಲೆವ ಗಾಳಿಯನೋವದೆ ಪಾವು ಕೊಂಡ ಚಂ ।
ದ್ರನನುರಿದಿರ್ಪ ಮನ್ಮಥನ ನಾಡಿಸಂಬಿಯನೋವದೇಕೆ ಪೆ ॥
ತ್ತನೆ ಬಿದಿಯೆಂಬ ತೀಡುವೆಲರ್ಗೆ*ಜ್ವಲಿಪಿಂದುಗೆ §ಕಾಯ್ವ ಮನ್ಮಥಂ ।
ಗನನಯದಿಂದೆ ಪಾಡುವಳಿಗಂತವಳೆಂ ಬೆದಱುತ್ತಮಿರ್ಪಳೋ ॥೪೫

ಅಂಬುಜನೇತ್ರೆ ನಿನ್ನ ಮೊಗಮುಂ ಕವಿದಿರ್ಕುರುಳೋಳ ಧೂಸರ ।
ತ್ವಂಬಡೆದಿರ್ಕಚಂ ಕೊರಗಿದಿರ್ಕಮಳಾನನಮಿರ್ಪುಗುಂದಿದಿರ್ ॥
ಬಿಂಬಫಲಾಧರಂ ಸ್ಖಲನಮುಂ ತಳೆದಿರ್ನುಡಿ ಬಾಡಿದಿರ್ಲತಾಂ ।
ಗಂ ಬಿಸುಪೇಱಿದಿರ್ಶ್ವಸಿತಮಿಂತಿವು ಪೇೞುವೆ ನಿನ್ನ ಚಿಂತೆಯಂ ॥೪೬

ಎಡೆಗೊಟ್ಟು ಮನಮನೋಪಂ ।
ಗೆಡೆಗುಡದಿನಿಸುಂ ಸುಖಕ್ಕೆ ಬೇಂಟದ $ಬಳ್ಪಿಂ ॥
ಬಿಡೆ ಜೋಲ್ವ ತೆಱದಿನಿರ್ಕ್ಕದ ।
ಳೊಡಲಂ ಬಾಲಕಿ ವಿಶಾಲತಲ್ಪಸ್ಥಲದೊಳ್ ॥೪೭
(ಜಗನ್ನಾಥವಿಜಯಂ)

ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ ।
ವಿನ ತಳಿರ್ವಾಸಿನೊಳ್* ಪೊರಳುತಿರ್ದಪೆನಾಗಳುಮಂತೆ ನೀನೆ ಕೆ ॥

§ ಕಾಡುವಂಗಜಂ. $ ಬಿಣ್ಪಂ.

ಪ್ಕನೆ ನಡೆನೋಡುತುಂ ನಭದೊಳರ್ದಪೆಯುಪ್ಪುದಱಂದೆ ನಿನ್ನನಾ ।
ನನುವಿಪೆನೆನ್ನ ಮೈ ಬಡವೊ ನಲ್ಲನ ಮೆಯ್ಬಡವೋ ನಿಶಾಕರಾ ॥೧೯೮

(ಆದಿಪುರಾಣಂ)

ಪತಿಚಿಂತಾನರ್ಘನಿದ್ರಾವಿರಹಿತೆಯಿರುಳಂತಪ್ಪುದುಂ ಸುಪ್ತಪಾರಾ ।
ವತವಂ ಬಂದೆತ್ತುವಳ್ ಹಂಸೆಗಳೆರಡೆಮೆಯೊಂದಾಗಲೀಯಳ್ ನವಿಲ್ವಾ ॥
ಣತಿಯಂ ಕಣ್ಮುಚ್ಚಲೀಯಳ್ ಗಱಪುವ ಗಿಳಿಯಂ ತೂಂಕಡಂಗಾಣಲೀಯಳ್ ।
ಕತೆಯಂ ಪೇೞಿಂದವಳ್ ಸಾರಿಕೆಯುಮನನಿವಂ(?)ಗೆಯ್ದು ಕಣ್ಗೆಯ್ಯಲೀಯಳ್॥

ತರುಣಿಯ ಮೆಯ್ಯ ಬೆಂಕೆಯೊಳೆ ಬಿಳ್ದಮೃತಾಂಶುಮರೀಚಿ ಸುಟ್ಟ ಕ ।
ರ್ಪುರದವೊಲಾಗಿ ಸುಟ್ಟಪುದಿವಲ್ಲದೊಡೆಲ್ಲಿಯದಲ್ಲಿ ತಾಪಮೋ ॥
ಸರಿಸದೆ ಪುಷ್ಪಬಾಣನಿಸೆ ನಾಂಟ ಮುಱಂಟಿದ ಪೂವೆ ಪುಳ್ಳಿಯಾ ।
ಗಿರೆ ಮನಮೆಯ್ದೆ ಬೆಂದಪುದಿವಲ್ಲದೊಡೆಲ್ಲಿಯದಂಗಜಾನಳಂ ॥೨೦೦

(ಅರ್ಧನೇಮಿಪುರಾಣಂ)

ಬಗೆಯೊಳ್ ಬೆಚ್ಚವೊಲಾವ ಮಾತು ಕಿವಿಗೆಯ್ದಲ್ ಮಿನ್ಗೊಣರ್ ತೋ
ರಮು । ತ್ತಗಳಂ ಕಾಱುವ ಭಾವದಿಂ ತರಳನೇತ್ರದ್ವಂದ್ವದಿಂ ಬಾಷ್ಪಬಿಂ ॥
ದುಗಳಂ ಸೂಸೆ ಲತಾಂಗಿ ಭಂಗಿನಡೆದಿರ್ದಳ್ ಬೇಂಟಮೆಂಬೊಂದು ಬ। ಳ್ಳಗೆ
ಪೊಯ್ನ್ನಾರೆಱವಂದದಿಂ ನುಡಿವಳಲ್ಲೇನೊಂದುಮಂ ಕಾಂತೆಯೊಳ್ ॥೨೦೧

ಕೆಳದಿ ತರವೇೞ್ವುದೆನಗಾ ।
ನಳನಾಕ್ಷನನಲ್ಲದಂದು ಪೋದಪುದಸುವಿಂ ॥
ಗೆಳೆ ಮದನನಿಸುವ ಪೆಸಕೆಂ ।
ದಳಗರ್*ಳ ಕೆಂಗಱಿಯ ನನೆಯ ಮೊನೆಯುಂಬುಗಳಂ ॥೨೦೨

ಸೋಂಕಿನ ಗಾಳಿ ಮಳ್ಳುರಿವೊಲಾದುದು ಪೊಕ್ಕ ಸರೋವರಾಂಬು ಕಾ ।
ಯ್ಪಿಂ ಕುದಿವತ್ತು ನಂದನವನಂ ಕರಿಕೆಯ್ದುದು ¶ನೋಡೆ ಸುಯ್ದು ಸು ॥
ಯ್ವಿಂಕೆಯಿನೆಯ್ದೆ ಚಂದ್ರಿಕೆ ಬಿಸಿಲ್ಗಣೆಯಾ †ಯಿತ್ತು ನಿಜಾಂಗತಾಪದಿಂ ॥
ಪಂಕರುಹಾಕ್ಷಿ ಕಾಮಶಿಖಿ ಪೆರ್ಬ್ಬರಿಜಂ ತಳೆದಂತೆ ತೋಱದಳ್ ॥೨೦೩

¶ ನೋಡಲುಯ್ದು † ಮದನಂಗ.

ನನಕಾಮೋದ್ರೇಕದಿಂ ಚಿಂತಿಸುವ ಮತಿ ಮತಿಗ್ಲಾನಿಯಿಂದಶ್ರುವಂ ಸೂ|
ಸುವ ಕಣ್ಕಣ್ಣೀರ ಬಾನಲ್ಪರಿದು ಬೆಳಪ ಮೆಯ್ ಮೆಯ್ಯ ಸಂತಾಪದಿಂ ಬಾ‖
ಡುವ ವಕ್ತ್ರಂ ವಕ್ತ್ರಮುಂ ತಳ್ತಳಕಮಳಕಸಂದೋಹಮುಂ ಮಾಣದಲ್ಲಾ|
ಡುವ ಸುಯ್ಸುಯ್ವೆಂಕೆಯಿಂದಿರ್ಪುದಧರಮವಳ್ಗಿತ್ತುದಂದೊಂದು ಚೆಲ್ವಂ ‖

ಯುವತಿಯ ಬಾಡಿಸಂಗಲತೆ ಬತ್ತಿದ ಬಾಯ್ ಕೊರಗಿರ್ದ ವಕ್ತ್ರಮೆಂ |
ಬಿವನೆಸೆವಾತ್ಮಕೋಮಲತೆಯಿಂದರುಣಚ್ಛವಿಯಿಂ ಸುಕಾಂತಿಯಿಂ ‖
ನವಲತೆಗಂ ಪ್ರವಾಳಲತೆಗಂ ಹಿಮರೋಚಿಗಮಾಯ್ತು ಪೋಲಲ್ಕೆಂ |
ದವಸರಮಿಂತಿದರ್ಕವಳ ಬೇಂಟಮೆ ಬೆಂಬಲಮಾದುದೆಂಬಿನಂ ‖೬೦೫

†ಕನಸಿಂದಂ ನೆರೆದವನಂ |
ನೆನಸಿಂ ನೆರೆದಪ್ಪೆನೆಂದು ತರವೇಳ್ದಪೆ ¶ಕಾಂ ‖
ತನನಘಟಿತಮಿದು ನೋೞ್ಪೊಡೆ |
ಕನಸಿನ ಭತ್ತಕ್ಕೆ ಗೋಣಿಯಾಂಪವರೊಳರೇ ‖೬೦೬

ಚಿತ್ತಂಬೊಕ್ಕೆರ್ದೆಯೊತ್ತೆ ಹರಿ ಕೞಿರ್ದ* ಕರಸ್ಪರ್ಶದಿಂದಿಂಪು ತಾಪಂ ‖
ಬೆತ್ತಂ ಮೆಯ್ಸೋಂಕಿ ಮಂದಾನಿಳನುರಿವನವಕಾರ್ಗಳಿಯರ್ ದೂರದಿಂ ಸೂ ‖
ಸುತ್ತಿರ್ದರ್ ತೋಯಮುಂ ಜೇಕ್ಕೆರ್ದಬಿಯಿದೊಳೆ ಮನೋಜಾತನಿರ್ದಿರ್ದಿಸ
ಲ್ಕಾ | ದೆತ್ತುಂಗೋಲೆತ್ತುವಂ ಬಣ್ಣಿಸುವರಳವೆಸತ್ರಾಜಿತೀದೇಹದಾಹಂ ‖

ಎನಸುಂ ಮೈ ಬಿಸುಪೇಱೆ ಹರ್ಮ್ಯಾಗ್ರಹಮುಂ ತೀವಿತ್ತು ಸುಯ್ಗಾಳಿನಂ |
ದನಪತ್ರಂಗಳನಾಱಿಸಿತ್ತು ವಿಗಳದ್ಬಾಷ್ಪಾಂಬುಧಾರಾಳಿ ತ ‖
ದ್ವಸಭೂಜಾವಳಿಗಾಲವಾಲಜಲಮಾಯ್ತು ಬ್ಜಾಕ್ಷ ನಿನ್ನಂದಮಂ |
ನೆನೆಯುತ್ತಿರ್ದ ಮನಂ ತಱುಂಬುತಿದೆ ಜೀವಂ ನಿಂದುದಾಕಾಂತೆಯಾ ‖೬೦೭

ತಾನಿರ್ದ §ಹೃದಯಮಿದು ಮದ |
ನಾನಲನಿಂದುರಿದುದರ್ಕೆ ತನ್ನಿರ್ದೆಡೆಯಂ ‖

---

† ಯಾ. § ನಿಳಯ

ತಾನಾರಯ್ಯದೆಯೆನ್ನನ ।
ದೇನಾರೈದಪನೊ ಬಂದು ಕಮಲದಳಾಕ್ಷಂ ॥೬೯

ಇರುಳ ರಥಾಂಗದಂತಳಲುತುಂ ಪಗಲುತ್ಪಲಲಕ್ಷ್ಮಿಯಂತೆವೋಲ್ ।
ಕೊರಗುತುಮಭ್ರಕಾಲದ ಮರಾಳಿಕೆಯಂತಿರೆ ನೋಯುತುಂ ಭವ ॥
ದ್ವಿರಹದೊಳಿರ್ದ ವಲ್ಲಭೆಯನಾಱಿಸು ಬಂದೊಸೆದಕ್ಕಟಿಂತು ನಿ ।
ಷ್ಠುರಣಿಯುಮಿಂತು ಕಲ್ಲೆರ್ದೆಯುಮಿಂತು ಸಗರ್ವನುಮಾಗಲಕ್ಕುಮೇ ॥
(ಜಗನ್ನಾಥವಿಜಯಂ)

ಸುಱಿಯದೆ ಬನ್ನಿವಿಸಾಪೆಡೆಗೆ ಕಾಮಮಹಾಂಬುಧಿಗಾಳ್ದು ಕೋಪದಿಂ ।
ಕೆಳಗಣದೊಂದು ತಾಣದೊಳಗಿರ್ದಮಳ್ದುವರೆಯಂತೆ ತೋರ್ಕೆಯುಂ ॥
ಬಳಿಯದೆ ತಳ್ತು ಪೆರ್ಮೊಲೆಗಳೊಳ್ ಕೊಳಗೊಂಡಿರಲೆಂದು ಕಣ್ಣ ನೀ ।
ರಿೞಿದುವು ಬಾಳ್ವಿರ್ಗ ಜಲಮನೆಚ್ಚಿಸಲಾಱದೆ ಕಾಜುವಂತೆವೋಲ್ ॥೭೧೧

ಮೊಲೆ ಪೊಣರ್ವೆಟ್ಟು ರೋಮಲತೆ ಒಟ್ಟಿಸಿತಂಬಿಮಿಱುಂಬುನಾಭಿ ಕು
ತ್ತು। ಉಗುಳಿಮಿಂಚುವೊಳ್ದುಡೆ ಮಡಂ ಸುರಿವಾ ಬೆಮರರ್ಬಿಯುಬ್ಬು
ಕೋ ॥ ಮಳತನುಯಷ್ಟಿ ಕಲ್ಪಲತಿಕಾಂಕುರವೊಳ್ಮಿಡಿ ಸೋಗೆ ಮನ್ಮಥಾ ।
ನಳ ಶಿಖಿ ಬೇಗೆಯಾಗೆ ಮದನಾಟವಿಯಂತೆವೊಲೊಪ್ಪಿ ತೋಱಿದಳ್ ॥೬೧೨
(ಶೂದ್ರಕಂ)

ನಡು ನಡಪಿತ್ತು ತನ್ನನೆನೆ ಮೆಯ್ ಬಡವಾದುದು ಲೋಚನಾಂಶುಗಳ್ ।
ಬಿಡೆ ತೊಡರ್ದಂತೆ ಗಂಡಯುಗಳಂ ಬಿಳಿದಾದುದು ತೋಳ್ಗಳೊಳ್ $ನೆರಂ ॥
ಬಡೆದವೊಲೆಯ್ದೆ ಸುಯ್ ಸರಳವಾದುದು §ಭಾವರಸಪ್ರವಾಹದೊಳ್ ॥
ಗಡಣಿಸಿದಂತೆ ಬಾಷ್ಪಜಲಸಂತತಿ ಕಾಲ್ಪುರವಾದುದುದಾಕೆಯಾ ॥೬೧೩

ತರದಿಂ ಮೆಯ್ಯೊಳ್ ವನಿತ ।
ಕ್ಕರದಂತಿರೆ ಸೊಂಜ †ನಾಶ್ರುಕಣತತಿ ಕಾಮಂ ॥
ಬರೆದ ನೃಪಸುತನ ಸೊಬಗಿನ ॥

$ ಬರಂ. § ಹಾವ. † ನಾಂಬು.

ನರಶಾಸನದಂತೆ ವಿರಹವಿಹ್ವಲೆಯಿರ್ದಳ್ ‖೭೧೪

(ಚಂದ್ರಪ್ರಭಪುರಾಣಂ)

ಪಗಲೆ ಚಕೋರಂ ಪ್ರೇಣರ್ದ |
ಕ್ಕಿಗೆ ತಿಂಗಳ ಬಿತ್ತನಾಯ್ತು ಕುಡುಕಿಕ್ಕುವ ಭಂ ‖
ಗಿಗೆ ನೆಲೆಯಾದುದು ಮಲರ್ಗ |
ಣ್ಣುಗುಟ್ಟುಬಲೆಯು ಮೊಲೆಯೊಳುಗುವ ಬಾಷ್ಪಕಣಂಗಳ್‖

ಬದವಿನಲಂಪಿನಿಂ ನಡಪಿದೆನ್ನನುಪೇಕ್ಷಿಸಿ ರಾಜಹಂಸನಾ |
ಮುದ ದೊರೆವೆತ್ತ ಪೆಂಪುಭಯಪಕ್ಷವಿಶುದ್ಧತೆ ಪುಂಡರೀಕಷಂ ‖
ಡದ ಸಿರಿ ನಿನ್ನೊಳಂ ನೃಪನೊಳಂ ಸಮಮೆಂಬು ಮರಾಳ ಪಕ್ಷಮು |
ಪ್ಪುದೆ ಪೞಿಪ್ರೊರ್ದದಂತುಪರಿಭಾವಿಪುದಾತ್ಮಕೃತೋಪಕಾರಮಂ ‖೭೧೬

(ಮಲ್ಲಿನಾಥಪುರಾಣಂ)

ಕದಪಿನೊಳಟ್ಟ ಕೈಯು ಪೊಸಪಚ್ಚೆಯನಂಗನೆ §ಪ್ರೊಯ್ದು ಬಾಸುಳಂ |
ದದಿನಿರೆ ಪೂವಿನೊಳ್ ಪೊರಲ್ ಪತ್ತಿದ ಪೂಗಳ್ ಕೆಂಡ ಕಾಮಬಾ ‖
ಣದ ದೊರೆಯಾಗೆ ಮೈಯು ಮಲಯೋದ್ಭವಪಣ್ಪುಗಳೇಱ ಬಾಯೊಳ್ |
ಕ್ಕಿದ ಕವಳಂಬೊಲಾಗೆ ಲಲಿತಾಂಗಿ ಬೞಲ್ವಳನಂಗತಾಪದಿಂ ‖೭೧೭

ಮೊಲೆಗಳೊಳಿಕ್ಕಲಬ್ಜದ ವಿಶಾಲದಳಂಗಳನಾಯ್ತು ನೀಳ್ದ ಕ |
ಣ್ಮಲರ್ಗಳೊಳೊತ್ತಲುತ್ಪಲದ ನಿಟ್ಟೆಸಳಂ ಕುಚಕುಂಭಮಧ್ಯದೊಳ್ ‖
ಸಲಿಸಲಶಕ್ಯದಿಂದಸಿಯು ಬಾಲಮೃಣಾಳಮನಾವದೀರ್ಘಿಕಾ |
ಜಲದೊಳಮೆಯ್ದೆ ಪೊಕ್ಕಱಸಿ ಕಾಣದೆ ಕಾಯ್ವುದು ತತ್ಸಖೀಜನಂ ‖೭೧೮

ಮೃಗಶಿಶುನೇತ್ರೆಯರ್ ತಳಿಯೆಯುಂ ತಿಳಿನೀರ್ಗಳನಂಗತಾಪದಿಂ |
ಪೊಗೆವ ಮೃಣಾಳಮುಂಡನದ ಮೆಲ್ಪೊಗೆಯಿಂ ಮಿಗೆ ಪೀಲಿಗಣ್ಗಳುಂ ‖
ನೆಗಪಿದುವಕ್ಕುಮಶ್ರುಗಳನೆಂಬಿನಮುಂಬುಗಳಂದೆ ನಾಂದಿ ‡ಸೋ |
ಗೆಗಳನೆ ಬಿರ್ಕೆ ಬೀಸಿದುವು ದೀವದ ಸೋಗೆಗಳಾಮೃಗಾಕ್ಷಿಯಂ ‖೭೧೯

§ ಕೆಂಡ.　　‡ ಪೀಲಿಗ.

ಹಾರವೆ ಭೂಷಣಂ ಮಳಯಜಾತವೆ ಮೆಯ್ಗೆಸೆವಣ್ಪು ಸಾರಕ |
ರ್ಪೂರವೆ ತಂಬುಲಂ ತಳರ ಜೊಂಪವೆ ಬಾಜ್ವನೆ ಕಲ್ಪನಾಮೃತಾ ||
ಹಾರವೆ ಜೀವನಂ ಸಲಿಲಕೇಳಿಯೆ ಕೇಳ ¶ನವಪ್ರನಾಳಸಂ |
ಸ್ತಾರವೆ ಸೆಜ್ಜೆಯಾಯ್ತು ತರಳಾಕ್ಷಿಗೆ ತದ್ವಿರಹಾತಿರೇಕದೊಳ್ ||೬೦

ಸುದತಿಯ ಸುಯ್ಗಳಿಂ ಬನವೆ ಬೆಂದುದು ಬೇಯದೊಡೇಕೆ ಕೆಚ್ಚನಾ |
ದುದೊ ತನಿವಣ್ಗಳಂ ಸವಿದ ಕೀರದ ಚಂಚುವದೇಕೆ ಮೂಗುವ ||
ಟ್ಟುದೊ ಮಧು ಪೋಪುದುಂ ಕಳಕೆಗರ್ಚಿದ ಕೋಗಿಲೆಯೇಕೆ ಪಾಱಿಪೋ |
ದುದೊ ಶಿಶಿರಾಂಬುಜಾಕರಕೆ ತುಂಬಿ ತುಡುಂಕಿ ನವಪ್ರಸೂನವುಂ ||೬೧

ಕಿವಿಗಳ್ ಬೆಂಡಪ್ಪುವೆಂಬಂತಿರೆ ಕರತಳದಿಂ ಮುಚ್ಚುಗುಂ ಕೇಳ್ದು ಕಿಚ್ಚೆ | ರ್ದಪೊಲಾಗಳ್ಪೊಯ್ಗುವೋವೋಎನುತುಮೆ*ರ್ದೆಗಳಂ ಚಿಂತೆಗೆಯ್ದುಂತವಂ ಭೂ || ಭುವನಂ ತಾನೆಂದೊಡಿನ್ನಾಂ ಪೊಗೞ್ವೆಡೆ ಪಿರಿದುಂ ಭೀತಿಯಾವಪ್ಪುದೇಂ ಬೇ | ಯುವೊ ಪೇೞ್ ಲೀಲಾವತೀದೇವಿಯ ವಿರಹವು ದಿಂತೆಂಬ ಜಿಹ್ವಾಂಕುರಂಗಳ್ ||೬೨

ನೀರೂಡುವಂತೆ ಮದನನ |
ಕೂರಸಿಯುಂ ಚುಯ್ಯನೆತ್ತಿ ಪೊಗೆ ಪೊಯ್ವಿನೆಗಂ ||
ನೀರೇಜವನದೊಳರ್ದವ |
ನೋರಂತಿರೆ ವಿರಹವಹನದಗ್ಧೆಯನವಳಂ ||೬೩

ಸವನಂ ಸವನಂ ಕೃತಕಂ |
ಜವನಂ ಜವನಂತೆ ವನಿತೆಗಾಯ್ತು ಕೊಲಲ್ ಬ ||
ರ್ಪವನಂ ಪವನಂ ಪೋಲ್ತುದು |
ದವನಂ ದವನಂತೆ ವಿಷಮುಮಾಯ್ತನವರತಂ ||೬೪

ಸರಸಮೆನಿಪ್ಪ ಮಾನಸದೊಳಲ್ಲದೆ ಪುಟ್ಟದ ದರ್ಶನಾಮೃತ |
ಸ್ಮರಣಸರಿತ್ಪ್ರವಾಹದೊಳೆ ಪೊತ್ತುವುದಂತೆ ಹಿಮಾಂಶು ‡ಬಿಂಬದಿಂ ||

¶ ವನಪ್ರಹಾರವುಂ. ‡ ಪೂರಧಿಂ.

ದುರಿವುಸು ತಣ್ಪುಗೆಯ್ಯೆ ತನುವೆರ್ಚುವುದಾಳಿಯುರಂತರಂಗಮುಂ ।
ಕೊರಗೆ ಕನಲ್ದುದೀವಿರಹವಹ್ನಿಯಿದೇಂ ವಿಪರೀತವೃತ್ತಿಯೋ ॥೬೨೫

(ಕವಿಕುಂಜರಲೀಲಾವತಿ)

ಕುರುಳಂ ಕೊಪ್ಟೊಡೆ ಕೊಳ್ಗುಮೇ ಮುಡುಗಿನೇೞಂಗಕ್ಕಟಾಯೆಂಗುಮೇ । ಬೆರಲಂ ಕೊಟ್ಟೊಡೆ ಮಾಣ್ಗುಮೇ ಮುನಿಸನಿನ್ನೇನೆಂದಪೆಂ ವಕ್ಷದೊಳ್ ॥ ಬಿರುವಂ ಕಾಯ್ದೊಡೆ ಬರ್ಕುಮೇ ಮನಗೆ ಮೇಣ್ ಹೀನಾಂಗಿಯುಂ ಮುಟ್ಟಲಾ । ಗರಸಂಗೆಂಗುಮೆ ನೋಡುವೆಂ ಸಖಿ ಬೞಿಕ್ಕೆಂತಾದೊಡಂ ಮಾಡುವೇಂ ॥೬೨೬ (ಅನಂತನಾಥಪುರಾಣಂ)

ಕೆಂದಳಿರ್ವಾಸಿನೊಳ್ ಕಡುಬೆಮರ್ತು ಕರಂ ಬಡವಾದ ತನ್ವಿತ ।
ನ್ನೊಂದಿರವಿಂದೆ ಸಂಜೆಮುಗಿಲೊಳ್ ನಸುದೋರ್ಪ ಕಳಾವಶೇಷಮ ॥
ಪ್ಪಿಂದುವ ಲೇಖೆಯಂತೆಸೆದು ಮೆಲ್ಲಿರ್ದೆಯುಂ ನಡುವಂಗಜಾಸ್ತ್ರದಿಂ ।
ನೊಂದು ಕನಲ್ದನಲ್ವ ಪರಿಯಂ ಹರಿ ಕಂಡೆರ್ದೆಯಾಱೆ ನೋಡಿದಂ ॥೬೨೭

(ಜಗನ್ನಾಥವಿಜಯಂ)

ಮದನಂ ಪೋಗದೆ ನಿಂದನಪ್ಪನಿದಿರೊಳ್ ಭ್ರೂಚಾಪದಿಂದೆಯ್ದ ಪೂ ।
ಯ್ದೊಡಂ ತೀಕ್ಷ್ಣಕಟಾಕ್ಷಶಾತಶರದಿಂ ಪಾದಾಗ್ರದೊಳ್ ಬೀೞ್ಗೆ ಕು ॥
ತ್ತಿದೊಡಂ ಮೆಯ್ಯ್ಬಿಲಾಱುವನ್ನಮದನಂ ತೋಳ್ಪಾಸದೊಳ್ ಕಟ್ಟಿ ತಾ ।
ಗದೊಡಂ ಪೇೞ್ ಮೊಲೆವೊತ್ತೆ ನೇಯುವನವೇಸಂಬೊತ್ತೆನಬ್ಜಾನನೇ ॥೬೨೮

ಸ್ಮರನಂ ತಂದಿರೆ ತನ್ನಿ ಮೆಲ್ಲಿದನವಂ ಮಾಯಾವಿ ನೋಟಕ್ಕೆ ನಿ ।
ಷ್ಠುರನೋ ಸೌಮ್ಯನೊ ನೋಡಿದಪ್ಪೆನೆಳೆಯೊಳ್ ಕಾಮಂ ಕರಂ ಚೆಲ್ವನಂ ॥
ಬರ ಮಾತಂತಲ್ಲದೆ ಕಂಡರಿಲ್ಲೆಲೆಗೆ ಪೇೞೆಂತೆಂತವಂ ಸಿಲ್ಕಿದಂ ।
ಪಿರಿದುಂ ಪೆಣ್ಗೊಲೆವೋಗಲೀಗುಮೆ ದಿಟಕ್ಕೆನ್ನಾಣೆಯೆನ್ನಂ ಸ್ಮರಂ ॥೬೨೯

(ಕವಿಕುಂಜರಲೀಲಾವತಿ)

ಇಂತು ಕಾವ್ಯಸಾರದೊಳ್

ಸ್ತ್ರೀ ವಿರಹವರ್ಣನಂ.

೨೫. ಅಲಂಕಾರ ವರ್ಣನೆ.

ಪಳಿಕಿನ ಮಜ್ಜನಪೀಠ ।
ಸ್ಥಳದೊಳ್ ಕಣ್ಗೊಳಿಸಿದಂ ತದಂತದ್ಯುತಿ ಕ ॥
ಣ್ಗೊಳಿಸಿರೆ ತನುವಂ ನಿಜಮಂ ।
ಡಳದೊಳ್ ಕಣ್ಗೊಳಿಪ ರೋಹಿಣೀರಮಣನವೋಲ್ ॥ ೬೩೦

(ಮಲ್ಲಿನಾಥಪುರಾಣಂ)

ಕುಡುಮುಗುರಿಂದೆಱಲ್ಮುಡಿಯ ಗಂಟುಸಡಲ್ಚಿಸಿ ಗಂಧತೈಲಮಂ ।
ಕುಡಿತೆಯೊಳಾಂತು ನೆತ್ತಿಯೊಳಗೊತ್ತಿ ಬಿದಿರ್ಚುತೆ ಕೇಶಪಾಶಮಂ ॥
ನಡು ಬಱುಕಲ್ ಕುಚಂ ಕುಣಿಯೆ ನರ್ತಿಸೆ ಕರ್ಣದ ರನ್ನದೋಲೆ ಸೋ ।
ರ್ಮುಡಿಯಲರ್ಸೂಸೆ ರಾಜಕವಿಶೇಖರಗೆಣ್ಣೆಯನೊಲ್ದು ಪೂಸಿದಳ್ ॥ ೬೩೧

(...............) ?

ಉಗುರ್ಗೊನೆಯಿಂವಲುಗುರಿಸಿ ಹಸ್ತಪುಟಾಂತರದಿಂ ಶಿರೋಜಮಂ ।
ನೆಗಪುನ ಭಂಗಿ ಬಿತ್ತರದಿನೊತ್ತುವ ಕೆಂದಳದೊಂದು ಲಾಘವಂ ॥
ಸೊಗಯಿಸುತಿರ್ಪಿನಂ ಸಹಜದಿವ್ಯಸುಗಂಧನಕೇಶಪಾಶಮಂ ।
ಮೃಗಮದಗಂಧಿ ಪೂಸಿದಳುಪಾಸಿತಚಂಪಕಗಂಧತೈಲಮಂ ॥ ೬೩೨

ಬಿಗಿಮುತ್ತುಂಗಕುಚಂ ಕದಕ್ಕದಿಸೆ ಹಾರಂ ತೂಗೆ ಕಣ್ಚೆಲ್ಲಮು ।
ಲ್ಲುಗೆ ಪೊನ್ನೋಲೆ ಕದಂಪನಪ್ಪಳಿಸೆ ಮಧ್ಯಂ ಬಱ್ಕೆ ಘರ್ಮಾಂಬು ಕೈ ॥
ಮಿಗೆ ಕಣ್ಗೊಂಡು ಜಗಜ್ಜನೈಕವಿಭುವಂ ಯೋಷಿಜ್ಜನಂ ಮಜ್ಜನಂ ।
ಬಗಿಸಿ ¶ತ್ತಿಂತು ಸುಹೃಜ್ಜನಂ ವಿರಚಿಪನ್ನಂ ಮಂಗಳಾಚಾರಮಂ ॥ ೬೩೩

(ಜಗನ್ನಾಥವಿಜಯಂ)

ಉಗುರ್ಗಳ ಕಾಂತಿಯಿಂದಳಕವಲ್ಲಿಗೆ ನೀರ್ದಳವಂತೆ ಮೆಲ್ಲಮೆ ।
ಲ್ಲಗೆ ತಲೆವಿಕ್ಕಿ ಚಂದ್ರಕಿರಣಂಗಳನಾಗಳೆ ರಾಹು ನುಂಗಿ ಮು ॥
ತ್ತುಗುಲ್ದಪುದೆಂಬಿನಂ ಮುಡಿಸಿ ಬಾಲೆಯ ಸೋರ್ಮುಡಿಯಂ ಲಲಾಟದೊಳ್ ।
ಮೃಗಮದಬಿಂದುವಂ ಪೆಱಗೆ ನುಣ್ಗುಱಿಯಂ ಪಡೆವಂತೆ ತಿರ್ದಿದಳ್ ॥ ೬೩೪

¶ ತ್ತಂದು.

॥ ವಾಕ್ಯಂ ॥　ಅಂತು ಬಂದು ಚೆಂಬೊನ್ನ ಕನ್ನಮಾಡದ ಮೊಗಸಾಲೆಯೊಳಕ್ಕಿದ ಮುತ್ತಿನ ಚಿತ್ತರಿಗೆಯೊಳ್ ಕುಳ್ಳಿರ್ದುದುಂ; ಮೇಳದಂಗನೆಯರ ಮಂಗಳಪಸದನಂಗೊಳಸಲವಸರಂಬಡೆದು, ಚಿತ್ರಚೀನಾಂಬರಮಂ ನಿರಿವಿಡಿದುಡಿಸಿ, ಕೆಂದಾವರೆಯ ನೆಳವಿಸಿಲೆಳಸುವಂದವಾಗೆ ಲಾಕ್ಷಾರಸದಿನಡಿಯುದಿದುಂ, ಚರಣನಖಚಂದ್ರಮಾಲೆಗೆ ನಕ್ಷತ್ರಮಾಲೆಯನೋಲಗಿಸುವಂತೆ ಮುಕ್ತಾಫಲನೂಪುರಮಂ ತುಡಿಸಿಯುಂ, ಪುಳಿನವಳಯಮಂ ಪೊಂದಾವರೆಯ ಬಳ್ಳಿ ಬಳಸಿದಂತೆ ನಿತಂಬವಳಯದೊಳ್ ಮಣಿಮೇಖಳೆಯಂ ತೊಡರ್ಚಿಯುಂ, ಮದನಮುದರದನಿರ್ಗಮನದೊಳ್ ಕೀರ್ತಿಮುಖಮಂ ಕೀಲಿಸುವಂತೆ ಶತಪತ್ರಭಂಗಮಂ ತುಂಗಸ್ತನಭಾಗದೊಳ್ ಸಂಗಳಿಸಿಯುಂ, ಪೀವರಪಯೋಧರಮಂಡಳಕ್ಕೆ ಪರಿವೇಷಮಂ ಪಡೆವಂತೆ ಪಂಚರತ್ನದ ಪಂಚಸರಮಂ ಕೊರಲೊಳಿಕ್ಕಿಯುಂ, ಬಾಹುಲತೆಯ ಬೇಟಲಂತೆ ರತ್ನಕಾಂತಿ ಕವಲ್ವರಿವಿನಮಂಗದಮಂ ನಳತೋಳ್ಗಳವಡಿಸಿಯುಂ, ಬಾಸಿಗಮಂ ಭೃಂಗಮಾಲೆ ಬಳಸುವಂತೆ ನಳತೋಳೊಳ್ ಪಚ್ಚೆಯ ಪಿಂಡುಗಂಕಣಮನೇರಿಸಿಯುಂ, ನನೆಗಣೆಗೆ ಗರಿಗಟ್ಟುವಂತಂಗುಳಿಯೊಳ್ ರತ್ನಮುದ್ರಿಕೆಯಂ ಮುದ್ರಿಸಿಯುಂ, ಸ್ಮರವಶೀಕರಣಯಂತ್ರಮಂ ಬರೆವಂತೆ ಕಪೋಲದೊಳ್ ಮಕರಿಕಾಪತ್ರಮಂ ಬರೆದುಂ, ಪೊಸಮುಸೆಯ ಪೂಗಣೆಗೆ ಪೂಗರಂ ಪಡೆವಂತೆ ನಗೆಗಣ್ಗಳೊಳಂಜನಮನಚ್ಚಿಗೆಯ್ದುಂ, ಕರ್ಣಾಂತವಿಶ್ರಾಂತವಿಲೋಚನದೊಳ್ ಪಡಿಯಿಟ್ಟು ನೋೞ್ಪಂತೆ ಕಿವಿಯೊಳವತಂಸೋತ್ಪಲಮಂ ತೊಡರ್ಚಿಯುಮಂತುಮಲ್ಲದೆಯುಂ ॥೬೩೪

(ರಾಮಚಂದ್ರಚರಿತಪುರಾಣಂ)

ಒರ್ವಳ್ ಜಿನಜನನಿಯ ಕುಡು ।
ಪುರ್ವಂ ಸಮಱಲ್ಕೆ ನೀಡಿದಳ್ §ಕರಯುಗಮಂ ॥
ಗೀರ್ವಾಣಕಾಂತೆ ಕಾಮನ ।
ಕರ್ವಿನ ಬಿಲ್ಗರಲ ಸರಲನೋಲಗಿಸುವವೋಲ್ ॥೬೩೬

(ಚಂದ್ರಪ್ರಭಪುರಾಣಂ)

§ ಕುಡಿವೆರಲಂ.

ಮನಸಿಜನನೆ ರತಿಯೆನೆ ಕ |
ರ್ಬಿನ ಬಿಲ್ಲನೆ ಕುಸುಮಬಾಣಮೆನೆ ಕೋಕಿಲನಿ ||
ಸ್ವನಮೆನೆ ಮಧುಕರಝುಂಕೃತ |
ಮೆನೆ ಸೀತೆಯ ಪಸದನಕ್ಕೆ ಪರ್ಯಾಯಂಗಳ್ ||೬೩೭
(ರಾಮಚಂದ್ರಚರಿತಪುರಾಣಂ)

ಉದಯಿಸುವೆಳವೆಱೆಯಂ ಮರು |
ಣದಿಶಾವಧು ಸಂಜೆಗೆಂಪಿನಿಂ ರಂಜಿಪವೋಲ್ ||
ಸುದತಿಯನದೊರ್ವ §ವಧು ರಾ |
ಗದೆ ಕುಂಕುಮದಂಗರಾಗದಿಂ ರಂಜಿಸಿದಳ್ ||೬೩೮

ಕಲಕಾಂಚಿಯ ಘಂಟಿಗೆಗಳಿಂ |
ಲಲನೆಯ ಲಾವಣ್ಯ †ನದಿಯ ನೀರ್ವಕ್ಕಿಗಳೊಂ ||
ದುಲಿಪಮೆನಲುಲಿಗುಮೆನುತುಂ |
ಲಲನೆಗೆ $ಬಂಧಿಸಿದಳಬಲೆ ಮಣಿಮೇಖಲೆಯಂ ||೬೩೯

ಬಂಬಲ್ಮಿಱು ಮದನನ ನನೆ |
ಯಂಬಿನ ಪ್ರೊದೆಯೆನಿಸಿ ಕಣೆಯನಳವಟ್ಟಿರೆ ಮು ||
ಯ್ವಂ ಬಳಸಿದ ಮೇಲುದು ಕುಚ |
ಮಂ ಬಿಗಿದಿರೆ ಗುರುನಿತಂಬೆ ದುಗುಲಮನುಟ್ಟಳ್ ||೬೪೦

ಅಸುರಾರಿಗೆ ಸೋಲ್ತಂದ |
ಯ್ದುಸರಕ್ಕೆಡೆಗೊಟ್ಟ ಸತಿಯ ಕುಚಯುಗ ‡ಮಧ್ಯಂ ||
ತ್ರಿಸರಕ್ಕೆಡಗುಡದೆಂತೆಂ |
ದೆಯುಳ್ಗಿಸಿ‖ಏಕಸರಮನಿಕ್ಕಿದಳೊರ್ವಳ್ ||೬೪೧

ಸ್ತನಪುಳಿನದಲ್ಲಿ ಸೂಸಿದ |
ತನುಲಾವಣ್ಯಾಪಗಾಪಯಃಕಣಗಣಮೆಂ ||

---

§ ಳನು. † ನಿಧಿ $ ಕಟ್ಟಿದ. ‡ ಮಧ್ಯದೊಳ್ ‖ ಏಕಸರಂ ನಾಸಳಲ್ಬಾರದು | ಬಿಸವಂದಮಿದೆನಿಸಿ ಯುವತಿಗೆಸೆದುದು ಹಾರಂ.

ಬಿನೆಗಂ ಕುಚದೊಳ್ ನೀಹಾ ।
ರನಿಜೋಜ್ಜ್ವಲಹಾರಮೆಸೆಯೆ ¶ರುಕ್ಮಿಣಿಯೆಸೆದಳ್ ॥ ೬೪೦
ಮಂಡಳಸೆ ನಿಂದುವೀಕೆಯ ।
ಪಾಂಡುರಲೋಲತ್ಕಟಾಕ್ಷಕಿರಣಚ್ಛಟೆಗಳ್ ॥
ಗಂಡಸ್ಥಲದೊಳನಲ್ ಬಗೆ ।
ಗೊಂಡುವು ಪೊಸಮುತ್ತಿನೋಲೆಗಳ್ ಶಶಿಮುಖಿಯಾ ॥ ೬೪೩
ಎಳವಿಸಿಲಂ ಕೆಲ್ಲೆ ಮಣಿ ।
ಕೆಳೆಗೊಂಡಿರ್ಪುವು ಮುಗ್ಧ ಶಶಿಯು ಸಮೀಪ ॥
ಸ್ಥಳದೊಳೆನೆ ಚಿನ್ನ ಪೂಗಳು ।
ಮಳಕಂಗಳ್ ನಿಟಲತಟದೊಳೆಸೆದುವು ಸತಿಯಾ ॥ ೬೪೪
(ಜಗನ್ನಾಥವಿಜಯಂ)

ಮಿಗೆ ವಿರಹಿಕರಿಗಳಂ ಪೊ ।
ಯ್ಯುದ್ದಿಪಂಗಜನಸಿಯೊಳಡರೆ ಪತ್ತಿದ ಪೊಸಮು ॥
ತ್ತುಗಳೆನೆ ಸೋರ್ಮುಡಿಯೊಳ್ ಮ ।
ಲ್ಲಿಗೆಯ ಸರಂ ಕಣ್ಗೆ ವಂದುದಾಕಾಮಿನಿಯಾ ॥ ೬೪೫

ಸುದತಿಯ ದಿವ್ಯಗಂಧತನುಚಂದನಶಾಖೆಯೊಳಂಗಜಾಹಿಯಿ ।
ಕ್ಕಿದ ಪರೆಯಂತಿರುಟ್ಟ ದುಗುಲಂ ಕುಚಕೋಕಯುಗಂಗಳಡ್ಡಗ ॥
ರ್ಚಿದ ಬಿಸದಂತೆ ಹಾರಲತೆ ಕಣ್ಗೆವರಲ್ ಸುಲಿಪಲ್ಲ †ಪಜ್ಜೆಯೊ ।
ಪ್ಪಿದದು ಸುಧಾಂಶುಬಿಂಬವೆಳಮುತ್ತನೆ ಮುಕ್ಕುಳಿಸಿರ್ದದೆಂಬಿನಂ ॥ ೬೪೬
(ಅರ್ಧನೇಮಿಪುರಾಣಂ)

ಅವೆಡೆ ಹಂಸೆಗಿನಡೆಯ ಚೆಲ್ವನೆ ನೂಪುರದಿಂಚರಂ ಸ್ಮರಂ ।
ಜೇವೊಡೆದಂದವಾಗೆ ಮೃದುಪಾದತಳಂಗಳ ಕೆಂಪು ಕೂಡೆ ಕೆಂ ॥
ದವ ರೆವೂಗಳಂ ಕೆದಱುವಂತಿರೆ ಕುಂತಳಸೌರಭಕ್ಕೆ ಭೃಂ ।
ಗಾವಳ ಮೇಲೆ ಪೀಲಿದಟಿಯಂತಿರೆ ಬಂದಳದೊಂದು ಲೀಲೆಯಿಂ ॥ ೬೪೭
(ಮಲ್ಲಿನಾಥಪುರಾಣಂ)

¶ ಕಾಂತೆ ಬಿಂಕಮನಾಂತಳ್. † ಕಾಂತಿ.

ಶಂಬರವೈರಿ ತನ್ನ ಸೆವ ದೃಷ್ಟಿಸುಧಾರಸವೃಷ್ಟಿಯೊಳ್ ತಗು ।
ಳ್ದಂಬಿನ ವೃಷ್ಟಿಯಂ ಕಱುವಿನಂ ವನಮಾಲಿ ಕಟಾಕ್ಷಮಾಲೆಯಿಂ ॥
ದಂಬುಜನೇತ್ರೆಯಂ ಬಳಸುವಾಗಳನಂಗತರಂಗಿಣೀತರಂ ।
ಗಂ ಬಳಸಿರ್ದ ಪದ್ಮಿನಿಯ ಭಂಗಿಯನಾಲಲಿತಾಂಗಿ ತಾಳ್ದಿದಳ್ ॥೬೪೮

(ಜಗನ್ನಾಥವಿಜಯಂ)

ಪುಳಕಂ ಜಾನಕಿಗುತ್ಸವಂ ಜನಕರಾಜಂಗುಮ್ಮಳಂ ಖೇಚರಾ ।
ವಳಿಗುದ್ವೇಗಭರಂ ನರೇಂದ್ರಸುತಸಂದೋಹಕ್ಕೆ ಸಮ್ಮೋಹನಂ ॥
ಲಳನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ ।
ವಳಿಗಾಯ್ತೋಱಿಸಿ ನೀವಿ ಜೇವೊಡೆಯೆ ವಜ್ರಾವರ್ತಮಂ ರಾಘವಂ ॥೬೪೯

(ರಾಮಚಂದ್ರಚರಿತಪುರಾಣಂ)

ಲೋಲಕಟಾಕ್ಷಮಾಲೆ ವನಮಾಲೆಗೆ ಚಂದ್ರಿಕೆವೀಱೆ ಕೈಯ ಪೂ ।
ಮಾಲೆಗೆ ಭೃಂಗಮಾಲೆ ಮೊರೆದೆಯ್ದೆ ಶಿರೀಷದ ಮಾಲೆಯಂ ಪ್ರಭಾ ॥
ಮಾಲೆಯನೇಳಿಸುತ್ತಿರೆ ಭುಜಂ ನಖಮಾಲೆ ಮಯೂಖಮಾಲೆಯಂ ।
ಸೋಲಿಡೆ ಬಾಲೆ ಬಂದು ವನಮಾಲಿಗೆ ಮಾಲೆಯನೊಲ್ದು ಸೂಡಿದಳ್ ॥೬೫೦

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಅಲಂಕಾರವರ್ಣನಂ.

೨೭. ಸುರತ ವರ್ಣನೆ.

ನೆಗೆ*ಟ್ಟಿಡೆನೂಲ ಗೆಜ್ಜೆಯುಲಿ ಕೀರದ ಸಾರಿಕೆಯಿಂಚರಂಗಳಂ ।
ಮಿಗೆ ಚರಣಸ್ಫುರನ್ನಖಮಯೂಖದ ಬೆಳ್ಪುಪಹಾರಪುಷ್ಪಮಂ ॥
ದ್ವಿಗುಣಿಸೆ ಸುಯ್ಯ ಕಂಪಗರುಧೂಪದ ಕಂಪನದಿರ್ಪೆ ದೀಪಕಾಂ ।
ತಿಗೆ ತನುಕಾಂತಿ ಮಾರ್ಮಲೆಯೆ ಪೊಕ್ಕಳಳಾನುತೆ ವಾಸಗೇಹಮಂ ॥೬೫೧

(ಜಗನ್ನಾಥವಿಜಯಂ)

ಎೞ್ ಹಾಲಂ ಹಂಸೆಗಾಸ್ಯಾಂಬುಜಕೆ ಬಯಸಿ ಬಂದಪ್ಪುದಂಭೋಜದೊಳ್ ನೀಂ । ಸೆಱೆಗೆಯ್ ಮುತ್ತಾಳಿಯುಂ ಪಾಯ್ದಪ್ಪುದಿನಿಯಳ ನಿಶ್ವಾಸದೊಳ್ ಸೋಗೆ ಕೂಂದಲ್ಗೆ ॥ ಱೆಯುಂ ಕಾಳೋರಗಂಗೆತ್ತೆಳಸಿದಪ್ಪುದು ಧಾರಾಗ್ರಹಂದೋಱು ಪಣ್ಣಂ । ತಿಱಿದೀಕೀರಂಗೆ ಬಿಂಬಾಧರಕೆ ಬಯಸಿ ಬಂದಪ್ಪುದೆನ್ನಂದದಿಂದಂ ॥೬೫೦

(ಕವಿಕುಂಜರಲೀಲಾವತಿ)

ಚಲಲೋಚನೆ ಚಂದ್ರಾತಪ ।
ವಿಲಾಸಮುಖಚಂದ್ರಬಿಂಬಮೀಗಳ್ ತಾರಾ ॥
ವಲಯಿತಮಾಯ್ತೆನಲಿಕ್ಕಿದ ।
ನಿಲಾಧಿಪತಿ ಸತಿಯ ಕೊರಲೊಳಕ್ಕಾವಳಿಯಂ ॥೬೫೩

(ಮಲ್ಲಿನಾಥಪುರಾಣಂ)

ಅತಿಮುಗ್ಧಾಪಾಂಗಭೃಂಗಂ ಮುಖಸರಸಿಜದೊಳ್ ತನ್ನ ಬಾಹಾಭುಜಂಗಂ
ಸುತನುಶ್ರೀಖಂಡಶಾಖಾಂತರದೊಳಧರಸದ್ವಿದ್ರುಮಂ ದಂತಮುಕ್ತಾ ॥
ತತಿಯೊಳ್ ಪಾಣಿಪ್ರನಾಳಂ ಕುಚಕಲಶದೊಳಂಬಾಗೆ ತಳ್ತಿರ್ದನಿಂದ್ರ ।
ಪ್ರತಿಮಂ ಲೀಲಾವತೀದೇವಿಯ ಹೃದಯದೊಳಾರೂಪಕಂದರ್ಪದೇವಂ ॥

(ಕವಿಕುಂಜರಲೀಲಾವತಿ)

ಚರಣಾಲಕ್ತಕಲಾಂಛನಂ ನಿಟಿಲದೊಳ್ ಕೇಯೂರಮುದ್ರಾಂಕಿತಂ ।
ಕೊರಲೊಳ್ ಕಜ್ಜಲರೇಖೆ ತನ್ನಧರದೊಳ್ ತಾಂಬೂಲರಾಗಂ ದೃಗಂ ॥
ತರದೊಳ್ ಪುಷ್ಪಗಜಃಪ್ರಲೇಪಮುರದೊಳ್ ತಳ್ಪೊಯ್ಯೆ ನಿಚ್ಚಂ ವಿಟ ।
ತ್ರರತಪ್ರೌಢತೆ ಭಾವಗೆಮ್ಯಮೆನಿಕುಂ ಶ್ರೀರೂಪಕಂದರ್ಪನಾ ॥೬೫೫

ಸಮಪಾದಂ ಕಟಿಪಾರ್ಶ್ವದಲ್ಲಿ ನಿಲೆ ಬೆನ್ನಂ ಮೋದೆ ಕೇಶಾಳಿ ಗಂ ।
ಡಮನೋರಂತಿರೆ ಪೊಯ್ಯೆ ಕುಂಡಲಯುಗಂ ಖಂಡೇಂದುಭಾಲಸ್ಥಲಾ ॥
ಗ್ರಮುಮಂ ತಾಗೆ ಚಳಲ್ಲಸದ್ಭ್ರಮರಕಂ ಸಂಭೋಗಿನೀಪ್ರಾಂತದೊಳ್ ।
ಸಮಸತ್ತ್ವಂಬಡುವಂತಿರಾಯ್ತು ಸುರತಪ್ರಾರಂಭಕೋಳಾಹಳಂ ॥೬೫೬

ತೊಡೆತೊಡೆಯೊಳ್ ಜೆಗಿಲ್ತುಡರೆ ಸೂಳದವಳ್ಕುಱೊಳಾಡೆಚಿತ್ತದೊಳ್ ।
ಪೊಡೆ ತನು ಬೇಱುವಲ್ಲವೆನೆ ಪತ್ತಿದ ಮೆಯ್ಗೆ ಸಡಿಲ್ಗುಮೆಂದು ಕೀ ॥
ಲ್ಕುಡುವವೊಲಾಗೆ ತೋಳ ಬಿಗಿಪೊಂದಿರೆ ಕೋಡುತಳಂಗಳಂ ಸಮಂ ।
ತೊಡನೊಡನಪ್ಪಿದರ್ ಭರದ ಕಾಳಸೆಯಂತಿರೆ ತಮ್ಮೊಳರ್ವರುಂ ॥೬೫೭

ಎಡೆಯುಱದು ತೊಳಗುವಂತಿರೆ ।
ಸಿಡಿಲ್ದು ಪೊಯ್ಯುತ್ತುಟ್ಟುದಾಗಳಂಗಜಕಲೆಯೊಳ್ ॥
ನಡೆ ಮೊಗಮಿಕ್ಕಿ ಲಯಂಗಿಡ ।
ದೊಡನುಲಿದುವು ಬೆರಲ ಕೊರಲ ನಾಲಗೆಯುಲಿಗಳ್ ॥೬೫೮

(ಶೂದ್ರಕಂ)

ಸವಿನಾಣ್ಮೊಣಿಸಿ ಬೈಯ್ವ ಬೈಯ್ಗಳನೆ ಬಾಯುಂ ಬಿಟ್ಟು ಲೀಲ್ಲೃಸಿ ಬೇ।
ಡುವ ಬೇಡಿತ್ತೊಳಕ್ಕೆಯುದೆಂಪು ಪದಪಿಂದಂ ಪೊಯ್ವ ಪೊಯ್ವೇಱ್ದ ಪೊ ॥
ಣ್ಮೊವ ರೋಮಾಂಚವ ಸಾಲನೆತ್ತುವ ತವಿಲ್ಕಾರ್ಕಂಡು ಹಮ್ಮೈಸಿ ಹಾ ।
ರವದಿಂದೆಚ್ಚಱು ಪೆರ್ಚೆ ಪೆರ್ಚೆ ನೆರೆದತಮ್ಮಿಚ್ಚೆಯಿಂ ಕಾದಲರ್ ॥೬೫೯

(ಅನಂತನಾಥಪುರಾಣಂ)

ಕರಕೃಷ್ಟಾಲಕಮುತ್ಪಲಾರ್ಪಿತನಖಂ ನಿಷ್ಪೀಡಿತೋಷ್ಠಂ ಸಮು ।
ತ್ಸರಹಸ್ತಾಹತಿ ಹೂಂಕೃತಾನ್ವಿತಪದಾಘಾತಂ ಯಥೇಚ್ಛಾವಚ ॥
ಸ್ಸ್ಫುರಣಂ ಸಭ್ರೂಕುಟೀಕ್ಷಣಂ ದೃಢಪರಿಷ್ವಂಗಂ ವಿಮುಕ್ತಾಂಗಸಂ ।
ವರಣಂ ಕೈತವವೃತ್ತಮೇಂ*ನೆಗೆಟ್ದುದೋ ಸಂಭೋಗಕೋಳಾಹಳಂ ॥೬೬೦

ಅವಲುಪ್ತಾಂಗವಿಲೇಪನಂ ಚ್ಯುತಲಲಾಮಂ ಸ್ರಸ್ತಮಾಲಾಳವ ।
ಕ್ತ್ರವತಂಸಂ ಶ್ಲಥಮೇಖಲಂ ತ್ರುಟಿತಹಾರಂ ಮುಕ್ತಮಂಜೀರಕಂ ॥
ಪ್ರವಿಕೀರ್ಣಾಳಕವಸ್ತ್ರಬಂಧಕಜರಂ ಸ್ವಿನ್ನಾಂಗವಾರಕ್ತನೇಂ ।
ತ್ರವರಾಗಾಧರಮಾಯ್ತು ಕಾಮಕಲಹಂ ಸತ್ರಾಜಿತೀದೇವಿಯಾ ॥೬೬೧

ಸರಸೀಜಾಕ್ಷನೊಳತ್ತುದಾಸತಿಯ ಸಂಭೋಗಂ ಸನೃತ್ಯತ್ಕುಚಂ ॥
ಸರುವತ್ಕಾಂಚಿ ಸಚುಂಬನಂ ಸಪರಿರಂಭಂ ಸಪ್ರಹಾರಂಸಿನಿ ?॥

ಘರ್ಘರನಕ್ರಶ್ವಸಿತಂ ಸಲಿಲನುತಿಸಸ್ನೇಹಂ ಸರೋವರೋದ್ಗಮಂ ।
ಸರಸಾಂಗಂ ಸನಿಮೀಳಿತಂ ಸಸಮುಪಾತಂ ಸೌಖ್ಯಸಂಪತ್ತಿಯಂ ॥೬೬೨

ಶಕುನಿವ್ರಾತಾರವಂ ಮನ್ಮಥರಥಬಲವದ್ಭೀಂಕೃತಂ ಕಂಠನಾದಂ ।
ಮಕರಾಂಕಜ್ಯಾಲತಾಟಂಕೃತಮತಿಪೃಥುಹಸ್ತಪ್ರಹಾರಸ್ವನಂ ಪ ॥
ರ್ಘಕಭೇರೀಭಾಂಕೃತಂ ತಾನೆನೆ ಯುವತಿರತಾರಂಭಕೋಳಾ $ಹಳಂ ಕೌ ।
ತುಕಮಂತಾಕಂತುಸೇನಾಕಳಕಳದವೊಲಾಶ್ಚರ್ಯಮಂ ತಂದುದಾಗಳ್ ॥೬೬೩
(ಜಗನ್ನಾಥವಿಜಯಂ)

ಸ್ತನಯುಗ್ಮಂ ತಲ್ಪದೊಳ್ ಕಿಲಿಸೆ ಮುಖಕಮಲಂ ಸಾಚಿಯಂ ಬೀಱೆ ತನ್ನಿಂ । ತನುಮಧ್ಯಂ ಬಳ್ಕೆ ಬೆನ್ನಿರ್ಮಡಿಸೆ ಜಘನದೊಳ್ ಪತ್ತೆ ಹಸ್ತಾಗ್ರದೊಳ್ ಕಂ ॥ ಠನಿನಾದಂಬೆರ್ಮೆಸುತ್ತುಂ ಶುಕಪಿಕಶಕುನೀನಾದಮೊಟ್ಟೈಸೆ ಚಿತ್ರಾ । ಸನೆ ತಚ್ಚಿತ್ತಪ್ರಿಯಂಗೇಂ ಮೆಱೆವಳೊ ಸುರತಕ್ರೀಡೆಯಂ ಪ್ರೌಢಿಯಿಂದಂ ॥೬೬೪

ಸಮರತಸೌಖ್ಯದೊಳ್ ಸತಿ ದಿಗಂಬರವೇಷಮನಾಂತು ಮುಕ್ತಕೇ ।
ಶಮುದೆಸೆಯಲ್ಕೆ ಕಣ್ ದರನಿಮೀಲಿತಮಾಗೆ ದಲಾಸನಕ್ರಮಂ ॥
ಸಮನಿಸೆ ಹೂಂಕೃತಪ್ರಣವಮೊಪ್ಪೆ ಶರೀರಮನೊಕ್ಕು ತನ್ಮನೋ ।
ರಮಣನ ಸನ್ನಿಧಾನಮನುಪಾರ್ಜಿಪ ಯೋಗಿನಿಯಂತಿರೊಪ್ಪಿದಳ್ ॥೬೬೫

ಕದಪಿನ ಕಣ್ಣಸಾರ್ಕೆಯನಳಂಕೃತಮಪ್ಪ ಗಳಪ್ರದೇಶಮಂ ।
ಮದಕದ ತಾಣಮಂ ಕುಚತಟಾಂತರಮಂ ಘನಬಾಹುಮೂಲಮಂ ॥
ಮೃದುರಸನಾಗ್ರಮಂ ಬಯಸಿ ಚುಂಬಿಸಿದರ್ ಸ್ಮರನಿರ್ಮಿತಾಂಗುಲೀ ।
ಕದ ಕುಸುಮಂಗಳಂ ಪಱಿದು ಪತ್ತಿಸಿದಂತೆವೊಲೊಪ್ಪಿ ತೋರ್ಪಿನಂ ॥೬೬೬
(ಶೂದ್ರಕಂ)

*ಅಲರ್ಗಣೆ ಬೆಂಡೇಱೆ ರೋಮಾಂಚನದೊದವಿನಿಸುಂ ತಟ್ಟುತಾಱಾಗೆ ಬಾಯೊಳ್ । ಪಲವುಂ ನುಣ್ಮಾತುಗಳ್ ಲಾವಗೆಯ ಕೊರಲನಲ್ಲಾಡಿಪಂತಾಗೆ

$ ಹಳಧ್ವಾ । ನಕವಿಂತಾ.

ಜುಮ್ಮೆಂ ॥ ದೊಲೆದಂಗಂ ತೂಗೆ ಸುಯ್ಲಂತೊಳಗಿಱಿಯೆ ರವಂ ಪ್ರೇಕ್ಷ್ಮೆ ನಾ
ಣ್ನೂಸೆ ಕಾವೋ । ಚ್ಚಲದಿಂ ಕೈಮಿಕ್ಕಮಳ್ಜಂತ್ರಮನೆ ಕೆಡಪಿದಂತಿರ್ದ
ರುಂ ಮೂರ್ಛೆವೋವರ್ ॥೬೬೭ (ಅನಂತನಾಥಪುರಾಣಂ)

ಅಳಕಂ ತುಂಬಿವೊಲಾಡೆ ತುಂಬಿದ ಕುಚಂ ಚಕ್ರಾಂಕದಂತಾಡೆ ಕಣ್ ।
ಗೆಳೆಮೀನಾಟಮನಾಡೆ ಮುದ್ದುಮೊಗಮಂಭೋಜಾತದಂತಾಡೆ ನೀರ್ ॥
ತಿಳಿನೀರಂತೊಗೆದಾಡೆ ನೂಪುರಮರಾಳೋನ್ಮಾದವಾವ್ಯಕ್ತೆ ಪೂ ।
ಗೊಳನೆಳ್ದಾಡುವವೊಲವಳ್ ಮೆಱೆದಳೋ ಕಾಂತಾಯುತಪ್ರೌಢಿಯಿಂ ॥೬೬೮

ತೂಡಿಱಿವ ಮದನರದನಿಯು ।
ಕೋಡಿಂದುಗುವರುಣಜಲಮಿದೆನಲುಪರಿರತ ॥
ಕ್ರೀಡೆಯೊಳೊದವಿತು ಕುಂಕುಮ ।
ಮೂಡಿದ ನೆಲೆಮೊಲೆಗಳಗ್ರದಿಂ ಬೆಮರವಳಾ ॥೬೬೯

ನೀಡಿದ ಕೈಯುಱುಗಿದ ಗೋ ।
ಣಾಡದ ವದನಾಂಬುಜಾತಮರೆಮುಚ್ಚಿದ ಕಣ್ ॥
ಪೊಡೆಱದಂಗಂ ಬಿಡುಮುಡಿ ।
ನೋಡಿವಳುಪರತಿಯು ಸತಿಯೊ ಶೂಲದ ಪೆಣನೋ ॥೬೭೦
(ಕವಿಕುಂಜರಲೀಲಾವತಿ)

ಬಲಗಾಲಂ ನಿಮಿರ್ದೆತ್ತಿ* ನಿಲ್ಕೆ ಕಟಿಯಂ ವಾಮಾಂಘ್ರಿಯಂಗುಷ್ಠದಿಂ ।
ನೆಲನಂ ಮೆಟ್ಟೆ ಲತಾಂಗಿ ವಾಮಕರದಿಂದಂ ವಿಗ್ರಹಂಗೆಯ್ದು ಶೇ ॥
ಷಲತಾಪಾಣಿ ಪಯೋಧರಂ ನಿಮಿರೆ ಗಾಢಾಲಿಂಗನಂಗೆಯ್ದು ತ ।
ನ್ನೊಲವಂ ಬೀಱಿದಳೋಪವಂಗೆ ಕೃತವೃಕ್ಷಾರೋಹಣಪ್ರೌಢಿಯಿಂ ॥೬೭೧
(..............) ?

ಉರದಿಂ ಪೆರ್ಮೊಲೆ ಬೆಂಗೆ ಮೂಡೆ †ಬೆಮರ್ಗಳ್* ಬಲ್ವಜ್ರಲೇಪಂಬೊಲಾ।
ಗಿರೆ ಕೀಲ್ಗೊಟ್ಟ ಜಡಂಗನೀಯೆ ಪುಳಕಂ ತೋಳ್ತೋಳ್ಗೆ ಗಂಟಿಕ್ಕಿದಂ ॥

† ಬೆಮರ್ವರ್ಗಂಬುಂಬ.

ತಿರೆ ಮೆಯ್ ಮೆಯ್ಯೊಳಡಂಗುವಂತವರೆ ಗಾಢಾಲಿಂಗನಂಗೆಯ್ದು ನ ।
ಲ್ಲರದೇನೆರ್ದರೊ ಕಾಸಿ ಬೆಚ್ಚ ತೆಱದಿಂ ಶ್ರೀಸತ್ಯಭಾಮಾಚ್ಯುತರ್ ॥೬೩೦

(ಜಗನ್ನಾಥವಿಜಯಂ)

ತೆಱಪೞಿದೊಪ್ಪಿದಪ್ಪಿದೊಡೆ ಮೆಯ್ಮಱೆವಪ್ಪುಸಡಿಲ್ದುದರ್ಕೆ ಮೆ ।
ಯ್ಯೞಿವ ಪೊದಳ್ದುಬಾಯುಗಿಗೆ ಮೆಯ್ಮಱೆವಂತದು ಮೆಲ್ಲನಾಗೆ ಮೆ ॥
ಯ್ಯೞಿವ ಜವಂ ಜವಂಗಿಡಿಸೆ ಮೆಯ್ಮಱೆವಾಸನಸಲ್ಲಟಕ್ಕೆ ಮೆ ।
ಯ್ಯೞಿವೆಡೆಯಾದುವಂದವರ್ಗೆ ನೂತನಸಂಗರಠಾತಿರೇಕದೊಳ್ ॥೬೩೧

(ಕವಿಕುಂಜರಲೀಲಾವತಿ)

§ ಉರದಿಂ ಬರಿಯಿಂದಗ್ರಂ ।
ಬರೆಗಂ ಕೆಂಪೆಸೆಯೆ ನೀಳ್ದ ನಖರೇಖೆಯೆಸ ॥
ಳ್ದ್ವಾರೆಯೆನಿಸಿ ಪದ್ಮಕುಟ್ಮಲ ।
ದಿರವಂ ಪರಿಭವಿಸಿತೀಕೆಯುತ್ಕುಚಯುಗಳಂ ॥೬೩೪

ಮಿಱುಗುವ ವಿದ್ರುಮಾಧರದ ಮಧ್ಯದೊಳಾಯತವೃತ್ತಮಾದ ನು ।
ಣ್ಗೞಿಯಿದು ಮನ್ಮನಕ್ಕೆ ಪಡೆದಪ್ಪುದು ಮನ್ಮಥವಹ್ನಿತಾಪದಿಂ ॥
ಮಱುಕಮನಪ್ಪುಕೆಯ್ದೆರ್ದೆಯೊಳರ್ಪುದನೊಲ್ಲದೆ ಬಾಯ ಬಾಗಿ $ಲೊಳ್ ।
ನೆಱೆ ಪೊಱಮಟ್ಟು ಪೋದಿವಳ ಲಜ್ಜೆಯ ಪಜ್ಜೆಯಿದೆಂಬ ಪೋಲ್ವೆಯಿಂ ॥

(ಚಂದ್ರಪ್ರಭಪುರಾಣಂ)

ಸುಯ್ಯ ಮಿಡುಪುಡುಗದಿರೆಯುಂ ।
ಮೆಯ್ಯ ನಿಮಿರ್ಗೆದೆಯುಮಂತೆಲುಂದದಿನಿರುಳೊಳ್ ॥ (?)
ಬಯ್ಯಲೆ ಪೊಯ್ಯಲೆ ಕುರುಳಂ ।
ಕೊಯ್ಯಲೆ ಬೆಳಗಾಯ್ತು ವಿನಯವತಿಗಂ ಪತಿಗಂ ॥೬೩೬

ತಾಗದೆ ಪಲ್ಗಳ ತುದಿ ಪ್ರ ।
ಣ್ಣಾಗದೆ ನಡು ಕಂದದೊಳಗುನೋಯದೆ ಸವಿಗಿಂ ॥
ಬಾಗಿ ರತರಾಗದುರುಳಪ್ಪೊ ।
ಲಾಗೆ ಕರಂ ಬೀಗಿ ಬಾಯ್ಗಳಂ ಚುಂಬಿಸಿದರ್ ॥೬೩೭

(ಶೂದ್ರಕಂ)

§ ಕೊರಲಿಂ, $ ಲಿಂ.

ಗಳನಾದಂ ತಳ್ತ ನೀರ್ವಕ್ಕಿಗಳುಲಿ ಚಳಚೂರ್ಣಾಲಕಂ ಭ್ರಾಂತಭೃಂಗಾ।
ವಳಿ ಸಸ್ವೇದಪ್ರಕಂಪಂ ಮೊಲೆ ನೆಗೆವ ರಥಾಂಗಂಗಳಾಗಲ್ಕೆ ಸಂಭೋ ॥
ಗಳಸತ್ಕಾಂತಾಸ್ವರೂಪಂ ಸೊಗಸಿನ ಕೊಳನಂ ಪೋಲೆ ತಾಂಪೀರ್ದನೊಲ್ದು ।
ಳ್ಳಲರ್ದ*ಸ್ಯಾಂಭೋಜದಿಂ ಪುಳ್ಳಲರ್ದ*ಧರಮನಾಸಂದದಿಂ ರಾಜಹಂಸಂ ॥

ತೆಂಬೆಲರಂತೆ ಸೋಂಕೆ †ಮೃಗದಂತಿರೆ ಮೇಳಿಸಿ ತುಂಬಿಯಂದದಿಂ ।
ಚುಂಬಿಸಿ ಸೊಕ್ಕನಿಕ್ಕಿ ಮುಪಿಕ್ಕಿ ಪದಂಬಿಡೆ ಚಿತ್ತಮೆಯ್ದೆ ನಾ ॥
ಣಂಬಿಡೆ ಬಿಟ್ಟು ಮೆಯ್ಯಱಿದು ಮೋನ್ನವಿರುರ್ಬೆ ಪೊದಳ್ದಲರ್ಚೆ ಮೆ ।
ಯ್ಯಂ ಬಿಗಿದಪ್ಪಿ ಬಾಲೆಯ ಭಯಂಗಳೆವಂ ನವಸಂಪ್ರಯೋಗದೊಳ್ ॥೭೯

ಬದೆದುಗುರಿಂದೆ ಬಾರುಗಿದುದೆಯ್ದದೆ ಕುತ್ತಿದಳಪ್ಪಿ ಕಂಟಕಾ।
ಘದಿನಳಿಪಾಱಿದವ್ವಳಿಸಿ ಪೆಂಡಳದಿಂದೊಳಪಾಯ್ದು ಪೊಯ್ದುದೆ ॥
ಯ್ದದೆ ಕುಚಕುಂಭದಿಂದಿಱಿದಳೇವದೆ ಬಾಸಿಗದಿಂದವೋದಿ ತೆ ।
ಯ್ದದೆ ಕಡೆಗಣ್ಗಳಿಂದಿಱಿದಳೇಸನನೋಪಳನಂಗಯುದ್ಧದೊಳ್ ॥೮೦

ಬದೆಸು ಕಲಂಕೆ ಪಾಯ್ವ ಪದದೊಳ್ ಪದವೆತ್ತು ಪುಡುಂಕುನೀರನ ।
ರ್ದಿದಳುಱಿವೋದಿ ಮುಂದಲೆಗೆ ಪಾಯ್ದು ಪೊರೞ್ಚಿದಳಕ್ಕೆ ಬಾಹುಪಾ ॥
ಶದೊಳ್ ತೊಡರ್ಚಿದಳ್ ಕರದ ಕೂರುಗುರಿಂದಮೆ ಬೆನ್ನ ಬಾರನೆ ।
ತ್ತಿದಳವಳಾಱದೋವದವನಂ ವನಿತಾಜನಚಿತ್ತಚೋರನಂ ॥೮೧

(ಕವಿಕುಂಜರಲೀಲಾವತಿ)

ಮಾನಿನಿಯು ಸುರತರತ್ನನಿ ।
ಧಾನಂ ಚಾತುರ್ಯದೀಪವರ್ತಿಯಿನಿಂದೆ ॥
ತಾನುಂ ಕೊಳ್ಳೆಯ್ತನಲಾ ।
ಮಾನಿನಿಯೊಳ್ ಚಕ್ರಿ ಸುರತಸುಖ §ಮುಂ ಪಡೆದಂ ॥೮೨

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಸುರತವರ್ಣನಂ.

† ಖಗ. § ದಿಂದರ್ದಂ.

೨೭. ಮಾಗಿಯ ವರ್ಣನೆ.

ಅಣಿಯರಮಾಗಿ ಮೂಡಗಡಲೊಳ್ ತೆರೆಮಾಲೆಯನೆತ್ತಿ ದೇವವಾ ।
ರಣಕರಶೀಕರೋತ್ಕರಮನಾಂತು ಶಚೀರಮಣಾಭಿಷೇಕಮಾಃ ॥
ಕಣನಿಕುರುಂಬಮಂ ತಳಿದು ಬಂದೆಸಗಿತ್ತತಿಶೈತ್ಯಕಾರಣಂ ।
ಪ್ರಣಯವಿಯುಕ್ತವಲ್ಲಭವಿದಾರಣನಿಂದ್ರದಿಶಾಸಮೀರಣಂ ॥೬೮೩

ಹಿಮವನಲರ್ಚಿ ತೀಡೆ ಪವನಂ ವನಮಾಲೆಗೆ ಪೋಯ್ತು ವಿಭ್ರಮಂ ।
ಭ್ರಮರನಿಷೇವ್ಯಮಾಯ್ತು ಕುಮುದಂ ಮುದಮಂ ಪಡೆದತ್ತು ಪಣ್ತು ಕ ॥
ರ್ಬಮೃತರಸಾವಿಳಂ ವಿಳಯಮೆಯ್ದಿದುದಬ್ಜವನಾಳಿ ನಾಳಿಕೇ ।
ರಮನವಲಂಬಿಸಿರ್ದುದು ಫಲಂ ರಸಪೂರಿತಮಾಗಿ ಮಾಗಿಯೊಳ್ ॥೬೮೪

(ಜಗನ್ನಾಥವಿಜಯಂ)

ಶಿತಿಯೊಡನಿರ್ದ ನಲ್ಲರ ಮುಖಾಂಬುರುಹಂ ಪೊಱತಾಗಿ ಮಿಕ್ಕ ಕಂ ।
ಜಾತಮುದಾವ ಲೆಕ್ಕಮಸುರಾರಿಯ ಪೊರ್ಕುೞ ಪದ್ಮಮಂ ಖರ ॥
ದ್ಯೋತಿಯ ಕೈಯ ಕಂಜಮುಮನೆಯ್ದೆ ಮುಸುಳ್ದುಗುಮೆಂಬಿನಂ ಜಗ ।
ತ್ಕೌತುಕಮಾಯ್ತನುಷ್ಣಮಹಿಮಂ ಜನಿತೋತ್ಕಟಬಂಹಿಮಂ ಹಿಮಂ ॥

(ಪುಷ್ಪದಂತಪುರಾಣಂ)

ಉಡುಗೆಲೆ ಗರ್ವಮಂ ಕುಱಿಯ ಕಂಬಳಿ ಮಾಳಗೆ ಮಾಣ ದರ್ಪಮಂ ।
ಮಿಡುಕದಿರೆನ್ನೊಳೋವರಿ ತೃಣಾಲಯ ನೀಂ ಲಯಮಾಗಿ ಪೋಗೆನು ॥
ತ್ತಡಿಗಡಿಗಂಗನಾಸ್ತನಮೆ ನಿನ್ನನೆ ಮನ್ನಿಪೆನೆಂದು ನಿಚ್ಚಲುಂ ।
ಪೊಡೆವುದು ಡಂಗುರಂ ವಿಜಯಮಂದಿರದೊಳ್ ಹಿಮರಾಜರಾಜನಾ ॥೬೮೬

(..............)?

ಮಾಸರಮೆನೆ ಪಾರದದಿಂ ।
ಪೂಸಿದವೋಲ್ ಪೊನ್ನ ಮುಕುರಮಂ ಹಿಮಲಿಪ್ತಂ ॥
ನೇಸಱ ಬಿಂಬಂ ತಿಂಗಳ ।
ಕೂಸಿನ ವೋಲ್ ಕೋಡುತಿರ್ದುದಂದಿನ ದಿನದೊಳ್ ॥೬೮೭

ಮಱಿದುಂಬಿಗಳಂಬುರುಹದ ।
ನೞುಗಂಪಿಂ ಬಳೆದುಮವಱ ಸಿರಿ ತೊಲಗಲೊಡಂ ॥
ಮಱಿದೊಱಗಿ ನೋಡಲುತ್ಪಲ ।
ಕೆಱಗಿದುವು ವಿಜಾತಿಯಲ್ಲಿ ಗುಣಮಱಸುವುದೇ ॥೪೮೮

ನೆನೆಯಲೊಡವೆತ್ತಿ ಮನದೊಳ್ ।
ತನಿಗಿಚ್ಚಂ ಹಿಮಮನೋಡಿಸುವ ನವಯುವತೀ ॥
ಸ್ತನಭರಮಂ ತೆಗೆಡಪ್ಪಿದ ।
ಮನುಜರದೇನಱಿವುವರಿದೆ ಮಾಗಿಯ ಮಾಗಂ ॥೪೮೯
(ಕವಿಕುಂಜರಲೀಲಾವತಿ)

ಕರಿ ನಗದೊತ್ತುಗೊಂಡು ಮಿಡುಕಲ್ಕಣಮಾಱದೆ ನಿಂದೊಡಂದು ಕೇ ।
ಸರಿ ಹಿಮಸಂಗಮಕ್ಕಗಿದಳುರ್ಕೆ ಬೞಸೊಕ್ಕು ಕರೀಂದ್ರಪಾರ್ಶ್ವಮಂ ॥
ಗಿರಿಯ ನಿತಂಬಮೆಂದು ಗಡ ಸಾರ್ದು ನಿಕುಂಚಿತಗಾತ್ರಮಿರ್ದುದಾ ।
ಯೆರಡಱ ಕೋಪವಹ್ನಿಯುಮಡಂಗಿದುದಕ್ಕುಮೆ ಶೀತಘಾತದಿಂ ॥೪೯೦
(..................) ?

ನಡುಗುತ್ತುಂ ನೆನೆದಂತೆ ವಲ್ಲಭೆಯರಂ ತಳ್ಕೈಸುವರ್ ತಾಮೆ ತ ।
ನ್ನೊಡಲಂ ಮೆಯ್ಯನಿರುರ್ಚೆ ತನ್ಮಥರಮಂ ತಾಮಿಾಱಿದ್ದ ದಂತಾಗ್ರದೊಳ್॥
ಪಿಡಿವರ್ ಪಾಂಥರೆನಲ್ಕೆ ತತ್ತರುಣಿಯಾಸೋಷ್ಣಸ್ತನದ್ವಂದ್ವಮಂ ।
ಬಿಡಲೇನಾರ್ಪರೆ ಪುಣ್ಯವಂತರಿಳೆಯೊಳ್ ತಾಮಂತೆ ಹೇಮಂತದೊಳ್ ॥೪೯೧

ತಳರೊಳ್ ಮುಚ್ಚಿಟ್ಟ ಕೂಸಂ ತೆಗೆದು ಶಬರಿ ನಿಕ್ಷೇಪಮಾಗಿರ್ಪುದಂ ಕ।
ಣ್ಗಳ ನೀರಂ ತೀವಿ ಬೇಗಂ ತೊಡೆದು ಹಿಮಕಣಾನೀಕಮಂ ತೇಂಕುದಾಣಂ॥
ಗಳನಂಟಂಟೆಲ್ಲಿಯುಂ ಕಾಣದೆ ಹರಣಮನತ್ಯುಷ್ಣಮಂ ಸುಯ್ಯೆ ಸುಯ್ಯಿಂ।
ದಳೆ ಕೂಸೆಚ್ಚತ್ತು ಕಾರ್ಕಾರ್ಗಳನೆ ತೊಱೆದ ಕುಚಾಗ್ರಂಗಳಂ ನೀಡುತಿರ್ದಳ್॥

ಕೃತಶೀಘ್ರಸ್ನಾನಮುನ್ನರ್ತನವಿಕೃತಕರಾಕೃಷ್ಟವಸ್ತ್ರಾಂತರಂ ವಿ ।
ಸ್ಮೃತನರ್ಭಂ ಗದ್ಗದಾಚ್ಚಾದಿತಜಪಮುಪಸಂಜಾತರೋಮಾಂಚಮಾಕಂ ॥

ಚಿತಗಾತ್ರಾ ವಹ್ನಿಸಂದೀಪನಪಟುವಟುಗತ್ತೀಕ್ಷಣಂ ನೀರತೀರ।
ತ್ರಸ್ಥಿತವಿರ್ದಂದು ವೈಭಾತಿಕವಿಧಿವಿಹಿತಾವೇಘವಾಘಂ ದ್ವಿಜೌಘಂ ॥೯೩
(ಕವಿಕುಂಜರಲೀಲಾವತಿ)

ಬೆಳಗಪ್ಪ ಜಾವದಯ್ಕಿಲ್ ।
ಕೊಳೆ ಶೀತಕ್ಕಾಜದಳ್ಕಿ ತೊಟ್ಟಿರ್ದ ಧರಾ ॥
ತಳವೆಂಬ ಪೆಣ್ಣ ಪೊಸಕಂ ।
ಚುಳ್ಳಿಕೆಯು ಸೀಪುರ್ಮುತ್ತಿನಂದವಾದುವು ಪನಿಗಳ್ ॥೯೪
(ಶೂದ್ರಕಂ)

ಇದು ಕೆಳದೆ*ತ್ತಿ ಬರ್ಪ ಹಿಮಕಾಲನೃಪಾಲನ ಸೈನ್ಯಚಕ್ರಘೋ।
ತದ ಭರದಿಂ ಹಿಮಾದ್ರಿ ಪಥದೊಳ್ ನೆಗೆದುರ್ವಿದ ಧೂಳಿಜಾಲವು ॥
ಲ್ತಿದು ತಗುಳ್ದು*ಕಿಲಾಕ್ರಮಿಸೆ ಲೋಕಮನೆಯ್ದೆ ಸರೋಜಸಂಭವಂ।
ಪೊದಿಸಿದ ಪಾಂಡುಕಂಬಳವಿದೆಂಬವೊಲಾದುದು ಮಂಜಿನುಬ್ಬರಂ ॥೯೫
(ಪುಷ್ಪದಂತಪುರಾಣಂ)

ಪಲ್ಗಿಱಿದು ಪುರ್ಬನುರ್ಬಿಸೆ ।
ರಲ್ಗೊನೆಯಿಂ ತುಱಿಸಿ ಬರಿಯ ಸೀರ್ದುಪ್ಪಳಿಬಂ ॥
ಬಲ್ಗಳನುಗುರಿಂ ಪಿಕ್ಕಿ ಬಿ।
ಸಿಲ್ಗಾದುವದೊಂದು ಮರದ ಕೋಡೊಳ್ ಕೋಡಂ ॥೯೬
(ಜಗನ್ನಾಥವಿಜಯಂ)

ಪೊಸಪುಲ್ಲೊಳ್ ಕಿಚ್ಚನಿಟ್ಟೊದಿದೊಡುರಿದುರಿ ಕರ್ಬಾಗ್ರಮಂ ಕರ್ಚಿ ಕೈಯುಂ। ಪೊಸೆದುಂ ವಸ್ತ್ರಾಂತದಿಂ ಪೊಯಿದಿಯುಮುಗುಳ್ವಾಱಿಯಿಂ ಪೊಕ್ಕಳಂ ನಾಂದಿಯುಂ ನಂ॥ ದಿಸಲೆಂತುಂ ಪಾಂಥನಂದಾಱದೆ ನಡುಮಡುವಂ ಪೋಗಿ ¶ಬಿದಾರ್ಕ್ಷಣಂ ಕಂ। ಪಿಸುತಿರ್ಪಂ ಪುಲ್ಲ ಕಿಚ್ಚುಂ ಪೊಲೆಯುನ ಕೆಳೆಯುಂ ಮಾಡದಾವಂಗೆ ಕೇಡಂ ॥೯೭ (ಕವಿಕುಂಜರಲೀಲಾವತಿ)

ತಳರ್ದು*ಕುಲಾಯದಿಂ ಬಿದಿರ್ದೆ*ಱಂಕೆಯ ನೀರ್ವನಿಯುಂ ತೆರಳ್ದತು।
ಪ್ಪಿಱನೊಲೆದಂದು ಚಂಚುಪುಟದಿಂ ಬಿಸಿಲತ್ತಿದಿರಾಗಿ ನಿಂದು ಕ॥

¶ ಬಿದ್ಯೆರ್ಲಂ.

ಣ್ಗಳನರೆಮುಚ್ಚಿ §ಕೊಂಡು ಗಱಿಯಂ ನಸುಜೋಲಿಸಿ ಪಕ್ಕಿಗಳ್ ಮರಂ।
ಗಳ ತುದಿ †ಗೋಡೊಳಿರ್ದು ದನಿಗೆಯ್ಯುತುಮಿರ್ದುವು ಮುಂಬಗಲ್ವರಂ॥

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಮಾಗಿಯ ವರ್ಣನಂ.

೨೮. ಶಿಶಿರವರ್ಣನೆ.

ಕಡಲೊಳಗಿರ್ಪ ವಿಷ್ಣುವನಿಶಂ ಬಡಬಾಗ್ನಿಯ ಕಿರ್ಚುಮಿಲ್ಲದಿ।
ರ್ದೊಡೆ ಸುರಸಿಂಧುವಂ ತಳೆದ ಶಂಭು ನಿಜಾಕ್ಷಿಯ ಬೆಂಕೆ ಸೋಂಕದಿ॥
ರ್ದೊಡೆ ಪವನಾಧ್ವದೊಳ್ ನಡೆವ ಭಾನು ಕೃಶಾನುವಿನಾಶೆಯೊಳ್ ಪಗಲ್।
ನಡೆಯದೊಡೆಂತು ನಿತ್ತರಿಪರೆಂಬನಿತಾದುದು ಮಾಘಡಂಬರಂ॥೯೯

(ಪುಷ್ಪದಂತಪುರಾಣಂ)

ರವಿರುಚಿಯಂ ಹಿಮಾಂಶುರುಚಿಯೆಂದು ಚಕೋರಚಯಂಗಳೀಂಟುತಿ।
ರ್ದುವು ಬಡಬಾಗ್ನಿಯಂ ಪವಳಮೆಂದಿರದಂಬುಚರಂಗಳೊಂದಿ ನಿ॥
ಲ್ವುವು ಹರಭಾಳಲೋಚನಮನಂಗಜನೀಕ್ಷಿಸಿ ರಕ್ತಚಂದನ।
ದ್ರವದ ಲಲಾಮಮೆಂದಿಱಿಪನೇವೊಗಳ್ವೆಂ ಶಿಶಿರಪ್ರಭಾವಮಂ॥೨೦೦

ತಳೆದ ಸುವರ್ಣಭೂಷಣದ ಸೂಸಿದ ಕುಂಕುಮದಿಟ್ಟ ರೋಚನಾ।
ತಿಳಕದ ರಾಗದಿಂ ಮದನರಾಗಮೆ ಮೂರ್ತಿಯನಾಂತವೊಲ್ ಮನಂ॥
ಗೊಳಪೆಳವೆಂಡಿರಂಗಣದ ಹೇಮವಿತರ್ದಿಯೊಳಿರ್ದು ಕಾಯ್ದುರಂ।
ದೆಳವಿಸಿಲಂ ಮನಂಬಯಸಿ ಕಾಯೆ ವಿಟಪ್ರಕರಕ್ಕೆ ಮನ್ಮಥಂ॥೨೦೧

(ಜಗನ್ನಾಥವಿಜಯಂ)

ಜಡನೆಂದಜನಂ ನುಡಿವರ।
ನುಡಿಗಕ್ಕೆ ಶುಭೋದಯಂ ತಾನಂಬುಜವನಮಂ॥

§ ತೋದ, † ಗೋಡಮೇಲೆ.

ಕಿಡಿಸುವ ಶಿಶಿರಾಗಮುಮಂ ।
ಪಡೆದಪನಿನ್ನವು ವಿವೇಕವಿಕಳತೆಯೊಳವೇ ॥೨೦॥
(ಕವಿಕುಂಜರಲೀಲಾವತಿ)

ಇನಿಸುಗುರ್ವೆಚ್ಚನಪ್ಪುಣಿಸು ಕುಂಕುಮದಕ್ಕೆ ಕದಂಬದಂಬುಲಂ ।
ಕನಕವಿಭೂಷಣಾಳ ಪೊಸಜಾದಿಯ ಪೂ ದವಳಾರವುಚ್ಚಿಱಿಂ ॥
ಜನಿಯಿಪ ಹಂಸೆವಾಸುಗಳೊಳೋಪಳ ಪೆರ್ಮೊಲೆವೆಂಕೆಯಿಂದದೇಂ ।
ತನತನಗಿಕ್ಕಿ ಮೆಟ್ಟದುದೊ ಭೋಗಿಜನಂ ಶಿಶಿರಾತಿರೇಕವಂ ॥೨೧॥
(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಶಿಶಿರ ವರ್ಣನಂ.

೨೯. ವಸಂತ ವರ್ಣನೆ $

ವೃತನಾವೃತ್ತಪುಷ್ಪದಂತದ್ವಿರದವುದಜಲಾಮೋದಭಾರಂ ತ್ರಿಕೂಟಾ ।
ದ್ರಿತಟಾಬ್ಧಿಸ್ವೈರಚಾರಂ ಮಲಯಗಿರಿವಿಹಾರಂ ಚಲತ್ಸಿಂಹಳಸ್ತ್ರೀ ॥
ಶ್ರುತಿಪೂರಂ ತಾಮ್ರಪರ್ಣೀನಿಕಟವನರಟದ್ಭೃಂಗಝಂಕಾರವಾಂದೋ ।
ಳಿತಚೋಳೀಳೀತಾರಹಾರಂ ಸುಳಿನುದಭಿನವಂ ದಕ್ಷಿಣಾಶಾಸಮೀರಂ ॥೨೪॥
(ಜಗನ್ನಾಥವಿಜಯಂ)

ಹಿಮಮಲೆವಿನ್ನೆಗಂ ಕಮಲಮಂ ಹಿಮಶೈಲಮನೊತ್ತಗೊಂಡೊಡಾ ।
ಕಮಲದ ಬನ್ನಮಂ ಕಮಲಬಂಧು ಕಳಲ್ಚಲೊಡರ್ಚೆ ಬರ್ಪವೋಲ್ ॥
ಹಿಮಗಿರಿಗುತ್ತರಾಯಣಕೆ ಬಂದನವಂತೆ ವಲಂ ಪ್ರಚಂಡವಿ ।
ಕ್ರಮಧನರಾತ್ಮಬಾಂಧವಪರಾಭವಭಾರಮನೇಕೆ ಸೈರಿಪರ್ ॥೨೫॥
(ಮಲ್ಲಿನಾಥಪುರಾಣಂ)

ಮುನ್ನವೆ ಬೆಮರ್ತು ಮುತ್ತಿನ ।
ಕನ್ನಡಿವೋಲ್ ತೊಳಪ ತರುಣಿಯರ ವದನಂಗಳ್ ॥

$ ಮಲಯಮಾರುತವರ್ಣನೆ—ಎಂದು ಪುಸ್ತಕಪಾಠ.

ಮನ್ನಿಸದೆ ಸೆಳೆದುಕೊಂಡುವು ।
ಚೆನ್ನಂ ರೋಹಿಣಿಯುನಪ್ಪಿದಮೃತದ್ಯುತಿ †ಯಾ ॥೨೦೬

(ಕವಿಕುಂಜರಲೀಲಾವತಿ)

ಸುಮನೋಬಾಣೇಭಕುಂಭಸ್ಥಳಕಳಿತಕನತ್ಸಾಂದ್ರಸಿಂದೂರಮುದ್ರಾ ।
ನಮಹಾಂಭೋಧಿಪ್ರವಾಳಂ ಮಧುವಿಟಪರಿರಂಭೋತ್ಥಪೃಥ್ವೀಮನೋರಾ ॥
ಗಮಿದೆಂಬೊಂದಂದದಿಂ ರಂಜಿಸಿದುದೆಸೆವ ಪೂಗೆಂಪಿನಿಂ ದಕ್ಷಿಣಾಯಾ ।
ತಮರುನ್ನಶ್ಯತ್ಪಲಾಶಂ ಪ್ರಸವಕೃತಘನಾಳೀಪಲಾಶಂ ಪಲಾಶಂ ॥೨೦೭

ಕಲಿಕಾಸಂಜಾತಚೂತಂ ಮುಕುಳಿತವಕುಳಂ ಪಲ್ಲವೋಲ್ಲಾಸಿಕಂಕೇ ।
ಲಿ ಲತಾಂತಾಕ್ರಾಂತವಾಸಂತಿಕಮೆಸೆದುದು ಯೋಗಿವ್ರಜಸ್ವಾಂತಕುಂತಂ ॥
ವಿಲಸನ್ಮಲ್ಲೀಲತಾಂತಂ ರಟದಳಿಪಟಲಾಕ್ರಾಂತಮಿಂದುಪ್ರಭಾಸಂ ।
ಕುಲಭಾಭಾಸ್ವದ್ದಿಗಂತಂ ಜಿತಸಕಲಜಗತ್ಕಾಂತುಕಾಂತಂ ವಸಂತಂ ॥೨೦೮

ಕಲಿಕೆಗಳೆಂಬ ಹರ್ಷಪುಳಕಾವಳಿಯುಂ ತಳೆದಿರ್ದಳಾಮ್ರಕೋ ।
ಮಲೆ ಮಧುಪಾವಳೀನಿನದಮೆಂಬ ಕಳಧ್ವನಿಯಿಂದೆ ಮಲ್ಲಿಕಾ ॥
ಲಲಿತೆ ಕಡಂಗಿ ಪಾಡಿದಪಳಬ್ಜಿನಿ ತನ್ನ ಪರಾಗಮೆಂಬ ತಂ ।
ಬುಲಮುಗೆ ನಕ್ಕಪಳ್ ವಿಕೃತಿಯುಂ ಮಧುಸಂಗತಿ ಮಾಡದಿರ್ಕುಮೇ ॥೨೦೯

(ಜಗನ್ನಾಥವಿಜಯಂ)

ಪೊಸಮಕರಂದಮೆಂಬ ಬೆಮರುಣ್ಮಿರೆ ತೆಂಬೆಲರೆಂಬ ಸುಯ್ಯೆಲರ್ ।
ಪಸರಿಸೆ ಗುಚ್ಛಮೆಂಬ ಮೊಲೆ ಚಪ್ಪಲ*ದೊರ್ಪ್ಪೆ ಸಿತಾಬ್ಜಮೆಂಬ ಕಣ್ ॥
ಮಿಸುಪ ಪರಾಗಮೆಂಬ ನಸುಗೆಂಪಿನೊಳೊಂದಿರೆ ನಾಡೆ ಕಣ್ಗೆ ಶೋ ।
ಭಿಸಿದಳಲಂಪಿನಿಂ ನೆರೆದು ನಂದನಲಕ್ಷ್ಮಿ ವಸಂತಕಾಂತನೊಳ್ ॥೨೧೦

ಕೃತವೃಕ್ಷಾರೋಹಣಪ್ರಸ್ತುತನನವಿರಳಾನಂಗವಾರಿಪ್ಲವಾಂತ ।
ರ್ಗತನಂ ಸಂಭೋಗಲೀಲಾಕುಲಕರುಣನಿನಾದಾಸ್ಯನಂ ವಲ್ಲಭಾನು ॥
ಷ್ಠಿತವಿಸ್ಪಷ್ಟಪರಿಷ್ವವ್ಯತಿಕರವಿಧೃತಸ್ತ್ರೀತ್ವಸಂ ಬಿಟ್ಟು ಗರ್ವೋ ।

† ಯೋಲ್ ; ಯಾಂ.

ದ್ಧತನಂ ಕೈವೋಗದೆಚ್ಚಂ ಪಡಲಿಡೆ ಬಹಳಾಕ್ಷೇಪದಿಂದಿಕ್ಷುಚಾಪಂ ‖೨೧೧
(ಚಂದ್ರಪ್ರಭಪುರಾಣಂ)

ವಿಕಸತ್ಪುಷ್ಪಾಟ್ಟಹಾಸಂ ಸ್ಮಿತಕುಸುಮರಜೋಭಸ್ಮವಿಭ್ರಾಜಿ ಮಾದ್ಯ।
ತ್ಪಿಕನಾದಂ ಭೃಂಗಸದ್ಧಾಂಜನರಸಘುಟಿಕಂ ಪಲ್ಲವೋದ್ಯಜ್ಜಟಂ ಕೈ ‖
ಯ ಕಪಾಲಂ ಚಂದ್ರಬಿಂಬಂ ತನಗೆನೆ ಜಗತೀಚಕ್ರಮಂ ಚೈತ್ರಕಾಪಾ।
ಲಿಕನೆಂಬಂ ಬಂದದೇಂ ಮೋಹಿಸಿದನೊ ಮಘುಬಿಂದೂದ್ವಮದ್ಗಂಧವಾಹಂ ‖
(ಕವಿಕುಂಜರಲೀಲಾವತಿ)

ಕಲಶಂ ಪದ್ಮಾಕರಂ ಕನ್ನಡಿ ಹಿಮರುಚಿ ಕಾಮಾಗ್ನಿ ಹೋಮಾಗ್ನಿ ಪುಂ
ಸ್ಕೋ । ಕಿಲನಾದಂ ವೇದನಾದಂ ಕುಡಿ ಗುಡಿ ಮಧು ಮೌಹೂರ್ತಿಕಂ
ಪೂತ ವಲ್ಲೀ ‖ ಕುಲಮೆಲ್ಲಂ ನಿಬ್ಬಣಂ ಬಂದಬಲೆಯರೆನೆ ಚೂತಂಗಮಿಾಮ
ಲ್ಲಿಕಾಕೋ । ಮಲೆಗಂ ಕೊಂಡಾಡಿ ಕೈನೀರೆಱೆದನತನು ಲಾವಣ್ಯಪೂರ್ಣಾಂ
ಬುವಿಂದಂ ‖೨೧೨ (ಮಲ್ಲಿನಾಥಪುರಾಣಂ)

ಸುತ್ತಂ ನವಪಲ್ಲವಮೆಲು ।
ಲುತ್ತಿರೆ ಮುತ್ತಿರೆ ಮದಾಳಿಕುಳದಿಂ ಮದನಂ ‖
ಗೆತ್ತಿದ ಪೊಸಗಣ್ಬೋಲಿಯು ।
ಸತ್ತಿಗೆಯೆನಿಸಿದುದು ಪೂತ ಚೂತಕುಜಾತಂ ‖೨೧೪
(ಕವಿಕುಂಜರಲೀಲಾವತಿ)

ಪಿಡಿ ಪಣೆ §ತೋಳ್ತುದಿಯೊಳ್ ಮಳೆ ।
ಮಿಡಿಯೆನೆ(?)ತೋಱತ್ತು ವಿರಹಿಕೌರವಬಲಮಂ ‖
ಬಡಿವಲ್ಲಿ ಕಾಮಭೀಮಂ ।
ಪಿಡಿವ ಗದಾದಂಡಮೆನಿಸಿ ಮಾಮರನಿದಿರೊಳ್ ‖೨೧೫

ಇದು ಧಾತ್ರೀಪಾರಿಜಾತಂ ಸಕಲಸುಕವಿವೃಂದಪ್ರಣೂತಂ ವಸಂತಾ ।
ಭ್ಯುದಯಪ್ರೀತಂ ಮನೋಭೂನೃಪವಿಜಯರಥಖ್ಯಾತಸೂತಂ ವನಶ್ರೀ ‖

§ ತೊಳೆತುದಿಯಾಲೆವೊಳ್.

ಸುದತೀಪ್ರೇಮಾತ್ಮಜಾತಂ ಫಲತರುವರವೃಂದಾರಕತ್ವಾಭ್ಯುಪೇತಂ ।
ಮದಭೃಂಗೀಗೀತಗೀತಂಕೃತವಿರಹಿವಿಘಾತಂ ದಲೀಬಾಲಚೂತಂ ॥೨೧೬

(ಚಂದ್ರಪ್ರಭಪುರಾಣಂ)

ವನಮಾಲಾಕಲಿತಂ ಸುಪರ್ಣಮಿಳಿತಂ ಸತ್ಕಾಂತಿಪೀತಾಂಬರಂ ।
ಘನಸುಚ್ಛಾಯನನಂತಭೋಗಿನಿಲಯಂ ಲಕ್ಷ್ಮೀಸಮೇತಂ ಸುದ ॥
ರ್ಶನಸೇವ್ಯಂ ಸುಮನಸ್ಸಮೂಹಶರಣಂ ತೋಡಾಯ್ತು ನೋಡಲ್ಕೆ ಮ ।
ಜ್ಜನಕಂಗೀಮರನೆಂದು ಮಾಮರಕೆ ಕಾವಂ ಕೊಟ್ಟನಾತೋದ್ಯಮಂ ॥೨೧೭

ಅಳನೆಯುರುನ್ನತಸ್ತನದ ಸೋಂಕಿನೊಳೀಮರನುಂ ಪ್ರಮೋದದಿಂ ।
ಪುಳಕಿತಮಾಯ್ತು ಕಾಂತೆಯುರ ಪೆರ್ಮೊಲೆ ಸೋಂಕಿದೊಡಾವ ಮಾನವರ್ ॥
ಪುಳಕಿತರಾಗದಿರ್ಪರೆನೆ ತನ್ವಿಯುರುದ್ಘಕುಚಂಗಳೊತ್ತಿನಿಂ ।
ಬಳೆದು ನವಾಂಕುರಂ ಕುರವಕೋತ್ಕರದಿಂ ಕರಮೊಪ್ಪಿ ತೋಱುಗುಂ ॥೨೧೮

(ಜಗನ್ನಾಥವಿಜಯಂ)

ಬಿರಯಿಗಭಿಚಾರಮಪ್ಪಂ ।
ತಿರೆ ಮುಳಿಸಿಂ ಕಂತುಮಾಂತ್ರಿಕಂ ಬೇಳಲ್ಕೆಂ ॥
ಪುರಿಪಿದ ಹೋಮಾಗ್ನಿಯು ಕೇ ।
ಸುರಿಯೆನಿಸಿದುವಸುಕೆಯೆಸೆವ ಪೊಸಪೂಗುಡಿಗಳ್ ॥೨೧೯

(ಚಂದ್ರಪ್ರಭಪುರಾಣಂ)

ಅಸದಳಮಾಗಿ ಮಲ್ಲಿಗೆಯ ಬಂಧುರಗಂಧಮನಾಂತು ತೆಂಕಣಿಂ ।
ದೆಸಗುವ ಗಾಳಿ ಗಂಧವಹನಾದುದು ಮಾಗಿಯ ಪೋಗು ಕಾಱುರಂ ॥
ಮಸಗುವ ಮಲ್ಲಿಕಾಮಧುವಿನಿಂ ಮಧುಮಾಸಮುಮಾಯ್ತು ಕೈದುವಂ ।
ಪೊಸಯಿಸಿ ಮಲ್ಲಿಕಾಕುಸುಮದಿಂ ಕುಸುಮಾಯುಧನಾದನಂಗಜಂ ॥೨೨೦

ತುಂಬಿಗೆ ಕೊರಲುದ್ದಂ ಬಂ ।
ಡೆಂಬನಿತಱೊಳಿರ್ದುದಲ್ತು ಬಿರಯಿಗುಗುಳ್ನೀ ॥

ರೆಂಬನಿತಾದುದು ದೆಸೆಯುಂ ।
ತುಂಬಿದ ಮಗಮಗಿಪ ಮಲ್ಲಿಕಾಕುಸುಮರಸಂ ॥೭೦೧

(ಮಲ್ಲಿನಾಥಪುರಾಣಂ)

ನೆರೆದಾಗಳ್ ಮಳಯಾನಿಲೋಪಪತಿಯೊಳ್ ಮಾಲನ್ಮಧುಸ್ವೇದಮಂ।
ಸುರಿಯುತ್ತುಂ ಪರಪುತ್ತೆ ಕಂಪನಲರ್ಗಣ್ಣಿಂ ಚೆಲ್ಲುತುಂ ಬಿಚ್ಚುತುಂ ॥
ಬರೆ ಮಲ್ಲೀವಧು ಕಂಡು ಕೋಡ ಪುರುಡಿಂ ಚೂತಪ್ರಿಯಂ ಕೊಯ್ದುವೊಲ್।
ಕುರುಳಂ ಮಲ್ಲಿಗೆಯಿಂದೆ ಪಾಯ್ದುವವಱೊಳ್ಗೊಂಬಿಂಗೆ ಭೃಂಗಾಳಿಗಳ್ ॥

(ಕವಿಕುಂಜರಲೀಲಾವತಿ)

ಬಂದ ಬಸಂತಂಗಂದರ ।
ವಿಂದಿನಿ ಸೇಸಿಕ್ಕಲೆಂಬು ನೆಗಪಿದ ಹಸ್ತ ॥
ಕ್ಕೇಂ ದೊರೆವಂದುದೊ ಜಲಲವ ।
ದಿಂದೆಸೆವುನ್ನಾಳವಿಕಚಕೋಕನದಂಗಳ್ ॥೭೦೩

ಬಳಸಿರ್ದ ವಿಟಪಿವಿಟಸಂ ।
ಕುಳಮಂ ಚೆಲ್ಲದೊಳೆ ನೋಟ್ಟಿ ಮಲ್ಲೀಲತಿಕಾ ॥
ಲಳನೆಯ ಕಟಾಕ್ಷರುಚಿಯೆನೆ ।
ಮಿಳರ್ವು*ವು ಬಂಡುಂಡು ಪಾಱುವಳಿಮಾಳಿಕೆಗಳ್ ॥೭೦೪

(ಚಂದ್ರಪ್ರಭಪುರಾಣಂ)

ಮುಳಿದುಱಿದೋಪರಳ್ಕಿರ್ದೆ* ಮುಗುಳ್ತಿರಿವಂತೆ ಮುಗುಳ್ತು ನಾಣ ಜಾ।
ಣೊಳಗು ಸಡಿಲ್ವಿನಿಂ ಪೂಱ್ ಸಡಿಲ್ದು ಕದಂಪು ಬೆಳರ್ತು ಬಾಡೆ ಪೊ ॥
ಟ್ಟಳಸಿ ಬೆಳರ್ತು ಮುದ್ರಿಸಿದ ಬಾಯ್ಗಳಳಲ್ಬಿರಿವಂತೆ ಕಂಪು ಕೈ ।
ಕೊಳೆ ಬಿರಿದತ್ತು ತುಂಬಿ ನೆರೆವಲ್ಲಿಗೆ ಮಲ್ಲಿಗೆ ಸಂತೆಯಂತೆವೋಲ್॥೭೦೫

(...............) ?

ಸರಸವಿಕಾಸಪುಷ್ಪಚಯದೊಳ್ ವನಲಕ್ಷ್ಮಿಯ ರತ್ನನೂಪುರ।
ಸ್ವರಮೆನೆ ಹೇಮತಾಮರಸದೊಳ್ ಜಳದೇವಿಯ ರತ್ನಕೂಜಿತ ।

ಸ್ವರಮೆನೆ ಮಲ್ಲಿಕಾಮುಕುಳದೊಳ್ ರತಿಕಾಂತನ ಬಾಣ ಭೀಂಕೃತ ।
ಸ್ವರಮೆನೆ ಪೊಣ್ಮಿದತ್ತು ಮಧುರಂ ಮಧುಮತ್ತಮಧುವ್ರತಸ್ವರಂ ॥೨೦೬

ಎಲೆಯೆಂಬ ಚೀನದುಳ್ಳುಡೆ ।
ತೊಲಗಿರೆ ಮಧು ನೆರೆಯೆ ತನ್ನೊಳೊಲವಿಂದೀಪಾ ॥
ಟಲಿಗಾಯ್ತು ಧರದ ಕಱೆಯೆನೆ ।
ಲಲರ್ಗೆಱಗಿರ್ದಳಿ ವಿರಾಜಿಕುಂ ಪಾಟಲಿಯೊಳ್ ॥೨೦೭

(ಜಗನ್ನಾಥವಿಜಯಂ)

ಬಿರಿಮುಗುಳೊಳ್ಮಸುಂಬನಲೆದೊಯ್ಯನೆ ಕರ್ಣಿಕೆಯಂ ಕರ್ದುಂಕಿ ಕೇ ।
ಸರಮನೆಱಂಕೆಯಿಂ ಕೆಗಱಿ ಬಂಡನುರಂಬರಮುಂಡು ತಳ್ತ್ತಸ ॥
ಳ್ಸ್ವರೆಯೊಳಡಂಗಿ ನುಣ್ಬರದಿನಾಣತಿಮಾಡಿದುದನ್ಮದಾಳ ತಾ ।
ವರೆಯೊಳಗಿರ್ದ ಲಕ್ಷ್ಮಿಯ ಮನಂಬಡೆವೆಕ್ಕಲಗಾಣನೆಂಬಿನಂ ॥೨೦೮

(ಮಲ್ಲಿನಾಥಪುರಾಣಂ)

ತರುಣೀಧೈರ್ಯಧರಿತ್ರಿ ಬಾಯ್ವಿಡುವಿನಂ ವಾರಾಂಗನಾರಾಗಸಾ ।
ಗರಪೂರಂ ಕದಡೇಱ್ವಿನಂ ಮದವತೀಮಾನಾವಲೇಪಾಚಲಂ ॥
ಬಿರಿವನ್ನಂ ಬಧಿರೀಭವತ್ಪಥಿಕಲೋಕಂ ಬಾಲಚೂತೋದ್ಧತಾಂ ।
ಕುರಕೋಣಕ್ಷುಭಿತಂ ಪೊದಱ್ವುದು ಪಿಕವ್ಯಾಹಾರಭೇರೀರವಂ ॥೨೦೯

(ವರ್ಧಮಾನಪುರಾಣಂ)

ಮೃದುಕನಕಪದ್ಮಕೋಶಾ ।
ಗ್ರದೊಳೆಱಗಿದ ತುಂಬಿಯೆಸೆದುದಂಗಜರಾಜಾ ॥
ಸ್ಪದಕನಕಪದ್ಮಕೋಶಾ ।
ಗ್ರದ ಲಾಕ್ಷಾಮುದ್ರೆಯೆನೆ ಸರೋಜಾಕರದೊಳ್ ॥೨೧೦

(ಚಂದ್ರಪ್ರಭಪುರಾಣಂ)

ಸೊವಡಿಂಗೆ ಮುಸುರ್ವಳಿ ಮು ।
ದ್ರೆವೊಲಿರೆ ಮದನನ ಸುಗಂಧಭಂಡಾರದವೊಲ್ ॥

ನವಸೌರಭವಂ ಕುಡುತಿ |
ರ್ದುವು ಸೇವಂತಿಗೆ ವಸಂತಸಮಯೋತ್ಸವದೊಳ್‌|| ೭೩೧
(ಜಗನ್ನಾಥವಿಜಯಂ)

ಪಿರಿಯಂದಣಂಗಳಂದಿಱ |
ವರಸಿಯರ ಪದಾಬ್ಜಶೋಣರುಚಿ ದಂಡಿಗೆಯೊಳ್‌ ||
ಪೊರೆದು ಕೋನರಿಸಿದುವೊಣಗಿದ |
ಮರಂಗಳಂ ಮದನರಾಗರಸಪರಿಣತೆಯಿಂ ||೭೩೨
(ಅನಂತನಾಥಪುರಾಣಂ)

ಮಾವಂ ಮಲಂಗಿ ಸಂಪಗೆ |
ಪೂವಿನ ಸೆಳಗೊಂಬನುಡಿದು ಪಿಡಿದು ಬೞಲ್ದಿ ||
ರ್ದಾವಧುವೆಸೆದಳ್‌ ರನ್ನದ |
ದೀವಿಗೆವಿಡಿದಿರ್ದ ಪೊನ್ನ ಪುತ್ತಳಿಕೆಯವೋಲ್‌ ||೭೩೩
ಕರವೆಸೆಯೆ ತಮಗೆ ಪುಷ್ಪಾ |
ಭರಣಂ ‡ಕಾಮುಕಮೃಗವ್ಯ §ಕೇಳಗೆ ಕಾಮಂ ||
ಸರಲಂ ಪೇೞಿದ ದೀಹದ |
ಹರಿಣಿಯನನುಕರಿಸಿ ತರುಣಿಯರ್‌ ಸೊಗಯಿಸುಗುಂ ||೭೩೪
ನೀರೇಜವದನೆ ತಿಱಿದಳ್‌ |
ತೋರಿದಮಲ್ಲಿಗೆಯ ಮುಗುಳನಾಗಳ್‌ ಕಾಶ್ಮೀ ||
ರಾರುಣಕರಪಲ್ಲವದಿಂ |
ತಾರಗೆಯಂ ತಿಱಿವ ಪೂರ್ವಸಂಧ್ಯಾಂಗನೆವೋಲ್‌ ||೭೩೫
(ಮಲ್ಲಿನಾಥಪುರಾಣಂ)

ಇಂತು ಕಾವ್ಯಸಾರದೊಳ್‌
ವಸಂತವರ್ಣನಂ.

---

§ ಕಾಮನ. ‡ ಕೇಳೀಕಾಮುಂ.

೩೦. ಸರೋವರ ವರ್ಣನೆ.

ಕುಳಭೂಭೃದ್ಭವೆ ಲಕ್ಷ್ಮಣಾಭಿನುತೆ ರಾವೋತ್ಕಂಠೆ ವೈದೇಹಿವಂ ।
ಜುಳವೇಣೀರಮಣೀಯೆ ಸತ್ಕುಶಲವವ್ಯಾಸಂಗೆ ಕಂದರ್ಪಜೋ ॥
ತ್ಕಲಿಕಾಕಾಂತೆ ದಶಾನನಾತ್ಮೆ ವಿಮಲಶ್ರೀಮಜ್ಜನಸ್ಥಾನೆ ಕ ।
ಣ್ಗೆಳಪಾ ವಾಹಿನಿ ಸುತ್ತಿ ಪೋಲ್ತುದಖಿಳಪ್ರಖ್ಯಾತೆಯಂ ಸೀತೆಯಂ ॥

(ಪುಷ್ಪದಂತಪುರಾಣಂ)

ಬೇರಿಂ ಪೀರ್ದುರ್ಗಂ ತಣಿಯುದೆ ।
ನೀರಜಗಂಧಾನುಬಂಧಿ ಜಲಮಂ ಕೊಂಬಿಂ ॥
ಪೀರಲ್ಕೊಡರಿಸಿದಪ್ಪವೆನೆ ।
ತೀರದ್ರುಮವಿತತಿಯೆಱಗಿ ತುಱುಗಿದುವದಱೊಳ್ ॥೩೩೭

(ಚಂದ್ರಪ್ರಭಪುರಾಣಂ)

ಪ್ರಣುತಹರಿಮೂರ್ತಿ ಖರದೂ ।
ಷಣಜಯಿ ನಳನೀಲಕುಮುದಜಾಂಬೂಚಕ್ರ ॥
ಪ್ರಣಯಿ ಲವಕುಶಯುತಂ ಲ ।
ಕ್ಷ್ಮಣಾನ್ವಿತಂ ರಾಮನಂತೆ ರಂಜಿಸಿತು ಕೊಳಂ ॥೩೩೮

ಪಾವಕದಿಕ್ಕಿನಂತೆ ವನದಂತೆ ವಿಜೃಂಭಿತಪುಂಡರೀಕಮಿಂ ।
ದೀವರನಾಭರಮ್ಯಸಭೆಯಂತೆ ರಸಾತಳದಂತನಂತಪ ॥
ದ್ಮಾವಹಮುರ್ವಿಯಂತೆ ನಭದಂತವಲಂಬಿತರಾಜಹಂಸಮಾ ।
ಮಾ್ರವಳಿಯಂತೆ ಕಾಮಿಜನದಂತೆ ಸಮುತ್ಕಳಿಕಾಕುಳಂ ಕೊಳಂ ॥೩೩೯

ವಿಳಸದನಂತಪದ್ಮಮಸುರಾಂತಕನಂ ಫಣಿವಂಶಮಂ ಸದಾ ।
ನಳಕುಮುದಾವಭಾಸಿ ದೆಸೆಯಂ ರಘುನಂದನಸೈನ್ಯಮಂ ನಿರಾ ॥
ಕುಳಕವಿರಾಜಹಂಸಸುಭಗಂ ನಭಮಂ ನೃಪಗೇಹಮಂ ಸಮಂ ।
ತಿಱಿಸುಗುಮಲ್ಲಿ ಮಂದಪವನೋಚ್ಛಲಶೀಕರಮಂಬುಜಾಕರಂ ॥೩೪೦

ಹರಿಯಂತಾಹಿನುರೋಚಿಯಂತೆ ಕಮಲೋಪೇತಪ್ರಭಾವಂ ಮಹೇ ।
ಶ್ವರನಂತಾವನುಜಾಶೆಯಂತೆ ಕುಮುದಪ್ರೋದ್ಭಾಸುರಂ ಪದ್ಮನಂ ॥
ದಿರೆಯಂತಾಗಿರಿಜಾತೆಯಂತೆ ವರಹಂಸೋದ್ಯುಕ್ತವಾಗಿಂತು ಬಿ ।
ತ್ತರಿಸಿರ್ದತ್ತು ಸುವರ್ಣನಾಬ್ಜನಿಳಯಂ ಸೌಶ್ಚರ್ಯಶೋಭಾವಹಂ ॥೨೪೨

ಕರಿಯಂತಾಕಮಲಾಕ್ಷನಂತೆ ಲಲಿತಾಸ್ಯೋದ್ಭರ್ರಸೌಂದರ್ಯವಾ ।
ಕರಿಯಂತಾಕಮಲಾಕ್ಷನಂತೆ ವರಚಕ್ರಾಲಂಕೃತಖ್ಯಾತವಾ ॥
ಕರಿಯಂತಾಕಮಲಾಕ್ಷನಂತೆ ಪಿರಿದುಂ ಪದ್ಮೋಪಯುಕ್ತಪ್ರಭಾ ।
ಸುರವಾಗಿಂತು ನೆಗಳ್ತೆವೆತ್ತುದು ಕಗಂ ತದ್ವಾರಿಕೇಳೀಸರಂ ॥ ೨೪೩

ಸುರಭಿತರಪ್ರಮೋದಕಮಲಂ ಕಮಲಂ ಕಮಲಾಂಕಕಾಂತಬಂ ।
ಧುರನಿಕಟಂ ವಿಕೀರ್ಣಕುಮುದಂ ಕುಮುದಂ ಕುಮುದಪ್ರಹಾರಕಂ॥
ಹರಿವಿಹಿತಪ್ರಕೇತುಮಧುಕಂ ಮಧುಕಂ ಮಧುಕಾಂತಶೋಭಿತಂ ।
ಸರಸಿರುಹಾಕರಂ ಸುಜನಕಂ ಜನಕಂ ಜನಕಂ ಸುಖೋದಯಂ ॥ ೨೪೪

ವರನೃಪತಿಯಂತೆ ವಸುಧಾ ।
ಭರಣಪ್ರಸಾದದಂತೆ ಕುಮುದಾಕೀರ್ಣಂ ॥
ಧುರದಂತರಣ್ಯದಂತಿರೆ ।
ಶರಭಾಕಳಿತಂ ಸರೋವರಂ ರಂಜಿಸುಗುಂ ॥೨೪೫

ಮೊರೆವ ದಳಾಂತರಂಗಳೊಳಕ ಪೊಯ್ವ ಶಿಲೀಮುಖ ಮೇಲೆವಾಯ್ದು ಬಿ ।
ತ್ತರಿಸುವ ಚಕ್ರಮೆಯ್ದೆ ಗಮನಾಗಮನೋಕ್ತಿಯ ರಾಜಹಂಸಭಾ ॥
ಸುರತರವಾರಿಸಂಘಟಿತಪುಷ್ಕರಸೂಚಿತಕರ್ಣಿಕಾಗ್ರದಿಂ ।
ಕರಮೆಸೆದತ್ತು ರಮ್ಯಮೆನಿಸಿತ್ತು ರಣಾಂಗಣದಂತೆ ಪೂಗೊಳಂ ॥ ೨೪೬

(ಪುಷ್ಪದಂತಪುರಾಣಂ)

ಪೆಱಗಿಸಿದಾಗಿ ಮುಂತಗಲಿತಪ್ಪದಱಿಂದೆ ಧರಾತಳಂ ತಗು ।
ಳ್ದಿಱಿಪುದಱಿಂದೆ ಕೊಂಕಿ ಪಱಿಯುತ್ತಿರವಿಂದೆ ಕೊಲಲ್ಕೆ ಪೊಕ್ಕಳಂ ॥
ನೆಱೆಯುವಱಿಂದೆ ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ।
ತುಱುಗಿರವಿಂದೆ ಪೋಲ್ತುದು ಮಹಾನದಿ ರುಂದ್ರಫಣೀಂದ್ರರಾಜನಂ ॥೨೪೭

(ಶೂದ್ರಕಂ)

ಅಳಿನೀಲಾರುಚಿಯುಂ ಪಳಂಚಲೆವ ಕರ್ಣೆಯ್ದಿಲ್ಗಳಂ ಹಂಸಮುಂ ।
ದಳ ತಾಱುಂಬಳ್ಗೊಳ್ವ ತಾವರೆಗಳಂ ಕಾಮಂಗೆ ಪುಷ್ಪಾಸ್ತ್ರಮುಂ ॥
ಬಳೆವಾವಲ್ಗಳನಚ್ಚಗೆಂಪೆಸೆವ ಚೆನ್ನೆಯ್ದಿಲ್ಗಳಂ ಚಂದ್ರಮುಂ ।
ದಳಮುಂ ಸೋಲಿಸುವಾಲಿನೀರ್ದಳಗಳಂ ರಯ್ಯಂ ಪುರೋದ್ಯಾನದೊಳ್ ॥

(ಅನಂತನಾಥಪುರಾಣಂ)

ಕಮಳಾಳಂಕರಣಂ ಕವಿಪ್ರಕರಕೇಳೀಮಂದಿರಂ ರಾಜಹಂ ।
ಸಮನೋಜಂ ಕುಮುದಾಶ್ರಯಂ ಪ್ರಕಟಿತಾಂತಸ್ಸಾರನೆನ್ನಂತೆ ವಿ ॥
ಶ್ವಮಹೀವಲ್ಲಭನೆಂದು ನಿನ್ನ ಬರವಂ ಪೇಳ್ದಿಪ್ಪುದಂಭೋಜಷಂ ।
ಡಮಿದೆಂಬಂತೆಸೆವತ್ತು ಸಾರಸವಿಹಂಗೋತ್ತಾನಕೋಳಾಹಳಂ ॥೨೪೯

ತಾವರೆ ವಕ್ತ್ರಮೂರ್ಮಿ ನಳಿತೋಳ್ ಪೊಣರ್ವಕ್ಕಿ* ಪಯೋಧರದ್ವಯಂ ।
ಶೈವಲಲೇಖೆ ಬಾಸೆ ಪುಳಿನಂ ಜಘನಂ ಜಲಶೀಕರಾಳಿ ಮು ॥
ಕ್ತಾವಳಿ ಬಾಳೆವಿರ್ಮೀ ನಯನಮಾಗಿರೆ ಜಂಗಮಪದ್ಮಿನೀಕುಲಂ ।
ಸ್ಥಾವರಪದ್ಮಿನೀಸ್ಥಲಿಗೆ ಬರ್ಪವೊಲೊಪ್ಪಿದುದಂಗನಾಜನಂ ॥೨೫೦

ಪೊಳೆವನ್ನಂ ತಾರಹಾರಂ ನೆಲೆವೊಲೆ ಪೊಡರ್ವನ್ನಂ ಕುರುಳ್ ಸೂಸು
ವನ್ನಂ । ಸೆಳೆವನ್ನಂ ತೆಳ್ವಸಿಜ್ ಮೇಲುದು ಮಿಳಿರ್ದೆ*ಸೆವನ್ನಂ ಭುಜಾಂದೋ
ಳಗುಂಜ ॥ ದ್ವಳಯಂ ವಿಕ್ಷೇಪಲೀಲಾಲಸಚರಣರಣನ್ನೂಪುರಂ ಯಾನ
ಕೂಜ । ತ್ಕಳಕಾಂಚೀಭಾಜನಂ ಸ್ತ್ರೀಜನಮಿೞಿದುದು ತತ್ತೀರಸೋಪಾನ
ದಿಂದಂ ॥೨೫೧

ಬಸೆದೇಂ ನೋಡಿದನೋ ಮುರಾರಿ ಲಹರೀಸಂಘಾತದಿಂ ಘಾತದಿಂ ।
ದೆಸೆಯೊಳ್ ನೀರ್ಪನಿ ಸೂಸುತಿರ್ಪ ವಿಚಳತ್ಪತ್ರಾಳಿ ಪತ್ರಾಳಿಯಿಂ ॥
ಬಿಸಜಂಗಳ್ ಮಲ*ರ್ದೊಪ್ಪುತಿರ್ಪ ಜಗತೀಪಾನೀಯಪಾನೀಯದಿಂ ।
ಜಸಮಂ ತಾಳ್ದದ ಮಾನಸಾಬ್ಜವನಶಂಕಾಸಾರಕಾಸಾರಮಂ ॥೩೫೨

(ಜಗನ್ನಾಥವಿಜಯಂ)

ಜಲದೇವತೆಯರ್ ಚೆಲ್ವಿಂ ।
ತಲೆಕೆಳಗಾಗಿರ್ದರೆಂದು ಮಚ್ಚರದಿಂದಂ ॥
ಕೆಲರಿಕ್ಕಿ ಮೆಟ್ಟಿದರ್ ನೃಪ ।
ಲಲನೆಯರೆನೆ ತಡಿಯೊಳೆಸೆದುವವರ ನೆಟಿಲ್ಗಳ್ ॥೩೫೩

(ಮಲ್ಲಿನಾಥಪುರಾಣಂ)

ಬಗೆವಗುಱೊಂದವಂತು ತೆಗೆದೋಗರದೊಳ್ಪೊದ*ಱ್ದಿತ್ತು ಕಮ್ಮಕ ।
ಮ್ಮಗೆ ಕೆನೆಗೊಂಡ ಗೆಡ್ಡೆಮೊಸರಂ ಸುರಿದೇಲೆಯ ಚೂರ್ಣಮಿಕ್ಕಿ ಪೊ ॥
ಯ್ದುಗೆ ಮಿಗೆ ಬೇಳೆಗೆಯ್ದ ಮೆಣಸಂ ತಳದಲ್ಲನ ಚೂರ್ಣದಿಂ ಪವ ।
ಣ್ಬಗೆ ಕಲಸಿರ್ದ ತಣ್ಗಲಸುಗೂಟನಿಳಾಧಿಪನಿತ್ತನೞ್ತಿಯಿಂ ॥೩೫೪
ಪಿಪ್ಪಲಿ ಚಿಲ್ಲಕಾಯ್ಮೆಣಸು ಮಾಗುಳಿಬೇರ್ವೊಳೆಯಲ್ಲಮೇಲೆ ಕ ।
ಮ್ಮಪ್ಪಸುಭದ್ರಮಾಮಿಡಿ ಕರಂಜಿಗೆಯುಂಬಟಿಸೆಂಬೆ ನೆಲ್ಲಿಗಾಯ್ ॥
ಕಪ್ಪುರಗಂಪನೊಪ್ಪಿಸುತುಮಿರ್ಪರೆಮಾಮಪಳಂಗಳಾದಿಯಾ ।
ದುಪ್ಪಿನ ಕಾಯ್ಗಳಂ ಮಗಮಗಿಪ್ಪವನಿಕ್ಕಿದನಬ್ಜಪತ್ರದೊಳ್ ॥೩೫೫

(ಕವಿಕುಂಜರಲೀಲಾವತಿ)

ಸವಿದೊಡೆ ಕೂಟದಲಂಪಂ ।
ನವಯುವತಿಯರಧರಪಲ್ಲವಂ ಪಲ್ಲವಿಪಂ ॥
ತೆವ್ರೊಲೂಟದಲಂಪಂ ಪ ।
ಲ್ಲವಿಸಿತು ಪುಳಿಯೆಲ್ಲಮುಪ ಪವಳದ ಕುಡಿಯಂ ॥೩೫೬

(............)?

ಪುದಿದಿರೆ ಪಙ್ಕದವೊಲ್ ಮೃಗ ।
ಮದಪತ್ರಂ ಕಾಂತಕರಜ¶ಕುಲಿಶಕ್ಷತಿಗ ॥
ಳ್ಕಿದವೊಲ್ ಪೊಕ್ಕುವು ಕೊಳನಂ ।
ಬುದಧಿಯನಬಲೆಯರ ಕಠಿನಕುಚಕುಂಭಿಗಳ್ ॥೨೫೭

ಬರೆ ತೆಗೆದೊತ್ತೆ ಜೀರ್ಕೊೞವಿಯುಂ ಪ್ರಿಯನೊತ್ತಿದ ವಾರಿಧಾರೆ ನೀ ।
ಳ್ದಿರೆ ಚಳಚೂಚುಕಾಗ್ರದೊಳೆಳಲ್ತರೆ ಕರ್ಚೆ ಮೃಣಾಳನಾಳಮಂ ॥
ಬೆರಸಿದ ಜಕ್ಕವಕ್ಕಿ ಕುಣಿದಾಡುವವೋಲ್ ಕುಚಯುಗ್ಮನರ್ತನಂ ।
ತರಳತರಂಗರಂಗದೊಳದೇನೆಸೆದಿರ್ದುದೊ ದೀರ್ಘನೇತ್ರೆಯಾ ॥೨೫೮

ಸಿಕ್ತಾನ್ಯಪ್ರಮದಾಕುಚಂ ಪ್ರಿಯತಮಂ ಪೊಯ್ದಂಬುಗಳ್ ‡ರಾಗನಿ ।
ರ್ಮುಕ್ತಂಗಳ್ ಕವಿತಂದು ತಾಗೆ ತರುಣೀಹೃತ್ಕೋಪಸಂತಾಪಸಂ ॥
ಸಕ್ತಸ್ನೇಹರಸಂ ಸಿಡಿಲ್ದುರಿದವೋಲಾಲೇಪಕಾಶ್ಮೀರಸಂ ।
ರಕ್ತಂಗಳ್ ಕವಿತಂದುವಂಪು§ ಕಠಿನೋತ್ತುಂಗಸ್ತನಾಭೋಗದಿಂ ॥೨೫೯

ಮೃಗಮದಮನೊತ್ತೆ ದಂಪತಿ ।
ಮೊಗದೊಳ್ ಮೂಕುತಿಯ ಮುತ್ತು ನೀಲದ ಪರಲಂ ॥
ನಗುತಿರೆ ಕಜ್ಜಳಕಣಿಕೆಯು ।
ನು*ಗುಳ್ವಂತಿರೆ ಕಾಂತೆಯಧರದಳಮಣಿದೀಪಂ ॥೨೬೦

(ಕವಿಕುಂಜರಲೀಲಾವತಿ)

ಮೃಗಮದಜಲಮಂ ಸಿಂಪಿಸೆ ।
ಜಗದಧಿಪತಿ ಧಾರೆ ಮುತ್ತಿಮುವು ತರುಣಿಯ ಮೇ ॥
ಗೊಗೆದ ಕಿಱುವೊಲೆಯನಬ್ಜದ ।
ಮುಗುಳ್ಗೆ ಮದಭೃಂಗಮಾಲೆಗಳ್ ಮುತ್ತುವವೋಲ್ ॥೨೬೧

¶ ಕುಲಭಿತ್ಪವಿಗಳ್. ‡ ಶೃಂಗ. § ಕಠಿನಾಭೋಗಸ್ತನದ್ವಂದ್ವದಿಂ.

ಮೃಗಮದವಾರಿಯುಂ †ಮುಱಿದು ಸಿಂಪಿಸೆ ಭೂಪತಿ ಪಕ್ಕದಾಕೆ ಮೇ ।
ಗೊಗೆದ ಕುಚದ್ವಯಕ್ಕೆ ಮಱಿಮಾಡಿದ ಕೋಮಲಬಾಹುದಂಡದೊಳ್ ॥
ಸೊಗಯಿಸೆ ಧಾರೆ ನೀಳ್ದು ಮಣಿಕಂಕಣಝುಂಕೃತಮಿಂಪುವೆತ್ತು ಕೈ ।
ಮಿಗೆ ಜಳಕೇಳಿ ಕೇಳಿಸಿದುದಾಕೆಯ §ಮೆಯ್ವ್ಯಳಯಿಂ ವಿಪಂಚಿಯಾ ॥೨೬೨

(ಮಲ್ಲಿನಾಥಪುರಾಣಂ)

ಕತ್ತುರಿನೀರಿಂ ಕರ್ಪಂ ।
ಪೆತ್ತಂಗಂ ಕುಂಕುಮಾಂಬುವಿಂ ನಸುಗೆಂಪಂ ॥
ಪೊತ್ತು ನಿಱಿ ಮೆಱೆಯೆ ತಳರಂ ।
ಸುತ್ತಿದ ವನಚರಿಯನೊರ್ವಳನುಕರಿಸಿರ್ದಳ್ ॥೨೬೩

(ಚಂದ್ರಪ್ರಭಪುರಾಣಂ)

ನಾರಿಯ ಮೊಗಮಿನಿಸೆಸಗುವ ।
ಧಾರಾಪಾತಕ್ಕೆ ಬೆರ್ಚಿ ಜಿತವಾರಿರುಹಂ ॥
ವಾರಿರುಹಂ ಮಱೆವೊಕ್ಕುದು ।
ಭೀರುವನೋಲಗಿಸಿದಂಗೆ ಪೇೞ್ ಬಲಮುಂಟೇ ॥೨೬೪

(......................)?

ಧರಣೀಶಂ ಸಿಂಪಿಸೆ ಘುಸೃ ।
ಣರಸಮನಂಗನೆಯ ಘನಕುಚಂಗಳ್ ‡ರಜದಿಂ ॥
ಪೊರೆದುವು ಸೆಂದುರದಿಂ ತಲೆ ।
ವೊರೆದ ಮನೋಭವನ ಕುಂಭಿಕುಂಭಂಗಳವೋಲ್ ॥೨೬೫

(ಮಲ್ಲಿನಾಥಪುರಾಣಂ)

ಘುಸೃಣರಸಂ ನೊಲೆಯೆಡೆಯಿಂ ।
ದಸಿಯುಳ ಬಾಸೆವಿಡಿದಿೞಿದು ಸೊಗಯಿಸಿದುದು ತೆ ॥
ಬ್ವಿಸಿಱಿ ಪೊಱಗಣ್ಗೆ ಮಿಸುಗುವ ।
ವಿಸರತ್ತಾಂಬೂಲರಾಗರಸರೇಖೆಯವೋಲ್ ॥೨೬೬

(ಚಂದ್ರಪ್ರಭಪುರಾಣಂ)

† ಮುಳಿದು. § ಮೊಯ್ವಳಗಿಂ ‡ ರಾಗಂಬೊ.

ಆದರದಿಂದೆ ಕಾಂತೆ ಕೊಳನಂ ಪುಗುತುಂ ಕುಚಮಂ ನಖಕ್ಷತಾ ।
ಚ್ಛಾದನಬುದ್ಧಿಯಿಂ ತೊಡೆದ ಕುಂಕುಮಮೆಯ್ದೆ ತರಂಗಪಾತದಿಂ ॥
ಪೋದೊಡೆ ಕಾಂತೆ ಕೇಕರಸುಧಾರಸಮುಜ್ಜ್ವಲಲಜ್ಜೆಯಿಂದದಂ ।
ಸ್ವೇದಕಣೋಜ್ಜ್ವಲನ್ಮುಕುಳಮಂಜರಿಯಿಂದಮೆ ಮುಗ್ಧೆ ಮುಚ್ಚಿದಳ್॥೨೬೭

ತುಳುಕೆ ಸಪತ್ನಿ ಕುಂಕುಮರಜಂಗಳನೋಪನ ಮೇಲೆ ಚೆಲ್ಲಮಂ ।
ತುಳಕುವ ಕಣ್ಗಳೊಳ್ ನಿಮಿರ್ದು* ನಿಚ್ಚ ವಿಳೋಕಿಸುವಾಕೆಯಕ್ಷಿಗಳ್ ॥
ನಿಳಿಕಿ ಸರೋಜಮಂ ಸರಜಮಂ ಗೆಲೆವಂ$ ದುವುಮಾಯ್ತು ಸೂಯಕ ।
ರ್ಮಳಿಕೆಯ ದೂಷಣಂ ಮಧುರದರ್ಶಿಗೆ ಭೂಷಣವಾಗದಿರ್ಕುಮೇ ॥೨೬೮

ಬಿರಿವಿನಮೆನ್ನ ಚಿತ್ತಮಿರುಳುಂ ಪಗಲುಂ ಶಿಳ ನಿನ್ನ ದೂಸಱಿಂ ।
ಸ್ಮರನಿಸೆ ತಳ್ತು ತಾಗುವಲರಂಬುಗಳೆಯ್ದವೆ ನೀನದೇಕೆ ನಿ ॥
ಷ್ಠುರಣ ಕರಾಬ್ಜಯಂತ್ರಮುಖಮುಕ್ತಸಿತಾಂಬುಗಳಂ ಬೆಗಟ್ಟಿನಂ ।
ಸುರಿದಿನಿಸಿಸಲ್ಲದೆನ್ನೆ*ರ್ದೆಯನೋವದೆ ನೋಯಿಸುವೈ ಮನಃಪ್ರಿಯಾ ॥೨೬೯
(ಕವಿಕುಂಜಲೀಲಾವತಿ)

ಉದಯನಗೇಂದ್ರದಂತಿರೆ ಬೃಹದ್ಭುಜಕೂಟಯುಗಂ ಮುಕುಂದನ ।
ಭ್ಯುದಯದಿನೇಶನಂ ಪಱಿಯೆ ಹಸ್ತದ ಕಾಂಚನವಾರಿಯಂತ್ರಮಂ ॥
ತನಱ ನಿಮಿರ್ಕೆ‡ಯಂತೆ ಘುಸೃಣೋದಕಧಾರೆ ನವಾರುಣಾಂಶುವೋಲ್ ॥
ಪೊದಯಿಸಿತಂಬುಜಾನನೆಯುರೆಂಬ ನವಾಂಬುಜಿನೀಕದಂಬಮಂ ॥೨೭೦

ಸ್ಫುರಿತಾಂಗಂ ಸೂಸೆ ಲಾವಣ್ಯಮನೆಸೆವಲರ್ಗ*ಣ್ ಚೆಲ್ಲಮಂ ಸೂಸೆ ಲೀಲಾ।
ಪರಹಾಸಂ ಸೂಸೆ ಬೆಳ್ದಿಂಗಳನಲಘುಕುಚಂ ಮೇಲುದಂ ಸೂಸೆ ಚಾಮೀ ॥
ಕರಕಾಂಚೀಮಂಜುಗುಂಜದ್ಧ್ವನಿ ಕಿವಿಗಮರ್ದಂ*ಸೂಸೆತಳ್ಪೊಯ್ದ ಸುಯ್ ಕ।
ಸ್ತುರಿಗಂಪಂ ಸೂಸೆ ಲಕ್ಷ್ಮೀಪತಿಯ ತನುವಿನೊಳ್ ಸೂಸಿದಳ್ ನೀರನೊರ್ವಳ್॥
(ಜಗನ್ನಾಥವಿಜಯಂ)

$ ಗಳ. ‡ ವೆತ್ತು.

ಸನತಿ ಜಲಯಂತ್ರದಿಂದೊ ।
ತ್ತುವ ಮಲಯಜಧಾರೆ ಚಂದ್ರಕಿರಣಂಗಳವೋಲ್ ॥
ಕವಿಯೆ ಮೊಗಂದಿರಿಸುದು ನೃಪ ।
ಯುವತಿಯ ವದನಾರವಿಂದಮರವಿಂದದವೋಲ್ ॥೨೨೦

ಮನದೊಳ್ ಮಚ್ಚರಿಸುವ ಕಾ ।
ಮಿನಿ ಕುಂಕುಮಜಲಮನೊತ್ತೆ ಮತ್ತೊರ್ವಳ್ ಲೋ ॥
ಚನಕುಮುಮಂ ಮುಗಿದುವು ಕುಮು ।
ದಿನಿಗಳ್ ಬಾಲಾತಪಕ್ಕೆ ಮೊಗಮಾಯದವೋಲ್ ॥೨೨೩

ಪೊಸಮುಸೆಯ ಪೂವಿನಂಬಂ ।
ಕುಸುಮಾಸ್ತ್ರಂ ಕುಂಕುಮಾಂಬುವಿಂ ಚರ್ಚಿಸಿದಂ ॥
ತೆಸೆದುವು ಚಲಲೋಚನೆಯರ ।
ನಸುಗೆಂಪಂ ತಳೆದು ಪೊಳೆವ ಬಿಳಿಯಲರ್ಗಣ್ಗಳ್ ॥೨೨೪

(ಮಲ್ಲಿನಾಥಪುರಾಣಂ)

ಶ್ರುತಿಕುಮುದಂಗಳ್ ಕೇಳೀ ।
ಪತಿತಂಗಳ್ ಕೊಳನ ತಡಿಗೆ ಸಾರ್ದುವು ತೆರೆಯಂ ॥
ಶ್ರುತಿಮಂಡನಮೊದೊಡಮೇಂ ।
ಪತಿತಂ ನಿರ್ಮಳರ ನಡುವೆ ಸುಚಿಯಲಯೋಗ್ಯಂ ॥೨೨೫

ಸವನದಿನಂಗರಾಗಮುಮುಕ್ತಕರಾಗಮುಮೆಯ್ದೆ ಪೋಗಲಂ ।
ದವಯವದಲ್ಲಿ ತೋಱುವ ಮುಗುಳ್ಗಳವಟ್ಟ ನಖವ್ರಣಂ ವಧೂ ॥
ನಿವಹದೊಳಾವ ಮಂಡನಮುಮಂ ಗೆಲೆವಂದುವು ಮಿಕ್ಕ ಮಂಡನಂ ।
ಯುವತಿಜನಕ್ಕದೇವುದೊ ರತೋತ್ಸವಚಿಹ್ನಮೆ ದಿವ್ಯಮಂಡನಂ ॥೨೨೬

(..................)?

ಮೃಗಲೋಚನೆಯರ್ ಸಲಿಲಾ ।
ವಗಾಹಮಂ ಮಾಣ್ದು ಪೊಱಗೆ ನಿಲೆ ಕಟ್ತಲೆ ತಾ ॥
ರಗೆಯನುಗುಳ್ದಪ್ಪುದೆಂಬಿನ* ।
ಮುಗುತಂದುವು ಸಲಿಲಬಿಂದುಗಳ್ ಸೋರ್ಮುಡಿಯಿಂ ॥೭೭೭
(ಮಲ್ಲಿನಾಥಪುರಾಣಂ)

ಬಸಿಯೆ ಜಲಬಿಂದು ಕೇಶ ।
ಪ್ರಸರಮನೆಡೆಗಯ್ಯೊಳಡಸಿ ಪಿಡಿದೆಸೆದುದು ಕಾ ॥
ಱುಸುವವೊಲಂಗಜನಸಿಯು ।
ಬ್ಬಸಮಾಗಿರೆ ಪೀರ್ದ ವಿರಹಿಜನಜೀವನಮಂ ॥೭೭೮
(ಕವಿಕುಂಜರಲೀಲಾವತಿ)

ಲಲನಾಸಂತತಿ ಪಲ್ಲವಾಧರದ ಕೆಂಪಂ ಕಣ್ಮಲರ್ಗಿತ್ತು ಕ ।
ಣ್ಮಲರ್ಗೆಂಪಂ* ನಿಜಪಲ್ಲವಾಧರಕೆ ಕೊಟ್ಟಂತೈದೆ ಮಾಱಾಡಿತೀ ॥
ಸಲಿಲಕ್ರೀಡೆಯೊಳೆಂಬಿನಂ ವನಿತೆಯರ್ ನೀರಾಟದಿಂದಾದ ಕ ।
ಣ್ಮಲರ್ಗೆಂಪಿಂದಧರೋಷ್ಠಪಲ್ಲವದ* ಬೆಳ್ಪಿಂ ನಾಡೆ ಕಣ್ಗೊಪ್ಪಿದರ್ ॥೭೭೯
(ಜಗನ್ನಾಥವಿಜಯಂ)

ದಂತಚ್ಛದಾತಿರಾಗಂ ।
ಕುಂತಲಕೌಟಿಲ್ಯವೃತ್ತಿ ಪಿಂಗಿದುದಬಲಾ ॥
ಸಂತತಿಗೆ ಪಯಃಕೇಳಿಯೊ ।
ಳೆಂತುಂ ನಿರ್ಮಲರ ಸಂಗದಿಂದಾಗದುದೇಂ ॥೭೮೦
(ಚಂದ್ರಪ್ರಭಪುರಾಣಂ)

ರಮಣೀಬೃಂದದ ಮೆಯ್ಗೞೊಟ್ಟಿದಗುರುಶ್ರೀಖಂಡಕರ್ಪೂರಕುಂ ।
ಕುಮಕಸ್ತೂರಿಗಳಂ ಕೆಸರ್ಮಸಗಿ ಕೊಂಡಂಭಃಪತದ್ಭೃಂಗವಿ ॥
ಭ್ರಮಮಾಳ್ದತ್ತು ವಸಂತಕಾಂತೆ ಪರಿಕರ್ಮಾಪೇಕ್ಷೆಯಿಂ ಯಕ್ಷಕ ।
ರ್ದಮುಮಂ ತೀವಿದ ಚಂದ್ರಕಾಂತಚಷಕಶ್ರೀಯಂ ಸರೋಜಾಕರಂ ॥೭೮೧
(ಕವಿಕುಂಜರಲೀಲಾವತಿ)

ಸಲಿಲವಿನೋದದೊಳ್ ಪರಿತುಳುಂಕಿದ ಕುಂಕುಮವಾಃಕಣೋದ್ಭವಂ ।
ಮಲಯಜವಾಃಕಣಾವಳಿ ಮೃಗೋದ್ಭವವಾಃಕಣಬೃಂದಮೀಲತಾ ॥
ಲಲಿತೆಯರಂಗದೊಳ್ ತೊಡರ್ದು ಪೋಗದೆ ನಿಂದುದೆನಲ್ ವರಾಂಗನಾ ।
ವಳಿಗೆಸೆವತ್ತು ಮಾಣಿಕದ ಮುತ್ತಿನ ನೀಲದನರ್ಘ್ಯಮಂಡನಂ ॥೨೮೧

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ಸರೋವರ ವರ್ಣನಂ.

೩೧. ನಿದಾಘ ವರ್ಣನೆ.

ಅತಿತಪ್ತೋದ್ದಲಿಪ್ತಧೂಳೀಪಿಹಿತಮಹಿತಳಂ ತುಂಗವಾತೂಳಕಾಲಿಂ ।
ಗಿತರೋದೋಮಂಡಲಂ ಪ್ರೋಚ್ಛಳಿತಮರುಮರೀಚಿವ್ರಜವ್ಯಾಪ್ತದಿಕ್ಸಂ ॥
ತತಿ ಬಂದತ್ತಂದಗುರ್ವಂ ಬಗೆಗೆ ಪಡೆದವೋಘಂ ಸಮುದ್ಧೂತಮಾಘಂ ।
ಹೃತನದ್ಯೋಘಂ ವಿಮೋಘಂ ಜನಿತಜನಮನೋಗ್ಲಾನಿದಾಘಂ ನಿದಾಘಂ ॥

(ಚಂದ್ರಪ್ರಭಪುರಾಣಂ)

ಉರಿವರಿವ ಬಿಸಿಲ ಬೆಂಕೆಯು ।
ಭರದೆ ಮುಳಲ್ದಿಂಟೆ ಕಾಯ್ದು ಸಿಡಿಯುತ್ತಿರೆ ಪಂ ॥
ಕರುಹಭವಾಂಡದ ಹಂಚಿನ ।
ಹುರಿಗಡಲೆವೊಲೆಡೆದು ಪಾಱಿದುವು ಬೆಟ್ಟಂಗಳ್ ॥೨೮೨

ಬಲೆಗಲ್ಸೋಲ್ ಕಾಯ್ದುವೆಂಟುಂ ದಿಗಿಭದ ಬಿದುಗಳ್ ಕಾಯ್ದು ಕಬ್ಬೊ ನ್ನಬೆರ್ಗ । ವಲಿವೋಲಾಯ್ತೀ ನೆಲಂ ಸಂಪಳಿಯುನೆಱೆದವೋಲ್ ಕಾಯ್ದು ಚುಯ್ಯೆಂದುವೇೞುಂ ॥ ಕುಲಪಾರಾವಾರವೀಬೇಸಗೆಯ ಬಿಸಿಲೊಳನ್ನೆಂದಿ ದೇಕಾರ್ಣವಂ ಭೂ । ತಲಮುಕ್ಕುಂ ಪೇೞೆನಲ್ ಪರ್ವಿದುದತಿಶಯಿತಗ್ಲಾನಿ ದಾಘಂ ನಿದಾಘಂ ॥೨೮೪

(ಜಗನ್ನಾಥವಿಜಯಂ)

ಅಹಿಮುಕರಂ ದಹಿಮುಕರಂ ।
ದಹಿಮುಕರಂತೂರ್ಧ್ವಮುಕರಮಾದುದು ಚಿತ್ರಂ ॥
ವಿಹರಣಶಿಖಿ ವಿಹರಣಶಿಖಿ ।
ವಿಹರಣಶಿಖಿಯಾಯ್ತು ಕೌತುಕಂ ಬೇಸಗೆಯೊಳ್ ॥೨೮೫

(ಪುಷ್ಪದಂತಪುರಾಣಂ)

ಕೆಱೆಗಳ ನೀರ್ ತವುತರೆ ಬಱೆ ।
ಗೆಱೆಯಾದುವು ತೊಱೆಗಳುಕ್ಕಿದೊಱೆದೆಯ್ದೆ ಬಯ ॥
ಲ್ದೆಱೆಯಾದುವು ಬಾಂದೊಱೆ ಬಿಸು ।
ದೊಱೆಯಾದುವು ಕಾಲವಶಮದೇನಾಗಿಸದೋ ॥೨೮೬

ಉಱೆ ಕಾಯ್ವ ಸೂರ್ಯರಶ್ಮಿಗೆ ।
ನೊಱೆಯಿಡಲೆಂದೆತ್ತಿ ಪಿಡಿದ ತಳಿರೆಂಬಿನೆಗಂ ॥
ತುಱುಗಿರ್ದಾವರೆಗೊಂಬಂ ।
ಮುಱಿದು ನೆಟಿಲ್ಮಾಡಿಕೊಂಡು ನಡೆವರ್ ಪಥಿಕರ್ ॥೨೮೭

(ಜಗನ್ನಾಥವಿಜಯಂ)

ತಪನಾತಪದಿಂ ಚೇಷ್ಟಾ ।
ಕ್ಷಪಣೆಯನೊಳಕೊಂಡು ಕೋಲ್ಮಿಗಂ ಬೆಳ್ಮಿಗಮಾ ॥
ತ್ಮಪುರೋಭಾಗದೊಳಿರ್ದೊಡ ।
ಮುಪಶಮಿಸಿದುದೊಳ್ಪನೀಗುವಮಾತಪಯೋಗಂ ॥೨೮೮

(ರಾಮಚಂದ್ರಚರಿತಪುರಾಣಂ)

ತನುಪಂಕಾಂಕಸಮುಲ್ಲುಠಚ್ಛಫರಮಾಬದ್ಧಾಶ್ಮಸಂಧ್ಯಂತರಾ ।
ಳನಿವಿಷ್ಟೋರುಕುಳೀರಕಂ ತಳತಟೀನಿರ್ಮಗ್ನಕೂರ್ಮಂ ಚಿರಾ ।
ಧ್ಯನುಸಂಧಾನವಿಲೀನದೀನಮುಖಹಂಸಂ ಮ್ಲಾನಕಲ್ಹಾರಕೋ ।
ಕನದಂ ಕಣ್ಗೆಱೆದಾಯ್ತು ತತ್ಸಮಯದೊಳ್ ಶುಷ್ಯತ್ಸರಸ್ಸಂಕುಳಂ ॥೨೮೯

ಪೞು ಬೇಗೆವೊಗೆ ತನ್ನಯ ।
ನೆೞಲನೆ ಬೇೞೊಂದುಗೆತ್ತು ಸಾರ್ವಳಪಿಂದಂ ॥
ಸುೞಿದೆಡೆಕಂ ಬಲಕಂ ಬಸ ।
ನೞಿದುವು ಬೇಸಗೆಯು ಬಿಸಿಲೊಳೊಂದಿಭಕಳಭಂ ॥೨೯೦

(ಚಂದ್ರಪ್ರಭಪುರಾಣಂ)

ಬಹುತಾಪಕ್ಕೆ ಬಿಗುತುರ್ಱ ವಿಷ್ಣು ಪಡೆದಂ ಮತ್ಸ್ಯಾವತಾರಕ್ಕಿನಂ ।
ತುಹಿನಾದ್ರೀಂದ್ರನುನೊತ್ತುಗೊಂಡು ನಡೆವಂ ದೇವರ್ಕಳಾಗ್ನೇಯುಮಂ ॥
ದೆ ಹವಿರ್ಭಾಗಮನೊಲ್ಲದಿಂದುಕಳೆಯುಂ ಕೊಳ್ವರ್ ಮೃಡಂ ಪಾರ್ವತೀ ।
ಸ್ಪೃಹೆಯುಂ ಬಿಟ್ಟು ಮರುತ್ತರಂಗಿಣಿಯನಾಲಿಂಗನಂಮಾಡುವಂ ॥೨೯೧

(ರಾಮಚಂದ್ರಚರಿತಪುರಾಣಂ)

ನಯನಾಘಚ್ಚಲದಿಂದೆ ನೆಯ್ದಿಲೆಸಳಂ ಶಕ್ರಂ ಮುಸಂಕಿಟ್ಟನೆ ।
ಯ್ದೆ ಯಮಂ ಛಾಯೆಯನೊಂದಿನಿತ್ತಗಲದಿರ್ದಂ ಪಾಶಹಸ್ತಂ ಪಯೋ ॥
ಧಿಯನಾಶ್ರೈಸಿದನಾವಗಂ ತುಹಿನಭೂಮೀಧ್ರಕ್ಕೆ ಸಾರ್ದಂ ಹರ ।
ಪ್ರಿಯನಾವರ್ತಿಸೆ ತಳ್ತು ನಾಲ್ದೆಸೆಯುಮಂ ಗ್ರೀಷ್ಮಪ್ರತಾಪಾನಲಂ॥೨೯೨

ಬವವಿದ ಬೆಟ್ಟ ಬೇಸಗೆಯು ಕೂರ್ಬಿಸಿಲುರ್ಬಿಸೆ ಬೆರ್ಚಿ ಪಾಯುವೇ ।
ೞದ ಹರಿಣಂ ಸನುತ್ಪ್ಲುತದಿನಿಂದುವ ಬಿಂಬವನೋಡಿ ಪೊಕ್ಕು ಮ ॥
ಧ್ಯದೊಳೊಸಱುತ್ತುಮಿರ್ಪ ಸುಧೆಗಂ ಕುಳಿರ್ವಾಲ ನೆೞಲ್ಗಮಲ್ಲಿ ಪೋ ।
ಗದೆ ನೆಲಸಿರ್ದದಲ್ಲದೊಡದೆಲ್ಲಿಯದಾಯ್ತು ಮೃಗಾಂಕಸಂಗಮಂ ॥೨೯೩

ನೆತ್ತಿಯೊಳಾವಗಂ ತಳೆದ ಬಾಂದೊಱೆ ಮಾಣದೆ ಭಾಳಚೂಳದೊಳ್ ।
ಪತ್ತಿಸಿದಾಹಿಮಾಂಶುಕಳೆಯುಪ್ಪಿದ ಹೈಮವತೀಲತಾಂಗಮೊ ॥
ಪ್ಪುತ್ತಿರೆಯುಂ ಪೊವಱ್ದಿರಿವ ಬೇಸಗೆಯುರ್ಬಿಗೆ ಬೆರ್ಚಿ ರೂಪ್ಯಭೂ ।
ಭೃತ್ತಟನಂದನಾವಳಿಯ ತಣ್ಬೆೞಲಂ ಬಿಡನೊರ್ಮೆಯುಂ ಮೃಡಂ ॥೨೯೪

(ಚಂದ್ರಪ್ರಭಪುರಾಣಂ)

ಜಳನಿಧಿತಳ್ಪನುಂ ಜಳರುಹೋದರನುಂ ಜಳಜಾತನೇತ್ರನುಂ ।
ಜಳಧಿಸುತೇಶನುಂ ಜಳದವರ್ಣನುಮೆಂಬಿನಮೀನಿದಾಘಮುಂ ॥
ಕಳೆಯಲೆ ಪಣ್ಣುಕೊಂಡನಸುರಾರಿವೊಲಾವನನಾಗತಜ್ಞನೆಂ ।
ದಿಳೆ ನುಡಿವಂತು ಪೆರ್ಚಿಸಿಲೆರೊಳುರ್ಚಿಸಿತುರ್ಚಿ ನಿದಾಘಮುರ್ವಿಯೊಳ್ ॥

ಬಿಸುಪಂ ಪಚ್ಚಡಮೆತ್ತೆಮತ್ತೆ ಸರಸಶ್ರೀಖಂಡದಣ್ಪೆಯ್ದೆ ಖಂ ।
ಡಿಸೆ ಘರ್ಮಾಂಬುವನಾಂತ ಮಲ್ಲಿಗೆ ಕರಂ ತಮ್ಮಲ್ಲಿಗೊಳ್ಗಂಪನೆ ॥
ಯ್ದಿಸೆ ಸಾರೋದಯಮಾಗೆ ಸಾರಘನಸಾರಂ ತಂಬುಲಂ ಚಪ್ಪರಂ ।
ಬಿಸಿಲಂ ಚಪ್ಪರಿಸಲ್ಕೆ ಭೋಗಿಜನಮಿರ್ಕುಂ ಬೋಗದಾಣಂಗಳೊಳ್ ॥೭೯೬

(ಜಗನ್ನಾಥವಿಜಯಂ)

ಬವವಿದ ಧೂಳಿಯಾವಿಗೆಯ ಧೂಳಿವೊಲಿದಿರ್ದುದು ಬೆಟ್ಟಬೆಟ್ಟ ಸು ।
ಣ್ಣದ ಕಳಿಕಲ್ಗಳೊಟ್ಟಿಲೆನಿಸಿರ್ದುದು ನೀರ್ಜಲಿಂ ಸರಿತ್ತಟಂ ॥
ಕದ ಶಫರಾಳಿ ಕುತ್ತಸರ ಮೀನವೊಲಿರ್ದುದು ತಾಳಿ ತಳ್ತು ।
ಪರ್ಚಿದ ಪೆಱುವಗ್ನಿಯೊಂದುರಿದ ಖಾಂಡವವಂತೆವೊಲಿರ್ದುದಾವಗಂ ॥೭೯೭

(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್

ನಿದಾಘವರ್ಣನಂ

೩೨. ವರ್ಷರ್ತು ವರ್ಣನೆ.

ವರುಣವಧೂರತಶ್ವಸಿತಗಂಧವಹಂ ಮಕರೇಶಚಾರುಚಾ ।
ಮರಮರುತಂ ಜಲೇಶಮಕರೋದ್ಗತಪ್ರಚ್ಛಸಮೀರಮಂಜನ ॥
ದ್ವಿರದನ ಕರ್ಣತಾಳಪವಮಾನಮಿದೆಂದು ವಿತರ್ಕಿಪನ್ನಮ ।
ಸ್ಫುರಿತನಪಾನಳಂ ಸುಳಿದುದೊಯ್ಯನೆ ಪಶ್ಚಿಮದಿಗ್ಭವಾನಿಳಂ ॥೭೯೮

ಜಳದೌಘಶ್ಯಾಮಧೂಮಪ್ರತತಿ ಚಳತಟಿನ್ಮಾಲಿಕಾಲೋಲಕೀಲಾ ।
ವಳಿ ಸಂಜಾತೇಂದ್ರಗೋಪಪ್ರಸರವಿಸರದರ್ಚಿಷ್ಕಣಂ ಪಶ್ಚಿಮಾಶಾ ॥
ನಿಳವಾತೋಜ್ಜೃಂಭಿತಂ ಬಂದುದು ವಿರಹಿತರುಮಾತ್ರತನುಂ ಪರ್ವುವುಗ್ರಾ ।
ನಳನೆಂಬಂತಬ್ದಕಾಲಂ ಸ್ತನಿತಧಗಧಗಧ್ವಾನಗೌದ್ರಾಯಮಾಣಂ ॥೭೯೯

(ಚಂದ್ರಪ್ರಭಪುರಾಣಂ)

ಪಡುವಣೆಲರಿರ್ಪುವಡೆಯಿಸ ।
ಲತವಿಯೊಳಂ ಬಣ್ಣದಿಂದಮುದ್ದಂ ಬರ್ಪಾ ॥
ಸಡಿಯುಂ ಮುನ್ನಂ ಬಂದಾ ।
ಸಡಿಯೊಳ್ ನಳನಳಿಸುವೆಳದಳ*ರ್ಗಳ್ ರಮ್ಯಂ ॥೮೦೦

ಮುಗಿಲಿದಿರೇೞ್ ಕಾದಲಲರೇೞ್ ಪೊಲಂ ಪಸುರೇೞ್ ಕಾಡ ಮ ।
ಲ್ಲಿಗೆ ನನೆಯೇೞ್ ಮೊಲ್ಲೆ ನಯಮೇೞ್ ಬಿಸಿಲ್ ಕಡುದಣ್ಣಿಸೇೞ್ ಕೇ ॥
ದಗೆ ಸುಱಿಯೇೞ್ ಹಂಸೆ ಭಯಮೇೞ್ ನವಿಲ್ ನಲಮೇೞ್ ಕಾಮುಬಾ ।
ಹುಗೆ ಜಯಮೇೞಿದತ್ತು ವಿರಹಿಪ್ರಕರಕ್ಕೞಲೇೞ್ತಿರ್ಪಿನಂ ॥೮೦೧

(ಜಗನ್ನಾಥವಿಜಯಂ)

ಘನವಜ್ರಜ್ವಾಲಧೂಮಾವಲಿಯೊ ಗಗನಗಂಗಾತಟೋದ್ವೃತ್ತಮಾಳೀ ।
ವನಮೋ ವಿದ್ಯುನ್ನಟೀಕರ್ಬುರಯವನಿಕೆಯೋ ಚಾರುಮೇಘಾಗಮಶ್ರೀ ॥
ವನಿತಾಪಿಂಛಾತಪತ್ರಪ್ರಕರಮೊ ವಿಯದುತ್ತುಂಗಮಾತಂಗಯುಕ್ಷಾ ।
ಜಿನಪಕ್ಷತ್ರಾಣಮೋ ಮೇಣೆನೆ ನೆಗ*ೞ್ದದಳಶ್ಯಾಮಳಂ ಮೇಘಜಾಳಂ ॥

(ಚಂದ್ರಪ್ರಭಪುರಾಣಂ)

ಚಾದಗೆ ನಾಟಕಂನಲಿಸುವದ್ರಿಕುಜಂಗಳ ಕೋಟರಂಗಳೊಳ್ ।
ಪೋದಗೆ ತತ್ತಿಯಿಕ್ಕಿದುದು ಮಾನಸಪದ್ಮವನಕ್ಕೆ ಪೋಪ ಚಿ ॥
ತ್ತೋದಯಮಂಚೆಗಾಯ್ತು ಮಱಿಗೋಗಿಲೆಗಳ್ ಗಱಿವೊಯ್ದನಾಕುಳಂ ।
ಪೋದುವು ಪಾಱಿ ವಾಯಸನ ಗೂಡುಗಳಂ ನವಮೇಘಕಾಲದೊಳ್ ॥೮೦೨

ನೆರೆದ ಮುಗಿಲ್ ಕಲಂಕುವುದನೀಕ್ಷಿಸಿ ತಮ್ಮ ಮನಂ ಕಲಂಕಿ ಕ ।
ರ್ಗಿರೆ ಮಱುಮಂಬಿವಿಂಡನೊಳಕೊಂಡಿರುಳೊಳ್ ಮುಗಿದಿರ್ದ ಪಾಂಡುಮಂ ॥
ಕರುಹದ ಭಂಗಿಯುಂ ತಳೆದು ವಿಸ್ಮಿತಮಾನಸರಾಗಿ ಮಾನಸರ್ ।
ಪರಿಕಿಸೆ ಮಾನಸಕ್ಕೆ ನಡೆಗೊಂಡುದು ಕೂಡೆ ಮರಾಳಮಂಡಲಂ ॥೮೦೪

ದಿನನಾಥಂ ನವವರ್ಷಾ ।
ವನಿತೆಯ ಪೀವರಪಯೋಧರಸ್ಪರ್ಶನದಿಂ ॥
ವಿನತಾಂಶುಕನಾದನೆನಲ್ ।
ವನಿತೆಯ ಮೊಲೆಮುಟ್ಟೆ ಶೌಚಿಯಾವಂ ಜಗದೊಳ್ ॥೮೦೫

ಮಾಕಂದಂ ಬೀತಿರೆ ಜಂ ।
ಬೂಕುಜಫಳದಿಂ ಶುಕಾಳಿ ಸುಖಿಯಾಯ್ತು ಪಿಕಂ ॥
ಮೂಕತೆವೆತ್ತಿರ್ದುದೆಱಂ ।
ದೇಕಗ್ರಾಹಿಂಗೆ ಸುಖೋದಯಂ ಸಮನಿಪುದೇ ॥೮೦೬

(ಜಗನ್ನಾಥವಿಜಯಂ)

ಮಾಕಂದಂ ಫಲಹೀನಮಾದ ಪದದೊಳ್ ಜಂಬೂಫಲಾಸ್ವಾದನ ।
ಸ್ವೀಕಾರೋತ್ಸವದಿಂದಮಂ ಮಱೆದು ಕೀರಂ ಪ್ರಾಧಿಯುಂ ತಾಳ್ದದ ॥
ತ್ತೇಕಗ್ರಾಹಿ ಕನಲ್ದು ಚೂತಕಳಿಕಾಸ್ವಾದವ್ಯವಚ್ಛೇದದಿಂ ।
ಮೂಕೀಭಾವಮನಪ್ಪುಕೆಯ್ದುದವಿವೇಕವ್ಯಾಕುಲಂ ಕೋಕಿಲಂ ॥೮೦೭

(ರಾಮಚಂದ್ರಚರಿತಪುರಾಣಂ)

ಸ್ತನಿತಘನಬೃಂಹಿತಂ ದು ।
ರ್ದಿನಮದಪೂರಂ ಪಯೋದಗಜಘಟೆ ಸುಱಿದ ॥
ತ್ತನರುಚಿಪಲ್ಲವಕುಳಕಬ ।
ಳನಲೀಲೆಯಿನಂತರಿಕ್ಷಕಕ್ಷಾಂತರದೊಳ್ ॥೮೦೮

(ಚಂದ್ರಪ್ರಭಪುರಾಣಂ)

ತವೆ ಮುಂ ತಿಂದು ನಿದಾಘಸಲ್ಲಕಿಯುನಾದಿತ್ಯೇಂದುಬಿಂಬಂಗಳಂ ।
ಕವಳಂಗೊಂಡು ಸಿಡಿಲ್ಗಳೆಂಬ ಕಿಸುಗಣ್ಣಿಟ್ಟಂ ಮರುಚ್ಚಾಪಮಂ ॥
ಬ ವಿಚಿತ್ರಾಂಬರದೊಂದು ಚೆನ್ನವಿಳಯುಂ ಮಿಂಚೆಂಬ ಕೊಂಬುಂ ಕರಾ ।
ಳವೆನಲ್ ಗರ್ಜಿಸಿದತ್ತಗಲ್ದಿನಿಯರಂ ಕಾರೆಂಬ ಮಾರದ್ವಿಪಂ ॥೪೦೯

(ಜಗನ್ನಾಥವಿಜಯಂ)

ಉಗುಬುತ್ತುಂ ಸಿಡಿಲೆಂಬ ತೋರಗಿಡಿಯಂ ಕಾಲಾಜಿ ಭೂಭಾಗದೊಳ್ ।
ಗಗನಾಭೋಗಮನೆಯ್ದೆ ನೀಳ್ದ ಘನವೇಣೀಬಂಧಮಂ ಬಿರ್ಚಿ ಮಿಂ ॥
ಚುಗಳೆಂಬುಳ್ಕುವ ದಾಡೆಗಳ್ ಪೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ ।
ಸಗೆಯಂ ಬೆರ್ಚಿಸಿ ಗರ್ಜಿಸುತ್ತುಮೊಗೆದಂ ಕಾರೆಂಬ ಕಾಳಾಸುರಂ ॥೪೧೦

(ರಾಮಚಂದ್ರಚರಿತಪುರಾಣಂ)

ಕಳಕೇಕಾರುತಿ ಪೋಲೆ ವೇಣುರುತಿಯಂ ಬೀಸುತ್ತೆ ಮಿಂಚೆಂಬ ಗೋ ।
ವಳಗೋಲಂ ಪೊಡೆಸೆಂದುವೊಯ್ಯುದ್ದ ಸಿಡಿಲಂ ಗೀರ್ವಾಣಬಾಣಾಸನ ॥
ಚ್ಛಳದಿಂ ಕತ್ತರಿವೀಲಿಯೊಂದು ಪಣೆಕಟ್ಟಂ ಕಟ್ಟಿ ಕೊಂಡಭ್ರಕಂ ।
ಬಳಮಂ ಗೋವನಮುಂಕಿ ಬಂದೊದಱಿದಂ ಕಾರೆಂಬ ಗೋಪಾಳಕಂ ॥೪೧೧

ಎಳಮಿಂಚಂ ತಳೆಯಿಕ್ಕಿ ಚಾದಗೆಗಳಂ ಬಿಟ್ಟೋಡಿ ಬಲ್ಗೆಚ್ಚಲಿ ।
ಟ್ಟಳನೀಲಾಂಬುದದಿಂ ಬೞಲ್ದ ಗಗನಶ್ರೀಧೇನುವಂ ಕೋಮಳಾ ॥
ಮಳದೀರ್ಘಾಮೃತಧಾರೆಗಳ್ ಸುರಿಯೆ ಭೋರ್ಭೋರೆಂಬಿನಂ ಶಕ್ರಚಾ ।
ಪಳತಾದಾಮಕದಿಂದೆ ಕಟ್ಟಿ ಕಱೆದಂ ಕಾರೆಂಬ ಗೋಪಾಲಕಂ ॥೪೧೨

(ಅರ್ಹನೇಮಿಪುರಾಣಂ)

ಉಪಶಾಂತರಜೋವಿಕೃತಿಯಿ ।
ನುಪಾತ್ತಕಾಳಿಮಪಯೋಧರಾಸ್ಯತೆಯಿಂ ಮ ॥
ತ್ತುಪಚಿತಜಡವೃತ್ತಿಯಿನೆ ।
ಯ್ದಿಪೋಲ್ತುದಭ್ರಾಗಮಂ ಸಗರ್ಭಾಂಗನೆಯಂ ॥೪೧೩

ವಿಳಸಿತಕಂದಳಂ ವಿನಿಪತತ್ಕರಕಂ ಕ್ಷುಭಿತೋರುವಾಹಿನೀ।
ಕುಳನಿನದಂ ಗಳತ್ಸರಸಮುಗ್ರಮುದಗ್ರಸುಪರ್ವಚಾಪಮಂ ॥
ಡಳಲಲಿತಾಂಬರಂ ವಿಹರದಾಶ್ವಸಮುತ್ಕರವಂದಗುರ್ವನೇಂ।
ತಳೆದುದೊ ಪೋಲ್ತು ಯುದ್ಧಸಮಯಕ್ರಮಮಂ ಜಲದಾಗಮಕ್ರಮಂ ॥
(ಚಂದ್ರಪ್ರಭಪುರಾಣಂ)

ವಿವಳಿತನೂಪ ಕಂಟಕಕದಂಬದಿನುರ್ವಿದ ವಾಹಿನೀಸಮೂ।
ಹದಿನಭಿವೃದ್ಧಿವೆತ್ತ ಭುವನಾಶ್ರಯದಿಂ ಬಗೆಗೊಳ್ವ ಕುಂದದ ॥
ಭ್ಯುದಯದಿನೇಱ್ಗೆಗೆಟ್ಟೊದಱ ಪೋದ ಮಹೋದ್ಧತರಾಜಹಂಸತೆ।
ಜದಿನೆಸೆದತ್ತು ರಾಜ್ಯವಿಭವಂ ಜಲದಾಗಮಚಕ್ರವರ್ತಿಯಾ ॥೮೧॥

ಎಱಗದೆ ತಮ್ಮೊಳ್ ಮಧುಕರ।
ನೆಱಗಿರೆ ಕೇದಗೆಗ $ಳಲ್ಲಿ ಕಂಬನಿವಱಿಯಂ ॥
ಕಱನಂತಿರೆ ಕಳವೂವಿಂ।
ನೆಱೆ ಬೀತುವು ಸುರಯಿ ಹೊನ್ನೆ ಮಲ್ಲಿಗೆವನದೊಳ್ ॥೮೧೬

ಅಱದಿನಿಸುಂ ಬೆಟ್ಟದ ತಾಳ್।
ಸಱಗೊಂಡಿರಲೆಂದು ಭಿಲ್ಲ ಪಳ್ಳಿಗಳೆಲ್ಲಂ ॥
ತೊಱದುವು ತೊಱಯೆಡೆಗಳನಾರ್।
ತೊಱಯುವರನುಕೂಲವೃತ್ತಿಗೆಟ್ಟೆಸಗುವರಂ ॥೮೧೭

ಹರಿಗೋಪಾಲಪಥಕ್ಕೆ ತೂರ್ಯಪಟುಘೋಷಂ ಕೇಕಿನಾಟ್ಯಕ್ಕೆ ಬಂ।
ಧುರಥಕ್ಕಾನಿನದಂ ವಿಯೋಗಿಮಿಥುನಕ್ಕಂಗೋದ್ಭವಜ್ವಾಲತೋ॥
ದ್ಧುರನಾದಂ ಕಳಹಂಸಯೂಥಗಮನೋದ್ಯೋಗಕ್ಕೆ ಭೇರೀಗಭೀ।
ರರವಂ ತಾನೆನೆ ನವ್ಯಮೇಘನಿನದಂ ಪೊಣ್ಮಿತ್ತು ರೋದೋಂತದೊಳ್॥೮೧೮
(ಜಗನ್ನಾಥವಿಜಯಂ)

$ ಳರಲ್ಗು.

ಪಿಕಮೌನವ್ರತದುಂದುಭಿಧ್ವನಿ ಬಲಾಕಾದೃಶ್ಯಚೂಡೋದಯಾ ।
ನಕರಾವಂ ಶಿಖಿನೃತ್ಯನಾಟ್ಯರುತಿ ಪ್ರೋತಕ್ಕದ್ಘಗರ್ಭೋತ್ಸವೋ ॥
ತ್ಸುಕವಾದಿತ್ರರವಂ ಮರಾಳಗಮನಾತೋದ್ಯಸ್ವನಂ ಚಾತಕೋ ।
ದಕಕೇಳೀಕೃತತೂರ್ಯನಾದಮೆಸೆದತ್ತಂಭೋದನಿರ್ಘೋಷಣಂ ॥ ೮೧೯

(ಚಂದ್ರಪ್ರಭಪುರಾಣಂ)

ವಿದಳಿಸೆ ಘನದಂತಿ ಬಿಸಿ ।
ಲ್ಗುದುರೆಗಳಿಂ ಪನಿತು ಪೆತ್ತ ನೆತ್ತರ ಪನಿಯಂ ॥
ದದಿನಲ್ಲಲ್ಲಿಗೆ ಕಣ್ಗೊಳಿ ।
ಸಿಮದಾಕಾವೆರ್ಗದೊಳಿಂದ್ರಗೋಪಕಲಾಪಂ ॥ ೮೨೦

ಸುರಗೋಪಂಗಳುಮಾಲಿಕಲ್ಲುಮೆಳವುಲ್ಲುಂ ಕೆಂಪಿನಿಂ ಬಿಳ್ಪಿನಿಂ ।
ಹರಿತಚ್ಛಾಯೆಯಿನಲ್ಲಿಗಲ್ಲಿಗೆಸೆಗುಂ ಮಾಣಿಕ್ಯದಿಂ ಮುತ್ತಿನಿಂ ॥
ಗರುಡೋದ್ಗಾರದ ಪಚ್ಚೆಯಿಂ ಸಮೆದ ನಾನಾಭೂಷಣಾನೀಕಮಂ ।
ಧರಣೀವಲ್ಲಭೆಗಂಬುದಾಗಮವಿಟಂ ತಂದಿಕ್ಕಿದೊಂದಂದದಿಂ ॥ ೮೨೧

(ಜಗನ್ನಾಥವಿಜಯಂ)

ವಸುಧಾವಲ್ಲಭೆ ಮೇಘಕಾಲವಿಟನೊಳ್ ಸಂಭೋಗಮಂ ಮಾಡೆ ಬ ।
ಣ್ಣಸರಂ ಪೊರ್ಕುಱಿಯಿಂದಮೋ ಪಱಿದು ಸೂಸಿತ್ತಲ್ಲದಂದೆತ್ತಣಿಂ ॥
ಪೊಸಮುತ್ತುಂ ಕಿಸುಗಲ್ಗಳುಂ ಕೆದಱಿ ಕಣ್ಗಿಂಬಾದುವೆಂಬಂತದೇ ।
ನೆಸೆದೊಪ್ಪಿರ್ದುವೊ ಸೂಸಿದಾಲಿವರಲುಂ ತಳ್ತಂದ್ರಗೋಪಂಗಳುಂ ॥ ೮೨೨

(ರಾಮಚಂದ್ರಚರಿತಪುರಾಣಂ)

ಒದವಿದ ಕೇಗು ನೀಳ್ದ ಕೊರಲೆತ್ತಿದ ಪಕ್ಷಮಲರ್ಚುತಿರ್ಪ ಕಣ್ ।
ಮದನನ ಪಂಚರತ್ನಮಯಖೇಟಕದಂತಿರೆ ಬಿರ್ಚೆ ಬರ್ಹಮಂ ॥
ಪದೆದು ನವಿಲ್ಗಳಾತ ಚಪಲಾಕ್ಷಿ ಘನಾಗಮಲಕ್ಷ್ಮಿ ಕಂಡು ಹ ।
ರ್ಷದೆ ನಗುತಿರ್ಪ ಕಣ್ಬನಿಯ ಸೋನೆವೊಲಾದುವು ಭೂರಿವೃಷ್ಟಿಗಳ್ ॥

(ಜಗನ್ನಾಥವಿಜಯಂ)

ನೀರಂ ನೀರಂಧ್ರಮೇಘಂ ಸುರಿಯೆ ಮೊರೆಯೆ ಭೀಮಮಾರುತಂ ಮಾರುತಂ
ಕೋ । ಲ್ಲಗ್ರ-ಗಾರೆಂಬೊಲಾಯ್ತಂ †ದಗಿಯೆ ಪಥಿಕರುಚ್ಚಾತಕಂಚಾತಕಂ
ಕಾ ॥ ಸಾರಾಸಾರಾರ್ಥಿ §ಗೊಲ್ಲಂಗುಡಿಯೆ ‡ಮಿಗೆವಿನೋಜಂಬುವಂಜಂಬುವಂ
ಸಾ।ಕೀರಂ ಕೀರಂ *ಕರ್ದಂಕುತ್ತಿರೆ ಕೇರಳಸಿದತ್ತೋವಿ ಕಾರಂ ವಿಕಾರಂ॥(?)
(ಅರ್ಧನೇಮಿಪುರಾಣಂ)

ಗಗನಸ್ತ್ರೀಯ ವಿಚಿತ್ರವಸ್ತ್ರವಿಳಸತ್ಸಂವ್ಯಾನಮೆಂಬಂತೆ ಕಾ ।
ರ್ಮುಗಿಲೆಂಬಾನೆಯ ರನ್ನದಗ್ಗರಣೆಯೆಂಬಂತಬ್ಜಗರ್ಭಾಂಡಭೂ ॥
ರಿಗೃಹದ್ವಾರದ ರತ್ನತೋರಣವಿದೆಂಬಂತಭ್ರದೊಳ್ ನಾಡೆ ದಿ ।
ಟ್ಟಗೆ ಚೆಲ್ವಾಯ್ತು ಬಹುಪ್ರಭಾಶಬಳಿತಂ ಗೀರ್ವಾಣಬಾಣಾಸನಂ ॥೮-೧೫
(ಜಗನ್ನಾಥವಿಜಯಂ)

ಎಸೆವ ನಭಸ್ಸರೋವರದೊಳುಣ್ಮಿ ಕೆಲಕ್ಕೆ ಕೆರಳ್ದ ಸೈರಿಕಾ ।
ಪ್ರಸರಮೊ ಮೇಣಿದಂಬರಮಹಾಂಬುಧಿಪಾರದಪಾರರತ್ನರು ॥
ಗ್ವಿಸರಮೊ ಭಾವಿಪಂತಿದು ವಿಯಚ್ಛಿಖಿಕಂಠದ ವರ್ಣರಾಜಿಯೊಂ ।
ದೆಸಕಮೊ Ψತಾನಿದೆಂದೆನಿಸಿದತ್ತು ಪುರಂದರಚಾಪವಿಭ್ರಮಂ ॥೮-೧೬
(ಚಂದ್ರಪ್ರಭಪುರಾಣಂ)

ಇದಮೋಘಂ ಮೇಘಕಾಲಂ ಬರೆ ಗಗನಗೃಹದ್ವಾರದೊಳ್ ತೋರಣಂಗ ।
ಟ್ಟಿದುದೋ ಮೇಣ್ ಪಂಚರತ್ನಾವಳಿವಿಳಸಿತಮಂ ಕಂಠಿಕಾಮಾಲೆಯಂ ತಾ॥
ಳ್ದಿದಳೋ ದಿಗ್ದೇವಿ ಮೇಣ್ ರನ್ನದ ಪೋರಜೆ $ನಮಾಂಭೋದಮಾದ್ಯದ್ಗಜಕ್ಕಿ ।
ಕ್ಕಿದುದೋ ಪೇಳೆಂಬಿನಂ ಕಣ್ಗೆಸೆದುದು ಶಬಳಚ್ಛಾಯೆಯಿಂ ಶಕ್ರಚಾಪಂ ॥
(ರಾಮಚಂದ್ರಚರಿತಪುರಾಣಂ)

ಜಳಮಂ ವಾರಾಶಿಯೊಳ್ ಮೀನ್ವೆರಸು ಮೊಗೆತರಲ್ಮೇಘಮಾಬಾಳಮೀನ್ಗಳ್ ।
ಪೊಳೆದಾಡುತ್ತಿರ್ದುವಾಕಾಶದೊಳನಲವಿಭಿನ್ನಾಂಜನಚ್ಛಾಯೆಯಿಂಗೊಂ ॥
ದಳಸಿರ್ದಂಭೋದದೊಳ್ ಸಂಚಲಿಸಿ ಪೊಳೆವ ವಿದ್ಯುಲ್ಲತಾಜಾಳಮಾಗಳ್ ।
ತಳೆದತ್ತಾಶ್ಚರ್ಯಮಂ ಕಟ್ಟಲೆ ಬಿಡೆ ಬಿಸಿಲಂ ಕಾಯುತಿರ್ಪಂದದಿಂದಂ ॥೮-೧೮

---

† ದಟ್ಟಯು. § ಗೋಳಲಂ. ‡ ನಲಿವೆನೋ.
Ψ ತಾನಿದೊಂ··· ಮಂಡಲಂ. $ ಮಹಾಂಭೋಧಿ.

ವಿಳಸಲ್ಲೋಲಪ್ರನಾಳಪ್ರತತಿಯುನಪರಾಂಭೋಧಿವೀಚೀಚಯಮಂ ಕೆಂ।
ದಳರಂ ತದ್ವಾರ್ಧಿವೇಲಾವನಸಮಿತಿ ದವಜ್ವಾಲೆಯುಂ ನೀಲಶೈಲಾ॥
ವಳಿ ಕೈಕೊಂಡಭ್ರಮುಂ ತಳ್ತಡರ್ವವೊಲಡರ್ದತ್ತೆತ್ತಲುಂ ಬಳ್ಳಿಮಿಂಚಂ।
ತಿರ್ದಾಶಾಮಂಡಲಂ ಕರ್ಗನೆ ¶ಕವಿಯೆ ಜಲಸ್ಫೀತಜೀಮೂತಜಾತಂ॥೮೧೯॥
(ಜಗನ್ನಾಥವಿಜಯಂ)

ಪರಿತಾಪಚ್ಯುತಿ ವಾಸರಕ್ಕೆ ಸುಮನಶ್ಶ್ರೀಸಂಪದಂ ಕುಂದವ।
ಲ್ಲರಿಗತ್ಯೂರ್ಜಿತಬೋಧಮುತ್ಪಳಸಿಗುದ್ಯದ್ವೀತರಾಗತ್ವಮಂ॥
ಬುರುಹಶ್ರೇಣಿಗುದಾತ್ತಮೋಕ್ಷಗತಿ ಪೌಷಕ್ಕಾದುದಾದಂ ದಿಗಂ।
ಬರಸಾಂಗತ್ಯತಪಃಪ್ರಭಾವಮೆನಸುಂ ಮೆಯ್ವೆತ್ತೊಡೇನಾಗದೋ॥೮೨೦॥
(ಪುಷ್ಪದಂತಪುರಾಣಂ)

ನವವಿಧಮುಪ್ಪ ಕಣ್ಬೊಳಪು ರಂಜಿಸೆ ಸಂಚಲಿಪಾಂಗಹಾರದಿಂ।
ವಿವಿಧಘನಸ್ವನಕ್ಕೆ ನವಿಲಾಡೆ ಘನಾಗಮಲಕ್ಷ್ಮಿ ಕೇತಕೀ॥
ಧವಳಕಟಾಕ್ಷೆ ಕಂಡು ರಸಮುಗ್ನತೆಯಿಂ ಪುಳಕಾಂಕುರಂಗಳ।
ತ್ಯವಿರಳಮಾಗೆ ಕೊಟ್ಟಳಚಿರಪ್ರಭೆಯೆಂಬ ಸುವರ್ಣಮಾಲೆಯಂ॥೮೨೧॥

ರಾಗದ ಬಳ್ಳಿ ಚಾದಗೆಗೆ ಕಾಂಚನಚಂಚಳಲಾಸ್ಯ ‡ಘರ್ಘರಂ।
ಸೋಗೆನವಿಲ್ಗೆ ಮೇಖಳೆ ಘನಾಗಮಲಕ್ಷ್ಮಿಗೆ ದೀಪಮಾಲೆ ಜಾ॥
ರಾಗಮನಕ್ಕೆ ಜಂತ್ರಮುರಿಯೆಣ್ಣೆ ವಿಯೋಗಿಜನಕ್ಕೆನಲ್ ನಭೋ।
ಭಾಗದೊಳಂದು ಬಿತ್ತರಿಸಿದತ್ತು ತಟಿಲ್ಲತೆ ಲಾಸ್ಯಲೀಲೆಯಂ॥೮೨೨॥
(ರಾಮಚಂದ್ರಚರಿತಪುರಾಣಂ)

ತಳರ್ದಾತ್ಮಾಲಯದಿಂದಿರುಳ್ ಸುಚಿವ ಜಾರಸ್ತ್ರೀಯ ವಕ್ತ್ರೇಂದುಮಂ।
ಚಳವಿದ್ಯುನ್ಮಯನಾವಲೋಕನದೆ ಕಂಡನ್ಯಾಯಮಾಯ್ತಿವಿಯ॥
ತ್ತಳಚೂಡಾಮಣಿ ಚಂದ್ರನಂ ಕಳಿದೆನೋ ವರ್ಷಾಂಬುವಿಂ ಕೂಡೆ ಭೂ।
ವಳಯಕ್ಕೆಂದುಲಿವಂತದೇಂ ಮೊಳಗಿತೋ ಮೇಘಂ ನಿಶೀಥಂಗಳೊಳ್॥೮೨೩॥

¶ ಗನಿಯೆ. ‡ ತರ್ಜನಂ.

ಮರಕತರುಚಿಯೊಳ್ ದೂರ್ವಾಂ ।
ಕುರವಂ ನಿಶ್ಚೈಸವಿರ್ದ ಮೃಗಶಿಶುಗೆ ನಗಾಂ ॥
ತರದಲ್ಲಿ ಹರಿಣನಿತ್ತುದು ।
ಕರುಣಿಸಿ ನಿಃಸ್ಪೃಹತ್ವದೂರ್ವೆಯುಂ ಕಾವೇರೀಗದೊಳ್ ॥೮೩೪

ನನೆವಿಲ್ಲಂಬಿಟ್ಟು ವಿದ್ಯುಲ್ಲತೆಯ ತಿಃವುವೊಯ್ದಿಂದ್ರಕೋದಂಡವಂ ಕೊಂ।
ಡು ನಿಜಸ್ಕಂಧಾಗ್ರದೊಳ್ ಕೇದಗೆಯೆಸಳಲಗೆಂದೆಂಬ ಕೂರಂಬು ತೀವಿ॥
ರ್ದ ನಿಷಂಗಂ ಕಣ್ಗೊಳಲ್ ವೊಲ್ಲೆಯ ನನೆಗಣೆಯುಂ ತೂಗುತಂ ಕಂತುವೀ
ಬಂ । ದನೆನುತ್ತುಂ ಗರ್ಜಿಪಂತಾದುದು ವಿರಹಿಗಳಂ ಕೇಕಿಭೇಕೀಪ್ರಣಾದಂ ॥

(ಜಗನ್ನಾಥವಿಜಯಂ)

ಅಡರ್ದೊಂದೊಂದೊಂದಱ ಬೆಂ ।
ಗಡರಿ ಘಧರ್ಮಖದಿ (?) ಪರಿದುತಂದು ಕಾವೇರೀಗ್ರತೆಯಂ॥
ಘಡಘುಲುಕುಕುಲುಯುಕುಟೊಟೊ ।
ಟ್ಟೊಡಕೆಂದುವು ತೋರಗಪ್ಪೆ ಕೆಱೆಗಳ ತಡಿಯೊಳ್ ॥೮೩೬

(..................) ?

ಪರಿವ ಮುಗಿಲ್ ಪಳಂಚೆ ಖಚರೀನಿಚಯಸ್ತನತಾರಹಾರವ ।
ಲ್ಲರಿ ಪಱಿಯಲ್ ಪೊದಟ್ಟಿ ಬಿಡುಮುತ್ತು ಘನೋಪಲದೊಂದು ಗೂಪದಿಂ ।
ಸುರಿಯುಲನಂತರಂ ಬಱಿಯುದಾರವೆಳಲ್ದಪುದೆಂಬ ಚೆಲ್ವನಾ ।
ವರಿಸಿದುವಂದು ಸಂದಣಿಸಿ ನೀಳ್ದ ಪಯೋಧರವಾರಿಧಾರೆಗಳ್ ॥೮೩೭

ಪಳಕಿನ ಬಟ್ಟುಗಳ್ ಗಗನದಿಂದುದಿರ್ದಪ್ಪುವೊ ಚಿತ್ರವೆಂಬಿನಂ ।
ಪಟಪಟನಭ್ರದಿಂದಮಿಡುಕುಂಬನಿ ಸೂಸೆ ಬಱಿಕ್ಕೆ ವೃಷ್ಟಿ ಕ ॥
ಣ್ಗೊಳಿಸಿದುವಂದು ತೀವ್ರತಪನಾಹತಿಯಿಂ ತಟಪಂಶುವೆಂಬ ಕೆಂ ।
ದಳಗರ್ಗಳನಾಂತು ಮೇಘಲತೆಯಿಂದಲರಲ್ಲುಗುತಿರ್ದುದೆಂಬಿನಂ ॥೮೩೮

(ಜಗನ್ನಾಥವಿಜಯಂ)

ನೆಗೆದ ಮುಗಿಲ್ವೊಯ್ಲಿಂ ತಾ |
ರಗೆಗಳ್ ಪಿರಿದೊಡೆದು ಸೂಸಿದಪ್ಪುವೆನಲ್ ಮಿಂ ||
ಚುಗಳಕ್ಕುವ ತತ್ತಿಗಳನ |
ಲಗುತಂದಪುವು ತುಱುಗಿ ತೋರವನಿ ಪೊಸಗಾರೊಳ್ ||೮೩೯

(ರಾಮಚಂದ್ರ ಚರಿತಪುರಾಣಂ)

ಬಲ್ಸರಿ ಬಿಱುವೞೆ ಪೆರ್ಮೞೆ |
ಮೆಲ್ಸರಿ ತುಂತುರ್ ತುಷಾರಮಿಡುಕುಂಬನಿ ತಂ ||
ದಲ್ಸೋನೆ ನಟ್ಟಬಡಪವು |
ನಲ್ಸುರಿದುವು ಬಿಡದೆ ಮೞೆಗಳಿರುಳುಂ ಪಗಲುಂ ||೮೪೦

ನಿಳಯದ ಸೂರ್ಗಳೊಳ್ ತರದೆ ಮುತ್ತಿನ ಸೂಸಕದಂತೆ ನಂದನಂ |
ಗಳ ತರುಪತ್ರದೊಳ್ ಮುಕುಳಮಂಜರಿಯಂತೆ ಚರತ್ಪುರಾಂಗನಾ ||
ವಳಿಯ ಕುರುಳ್ಗಳೊಳ್ ತಳೆದ ಸೇಸೆಗಳಂತೆಳವುಲ್ಗಲೊಳ್ ಘನೋ |
ಪಳತತಿಯಂತೆ ತೋಱುದುವು ನವ್ಯಘನಚ್ಯುತತೋಯಬಿಂದುಗಳ್ ||೮೪೧

(ಜಗನ್ನಾಥವಿಜಯಂ)

ಮದಮದಿರಾಪ್ರಮತ್ತನ ಜಡಾಶಯದಂತೆ ಜಡಾಶಯಂ ಕಲಂ |
ಕಿದುದು ಮನೋಜದೀಪಕಳಕಾನನದಂತಿರೆ ಕಾನನಂ ಕಱಂ ||
ಗಿದುದು ವಿರೋಧಿನಾಹಿನಿಗಳಂತಿರೆ ವಾಹಿನಿಗಳ್ ಕಡಂಗಿ ಮೀ |
ಱಿದುವನುಕೂಲಮಾರ್ಗಮನದೇಂ ಮೞೆಗಾಲಮುಳುಂಬಮಾದುದೋ ||೮೪೨

(ರಾಮಚಂದ್ರಚರಿತಪುರಾಣಂ)

ನವನೀಳಾಂಭೋದಮಂಭೋನಿಧಿಗೆಱಗುವ ಧಾರಾಳ ಧಾರಾಳಿಗಳ್ ಸೂ |
ಸುವಿನಂ ತಳ್ವೊಯ್ವ ಜಂಝಾನಿಳನನಿಳನಿನಾದಮೋದಮಂ ಪೇೞ್ ಪೊವೇ ||
ಱುವ ಕುಂದಂ ಕುಂದದೊಳ್ ತಳ್ತಳಗಳಳಗಳಂ ಪಣ್ಗಳಂ ಗೆಲ್ದ ಜಂಬೂ |
ನಿವಹಂ ಚೆಲ್ವಾಗೆ ಚೆಲ್ವಾದುದು ಚಟುಲತಟಿಜ್ಜಾಲಮಂಭೋದಕಾಲಂ ||೮೪೩

ಅವಿಶಾಲಾಂಬರವಪ್ರಸನ್ನದಿನವಸ್ಪಷ್ಟಾಧ್ವಮುಸ್ವಚ್ಛತೋ।
ಯುವನುದ್ಯೋಗಜನೌಘವಸ್ತದವನಸ್ಮೇರಾಬ್ಜವಶ್ಲಕ್ಷ್ಣಕೈ॥
ರವಕ್ರೀಡಿತಹಂಸವಸ್ಫುರಿತಚಂದ್ರಾದಿತ್ಯವಶ್ಲಿಷ್ಟಕೋ।
ಕವಯೂನಾಧ್ವಗವಸ್ವರಾನ್ಯಭೃತವಂದೊಪ್ಪಿದರ್ದುರ್ದಭ್ರಾಗಮಂ॥೮೪೪

ಸುಮನೋಗೋಪಸಮಾವೃತಂ ಜಲಧರಶ್ಯಾಮಂ ಕದಂಬದ್ರುಮೋ।
ದ್ಗಮಮಾಳಾಸುಭಗಂ ಮಯೂರನವಬರ್ಹಾಳಂಕೃತಂ ಕುಂದಹಾ॥
ಸಮನೋಜ್ಞಂ ಭುವನಾತ್ಮಕಂ ವಿಜಿತಚಂದ್ರಾದಿತ್ಯತೇಜಂ ಘನಾ।
ಗಮದೊಳ್ ಶೌರಿ ಘನಾಗಮಂಬೊಲೆಸೆದಂ ಗೋಪಾಲಲೀಲಾಸ್ಪದಂ॥೮೪೫

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್

ವರ್ಷರ್ತುವರ್ಣನಂ.

೩೩. ಶರದೃತುವರ್ಣನೆ.

ರವಿಹಯಲಾಲಾಪಿಂಡಂ।
ದಿವಿಜನದೀಫೇನಮಾಲೆ ರಾಹುವ ನಿರ್ಮೋಕ॥
ಕವಿದೆಂಬಿನಮುಲ್ಲಲ್ಲಿಗೆ।
ಧವಳಾಂಬುದಪಟಲಮೆಸೆದುದಂಬರತಳದೊಳ್॥೮೪೬

(ಜಗನ್ನಾಥವಿಜಯಂ)

ನೀರದ ವಿಟಂಗೆ ವಿದ್ಯು।
ನ್ನಾರಿಯ ವಿರಹಂ ಪೂಣರ್ಚೆ ಬಡವಾಗಿ ಕರಂ॥
ದೂರಿಸಿ ಬೆಳರ್ತ ತೆಱದಿಂ।
ಶಾರದಜಲಧರದ ತುಱುಗಲೊಗೆದುವು ನಭದೊಳ್॥೮೪೭

ಜೀವನಮುಳ್ಳನಮಿತ್ತು ಖಿ।
ಳಾವನಿಯಂ ಕೀರ್ತಿದೇಹಮಾಯ್ತೆನೆ ತುಂಗಾ॥

ಬ್ಜಾವಳಿ ಬೆಳತರ್ಗೆ ಬಾನಂ।
ತಿಃವಿಸುವು ಪರೋಪಕಾರಿ ಕೆಟ್ಟೆಡೆಯುಂಟೇ ॥೪೪

(ಕವಿಕುಂಜರಲೀಲಾವತಿ) ?

ಓವರೆ ಮೀನಮೇಷವೃಷಭಾದಿಗಳಂ ಕ್ರಮದಿಂ ದಿನಾಧಿಪಂ।
ಸೇವಿಸಿ ಮತ್ತೆ ಕನ್ನೆಯೊಡಗೂಡಲೊಡಂ ಕಿಡೆ ತನ್ನ ತೇಜಮಿ॥
ನ್ನಾವುದು ಕಜ್ಜಮೆಂದು ತೊಲೆಯಂ ಜನರಂಜನೆಗೇಱೆ ತೇಜಮಂ।
ಭೂವಳಯಕ್ಕೆ ಬೀಱಿದನದೆಂ ಪ್ರಭು ಮಾಡಿದ ಮಾಯೆ ಸಲ್ಲದೇ ॥೪೯

(ರಾಮಚಂದ್ರಚರಿತಪುರಾಣಂ)

ಮದಚಳೆಯಾಗಿ ನೀರ್ವೊಗೆವ ಖೇಚರಕಾಂತೆಯ ಹಸ್ತದಿಂ ಬರ್ದು*ಂ।
ಕಿದ ನವರೌಪ್ಯಕುಂಭಮೆ ತರಂಗಿತನಾಕತರಂಗಿಣೀಪ್ರವಾ॥
ಹದೊಳದೆ ಕಾಣಲಾದಪುದೆನಲ್ ನಿಱಿಗೊಂಡ ಶರದ್ಘನಾಳಿಯಿಂ।
ಪುದಿವನಿಳಾಧ್ವದೊಳ್ ಪೊಳೆಯುತಿರ್ದುದು ಚಂಡಮರೀಚಿಮಂಡಲಂ ॥೫೦

ಶರದಭ್ರಮೆಂಬ ಬೆಳ್ದಾ।
ವರೆಗಳ' ಮಕರಂದರೇಣು ಪವನಾಹತಿಯಿಂ॥
ಪರಿದು ಪಸರಿಸಿದುದೆನೆ ಪಿಂ।
ಜರರುಚಿ ರಂಜಿಸಿದುದಂದು ಕಂಜಪ್ರಿಯನಾ ॥೫೧

ಶರದಭ್ರಕುಸುಮತರುಗಳ್।
ಮರುತಾಹತಿಯಿಂ ಪರಾಗಪಾಂಶುಪ್ರಸರಂ॥
ಬೆರಸೆರಲಂ ಸುರಿವಪುವೆನೆ।
ಸುರಿವ ಬಿಸಿಲ್ಮೞೆಗಳೆಸೆದುವಭ್ರಾಗಮದೊಳ್ ॥೫೨

(ಜಗನ್ನಾಥವಿಜಯಂ)

ಪೊಳೆವ ಬಿಸಿಲ್ಗೆ ಮೆಯ್ವೆಳಗು ಚಂದನಪಾಂಡುಪಯೋಧರಾಗ್ರದಿಂ।
ಬಳೆದಿೞಿತರ್ಪ ಬೆಳ್ಸರಿಗೆ ಹಾರಮೆ ಸಾಲ್ತರೆ ಪೊಲ್ವೆಯಿಂ ಸಮು॥

ಜ್ಜ್ವಳಿತಸರೋಜಗಂಧಿ ಕಳಹಂಸಮನೋಹರಯಾನೆ ಸಸ್ಮಿತೋ ।
ತ್ಪಳಧವಳಾಕ್ಷಿಯೇಂ ಸುರಿವಳೋ ಶರದಂಗನೆ ಕಣ್ಗೆ ಶೋಭೆಯಂ ॥೮-೫೩
(ಕವಿಕುಂಜರಲೀಲಾವತಿ)

ಕಳುಷತೆಯಂ ನಿಮಿರ್ಚೆ ತಿಳಿಪಲ್ಕಣಮಾಱದೆ ಮೇಘವಲ್ಲಭಂ ।
ತಳರ್ದೊಡೆ* ಪೆರ್ಚೆ ತೀವ್ರತಪನಂಬಡವಟ್ಟನುಕೂಲೆಯರ್ ನದೀ ॥
ಲಳನೆಯರಂದು ಕಂಠಗತಜೀವನವೃತ್ತಿಯನಾಳ್ದರೋ ರತೋ ।
ತ್ಕಳಿಕೆಯರಂತು ಸ್ವೈರಿಸುವರೋ ಸರಸಾತ್ಮನಿನಾದಗಲ್ಕೆಯಂ ॥೮-೫೪

ಎಸೆದಿರೆ ಮಿತ್ರಮಂಡಲಮುದಗ್ರಕದಂಬಮದಂಗೆ ಕುಂದದೊ ।
ಳ್ಪಸದಳಮಾಗೆ ಮಿಱದಿರೆ ವಾಹಿನಿ ರಂಜಿಸೆ ರಾಜಲೀಲೆ ನ ॥
ರ್ತಿಸೆ ಕಮಲೋದಯಂ ಕುವಲಯೋನ್ನತಿಕೂಟಮನುಂಟುಮಾಡೆ ಪೋ ।
ಲ್ತೆಸೆಮು ಶಾರದಂ ವಿಭವದಿಂ ಸಲೆ ನಾಲ್ಪ್ರಭುವಂಶಮೇರುವಂ ॥೮-೫೫
(ಪುಷ್ಪದಂತಪುರಾಣಂ)

ಕಿಡಿಸಿ ಕಳಂಕಪಂಕದೊದವಂ ಸಮಯೋಚಿತಬಂಧುಜೀವದೊಳ್ ।
ಪಡೆದು ವಿಕಾಸಮಂ ನಿಲೆ ದಿಗಂಬರನಿರ್ಮಲವೇಷವೊಂದೆ ತ ॥
ನ್ನೊಡನನುಕೂಲವರ್ತನೆ ಸರಸ್ವತಿಗಾತಪಯೋಗದೊಳ್ಪೊಡಂ ।
ಬಡೆ ಶರದಾಗಮಂ ನೆನೆಯಿಸಿತ್ತು ಜಿನಾಗಮದಿವ್ಯಯೋಗಿಯಂ ॥೮-೫೬
(ಮಲ್ಲಿನಾಥಪುರಾಣಂ)

ಬಾಲೆಯರುರದೊಳ್ ಕಿಱುಮೊಲೆ ।
ಮೇಲುದು ನಸುದೊಲಗೆ ತೋರ್ಪ ತೆಱದಿಂ ಸರಸೀ ॥
ಮಾಲೆಯೊಳೆಸೆವುವು ನವಪ ।
ತ್ರಾಳಿಯ ತೆಱಪಿಂದೆ ತೋರ್ಪ ಕಮಲದ ಮುಗುಳ್ಗಳ್* ॥
(ಜಗನ್ನಾಥವಿಜಯಂ)

ಇಂಗಡಲೊಳಗೋಲಾಡುವ ।
ಮೀಂಗಳ ಬಳಗಂಗಳೆಂಬಿನಂ ಶರದದ ಬೆ ॥

ಳ್ದಂಗಳೊಳಾಡಿದುವು ಚಕೋ ।
ರಂಗಳ್ ಚಂದ್ರಾಂಶುಪೂರ್ಣಚಂಚುಪುಟಂಗಳ್ ॥ ೮೫೮
(ರಾಮಚಂದ್ರಚರಿತಪುರಾಣಂ)

ಕಡಲಂ ಸುರಾಸುರರ್ ಕಡೆ ।
ವೆಡೆಯೊಳ್ ಪೆರ್ದೆರೆಗಳೊಡನೆ ಪುಟ್ಟಿದ ಚೆಲ್ವಂ ॥
ಗೆಡೆಗೊಂಡು ನಿಱಿಮುಗಿಲ್ಗಳ ।
ನಡುವೆ ಕರಂ ಮಿಱುಗಿವತ್ತು ಹಿಮಕರಬಿಂಬಂ ॥ ೮೫೯

ಗೋಪಸ್ತ್ರೀದಧಿಮಂಥನಶ್ರಮಹರಂ ಗೋದೋಹನಕ್ಷೀರಧಾ ।
ರಾಪಾತೋತ್ಥಲವಾಪಹಾರಪಟು ಸದ್ಯಸ್ತಪ್ತಸರ್ಪಿಸ್ಸುಗಂ ॥
ಧೋಪೇತಂ ಸುಳಿಯಲ್ ಪ್ರಭಾತಪವಮಾನಂ ಪ್ರೇಕ್ಷ್ಯಸಕ್ರೂರನಂ ।
ದಾಪೂತ್ತುತ್ಸವದಿಂದೆ ವತ್ಸಕುಳಹಂಭಾಘೋಷಮಂ ಘೋಷಮಂ ॥ ೮೬೦
(ಜಗನ್ನಾಥವಿಜಯಂ)

ಮದಮಾತಂಗದವೊಲ್ ವಶಾವಿಳಸಿತಂ ಸುಕ್ಷತ್ರಿಯಸಾಮ್ರಾಜ್ಯರಾ ।
ಜ್ಯದವೊಲ್ ಸಂಗತಸಂಧಿನೀತಿನಿರತಂ ನೀಹಾರರುಕ್ಚಿತ್ರಸ್ರ ॥
ತ್ತ್ರದವೊಲ್ ರಾಜಿತರೋಹಿಣೀಪರಿಗತಂ ಶ್ರೀಮದ್ಧಯಾಮೂಲಧ ।
ರ್ಮದವೊಲ್ ವಿಶ್ರುತಸುವ್ರತಾಚರಿತಮೀಂ ಚೆಲ್ವಾಯ್ತು ಗವ್ಯಾಶ್ರಯಂ ॥

ಕಡೆಗೋಲ ಪೊಯ್ಲಿನಿಂದಂ ।
ಸಿಡಿದು ಶರೀರದೊಳೆ ತುಱುಗೆ ತಕ್ರಕಣಂಗಳ್ ॥
ಕಡೆದೇೞ್ವಳೆಸೆದಳಾಮಾ ।
§ಲ್ಗಡಲೊಳೆ ಪೊಱಮಟ್ಟ ಪೊಚ್ಚಪೊಸಸಿರಿಯವೊಲ್ ॥ ೮೬೧
(ಕವಿಕುಂಜರಲೀಲಾವತಿ)

ಸುರಭಿಘಟೋಧ್ನಿದುಗ್ಧನಿಧಿ ನಂದಿನಿ ವತ್ಸಲೆ ಕಾಮಧೇನುಹೀ ।
ವರಕುಚೆ ಗೋಪಿ ಸಲ್ಲಕಿಯೆನಿಪ್ಪಭಿಧಾನದ ಗೋಕದಂಬಮಂ ॥

---

§ ಲ್ಗಡಪದೆ ಪೊಱಮಟ್ಟ ಪೊಚ್ಚಪೊಸಸಿರಿಯಿರವಂ.

ಕರೆದು ಮುರಾರಿ ಮ್ಯೈ¶ದಡವಿ ಮೇಯಿಸಿಯುಂ ತಿಳನೀರನೂಡಿಯುಂ ।
ಮರದ $ನೆೞಲ್ಗಳೊಳ್ ನಿಲಿಸಿಯುಂ ಮೆಱೆದಂ ನಿಜಗೋಪಲೀಲೆಯಂ ॥೮೬೩

ಮಿಳಿರ್ವನ್ನಂ ಕುಡಿಸಾಲಮುವ್ವಳಿಸುವನ್ನಂ ದಿಟ್ಟಿ ಸೂಳಕ್ಕಿ ಕೆ ।
ಕ್ಕಳಸನ್ನಂ ಕಿವಿ ಸೋಂಕಿನಿಂ ಕೊಣಕಿಡುತ್ತುಂ ಪೋಗಿ ಬೆಂಬತ್ತಿ ತಂ ॥
ದೆಳವುಲ್ಲುಂ ಮೊಳೆವುಲ್ಲುಮೆಂಬ ಪಸುರ್ವುಲ್ಲಂ ‡ತಾಳ್ದ ಕಾಳಿಂದಿಯೊಳ್ ।
ತಿಳನೀರೂಡಿ ಮುರಾರಿ ವತ್ಸಕುಳಮಂ ಕಾಪಂ ಮಹೋತ್ಸಾಹದಿಂ ॥೮೬೪

ಕಳೆಯುಂ ಪತ್ತಿಸಿ ರಾಗಮಂ ನಿಲಿಸಿ ನುಣ್ಪಂ ನಣ್ಪುಗೆಯ್ದಿಂಪನಿ ।
ಕುರ್ಳಿಗೊಂಡೊಟ್ಟಜೆಯಂ ನಿಮಿರ್ಚಿ ನಯಮಂ ತಳ್ಪೊಯ್ದಲಂಕಾರಮಂ ॥
ಕೆಳಗೊಂಡಾಣತಿಯಂ ತೆರಳ್ಚಿ ಜತಿಯಂ ಸೈತೋಜೆಯಂ ತಾಳ್ದ ಗೋ ।
ವಳರಾಯುಂ ಕೊಳಲೂದಿದಂ ನೆಗೞ್ವಿನಂ ಮಾಧುರ್ಯತೂರ್ಯಸ್ವನಂ ॥೮೬೫

ಭಣಿತೆ ಬೆಡಂಗು ಕಾಕು ಖಚರಂ ಗಮಕಂ ತಿರಿ ಪೆಂಪು ನುಣ್ಪು ನೇ ।
ವಣೆ ಕಣೆ ಬಣ್ಣದೊಡ್ಡವಣೆ ಕಾಳಸಿ ಭೈಸಿಕೆ ಪಟ್ಟ ಕಾಂತಿ ಕೊಂ ।
ಕಣು ತನು ಜಾಯಿ ಗೀತಿ ಜತಿ ಜೋಕೆ ನಯಂ ಬಹುಲಾಯಿ ದೇಸಿ ಪ ।
ಲ್ಲಣೆ §ಕಣೆಯೆಂಬಿವಂ ಮೆಱೆದು ಬಾಜಿಸಿದಂ ಮುರವೈರಿ ವಾಸವಂ ॥೮೬೬

ರಸಭಾವಂ ಪೆಱತೋಜೆ ಬೇಱೆ ಜತಿ ಮತ್ತೊಂದಿಂಪಪೂರ್ವಂ ನಯಂ ।
ಪೊಸತೆಂಬಂತುಟೆ ನಾಳಕೇರರಸಧಾರಾವೃಷ್ಟಿ ಜೇನೆಯ್ಯ ಸೋ ॥
ನೆ ಸುಧಾಸಾರಮಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾ ।
ಜಿಸಿದಂ ಬಣ್ಣಿಸೆ ವಾಸವಂ ಮಧುರನಾದಾವಾಸಮಂ ವಾಸವಂ ॥೮೬೭

ಕಿಱಿದಾನುಂ ಪೊೞ್ತು ಚೆಂಬೊಂವಳರ ಪಸೆಗಳೊಳ್ ಗೋಷ್ಠಿಯಿಂ ಕುಳ್ಳಿರುತ್ತುಂ । ಕಿಱಿದಾನುಂ ಪೊೞ್ತು ಮಲ್ಲಕ್ರಮದೆ ಪೊಣರ್ವ ಗೋಪಾಳರಂ ಚಾಳಸುತ್ತುಂ ॥ ಕಿಱಿದಾನುಂ ಪೊೞ್ತು ನಾದಾಮೃತಮೊಸರ್ವಿನೆಗಂ

¶ ತೊಡೆದು $ ಮೊದಲ್ಗ. ‡ ತಾಂಗಿ. § ಕಳೆ.

ವೇಣುವಂ ಬಾಜಿಸುತ್ತುಂ । ತುಱುಗಾದಂ ಗೋಪವೇಷೋಚಿತವನಕುಸುಮಾಲಂಕೃತಂ ಪಂಕಜಾಕ್ಷಂ ॥೪೬೪ (ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಶರದೃತು ವರ್ಣನಂ.

೩೮ ಸೂರ್ಯೋದಯ ವರ್ಣನೆ

ನಿದ್ರಾಂಧಕಾರಹರಮುಂ ।
ನ್ನಿದ್ರೀಕೃತನಯನಸರಸಿಜಂ ನೃಪಹೃತ್ಪೂ ॥
ರ್ವಾದ್ರಿಯೊಳೊಗೆತಂದತ್ತು ।
ನ್ಮುದ್ರಿತತೇಜಂ ಪ್ರಬೋಧದಿನಕೃದ್ಬಿಂಬಂ ॥೪೬೯
(ಚಂದ್ರಪ್ರಭಪುರಾಣಂ)

ಪುದಿದು ಕವಿದಿಡಿದ ತಮದೊ ।
ಡ್ಡದಿರ್ವಿನವೊರ್ವದಲೊಳೆರ್ದ ಕಟಿವೆಯು ಸಸಿವೋಲ್ ॥
ಕದಿರ್ಗಳೊಳ್ ತುಱುಗಿ ಮೂಡಿದ ।
ನುದಯಾದ್ರಿಯೊಳರುಣತರುಣಕಿರಣಪ್ರಸವಂ ॥೪೭೦

ಬಳೆದ ತಮಮೆಂಬ ಕರಡಮು (?) ।
ನಳವಲ್ಲದೆ ಸುಟ್ಟುಕಿಡಿಸಲೆಂದಜನುದಯಾ ॥
ಚಳದೊಳ್ ತಗುಳ್ಚಿ ತಳ್ತೊಡ ।
ನಳುರ್ವ ದವಾಗ್ನಿಯವೊಲರ್ಕನುದಯಂಗೆಯ್ದಂ ॥೪೭೧
(ಶೂದ್ರಕಂ)

ಅಂಬುಧಿವೇಷ್ಟಿತಾವನಿಗೆ ಲಕ್ಷ್ಮಣದೇವನೆ ದೇವನೆಂದು ರಾ ।
ಜಾಂಬಿಕೆಯಪ್ಪ ಪುಣ್ಯಸತಿ ಚಂದಲದೇವಿಯೆ ದೇವಿಯೆಂದು ಸೇ ॥
ವ್ಯಂ ಬುಧನೇಮಿಚಂದ್ರನೆ ಕವೀಶ್ವರನೆಂದಿಳಗಿಂದ್ರನೆಂದು ದಿ ।
ವ್ಯಂಜಿಡಿಸಂತೆ ಮೂಡಿದುದು ಮೂಡಣ ದಿಕ್ಕಿನೊಳರ್ಕಮಂಡಲಂ ॥೪೭೨

ಜಳಜೋದ್ಭವಂ ತಾನಸುರಾ ।
ಚಳವ ಸುರಾಚಳದ ಮೈಮೆಯಂ ತೂಗೆ ಸುರಾ ॥
ಚಳಭರದ ಕೊಂಚಿತೆಗಿಕ್ಕಿದ ।
ತೊಳಗುವ ಗುಂಜೆಯುನೆ ರಂಜಿಸಿದನುದಯಾರ್ಕಂ ॥ ೮೩

ಜಳಧಿಚಳೋರ್ಮಿಚಾಮರಚಯಂಗೆ ದಿಶಾಧಿಪದಿಗ್ಗಜೇಂದ್ರಸಂ ।
ಕುಳಪರಿವಾರಭೋಗಿಗೆ ನಭೋಮಣಿಮಂಡಪಮಂಡನಂಗೆ ಕ ॥
ಣ್ಗೊಳಿಸೆ ಜಗನ್ಮಹಾಪ್ರಭುಗಭೀಕ್ಷಿಸಲೆತ್ತಿದ ಸುಪ್ರಭಾತಮಂ ।
ಗಳಮಣಿದರ್ಪಣಕ್ಕೆ ದೊರೆಯಾಯ್ತುದಯಾದ್ರಿಯೊಳರ್ಕಮಂಡಲಂ ॥ ೮೪
(ಕವಿಕುಂಜರಲೀಲಾವತಿ)

ಎಳದಳಿರಂತೆ ಪೆರ್ಮರನ ಕೊಂಬುಗಳೊಳ್ ನವಧಾತುನಿರ್ಝರಂ ।
ಗಳ ಪೊನಲಂತೆ ಶೈಲಶಿಖರಂಗಳೊಳುಜ್ಜ್ವಲಪುಷ್ಪ ಮಾಣಿಕಂ ॥
ಗಳ ರುಚಿ ಪರ್ವಿದಂತೆ ಸುರಕೂಟಕನತ್ಕಳಶಂಗಳೊಳ್ ತಳ ।
ತ್ತಳಿಸಿದುದೀಷದುನ್ಮಿಷಿತಮಂಡಲಚಂಡಕರಾಂಶುಜಾಲಕಂ ॥ ೮೫
(ರಾಮಚಂದ್ರಚರಿತಪುರಾಣಂ)

ಸುರದಿಕ್ಕಾಮಿನಿ ಪೊಯ್ಯೆ ಮೇಗೊಗೆವ ಶೋಣಂ ಕಂದುಕಂ ತಾನಿದೆಂ ।
ಬರ ಮಾತಿರ್ಕೆಮ ವಿಮಾಂಗಳೆಂಬಲರ್ಗಳಂ ಕೊಯ್ವಲ್ಕೆ ತತ್ಕಾಂತೆ ಬಿ ॥
ತ್ತರದಿಂದೆತ್ತಿದ ಕೆಂದಳಂ ದಲೆನೆ ಕಣ್ಗಾದಂ ಬೆಡಂಗಾದನಂ ।
ಬರಲಕ್ಷ್ಮೀಮೃತಚಂದ್ರಿಕಾವಿಮಳವಾಸಸ್ತಸ್ಕರಂ ಭಾಸ್ಕರಂ ॥ ೮೬
(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್
ಸೂರ್ಯೋದಯ ವರ್ಣನಂ.

೩೫. ಸೂರ್ಯಾಸ್ತಮಯ ವರ್ಣನೆ.

ಅಂಬುಜನೇತ್ರನ ನವಪೀ ।
ತಾಂಬರದೊಳ್ ಸೆಣಸಿ ಭೀತಿಯಿಂದೋಡಿದುದೀ ॥

ಕೆಂಬಿಸಿಲೆನೆ ಪಡುನೇಸಱ ।
ಪೊಂಬಿಸಿಲೆಸೆವತ್ತು ಗಿರಿಕುಜಾಗ್ರಸ್ಥಳದೊಳ್ ॥೮೭೩

ಇಳೆಯಿಂದಂ ಪೊಂಬಿಸಿಲ್ ಮೆಯ್ದೆಗೆದು ನಗನಿಕಾಯಾಗ್ರದೊಳ್ ಸಾಂದ್ರ ಧಾತು। ಸ್ಥಳ ಹರ್ಮ್ಯಾಗ್ರದೊಳ್ ಮಾಣಿಕದ ಶಿಖರಮುದ್ಯಾನಮಾಲಾಗ್ರದೊಳ್ ಕೆಂ॥ ದಳಿರೆಂಬಾಶಂಕೆಯಂ ಮಾಳ್ಪನಮರುಣತೆವೆತ್ತತ್ತು ಚೆಲ್ವಾದುದಸ್ತ। ಚಳತುಂಗವ್ಯಾಘ್ರಜೃಂಭಾವೃತವದನಮೆನಿಪ್ಪಂದದಿಂ ಭಾನುಬಿಂಬಂ ॥

ಅರುಣಾಂಶುಗಳಂ ಪಶ್ಚಿಮ ।
ಗಿರಿಕೂಟದನಕ್ಕಪೂರ್ವಪಲ್ಲವಚಯಮಂ ॥
ನೆರಪಿ ಪಡುನೇಸಱಸೆದುದು ।
ಶರನಿಧಿನಾಥಂಗೆ ಪಿಡಿದ ಮಾಣಿಕಗೊಡೆವೋಲ್ ॥೮೭೯

(ಜಗನ್ನಾಥವಿಜಯಂ)

ಕಿರಣಂಗಳ್ ಕಾವುಗಳೆನೆ ।
ಹರಿದಶ್ವಂಗಳ್ ಪಸುರ್ತ ಪಸುರೆಲೆಯೆನೆ ತೋ ॥
ರ್ಪರುಣದಿನಮಣಿ ಬಯಲಲ್ದಾ ।
ವರೆಯನೆ ಪೊರ್ಲ್ತಿರ್ದನಪರಗಿರಿವರಶಿರದೊಳ್ ॥೮೮೦

(ಶೂದ್ರಕಂ)

ಕುವಲಯಪೀಡೆಯಂ ಪಡೆವ ಪುಷ್ಕರಪದ್ಮಿನಿಗೋವ ಕಾಯ್ಪು ಸಂ ।
ಭವಿಸಿರೆ ಮಂಡಲಾಗ್ರಕರಮಂ ಕುಲಗೋತ್ರಶಿರಕ್ಕೆ ನೀಡುತಿ ॥
ರ್ಪವಗುಣದಿಂದಮೆಯ್ದಿದುದಧೋಗತಿಯೆಂದು ವಿರಕ್ತನಾಗಿ ಬೀ ।
ಱ್ವವೊಲಿನನಂಬರಂದೊಱೆದು ಪಶ್ಚಿಮವಾರ್ಧಿಗೆ ಮೆಯ್ಯನಿಕ್ಕಿದಂ ॥೮೮೧

(ಜಗನ್ನಾಥವಿಜಯಂ)

ಎನಗಂ ಭೂಪತಿಗಂ ಸಮಾನಮೆ ಕರವ್ಯಾಪ್ತಿ ಶಿಲಾಶಾತ್ವಮು ।
ತ್ಯನುರಕ್ತಪ್ರಕೃತಿತ್ವಮಭ್ಯುದಯುವತ್ವಂ ಚಕ್ರಭೃತ್ವಂ ದಲೆಂ ॥
ದಿನನುದ್ಯಾನಪಯೋವಿನೋದಸದೃಶತ್ವಕ್ಕಂ ಮನಂದಂಡವೋಲ್ ।
ವನಮಾಲಾಕುಲತೀರಮಪ್ಪ ವರಪಾರಾವಾರಮಂ ಪೊರ್ದಿದಂ ॥೮೮೨

(ಚಂದ್ರಪ್ರಭಪುರಾಣಂ)

ಪೂಡುವ ಕುದುರೆ ಬೆಸಂ ಕೇೞಂ ।
ಓಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಱವಂ ‖
ಕೇಡಿನ್ನಲಸಿದೊಡಕ್ಕುಮೆ ।
ನೋಡಿರೆ ರವಿ ಕೆಡೆದನಸ್ತಗಿರಿಮಸ್ತಕದೊಳ್ ‖೮೮೩

(ಅರ್ಧನೇಮಿಪುರಾಣಂ)

ಸ್ಫುರಿಯಿಪ ತೀವ್ರವೃತ್ತಿಯುಮನಡಂಗಿಸಿ ಸತ್ಪಥವೃತ್ತಿಯೊಳ್ ವಯಃ ।
ಪರಿಣತೆವೆತ್ತುಮೇಣುದಯಕಾಲದ ರಾಗಮನಸ್ತಕಾಲದೊಳ್ ‖
ಪರಿಹರಿಸಲ್ಕಣಂ ನೆಱೆದನಿಲ್ಲ ದಿನಾಧಿಪನಂತೆ ದಲ್ ವಯಃ ।
ಪರಿಣತನಾದೊಡಂ ಬಿಸುಡಲಾರ್ಪನೆ ರಾಗಿ ನಿಸರ್ಗಭಾವಮಂ ‖೮೮೪

(ಮಲ್ಲಿನಾಥಪುರಾಣಂ)

ಪ್ರತ್ಯಗ್ಭೂಧರಮಾತ್ಮಾ ।
ಧಿತ್ಯಕದೊಳ್ ತಳೆದುದಸ್ತಗಿರಿಯಿಂ ಬೀೞ್ವಾ ‖
ದಿತ್ಯನನೆಂದುಮುದಗ್ರಂ ।
ನಿತ್ಯಪರಾರ್ಥೈಕವೃತ್ತನಕ್ಕುಂ ಗ್ರಾಹ್ಯಂ ‖೮೮೫

(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್

ಸೂರ್ಯಾಸ್ತಮಯ ವರ್ಣನಂ.

೩೭. ರಾತ್ರಿಯ ವರ್ಣನೆ.

ಒಱ್ದುಗುವ ಬಾಷ್ಪವಾರಿಯಿ ।
ನೆಱಂಕೆಗಳ್ ನಾಂದು ಮುಗುೞ್ಚಿ ವಿರಹಾನಳನಿಂ ‖
ಸೆಱೆಬಱುವರಾಗೆ ಪಡುನೇ ।
ಸೆಱೊಳಿರ್ದಗಲ್ದು ಚಕ್ರವಾಕದ್ವಂದ್ವಂ ‖೮೮೬

ನಲ್ಲರಗಲ್ಕೆಯಿಲ್ಲದೆಡೆಯಸ್ತಮಯಕ್ಕೆ ದಿನಾಧಿನಾಯಕಂ ।
ಸಲ್ಲದ ತಾಣಮಂಗಜಶರಾಹತಿ ಪೊರ್ದದ ದೇಶಮುಳ್ಳೊಡಿ ॥
ನ್ನಲ್ಲಿಯೆ ಮಾಳ್ಕೆ ಮಜ್ಜನನಮಂ ಬಿದಿಯೆಂದು ರಥಾಂಗಕಾಂತೆ ಹೃ ।
ದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟುಮೊಜಲ್ಬುದು ಪದ್ಮಸದ್ಮದೊಳ್ ॥೮೮೨

ಇನನಸ್ತಂಗತನಾಪನುತ್ಪಳನಿ ಪೇೞ್ಗುಂ ಲಕ್ಷ್ಮಿಯುಂಟೆಂಬುದ ।
ಕ್ಕೆನಗಂ ತಪ್ಪದು ರಾಜಬಾಧೆ ಬೞಿಯಂ ಲೇಸಲ್ತು ಮೇಣೆನ್ನ ಜೇ ॥
ವನಮೆಂಬುಬ್ಬೆಗದಿಂದೆ ನಂಜುರುಳಿಯಂ ಪೇೞ್ ನುಂಗಿದಳ್ ಪೇೞದ ।
ಬ್ಜಿನಿಯೆಂಬಂತೆವೊಲಾಯ್ತು ಕುಟ್ಮಳತಕಂಜಾತೋದರೇಂದಿಂ $ದಿರಂ॥೮೮೮

(ಚಂದ್ರಪ್ರಭಪುರಾಣಂ)

ಬಳಗಿರ್ದ ಪೊರೆಯೆ ಮಧುಕರ ।
ಕಳಭಂ ನಿಜಗಂಧಮೋಹದಿಂ ಸಂಧ್ಯಾಕು ॥
ಟ್ಮಳತಸರೋಜಂ §ಪಡೆದುದು ।
ಜಳದೇವತೆಯುರ ಶಕುಂತಿಕಾವಿಳಸನಮಂ ॥೮೮೯

ಇನನತಿದೂರ †ಮಿರಲ್ ಮ ।
ಲ್ಲನೆ ಭೃಂಗಂ ಬಂದು ಸೋಂಕೆ ಮೊಗವಿಹಾಯದೆ ಪ ॥
ದ್ಮಿನಿ ಮುಗಿದಳ್ ಲಕ್ಷ್ಮೀಭಾ ।
ಜನೆ ಗುಣವತಿ ಮಲಿನವೃತ್ತಿಯಂ ಸೈರಿಪಳೇ ॥೮೯೦

(ಮಲ್ಲಿನಾಥಪುರಾಣಂ)

ಮುಗಿವ ಸರೋಜಮಾಲೆಗಮರಲ್ವಸಿತೋತ್ಪಲಮಾಲೆಗಂ ಮನಂ ।
ತೆಗೆಬಗೆಯಾಗಿ ಸೈರಿಸದೆ ಷಟ್ಪದಸಂತತಿ ರಾಜಬಾಧೆಯಿಂ ॥
ಸುಗಿವ ನವಪ್ರಸಾದಫಳದಿಂದವಿವಾಪ್ತಜನಕ್ಕೆ ಕೂರ್ತ ಬಂ ।
ಧುಗಳೆಡೆಯಾಡುವಂತಿರೆಡೆಯಾಡಿದುವಂಬುರುಹಾಕರಂಗಳೊಳ್ ॥೮೯೧

(ಅನಂತನಾಥಪುರಾಣಂ)

ಪ್ರಿಯೆ ತನಗೆಂಬಿದಂ ಬಗೆಯದೆನ್ನನವಂ ಪೆಱಗಿಕ್ಕಿ ಪೋಗಿ ಸಂ ।
ಜೆಯೊಳನುರಕ್ತನಾಗಿ ನೆರೆದಿರ್ದಪನಾತನನೆಂತು ಕಾಣ್ಬೆನಾ ॥

$ ಲೋಭ.   § ತಳೆ.   † ಮೆನಲ್.

ನಯನಪಥಕ್ಕೆ ತರ್ಪನೆನುತುಂ ಹರಿದಿಗ್ವಧುವಿಂತುಗೆಯ್ದಳೊ ।
ಕೆಯ ಕಚಭಾರದಂತಿಳಿಗೆ ತಳ್ತುದಪೂರ್ವದಿಗಂತದುಂ ತಮಂ ॥೮೯೧

ಬಿದಿ ಹರಿನೀಲದೊಳ್ ಕಡೆದಜಾಂಡಮನಂಜನದೊಳ್ ಪೊರೆಳ್ದುದಂ ।
ತೊಡವಿರೆ ಮರ್ಬು ಸಂದೆಗದೆ ತಮ್ಮೊಡಲಂ ಬಿಡದಂದು ನೋೞ್ಪರಂ ॥
ಬುದನೆನೆ ನೋಡಿ ನಿಟ್ಟಿಸುವರಾರಿದು ಪರ್ವತಮೆಂಬಿದುರ್ವಿಯೆಂ ।
ಬಿದು ದೆಸೆಯೆಂಬಿದಭ್ರಪಥಮೆಂಬ ಚರಾಚರವಸ್ತುಭೇದಮಂ ॥೮೯೨
(ಮಲ್ಲಿನಾಥಪುರಾಣಂ)

ಇದು ಚಕೋರರದೃಶ್ಯಾಂಜನ ।
ಮಿದು ವೃದ್ಧಾಂಗನೆಯರೆಸೆವ ಪಲಿತೌಷಧಮಿಂ ॥
ತಿದು ಕಾಮನ ಕಾರಲಗೆನಿ ।
ಸಿದುದಪದೃಕ್ಸರಮಂಧಕಾರಮಪಾರಂ ॥೮೯೪

ಇದು ತಿಮಿರಾಪಹಾಂಜನಮುಲೂಕಕುಲಕ್ಕಿದು ಪುಂಶ್ಚಲೀರತ ।
ಕ್ಕಿದಿತತಮಾಲಮಂಡಪಮಿದುತ್ಪಲಲಕ್ಷ್ಮಿಯ ಮಂಡನಕ್ಕೆ ಸು ॥
ತ್ತಿದ ನವನೀಲಕಾಂಡಪಟಮಿಂತಿದು ಚಕ್ರಯುಗಕ್ಕಗಲ್ಚಲಿ ।
ಕ್ಕಿದ ಕಿಸುವೇರ್ವ ಕಟ್ಟೊಗೆಯೆನಿಪ್ಪವೊಲಾಯ್ತು ಮಹತ್ತಮಂ ತಮಂ ॥
(ಚಂದ್ರಪ್ರಭಪುರಾಣಂ)

ಪಸರಿಸಿದುದು ಕತ್ತಲೆ ದೆಸೆ ।
ದೆಸೆಗಮಯಃಕಾರನಂತೆ ಕಾಲಂ ಕಡಲೊಳ್ ॥
ಬಿಸುಪರ್ಥತಪನತಪ್ತಾ ।
ಯಸಪಿಂಡಮನಟ್ಟೆ ನೆಗೆದ ಪೊಗೆಯೆಂಬಿನೆಗಂ ॥೮೯೬
(ಅರ್ಧನೇಮಿಪುರಾಣಂ)

ಕರಿದಾಯ್ತು ತುಂಬಿಗಂ ಕಾಮರ್ಗಿಲ ಬಳಗಮಾತುಂಬಿಗಂ ಕಾಮರ್ಗಿ
ಲ್ಗಂ । ಪರಪುಷ್ಟಚ್ಛಾಯೆ ತಾಂ ನೋೞ್ಪೊಡೆ ಕಡುಕರಿದಾತುಂಬಿಗಂ ಕ
ಮರ್ಗಿಲ್ಗಂ ॥ ಪರಪುಷ್ಟಚ್ಛಾಯೆಗಂ ಕಜ್ಜಳರುಚಿ ಕರಿದಾ ತುಂಬಿಗಂ ಕ
ಮರ್ಗಿಲ್ಗಂ । ಪರಪುಷ್ಟಚ್ಛಾಯೆಗಂ ಕಜ್ಜಳರುಚಿಗಮದೇಂ ಕತ್ತ
ಯ್ತೋತಮಂಧಂ ॥೮೯೭ (.....................)

ಘೋರಾಂಧಕಾರಮತಿದು |
ರ್ವಾರಂ ನೆಲೆವೆರ್ಚೆ ಬಯಲೊಳಂ ಜಾರಾಸಂ ||
ಚಾರಕ್ಕೆಡೆಗೊಟ್ಟತ್ತಪ |
ಕಾರಿಯು ಸಿರಿ ಖಳರನಲ್ಲದೇಂ ತಣಿಪುಗುಮೋ ||೮೯೮
(ಮಲ್ಲಿನಾಥಪುರಾಣಂ)

ಮುಂದಾಗಿ ದಿನಪನುದಯಾ |
ನಂದದೊಳಸ್ತಮಯಸಮಯದೊಳ್ ಸಂಜೆ ಕರಂ ||
ಪಿಂದುಳಿದುದಂತೆ ಕೆಲರೊಡ |
ನಂದಾದುದಯದೊಳೆ ಸಾರ್ವರೆಡರೊಳಗಲ್ವರ್ ||೮೯೯
(ಶೂದ್ರಕಂ)

ಬಳಸಿಮುದರ್ಕವಾಜಿಖುರಘಟ್ಟಿತಮಾದಪರಾದ್ರಿಯಿಂದಮು |
ಚ್ಚಳಸಿದ ಧಾತುರೇಣುವೆನೆ ಚಕ್ರಯುಗಂಗಳಗಲ್ಕೆಗಿಚ್ಚು ಪಾಂ ||
ಸುಳೆಯರ ರಾಗದೇಳ್ಗೆ ದೆಸೆವೆಣ್ಗಳ ರತ್ನವಿಭೂಷಣಾಂಶುವು |
ತ್ಪಳಸಿಯು ಕುಂಕುಮೋದಕದ ಸಿಂಪಿಣಿ ಸಂಜೆಯ ಕೆಂಪು ಲೋಕಮಂ ||
(ಚಂದ್ರಪ್ರಭಪುರಾಣಂ)

ಬಂದದ ಪಗಲಿರುಳೆರಡಱ |
ಸಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ ||
ಸಂದಿಸಿ ಪೊಲ್ದವೊಲೆಸೆದುದು |
ಮುಂದ್ಯೆಸಿದ ಸಂಜೆಗೆಂಪು $ಪಡುವಣ ದೆಸೆಯೊಳ್ ||೯೦೧
(ಜಗನ್ನಾಥವಿಜಯಂ)

ಇನನಂ ಕಾಣದೆ ಚಂಚಲ |
ತನುವಪರಾಶಾಪ್ರಸಂಚವಿರಹಿತೆ ಸಂಧ್ಯಾಂ ||
ಗನೆ ನೋಡೆ ನೋಡೆ ಕರಗಿದ |
ಳನುರಕ್ತೆ ಪ್ರಿಯನ ವಿರಹಮಂ ಸೈರಿಪಳೇ ||೯೦೨
(ಮಲ್ಲಿನಾಥಪುರಾಣಂ

$ ಪೈಗಿನ.

ರಸದ ಮಲಯಜದ ಘುಸೃಣದ ।
ಕುಸುಮದ ಕತ್ತುರಿಯ ಕವಿವ ಸೊವಡಿಂಗಳಗಳ್ ॥
ಮುಸುಕಿ ನವನೀಲಪಟನುಂ ।
ಮುಸುಕಿಪ್ರೋಲಸತಿಯರ್ವರ್ಗಳಡಿಯಿಡುತಿರ್ದರ್ಗಳ್ ॥೯೦॥

ಪದುಳಿಸದಂಗವೆಳ್ಚಿ ಬಿದ ಕಣ್ಮಲರಾಜಿದ ಸೇದೆ ಮುಗ್ಗುಲಿ।
ಕ್ಕದ ಪುಳಕಂಗಳಂಗದ ಬೆಮರ್ ವಿಡುಕೋಡದ ಪ್ರರ್ಬು ಬೀಗುಬಿ॥
ಯುದ ತುಟಿ ಕೆತ್ತು ಕುಂದದ ಕುಚಂ ನಡುಕಂಬಿಡನೂರು ಗಂಟೆ §ಯಾ।
ಜದ ಕರಘಾತವೊಪ್ಪೆ ಸುಸಿಲಂ ಸವಿದೊಯ್ಯನೆ ಜಾರೆ ಜಾಱಿದಳ್ ॥೯೧॥

ವೊಲೆವಿಣ್ಪಿಂ ಬಳ್ಕುತುಂ ಮೆಲ್ಲನೆ ಪದವಿಡುತುಂ ನೀಳ್ದಪಾಂಗಂಗಳಿಂದಿ।
ರ್ಕೆಲನಂ ನೋಡುತುತ್ತುಮೆತ್ತಂ ಸುಱಿದ ನೀಲನಾರಯ್ಯುತುಂ ದೂರದಿಂ ಬ॥
ರ್ಪುಲಿಪಂ ಕರ್ಣಾವತಂಸಕ್ಕೆಳಸುವಳಿಗಳಂ ¶ಸೋವಿ ನಿಂದಾಲಿಸುತ್ತುಂ।
ಚಲವೇಣೀಭಾರದಿಂದೋಸರಿಸುವ ಮುಸುಕಂ ಸಾರ್ಚುತುಂಪಾಣ್ಬೆ ಪೋದಳ್॥

ಇನಿಯನ ನಣ್ಪಿನಿಂ ತೆಗೆದು ಚುಂಬಿಸಿ ತಂಬುಲವಿಕ್ಕಿ ಸುಯ್ದು ಬ।
ಯ್ದನುವಿಸಿ ಕೂಡೆ ನೊಂದ ತುಟಿಯುಂ ತುದಿನಾಲಗೆಯಿಂದೆ ಪತ್ತಿದಿಂ॥
ಪನೆ ಸವಿಸಂತಿರಿಂಟಿ ಕುಚದೊಳ್ ನಸುನಾಂಟಿದ ತನ್ನಖಾಂಕವುಂ ।
ವನರುಹವಕ್ತ್ರ ನಿಂದೆಳವಿ ನೋಡುತುಮೇಂ ಕಿಱುಜೊಡೆ ಪೋದಳೋ ॥
(ಕವಿಕುಂಜರಲೀಲಾವತಿ)

ಪೊದೆದ ನವೀನನೀಲಪಟವಿಕ್ಕಿದ ಕತ್ತುರಿಯುಣ್ಪು ತೊಟ್ಟ ನೀ।
ಲದ ತೊಡವೊಪ್ಪೆ ಜಂಗಮತಮಃಕಳೆಯಂತೆ ತಮಸ್ತಮಾಳವೃ॥
ಕ್ಷದ ಚಳಶಾಖೆಯಂತೆ ತಮದೊಡ್ಡಿನ ಲೋಲಪತಾಕೆಯಂತೆ ಪ।
ರ್ಬಿದ ತಮ ‡ದೊಡ್ಡಿನೊಳ್ ಸುಱಿದರಸ್ಫುಟಚಾರೆಯರಂದು ಜಾರೆಯರ್॥೯೩॥
(ಜಗನ್ನಾಥವಿಜಯಂ)

ಜವದಿಂ ಪೋದಿನನ ವರೂ।
ಥವಾಜಿಗಳ ವೊಗದಿನೊಗೆದ ಫೇನಂಗಳ್ ವಾ॥

§ ಯೇಱದ. ¶ ಸೋದು. ‡ ದುರ್ವಿ.

ಯುವಕರದೆ ಪಱುವಱುಯಾಗಿ ।
ರ್ಗವು ಗಗನಾಂಗಣದೊಳೆಸಿಸುವು ತಾರಗೆಗಳ್ ॥೯೮

ಗಗನಂ ಮಿತ್ರವಿಯೋಗದಿ ।
ನೊಗೆದಂತಶ್ರೂನ್ಯಭಾವದಿಂದೆಳಮೆಯ್ಯೊಳ್ ॥
ಮಿಗೆ ಪನಿತ ಕಣ್ಬನಿಗಳೆನೆ ।
ಸೊಗಯಿಸುದುವು ತರದಿನೊಗೆ ॥ನ ತಾರಾನೀಕಂ ॥ ೯೯

(ಚಂದ್ರಪ್ರಭಪುರಾಣಂ)

ಅಮರೇಂದ್ರಾಶಾವಧು ಚಕಂ ।
ಪ್ರಮುಖಿ ಸುಧಾರಶ್ಮಿಸಿಂಧುರಸಧಾರೆಯಾನಂ ॥
ದುಮುಳೆ ನಭಃಕೇಸರಮೆ ।
ಯ್ದೆ ಮುಗುಳ್ತಂತಡರೆ ತುಱುಗಿದುವು ಭಗಣಂಗಳ್ ॥೯೧೦

ಓಸರಿಸೆ ಸಂಜೆಜವನಿಕೆ ।
ಯೋಸರಿಸಿದ ರಾತ್ರಿಯೆಂಬ ನರ್ತಕಿಯಾಡಲ್ ॥
ಸೂಸಿದ ಪುಷ್ಪಾಂಜಲಿಯೆನೆ ।
ಭಾಸಿಸಿದುವು ಗಗನರಂಗದೊಳ್ ತಾರಗೆಗಳ್ ॥೯೧೧

(ಕವಿಕುಂಜರಲೀಲಾವತಿ)

ಅಂಬಿರಿವಿಡುವ ತಮೋದಾ ।
ನಾಂಬುವಿನೊಳ್ ಮುಳುಗಿ ನಿಂದ ನಭಮೆಂಬ ಮದ ॥
ಸ್ತಂಬೇರಮುಮಾಗಳ್ ಚಿ ।
ಬ್ಬಿಂಬೊಯ್ದುವೊಲಡರೆ ತುಱುಗಿದುವು ಭಗಣಂಗಳ್ ॥೯೧೨

(ಮಲ್ಲಿನಾಥಪುರಾಣಂ)

ಇಳೆಗೆ ಪಟಗಾಲದಂಬರ ।
ಮೊಳಸೊರ್ಗಿಂ ಬೀೞ್ಗುಮೆಂದು ಧಾತ್ರಂ ಬಲ್ಪಿಂ ॥
ವಳವಡೆ ಬೆಟ್ಟಿದ ಬೆಳ್ಳಿಯು ।
ಮೊಳೆಗಳೆನಲ್ ತೊಳಗಿ ಬೆಳಗಿದುವು ಭಗಣಂಗಳ್ ॥೯೧೩

(ಜಗನ್ನಾಥವಿಜಯಂ)

---

1 ದಾ ತಾರಗೆ ಪಲನ್ತಂ.

ಚಂದ್ರಿಕೆ ಸುರವರಕರಿಯೆನೆ ।
ಚಂದ್ರಂ ತತ್ಕರಿಯ ಕುಂಭಮೆನೆ ತಾರಗೆಗಳ್ ॥
ರುಂದ್ರನಯನಂಗಳನೆ ವಿಯ ।
ದಿಂದ್ರನದೇಂ ಭುವನಜನಕೆ ಕಣ್ಗೊಳಿಸಿದನೋ ॥೯೧೪
(ಕವಿಕಾಂಜರಲೀಲಾವತಿ)

ಪುದಿವ ತಿಮಿರಾಳಿಕುಳವಂ ।
ಬೆದಱಿಪ ಸಂಪಗೆಯ ಮಿಸುಪ ಮುಗುಳ್ಗಳವೆಂಬಂ ॥
ದದೆ ಬೆಳಗಿನ ಬಿತ್ತುಗಳನಿ ।
ಸಿದ ಸೊಡರ್ಗುಡಿ ತೊಳಗಿ ಬೆಳಗಿದುವು ಮನೆಮನೆಯೊಳ್ ॥
(ವರ್ಧಮಾನಪುರಾಣಂ)

ಉರಗಫಣಾಮಣಿಯ ಬೆಳಗಿಂ ।
ದುರಗೇಂದ್ರಂ ಜ್ಯೋತಿರಂಗವೃಕ್ಷದ ಬೆಳಗಿಂ ॥
ಸುರರಾಜಂ ರಂಜಿಸುವಂ ।
ತಿರೆ ಕೈದೀವಿಗೆಯ ಬೆಳಗಿನೊಳ್ ಕಣ್ಗೆಸೆದಂ ॥೯೧೫
(ಮಲ್ಲಿನಾಥಪುರಾಣಂ)

ಇಂತು ಕಾವ್ಯಸಾರದೊಳ್
ರಾತ್ರಿಯ ವರ್ಣನಂ.

೬೯ ಚಂದ್ರೋದಯವರ್ಣನೆ

ಬತ್ತಂಬದಿಂದೆ ವಿರಹಿಯ ।
ಚಿತ್ತಭವಂ ಪಿಡಿದು ತಂದು ಗಂಟಲ ಬಳೆಗಂ ॥
ತೆತ್ತಿಸಿದ ಚಂದ್ರಹಾಸದ ।
ಕತ್ತಿಗೆಯೆನಲರ್ಧಚಂನ್ರನುದಯಂಗೆಯ್ದಂ ॥೯೧೬
ಗಗನವಧೂಟಿ ಕೂತರ್ು ಶಶಿಕಾಂತದ ಬಟ್ಟಲೊಳರ್ದ ಗಂಧಮಂ ।
ನೊಗೆಮೊಗೆದಷ್ಟದಿಗ್ವನಿತೆಯರ್ಕಳ ಮೆಯ್ಯೊಳ್ ಚೆಲ್ಲಿ ಮತ್ತೆ ತ ॥

ನ್ನಗುರ್ಗಳೊಳಾಂತು ದೇಹದೊಳೆ ಸಿಂಪಿಸಿ ಕೊಂಡಳೆನಿಪ್ಪ ಮಾಳ್ಕೆಯಿಂ।
ಸೊಗಯಿಪ ಜೊನ್ನದಿಂ ಪೊಳೆವ ಮೀನ್ಗಳನೊಪ್ಪಿದನರ್ಧಚಂದ್ರಮಂ ॥
ಕುವಲಯ ದೀರ್ಘನೇತ್ರಮಲರುತ್ತಿರೆ ಮೂಡುವ ಮೀನ್ಗಳಾಕೆಯೊ।
ಪ್ಪುವ ಮುಖಪದ್ಮದೊಳ್ ನೆಡವಿ ಮೂಡುವವೋಲಿರೆ ಕಾಲವೆಂಬ ಶಂ॥
ಭುವಿನ ಶರೀರದೊಳ್ ಪುದಿದ ಗೌರಿಯ ರಾಗಮನೊಟ್ಟಿ ಕೊಂಡು ಮೂ।
ಡುವ ಮೊಲೆಯಂತೆ ಮೂಡಿದುದು ಮೂಡಣ ದಿಕ್ಕಿನೊಳಂದುಮಂಡಲಂ॥
ಮುಡಿಗವಿದಿರ್ದ ಮಾಣಿಕದ ಮಂಡನದಂತಿರೆ ತಾರಕಾಳಿ ತ।
ಳ್ತಡರ್ದರುಣಾಂಶುಗಳ್ ಕುರುಳ ಕುಂಕುಮದಂತಿರೆ ರೂಢಿಸಿತ್ತು ಕೆಂ॥
ಪಿಡಿದ ಬೆಡಂಗಿನಿಂದಮೆ ನಿಶಾಪ್ರಸವೋತ್ಸವದೊಳ್ ವಿಳಾಸದಿಂ।
ಮುಡಿದ ಮಹೇಂದ್ರದಿಗ್ವಧುವ ಬಣ್ಣದ ತೊಂಡಲನಿಂದುಮಂಡಲಂ ॥೯೦
(ಕವಿಕುಂಜರಲೀಲಾವತಿ)

ಇದು ಮಾಹೇಂದ್ರೀಲತಾಕೋರಕಮಮರಹರಿದ್ವಲ್ಲರೀಪಲ್ಲವಂ ಪೂ।
ರ್ವದಿಶಾವಲ್ಲೀಫಲಂ ತಾನೆನೆ ತರತರದಿಂದೇಳ್ಗೆ ಕಣ್ಗೆಡ್ಡಮಪ್ಪಂ॥
ತುದಯಂಗೆಯ್ದತ್ತು ಸಂಧ್ಯಾರುಣರುಚಿರುಚಿರಂ ಕಾಮಸಾಮ್ರಾಜ್ಯಲಕ್ಷ್ಮೀ।
ಮದಲೀಲಾಲಂಬಮುಜ್ಜೃಂಭಿತಕುಮುದ †ಕುಟುಂಬಂ ಸುಧಾಸೂತಿಬಿಂಬಂ॥

ನವಸಂಧ್ಯಾರಾಗಂ ಪಿಂ।
ಗುವುದುಂ ಮದನಂಗೆ ವಜ್ರಶೀಟಕಮುಂ ಕೆಂ॥
ಗವಸಣಿಗೆಗಳೆದು ರತಿ ನೀ।
ಡುವಂತೆ ತಳತಳಿಸಿದತ್ತು ಹಿಮಕರಬಿಂಬಂ ॥೯೧
(ಮಲ್ಲಿನಾಥಪುರಾಣಂ)

ನಿಜಕಿರಣಧಾತುನಿರ್ಝರ।
ರಜೋನ್ವಿತಂ ನೀಲಲೋಹಿತಶ್ರೀನಿಲಯಂ॥
ರಜನಿಕರರಜತಗಿರಿನೀ।
ಗಜಮೊಗೆದುದು ಕಾಲದಶಮುಖೋಭೋತ್ಕ್ಷಿಪ್ತಂ ॥೯೨
(ಕವಿಕುಂಜರಲೀಲಾವತಿ)

† ಕದಂಬಂ

ಕರುಣಂ ಚಕ್ರಕ್ಕೆ ಹಾಸ್ಯಂ ಕುವಲಯಕೆ ಭಯಂ ಜಾರೆಯರ್ಗದ್ಭುತಂ ಸಾ|
ಗರಕಂ ಬೀಭತ್ಸ ನಕ್ತಂಚರನಿರತರುಣೀರಕ್ತಪಾನಕ್ಕೆ ವೀರಂ ||
ಸ್ಮರಭೂಪಾಲಂಗೆ ರೌದ್ರಂ ವಿರಹಿತತಿಗೆ ಶಾಂತಂ ಚಕೋರಕ್ಕೆ ಶೃಂಗಾ |
ರರಸಂ ಕಾಂತಾಜನಕ್ಕಾಗಿರೆ ನವಕರಸಂ ಬೀಱುತಿರ್ದಂ ಶಶಾಂಕಂ ||೯೫||

(.....................)

ಅರುಣಕರಕಿಸಲಯರಾಗದಿಂ |
ಆರೆ ತಾರಾಸುರುಚಿರಾಕ್ಷಮಾಲಿಕೆ ಸಂಧ್ಯಾ ||
ಚರಣನಿಯಮಾನುರಕ್ತಂ |
ಗಿರಿಶಿಖರದೊಳ್ ಸೆಸನಮೃತರುಚಿಯೋಗೀಂದ್ರಂ ||೯೬||

(ಮಲ್ಲಿನಾಥಪುರಾಣಂ)

ನಿನದತ್ಸಂಧ್ಯಾನಕಂ ನಿಗ್ಗವಣೆಯ ಪಱ ಪೂರ್ವಾಚಲಂ ತುಂಗರಂಗಂ |
ತನಗಾಯ್ತಂಬನ್ನಿಗಂ ಪೀಲಿಯ ಜವನಿಕೆವೋಲ್ ಪಿಂಗೆ ಸಂಧ್ಯಾತಮಂ ಮೆ ||
ಲ್ಲನೆ ತಾರಾನೀಕಪುಷ್ಪಾಂಜಲಿವೊಲೆಸೆವಿನಂ ಸೂಸಿ ತತ್ಪೂರ್ವರಂಗ |
ಕ್ಕನುಗೆಯ್ದುದ್ಯನ್ನಿಶಾನರ್ತಕಿಯ ವದನದಂತಿರ್ದು ಕಣ್ಗೆಸೆದಂ ||೯೭||

(ಚಂದ್ರಪ್ರಭಪುರಾಣಂ)

ದಿವಿಜಾಶಾಗಿರಿಕೂಟಕೇಸರಿ ವಿನಯನ್ಮಂದಾಕಿನೀಹಂಸೆ ಮಾ |
ನವತೀಲೋಚನಬಾಣಚಂದ್ರಿಕೆ ಚಕೋರೀಪಾನಲೀಲಾಮೃತ ||
ಪ್ಲವಕಾಸಾರಮನಂಗಮಂಗಳವಧೂಟೀದರ್ಪಣಂ ತಾನಿದೆಂ |
ಬ್ಬವಿಳಾಸಕ್ಕೆ ನಿವಾಸಮಾಯ್ತುದಯದೊಳ್ ಪ್ರಿಯಯೂಷಭೃನ್ಮಂಡಲಂ ||

(ಅನಂತನಾಥಪುರಾಣಂ)

ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ |
ಜಗಜೋದ್ದೀಪನಪಿಂಡಮಂಬರಸರಸ್ಯುತ್ತಂಸಹಂಸಂ ವಿಯೋ ||
ಗಿಗಣಾಕೂತಕುರಂಗಪೋತಭಯಕೃತ್ಕಂಠೀರವಂ ಚೆಲ್ವಿವೆ |
ತ್ತೊಗೆವತ್ತಂಬುಧಿವೀಚಿನರ್ತನನಟಂ ಬಿಂಬಂ ಸುಧಾಸೂತಿಯಾ ||೯೮||

(ಅಜಿತನಾಥಪುರಾಣಂ)

ವಿತತಪ್ರಾಚ್ಯಾದ್ರಿಪೀಠಾಗ್ರಸುವರುಣಶಿಲಾವೃತ್ತಲಿಂಗಂಬೊಲಿಂಬಾ ।
ಯುತ್ತು ತರಂಗೊಂಡೇಳ್ಗೆಯಿಂ ರಾಗದಿನುಪಚಿತಚೇತಶ್ಚಕೋರೀಕದಂಬಂ ॥
ದ್ಯುತಿವಲ್ಲೀಸ್ತಂಭಮುಜ್ಜೃಂಭಿತಕುಮುದಕುಟುಂಬಂ ತಮಶ್ಶೈಲಶಂಬಂ ।
ರತಿಪಾಟೋಪಾವಲಂಬಂ ಜನಿತವಿಟವಿಡಂಬಂ ಸುಧಾಸೂತಿಬಿಂಬಂ ॥೯೧೯

ಇರುಳ ಸಿರಿ ಸಿರಿಯ ಮೊಯ್ಸಿರಿ ।
ಬಿರಯಿಗಳುರಿ ಕಮಲದರಿ ಮನೋಜನ ಕರಿ ಪೊ ॥
ಣ್ಬರ ದಳ್ಳುರಿ ತಣ್ಗದಿರ್ಗಳ ।
ಹರವರಿ ತಾರಾಧಿನಾಥನುದಯಂಗೆಯ್ದಂ ॥೯೨೦

(ಜಗನ್ನಾಥವಿಜಯಂ)

ನೆರೆದೆತ್ತಂದು ಜನಂ ನಿರೀಕ್ಷಿಸೆ ಬೆಸಂ ಬೇಱೀಕೆ ಚಿತ್ತೋದ್ಭವಂ ।
ಬರೆ ಲಕ್ಷ್ಮಚ್ಛಲದಿಂದಮಬ್ದಪಥವೀಧೀಭಾಗದೊಳ್ ಬೇಗಮೊ ॥
ತ್ತರಿಸುತ್ತುಂ ಪರಿಕಾರನಂ ತಿಮಿರನಂ ಬೆನ್ನಟ್ಟಿ ಪಾದಂಗಳಂ ।
ದೊರೆಸಿತ್ತೀನತಿಚೋದ್ಯಮೋ ವಿಧುಮದೋನ್ಮತ್ತೇಭವಿಕ್ರೀಡಿತಂ ॥೯೨೧

(ಚಂದ್ರಪ್ರಭಪುರಾಣಂ)

ನನೆಯಿಂ ನೆಯ್ದಲಿನಾಲಿಸೀರ್ದಳತವಿಂ ಕಾಮಾಗ್ನಿಯುಂ ಮುಟ್ಟಿಸಲ್ ।
ಮನಮುಂ ತಂದ ವಿಯೋಗಿಜಾಲದೆರ್ದೆಯುಂ ನಟ್ಟುರ್ಚೆ ಗಾಱೀಱಿ ಬೆ ॥
ಚ್ಚನೆ ಪಾಯ್ತಂದು ಪೊದಳ್ದ ರಕ್ತಜಲದಿಂದಂ ತೋಯ್ದ ಕಂದರ್ಪದೀ ।
ವನ ಚಕ್ರಕ್ಕೆಣೆಯಾಯ್ತು ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥

ಅಲೆದಮೃತದೊಡನೆ ತಾರಾ ।
ವಲಯೆಯುರಡಿವಳರಸೊಡಲೆಂದು ಪದಂಗೆ ॥
ಯ್ದಲತೆಗೆಯು ಪಡಲದಂತೆವೊ ।
ಒಲೆದುದು ಪರಿಪಕ್ವಬಿಂಬವುಂ ವಿಧುಬಿಂಬಂ ॥೯೨೨

(ಕವಿಕುಂಜರಲೀಲಾವತಿ)

ಶೋಣತೆವೆತ್ತ ಮರೀಚಿ ।
ಶ್ರೇಣಿಯು ಚೆಂದಳಿರನಗ್ರದೊಳ್ ತಳ್ತುದಯು ॥

ಕ್ಷೋಣೀಧರಮೆಂಬ ಕಳಶದ ।
ಮಾಣಿಕಗನ್ನಡಿವೊಲಾಯ್ತು ಹಿಮಕರಬಿಂಬಂ ॥೯೩೪

(ಜಗನ್ನಾಥವಿಜಯಂ)

ಮಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತಿ ಲಕ್ಷ್ಮಿ ಕಾ ।
ಮಂಗೆ ಮಗಂಗೆ ಶೈಶವನಿರೀಕ್ಷಣಕೇಳಿಗೆ ನೇತ್ರಸೂತ್ರದಿಂ ॥
ದಿಂಗಡಲೆಂಬ ಸೆಜ್ಜೆವನೆಯೊಳ್ ತೆರೆದೊಟ್ಟಿಲ ಮೇಲೆ ಕೆಂಬರ ।
ಲ್ದಿಂಗಣಿಗಟ್ಟಿದಂತುದಯಶೈಲಶಿಖಂಡದೊಳಿಂದುಮಂಡಲಂ ॥೯೩೫

(ಮಲ್ಲಿನಾಥಪುರಾಣಂ)

ಸಂಗಳಿಸಿ ತನ್ನೊಳರುಣಿಮ ।
ಶಂಗಸಿತದ್ಯುತಿಗಳೆಂಬನುಕ್ರಮರುಚಿ ಶ ॥
ಕ್ರಂಗೆತ್ತಿದ ಮಾಣಿಕಗೊಡೆ ।
ಪೊಂಗೊಡೆ ಬೆಳ್ಗೊಡೆಗಳೆನಿಸಿದುದು ವಿಧುಬಿಂಬಂ ॥೯೩೬

(ಜಗನ್ನಾಥವಿಜಯಂ)

ಉದಯೋರ್ವೀಧರಕುಂಕುಮೋದ್ಗಮರಜಂಬೊಯ್ವಂತೆ ಕೆಂಪೇಱೆ ಪೂ ।
ರ್ವದಿಶಾಕಾಂತೆಯ ತೋಳೊಳಿರ್ದರಿಸಿನಂ ತಳ್ತಂತೆ ಪೊಂಬಣ್ಣಮೇ ॥
ಱೆ ದಿವೌಕಃಪ್ಲವದೊಳ್ ಮುಟುಂಕಿ ತೊಳೆದೇಳ್ವಂತೆಯ್ದೆ ಬೆಳ್ಪೇಱೆ ತ ।
ತ್ತ್ವದೃಢಾಭ್ಯಾಸಿಯ ಚಿತ್ತದಂತೆ ತಿಳಿದಂ ತಾರಾವಧೂವಲ್ಲಭಂ ॥೯೩೭

(ಅನಂಥನಾಥಪುರಾಣಂ)

ಬಡನೆ ಸುರಾಸುರರ್ ಕನಕಪರ್ವತಮಂ ಕಡೆಗೋಲ ಮಾಡಿ ಮೇಣ್ ।
ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡೆಗಣ್ಣಮಾಡಿ ಪಾ ॥
ಲ್ಗಡಲನುಪಾಯದಿಂ ಕಡೆಯೆ ರಾಹುಗೆ ವಾಯುಪಥಾಗ್ರಮೆಂಬ ಪೆ ।
ರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ ॥

(ಶೂದ್ರಕಂ)

ಜನನಯನಹಂಸವಿಸರ ।
ಕ್ಕೆ ನಿಶಾವಧುಸಾಂದ್ರಚಂದ್ರಿಕಾದುಗ್ಧಮನಿಂ ॥

ಬಿನೆಯೊಳೆಱೆವ ಗಗನಘಟದಾ ।
ನನವಿವರದ ದೊರೆಗೆ ವಂದುದಿಂದುವ ಬಿಂಬಂ ॥೯೩೯

(ಚಂದ್ರಪ್ರಭಪುರಾಣಂ)

ತಾರೇಶತಾರ್ಕ್ಷ್ಯನೆಂಬುವಿ ।
ಸಾರಿತಪಕ್ಷಂ ಬರಲ್ ನಭಃಖಂಡಧರಿ ॥
ತ್ರೀರುಹವನುಂ ಸುತ್ತಿದ ಕಾ ।
ಳೋರಗನೋಡುವವೊಲೋಡಿ ಪೋದುವು ತಿಮಿರಂ ॥೯೪೦

(ಜಗನ್ನಾಥವಿಜಯಂ)

ನೆರೆದ ತಿಮಿರಂ ನಿಶಾಕರ ।
ಕರಕುಂತಾಹತಿಗೆ ಬೆರ್ಚಿ ಮೂರ್ಛೆಯ ನೆವದಿಂ ।
ಪರಿದೋಡಿ ಪೊಕ್ಕು ಸಲೆ ಮೆ ।
ಯ್ಗರೆದುದು ಬಿರಯಿಸಿದ ಜಕ್ಕವಕ್ಕಿಗಳೆರ್ದೆಯೊಳ್* ॥೯೪೧

ಅತನುಗೃಹಚಂದ್ರಶಾಲಾ ।
ಪ್ರತಿನಿಧಿಯೆನಿಸಿರ್ದ ಚಂದ್ರಮಂಡಲದೊಳ್ ಶೋ ॥
ಭಿತಮಾಯ್ತು ತೋರ್ಪ ಪಾರಾ ।
ವತದೊಪ್ಪಮನಪ್ಪುಕೆಯ್ದು ತೊಳಪ ಕಳಂಕಂ ॥೯೪೨

(ಚಂದ್ರಪ್ರಭಪುರಾಣಂ)

ತಿಳಗೊಳನಲ್ಲಿ ತೋಱುವಸಿತೋತ್ಪಳಮಂ ಫಣಿರಾಜತಲ್ಪದೊಳ್ ।
ತೊಳಗುವ ಕೃಷ್ಣಕಾಂತವಪುವಂ ರತಿದೇವಿಯ ಕೇಳಗಿಟ್ಟನು ॥
ಬ್ಬಿಳಿಕಿನ ಬಟ್ಟನಂಜರದ ಕೋಗಿಲೆಯುಂ ಗೆಲೆವಂದುದಿಂದುವಂ ॥
ತಳದ ಕಳಂಕಲೇಖೆ ನವಮಿಂದ್ರವಧೂಮುಖಪತ್ರವಿಭ್ರಮಂ ॥೯೪೩

(ಕವಿಕುಂಜರಲೀಲಾವತಿ)

ಕಾಮನ ದೀವದ ಹರಿಣಂ ।
ಕಾಮೋರಗನಿರ್ಪ ಪುತ್ತು ಮೊಲಗಟ್ಟಿಯುಂ ॥

ಕಾಮಿಗೆ ಪುಟ್ಟಿಸುವ ವೊಲಂ ।
ಕಾಮುಗ್ರಹದಾಲಮೆನಿಸಿತಿಂದುಕಲಂಕಂ ॥೯೪೪

(ಮಲ್ಲಿನಾಥಪುರಾಣಂ)

ಬಳವೈರಿಯೆಂಬ ಸಾಧಕ ।
ನೆಳೆಯುಂ ಪೊಸಮೂಸೆವಮಾಡಿ ಶಶಿಮಂಡಳಮಂ ॥
ಗುಳಗೆಯಿಡೆ ತಿಮಿರಕಾಳಕೆ ।
ತಿಳಿದಂತಿರೆ ಜಳಕನಾಯ್ತು ಪೊಸವೆಳ್ದಿಂಗಳ್ ॥೯೪೫

(ಅನಂತನಾಥಪುರಾಣಂ)

ಕರ್ಪಿಲ್ಲದ ಕಾಡಿಗೆ ಕಂ ।
ದರ್ಪನ ಜಸಮಿರುಳ ತಣ್ಬಿಸಿಲ್ ಬೆಳತಿಗೆಮಿಂ ॥
ಚರ್ಪಿಲ್ಲದಿಂಗಡಲ್ ವಿಧು ।
ಸರ್ಪನ ಪೆರೆ ಜಳಕನಾಯ್ತು ಪೊಸವೆಳ್ದಿಂಗಳ್ ॥೯೪೬

(ಮಲ್ಲಿನಾಥಪುರಾಣಂ)

ಹಿಮರೋಚಿರ್ಮಂಡಲಂ ಕುಂಡಲಿತಕುಸುಮಕೋದಂಡಮಂ ಪೋಲೆ ಶೃಂಗಾ । ರಮಯಂ ಭೂಲೋಕಮಪ್ಪಂತುಟು ವಿರಹಿಗೆ ಶಬ್ದಧನುರ್ವೇದ ವಿದ್ಯಾ । ಶ್ರಮಮಂ ತೋಱಲ್ಕಳಂಕಸ್ಮರನಿಸೆ ತುಱುಗಲ್ಗೊಂಡು ಪಾಯ್ವು ಲ್ಲಸತ್ಕೌ । ಸುಮಬಾಣಾಸಾರದಂತೇಂ ಸುರ್ದುದೊ ನವನೀಹಾರಕಾಂತಿ ಪ್ರವಾಹಂ ॥೯೪೭ (ಕವಿಕುಂಜರಲೀಲಾವತಿ)

ಚಲದಿನಱಿಯಟ್ಟೆ ಚಲಮಂ ।
ತಲಾಗ್ರಕರದಿಂ ಸುಧಾಂಶು ನೇರ್ದಿಕ್ಕಿದ ಕ ॥
ತ್ತಲೆಗಳ ತಲೆಗಳ್ ದಿಟಮೆನಿ ।
ಸಲಾಪ್ರುರ್ವಲ್ಲಲ್ಲಿ ತೋರ್ಪ ಪುರದ ಸೆಱಲ್ಗಳ್ ॥೯೪೮

ಆದಿರ್ದಸತೀನಯನಸರ್ಘುಷಂ ।
ಬೆದಱೆ ತಮೋಹ್ರದದೊಳತನುವಾಗುರಿಕಂ ಬೀ ॥

ಸಿದ ಜಾಲಮೆನಿಸಿ ನಿಮಿರ್ದ* ।
ತ್ತು ನಯಮಾದ್ರಿಯ ತಟದೊಳಮೃತಕರಕರಜಾಲಂ ॥೯೪

(ವರ್ಧಮಾನಪುರಾಣಂ)

ದ್ಯುನದೀಸನ್ಮೋಹದಿಂದಂ ಜಡೆಗೆದಱಲುಮಾವಲ್ಲಭಂ ನಾಡೆಯುಂ ಸಾ ।
ರ್ದನೆಗಂ ಪೀಯೂಷವಾರ್ಧಿಪ್ಲವಪರಿಣತೆಯಿಂ ಸಜ್ಜೆಗಬ್ಜೋದರಂ ಸಾ ।
ರ್ದನೆಗಂ ಹಂಸಂ ಮೊಲಲ್ ಮೆಲ್ಕಳಸಿ ಬಿಸಲತಾಶಂಕೆಯಿಂ ಚಂಚುವಿಂ ನೇ ।
ರ್ಪಿನೆಗಂಪ್ರೋನ್ಮುದ್ರಿತಂಮುದ್ರಿಸಿದುದುಜಗಮಂಚಾರುಚಂದ್ರಾಂಶುಜಾಲಂ ॥

(ಚಂದ್ರಪ್ರಭಪುರಾಣಂ)

ಇಂದುಪ್ರಾಲೇಯಶೈಲದ್ಯುನದಿ ಶಶಿಶರನ್ಮೇಘಮುಕ್ತಾಂಬುಧಾರಾ ।
ವೃಂದಂ ಜ್ಯೋತ್ಸ್ನಾಪ್ರವಾಹಂ ಕವಿದುದು ವಿಧುವಕ್ರೋಕ್ಷಿತಂ ಶೀತರೋ
ಚಿಃ ॥ ಕುಂದೋದ್ಯನ್ಮಂಜರೀನಿರ್ಗತನಿಬಿಡರಜಂ ಚಂದ್ರರುದ್ರಾಟ್ಟಹಾಸ ।
ಸ್ಪಂದಂ ಪ್ರೋದ್ಭಿನ್ನಸೋಮಾಸುರಕರಟಶಿರೋವಾಂತಮುಕ್ತಾಚ್ಛವರ್ಷಂ ॥

ನೆಗಪುತ್ತುಂ ಬೆಮರಂ ವಿಯೋಗಿಜನದೊಳ್ ಕಾಂತಾಮುಖಾಂಭೋಜಮಂ।
ನಗಿಸುತ್ತುಂ ಸ್ಮರಸಾರಕಾಂತಶಿಖಿಯುಂ ಸೂಸುತುಮೆತ್ತಂ ಚಕೋ ॥
ರಿಗಳೊಳ್ ತೃಷ್ಣೆಯನೆತ್ತುತುಂ ನೆರಪುತುಂ ಪ್ರಿಯೋರಥಾಂಗಂಗಳಂ ।
ಪಗಲಂ ಪ್ರಾರ್ಥಿಸುವಂತೆ ಪೊಕ್ಕಿರುಳೊಳೇಂ ಪರ್ವಿತ್ತೊ ಚಂದ್ರಾತಪಂ ॥

ಇದು ಮತ್ತೇನೆಂಬೆ ಬೆಳ್ದಿಂಗಳ ಬೆಳತಿಗೆಯೋ ಹಂಸೆ ಪೊಳ್ಗೆತ್ತು ಸಾರ್ದ।
ಪ್ಪುದೊ ಮಲ್ಲೀಮಾಲೆಗೆತ್ತೆ ನೆಱಗಿದಪುದೊ ಭೃಂಗಂ ಬಿಸಭ್ರಾಂತಿಯಿಂದಂ ॥
ಕರ್ದುಕಳ್ಕೈಗೈಯೊಳಾರಯ್ದಪುದಿಭಕಳಭಂ ಸಾಂದ್ರಚಂದ್ರಾಂಶುವಂ ಜಾ।
ಱಿ ದುಕೂಲಂ ಲೀಲೆಯಿಂದಂ ತೆಗೆದಪುದೊ ಕುಚಾಗ್ರಕ್ಕೆ ಕಾಂತಾಕದಂಬಂ ॥

(ಕವಿಕುಂಜರಲೀಲಾವತಿ)

ಕುಸುಮಂ ಗಂಧಾನುಮೇಯಂ ಗಮನಕಮನಹಂಸಾಳಿಶಬ್ದಾನುಮೇಯಂ।
ರಸನಾಸ್ವಾದಾನುಮೇಯಂ ಮಧು ಮಳಯರುಹಸ್ಪರ್ಶಮುಂ ಕರ್ಪೂರಮುಕ್ತಾ ॥

ವಿಸರಂ ಸ್ಪರ್ಶಾನುಮೇಯಮಂ ದಿಟಮೆನೆ ಘಟಿತಂಬೆತ್ತ ಬೆಳ್ದಿಂಗಳಂ ತು ।
ಟ್ಟಸೆ ಲೋಕಂ ಚಂದ್ರಕಾಂತೋಪಳದ ಮಯಣದಿಂಮಾಡಿದಂತಿರ್ದುದಾಗಳ್॥

(ಅನಂತನಾಥಪುರಾಣಂ)

ಕರಗಿಸೆ ಬೆಳ್ಳಿಯುಪ್ಪುಡಿದು ತೆಳ್ಪುರೆಯೆತ್ತ ದುಕೂಲಮಪ್ಪ ಕಂ ।
ಡರಿಸೆ ಮೃಣಾಳಮಪ್ಪರುಳಮಾಡಿ ಸರಂಗೊಳೆ ಕೋಯೆ ಹಾರಮ ॥
ಪ್ಪರೆದೊಡೆ ಸೌಧಸಂತತಿಗೆ ಪೊಲ್ಪುದೆಯಪ್ಪುಗುರಿಂ ಕಳಲ್ಚೆ ಕ ।
ರ್ಪುರಮಳಕಪ್ಪುಗುರ್ಬನೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ॥೧೫೫

(ಜಗನ್ನಾಥವಿಜಯಂ)

ಇದು ವಿರಹಕ್ಕಲ್ಲದೆ ಕಾ ।
ಯದ ಬಿಸಿಲಿದು ದಿಟ್ಟಿಗಲ್ಲದಿನಿತೀಂಟಲ್ಬ ॥
ರದ ಸುಧೆಯಿದು ತಾಂ ಮನಕ ।
ಲ್ಲದುಡಲ್ ಸಮನಿಸವ ದುಗುಲಮೆಳವೆಳ್ದಿಂಗಳ್ ॥೧೫೬

(ಚಂದ್ರಪ್ರಭಪುರಾಣಂ)

ಮದಚಲಚಕೋರಚಂಚೂ ।
ವಿದಳನದಿಂದಮೃತರಸದ ಪ್ರೆ ನಲಿಡುತಂ ಸೂ ॥
ಸಿದ ಬೆಳ್ದಿಂಗಳ ತಿರುಳಂ ।
ದದಿನಸವಳಮೆಸೆವುದೊಸರ್ದ ಶಶಿಮಣಿವಿಸರಂ ॥೧೫೭

(ಕವಿಕುಂಜರಲೀಲಾವತಿ)

ಪರೆದಿರೆ ತಿಮಿರಕಚಂ ನೆರೆ ।
ದಿರೆ ಭಗಣಸ್ವೇದಜಲಕಣೌಘಂ ರಾಗಂ ॥
ಬೊರೆದಿರೆ ಚಕೋರನಯನಂ ।
ಕರಮೆಸೆದಳ್ ನೆರೆದು ರಜನಿ ರಜನಿಪತಿಯೊಳ್ ॥೧೫೮

ಕಳಕೇಳಿಕೀರಪಾರಾವತಕುಹರಣವಾಚಾಳನುಜ್ಜೃಂಭಮಾಣೋ ।
ತ್ಪಳರಾಜನ್ನಿಷ್ಕುಟಾಂಭೋರುಹನಿಳಯಜಲಾರ್ದ್ರಂ ರತಿಶ್ರಾಂತಿನಿರ್ವ ॥

ಲ್ಲಳನಾನಿಶ್ವಾಸಪುಷ್ಪಪ್ರಸರನಗರುಸೌರಭ್ಯಸಂದೋಹಭಾಗಾ ।
ಕಳಿತಂ ಬಂದೊಯ್ಯನೇನೋದಿಸುದೊ ಪಣವಧೂಗೇಹದಿಂ ಗಂಧವಾಹಂ ॥

(ಚಂದ್ರಪ್ರಭಪುರಾಣಂ)

ನವನೀಲೋತ್ಪಲಲಕ್ಷ್ಮಿಯುಂ ನಗಿಸಿ ಮಲ್ಲೀರಾಮೆಯುಂ ಮೇಳವಾ ।
ಡಿ ವನೇಜಾತಿನಿಯಂ ವಿಡಂಬಿಸಿ ವಿನೋದಂಬೆತ್ತು ಬಂದತ್ತು ಸ ॥
ಬ್ಬವಕಾಂಗೆಣೆಯಾಗಿ ವಾರವನಿತಾಸೌಭಾಗ್ಯಘಂಟಾರುತಂ ।
ಸುವಿಟಸ್ವೈರರವಾರುತಂ ಕುಸುಮಚಾಪಸಜ್ಯಾರುತಂ ಮಾರುತಂ ॥೯೬೦

(ಜಗನ್ನಾಥವಿಜಯಂ)

—ಮಧುಪಾನ ವರ್ಣನೆ—

ಬಿಸಿಲಂ ಲಾವಣ್ಯದಿಂ ಮಿಂಚಡರೆ ಬೆಳಗುತುಂ ನೀಳ್ದಪಾಂಗಂಗಳಂ ನು ।
ಣ್ಣಿಸುತುಂ ದಿಕ್ಕಾಮಿನೀಸಂಕುಳಮನಮಳಹಾಸಪ್ರಭಾಪೂರದಿಂ ತು ॥
ಟ್ಟಿಸುತುಂ ತಳ್ತಚ್ಚವೆಳ್ದಿಂಗಳನವಯವಶೃಂಗಾರವಾರಾಶಿಯೊಳ್ ತೇಂ ।
ಕಿಸುತಂ ವಕ್ತ್ರೇಂದುವಂ ಬಂದುದು ನೆರೆದಿದಿರೊಳ್ ವಾರನಾರೀಕದಂಬಂ ॥

(ಕವಿಕುಂಜರಲೀಲಾವತಿ)

ಇರೆ ನವಪದ್ಮರಾಗಚಷಕಂ ನಿಜಹಸ್ತತಳಾಗ್ರದೊಳ್ ಮನೋ ।
ಹರಿ ತಳಿರ್ದೊಂಗಲಂ ತಳೆದ ಕೋಮಳವಲ್ಲರಿಯಂತೆ ರಕ್ತಪಂ ॥
ಕರುಹಮನಾಂತ ಪಂಕಜಿನಿಯಂತೆ ನವೋದಿತಚಂದ್ರಬಿಂಬಮಂ ।
ಧರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನಗೋಷ್ಠಿಯೊಳ್ ॥೯೬೧

ವಿಧುಮುಖಿ ಮೆಲ್ಲಮೆಲ್ಲನೆ ಮಧುದ್ರವಮಂ ಸವಿದೀಂಟುವಲ್ಲಿ ತ ।
ನ್ನಧರದ ರಾಗದೊಳ್ ಪೊರೆದುದಂ ಮಧುವಂ ಬೆರಗಾಗಿ ನೋಡುತುಂ ॥
ಮಧುರಸಮಲ್ತು ಕುಂಕುಮರಸಂ ದಿಟಮೆಂದು ಬಳಿಕ್ಕೆ ತನ್ವಿ ತ ।
ನ್ಮಧುರಸುಗಂಧದಿಂ ತಿಳಿದು ಸೇವಿಸಿದಳ್ ಮಧುವಂ ನಿಜೇಚ್ಛೆಯಿಂ ॥೯೬೨

ತನುಲತೆಗಂಕುರಂ ತಳಿರಲರ್ ಮಧುಸಂಗದೊಳಾಯ್ತು ಚೋದ್ಯಮಾ
ಯ್ತೆನೆ ಮಧುಪಾನಜಾತಪುಳಕೇಕ್ಷಣಶೋಣಿಮಘರ್ಮಬಿಂದುಗಳ್ ॥

ತನಗೆಸೆಯಲ್ ಮದೋತ್ಸವದೆ ಕೋಗಿಲೆವೆಣ್ ಗಳಪಂ ನೆಗಳ್ಚುವಂ ।
ತನುವಿಪ ಸೊರ್ಕಿನಿಂ ಪಿಕನಿನಾದೆ ಪೆಣ್ಗಳ್ ಗಳಪಂ ನೆಗಳ್ಚಿದಳ್ ॥೯೬೪

ಎನ್ನ ಕೆಲಂಗಳೊಳ್ ಮೆಱೆಯುತಿರ್ಪುವೀಕ್ಷುಶ್ರುತಿಪೂರಕೈರವಂ ।
ತನ್ನ ಬೆಡಂಗನೆಂದು ಸೆಣಸುತ್ತವೞೊಳ್ ತೊಡರ್ದಂತಿರಲ್ಕೆ ಕೇಂ ॥
ಪನ್ನಳಿಸುವವಾಂತುವೆನೆ ಕೆನ್ನೆವರಂ ನಿಮಿರ್ದಕ್ಷಿಗಳ್ಗ ರಾ ।
ಗನ್ಮಧುಸೇವೆಯಿಂ ನೆಗೞೆ ರಂಜಿಸಿದರ್ ಮಧುಮತ್ತಕಾಂತೆಯರ್ ॥೯೬೫

ಪಚ್ಚು ಪರಿಕಲಿಸಿ ಬನ್ನಂ ।
ಮುಚ್ಚಿರೆ ಮುಡಿ ಕಳ್ಳ ಬೆಳ್ಳವಟ್ಟಲ್ ಬಾಯೊಳ್ ॥
ಬೆಚ್ಚಂತಿರೆ ಸತಿ ಶಶಿಯಂ ।
ಕಚ್ಚಿ ನೆಲಕ್ಕಿೞಿದ ರಾಹುವಂ ನೆಱೆ ಪೋಲ್ತಳ್ ॥೯೬೬

(ಶೂದ್ರಕಂ)

—ಆಂದೋಳಂ—

ತುದಿಕೊಳಿಸಿರ್ದ ವಾಮಚರಣಂ ಮಣೆಯಂ ಬಲದಂಘ್ರಿ ಮೆಟ್ಟೆ ಮಿಂ ।
ಚಿದ ತೊಡೆ ರಜ್ಜುವಂ ಪಿಡಿದ ತೋಳ್ ಮೊದಲ್ ಪೂಗರಂ ತುಳುಂಕೆ ನಸಂ ॥
ಕಿದ ಮೊಲೆಯೊಡ್ಡು ತೊಱೆ ನಿಮಿರ್ದೊಳ್ಪಡು ಕಣ್ಗೊಳಿಪನ್ನಮುಯ್ಯಲೇ ।
ಱಿದಳಮೃತಾಂಶುವಕ್ತ್ರೆ ಯುಗಿದೆಱಸೆ ಮನ್ಮಥನಿಕ್ಷುಚಾಪಮಂ ॥೯೬೭

(ಅನಂತನಾಥಪುರಾಣಂ)

ಪದನಖಕಾಂತಿ ತಾರಗೆಯ ಕಾಂತಿಯನೇಳಿಸೆ ಸುಯ್ಯ ಕಂಪಿನ ।
ಗೊರ್ದವಿಸೆ ಕಂಪನಕ್ಷಿರುಚಿ ಚಂದ್ರಿಕೆಯಂ ಪಳಂಚೆ ಗೇ ॥
ಯುವ ರುಚಿ ಕೇತುಚಾಪರುಚಿಯೊಳ್ ತಡುಮಾಡೆ ಮುಖೇಂದುವಿಂ ।
ಗಿದಿರಿಡೆ ಕಾಂತಿ ಮಿಂಚು ಪೊಳೆದಾಡುವವೊಲ್ ಪೊಳೆದುಯ್ಯಲಾಡಿದಳ್ ॥೯೬೮

(ಜಗನ್ನಾಥವಿಜಯಂ)

ನೆರೆವಳೆ ಪಾಱುವಂತಿರೆ ಕುರುಳ್ ಮೊಲೆಗಳ್ ಪೊಣರ್ದಕ್ಕಿ ಪಾಱುವಂ ।
ತಿರೆ ಪೊಳೆವಕ್ಷಿಗಳ್ ಚಲಚಕೋರಯುಗಂಗಳೆ ತಳ್ತು ಪಾಱುವಂ ॥

ತಿರೆ ತಿಱಿ ಪಾಱುವಂತಿರೆ ಬಳಲ್ಮುಡಿ ತಾನರಲಂಬು ಪಾಱುವಂ ॥
ತಿರೆ ಮಿಗೆ ಕೀಱು ಪಾಱಿ ಗಗನೇಚರಿಯಂತೆಱನೆನುಯ್ಯಲಾಡಿದಳ್ ॥೯೬

(ಕವಿಕುಂಜರಲೀಲಾವತಿ)

—ವೇಶ್ಯಾವಾಟಂ—

ದುಗುಲಮನುಟ್ಟು ತೊಟ್ಟು ಪೊಸಮುತ್ತನೆ ಚಂದನದಣ್ಪನಿಕ್ಕಿ ಮ ।
ಲ್ಲಿಗೆಯ ಸರಂಗಳಂ ಮುಡಿದು ಚಂಪಕಮಾಲೆಯನೊತ್ತಿ ಮೇಲೆ ತುಂ ॥
ಬಿಗಳೆಱಗೆದಾಡವಂತಱಿಯಲಾಗದವೊಲ್ ನವಚಂದ್ರಿಕಾಚ್ಛವೀ ।
ಚಿಗಳೊಡಗೂಡಿ ಪೋದಳಭಿಸಾರಿಕೆ ಮುತ್ತಿನ ಬೊಂಬೆಯೆಂಬಿನಂ ॥೯೭

(ಕವಿಕುಂಜರಲೀಲಾವತಿ)

ನಸುದೊಡೆ ತೋರ್ಪ ಪಟ್ಟಣಿಗೆಯೊಳ್ನಡು ಕತ್ತುರಿಬೊಟ್ಟು ಕಟ್ಟಿ ಬಿ ।
ಟ್ಟೆಸೆವ ಕುರುಳ್ ಮೊಗಕ್ಕೆ ಪಿರಿದೊಪ್ಪುವ ಬಿಂಕದ ಸಂಕದೋಲೆ ಕ ॥
ರ್ಪಸದಳವಾದ ಸಣ್ಣ ಬಳೆ ಕೆನ್ನೆಯ ಪೀಲಿಯನಾಂತ ಚೊಲ್ಲೆಯಂ ।
ಮಿಸುಗುವ ದೋರೆನಲ್ ಕರಮೆ ಮಾಸರವಾದುದು ದೇಸೆಕಾರ್ತಿಯೊಳ್ ॥

(ಚಂದ್ರಪ್ರಭಪುರಾಣಂ)

ಗರಗರನಾದ ಬೆಳ್ಪಸದನಂ ಪೊಸಜೌವನದೇೞ್ಗೆ ದೇಸೆಯೊಳ್ ।
ಪೊರೆದ ವಿಳಾಸಮೊಪ್ಪೆ ನಡೆತರ್ಪಳನಾನೃಪಕಂತು ಕಂಡು ಕ ॥
ರ್ಪುರದ ಪುರಂಧ್ರಿ ಮಲ್ಲಿಗೆಯ ಮಾನಿನಿ ಮುತ್ತಿನ ಮುಗ್ಧೆ ಚಿತ್ತಜಂ ।
ಕರುವಿಡೆ ಸಂದ ಚಂದನದ ಲೆಪ್ಪದ ದೇವತೆಯೆಂದು ನೋಡಿದಂ ॥೯೮

(ಅನಂತನಾಥಪುರಾಣಂ)

ಸಮುವಂಚದ್ಗ್ರಹಷಡ್ಜಷಟ್ಚರಣಮಂದ್ರನ್ಯಾಸಮುತ್ಕೀರಮ ।
ಧ್ಯಮತಾರಂ ಮೃದುತಾಡಿತೌವನವೋದ್ಭಿನ್ನಪ್ರಸೂನಂ ಸಪಂ ॥
ಚನುಚಂಚತ್ಕಳಕಂಠಕಂಪಿತರುತಂ ತಾನೆಂಬ ಹಿಂದೋಳರಾ ।
ಗಮೆ ತಾನಾದ ವಸಂತಮೇನೆಸೆದುದೋ ಸಂಪೂರ್ಣಸೋಮೋದಯಂ ॥

ಶೃಂಗಾರಾವ್ರ್ಯಂ ಕಕುಭಜನಿತಂ ಧೈವತಾಂಶಗ್ರಹಂ ನ್ಯಾ ।
ಸಂಗಂ ತಾರಂ ಸರಿಗಮಪಧನ್ಯುತ್ತರಾಭೋಗವರ್ಗ ॥
ನ್ಯಂಗಂ ಸಂಕಂಪಿತಮಿದಿವಱೊಳ್ ಮಧ್ಯಮಂ ಮಂದ್ರಮೆಂಬೀ ।
ಪಾಂಗಿಂ ವೇಲಾವಲಿಯನೊಲವಿಂ ಪ್ರೌಢೆ ಪಾಡುತ್ತುಮಿರ್ದಳ್ ॥೯೭೪

ಪೊಸವನಿದಾವನಾದಪುದು ಕಂಡಱಿವಂತೆವೊಲೆಲ್ಲಿ ಕಂಡೆವೀ ।
ರಸಿಕನನೆಂದು ಕಂಡ ತೆಱನಲ್ತಿದು ತಾಂ ಬಱಿದಿಂತು ಬಂದನೀ ॥
ಬಿಸಿಲೊಳದೇಕೆ ಮೆಯ್ಸುರಿಸಿನಂ ಪಿರಿದಕ್ಕಟ ತಳ್ತ ಬಾಸುಳಂ ।
ಪಸಿಯುವು ನೊಂದನೆಂದು ನುಡಿವಳ್ ತಡೆದೊಯ್ಯನೆ ಬಂದ ನಲ್ಲನಂ ॥೯೭೫
(ಕವಿಕುಂಜರಲೀಲಾವತಿ)

ಉತ್ತರರೇಖೆ ಭಾಗ್ಯವತಿಗಪ್ಪುದು ಚೋದ್ಯಮೆ ಕೇಶಭಾರಮಂ ।
ಪೊತ್ತಿರಲಾರ್ಪಳೇ ಕುಸುಮಕೋಮಳೆ ಬೇಡಿದ ಭೂಷಣಂಗಳಂ ॥
ಬತ್ತಲೆ ಬಾಂಗಿ ತಾಂಗುವಳೆ ನಂಬುಗೆಯಿಂ ಪರದಾಡುವಾಕೆ ಬಂ ।
ದೊತ್ತಿಯನೇವಳಂಮ ಕಿಱುದಂಗೆಯನಂಗನೆ ಚುನ್ನವಾಡಿದಳ್ ॥೯೭೬
(ಮಲ್ಲಿನಾಥಪುರಾಣಂ)

ಸಂಗೀತೋತ್ಸವ ಜೀವಿತೇಶ ವರವಿದ್ಯಾವಾಸ ಕಾಂತಾಜನಾ ।
ನಂಗಾಧ್ಯಕ್ಷ ಲಸದ್ವಿಲಾಸಗುಣಜಾಲೋಪೇತ ಸತ್ವಾಧಿಕಾ ॥
ಶೃಂಗಾರಾನ್ವಿತ ಜೀವರಕ್ಷಕಯೆನುತ್ತೋರ್ವಳ್ ಮಹಾಪ್ರೌಢೆಯು ।
ತ್ತುಂಗೋರೋಜೆ ಮರಾಳಯಾನೆ ವಿಟನಂ ಕಾಡಲ್ಕೆ ನಕ್ಕಂ ನೃಪಂ ॥೯೭೭

ಪತ್ತುಗೆಗೊಟ್ಟುವೊಂದುನುಡಿಗೊಂಬತನೆಂದೆರಡೆಂಟನೀಗಳಾ ।
ನೆತ್ತಱಿದಿರ್ದರೆಂಬ ತೆಱನಿರ್ದಪೆ ನಲ್ಲನ ತಾಯಿ ತಂದೆಯು ॥
ಚೆತ್ತಿದ ಮೂಱು ಮೋಹಮುಮನೇೞಲೆವೋಗದೆ ಕಲ್ತನಾಲ್ಕು ಸೂಳ್ ।
ಸತ್ತೊಡವಾಜಿಯಿಂ ತಿಳಯಲಯ್ದುಲವೆಯ್ದುವನಿನ್ನೆಗಂ ಪ್ರಿಯಂ ॥೯೭೮
(ಚಂದ್ರಪ್ರಭಪುರಾಣಂ)

ನೆರೆವಳ್ ತಂಗಿಯನಟ್ಟೆ ತಾನೆ ಬರಲೊಲ್ಲಂ ಲಜ್ಜೆಯಿಂದಾತನಂ ।
ಕರೆಯಲ್ ವೈಸಿಕವೆಂದಪಂ ಸಖಿ ಶರಣ್ಬೊ§ಕ್ಕೆಂ ಗಡಾ ನಲ್ಲನಂ ॥
ಬರಿಸೆನ್ನಲ್ಲಿಗೆ ತೋರಮಲ್ಲಿಗೆಯೆಲೇ ಬೆಳ್ದಿಂಗಳೇ ನಿನ್ನನಾ ।
ನೆರೆವೆಂ ಕೋಗಿಲೆ ನಿನ್ನ ಕಾಲ್ವಿಡಿದಪೆಂ ತೆಂಗಾಳಿ ತೋಱುತ್ತದಪೆಂ ॥೯೭೯

ಕಡೆಗಣ್ ಕಾಣದೆ ನೋಡಲಱುತ್ತವಡುಗುಂ ಚಿತ್ತೇಶನಂ ನೋಡಲುಂ ।
ಕುಡದೆನ್ನಂ ಕಡುಲಜ್ಜೆಯೆಂದು †ನುಡಿಯುತ್ತಿರ್ಪಾಕೆ ತಾಂ ಕಂಡು ಕ ॥
ನ್ನಡಿಯೊಳ್ ನೋಡಿ ನಿಜೇಚ್ಛೆಯಿಂ ಮಧುರಸಪ್ರಸ್ಯಂದಮಂ ತೃಷ್ಣೆಯಿಂ ।
ಕುಡಿವಂತೇನತಿಮುಗ್ಧೆ ಚುಂಬಿಸಿದಳೋ ಪ್ರಾಣೇಶವಕ್ತ್ರೇಂದುವಂ ॥೯೮೦

ಸೂಳೆಯ*ರ್ಗುಳ್ಳದೇನೆಲವೊ ಕೂರದೊಡಂ ಕಡುಗೂರ್ತರಂದದಿಂ ।
ಮೇಳಿಸಿ ಚಿತ್ತಮಂ $ಪಡೆವೆವರ್ಥಮನಲ್ಲದೊಡೆಮ್ಮ ಪೆರ್ಮೆಗಂ ॥
ಪಾಳಿಗಮೊಲ್ದು ಕೊಟ್ಟಪರೆ ಕೂರ್ತಡಮೇಂ ಬೆಲೆವೆಣ್ಗೆ ಬೇಟಮೇಂ ।
ತಾಳದಮುಕ್ಕಮೋ ಕಲವೆಯೋಗರಮುಕ್ಕಮೊ ತುಪ್ಪಮುಕ್ಕಮೋ ॥೯೮೧

(ಕವಿಕುಂಜರಲೀಲಾವತಿ)

ಮನಮುಂ ಮನದನ್ನನ ಬೆ ।
ನ್ನನೆ ಪೋಗಿರೆ ತನ್ನ ಬಸನದಿಂದವನೊಳ್ ಸ ॥
ಮ್ಮನಮಂ ಬಿಡೆ ಬಳೆಯಿಪ ಬೆ ।
ಳ್ತನಮಿದು ಪಾಲ್ಮನಗೆ ಬಾಯಿನಂಗುಡುವಂದಂ ॥೯೮೨

(ಚಂದ್ರಪ್ರಭಪುರಾಣಂ)

ಎಱಕಂ ಚಿತ್ತದೊಳಲ್ಲ ಕಾಲ್ಗೆಱಗಿ ನೀನೇಕಾಳಿಗೊಂಡಪ್ಪೆ ಮಾ ।
ಣೆಱಗಿನ್ನಾ ಪೊಸವೇಟದಾಕೆಗೆನುತುಂ ಹುಂಕಾರದಿಂ ಕಾಯ್ಪು ಕ ॥
ಣ್ದೆಱೆಯಲ್ ವಾಮಪದಾಬ್ಜದಿಂದೊದೆಯೆ ನಲ್ಲಂಗಾದ ರೋಮಾಂಚದಿಂ ।
ಪೊಱಪಿಂಗಲ್ ಮುಳಿಸಾಕೆ ಪಕ್ಷ್ಮದೊಳೆ ಪಾಯ್ತರ್ಪಶ್ರುವಂ ತಾಳ್ದದಳ್ ॥

(ಕವಿಕುಂಜರಲೀಲಾವತಿ)

§ ಕ್ಕೆಂದೊಡಾ. † ಮಱುಗು. $ ಪಡೆವರ.

ನುಡಿದಂ ದೈನ್ಯದ ಮಾತನಾತನಿದಿರೆೞ್ದಳ್ ಮೋನದಿಂ ಮುಗ್ಧೆ ಕಾ ।
ಲ್ಪಿಡಿವಂ ವಲ್ಲಭನೋಪಳೊಲ್ದೊದೆದು ಪೋಗಲ್ ಮೀಱಿದಳ್ ಮೇಲುದಂ ॥
ಪಿಡಿದಾತ್ಮೇಶ್ವರನಿಕ್ಕಿದಂ ಕುಚದೊಳೊಂದಂ ಹಾರಮಂ ಕಾದಲಳ್ ।
ನಡುಗುತ್ತೆಕ್ಕಸರಕ್ಕೆ ತಾಂ ದುಸರಮಂ ಬಾಷ್ಪಾಂಬುವಿಂದಿಕ್ಕಿದಳ್ ॥೯೮೪

(ಅನಂತನಾಥಪುರಾಣಂ)

ತೆತ್ತುತನಕ್ಕೆ ತೆತ್ತುತನಮಂ ಪುಸಿನಲ್ಮೆಗೆ ಮೋದಿ ನಲ್ಮೆಯಂ ।
ಜತ್ತುಕಱಿಂಗೆ ಜತ್ತುಕಱನಾಸೆಗಮಾಸೆಯನಾದಲಂಪಿನಿಂ ॥
ಪತ್ತಿದ ಮೆಯ್ಗೆ ಪತ್ತುಗೆಯನುಕ್ಕೆವಕುಕ್ಕೆವಗೆಯ್ತುಮಂ ಪೊಣ ।
ರ್ಚರ್ತ್ತುಮುಪಾಯದಿಂ ಕಳಯೆ ಕೂಡುವನಂ ವಿಭು ಕಂಡು ಮೆಚ್ಚಿದಂ ॥

(ಶೂದ್ರಕಂ)

ನೋಡುವರೊಳ್ ಮನಂ ಬಯಸಿವಂತಿರೆ ನಲ್ಮೆ ತುಳುಂಕೆ ಬಿಂಕದಿಂ ।
ನೋಡುವುದೆಯ್ದೆ ಮಾತನೊಸೆದಾಡುವರೊಳ್ ಬಗೆ ಬೆಚ್ಚುತೋಱ ಮಾ ॥
ತಾಡುವುದಿತ್ತು ಕೂಡುವರೊಳಿಲ್ಲದ ಬೇಟಮನುಂಟುಮಾಡೆ ನೀಂ ।
ಕೂಡುವುದೆಂದು ಮುತ್ತ ಮುದುಗುಂಟಣಿ ಪುತ್ರಿಗೆ ದೀಕ್ಷೆಯಿಕ್ಕಿದಳ್ ॥೯೮೬

ಮುಡಿ ಸೊಪ್ಪಾಗದು ನೀವಿ ಬೆರ್ಚದಧರಂ ಬೆಳ್ಪೇಱದೂರುದ್ವಯಂ ।
ಪೊಡ*ರ್ದಾಕಂಪಿಸದಕ್ಷಿ ಕೆಂಪಡರದೊರ್ವಂಗೋತು ನೀನನ್ಯರೊಳ್ ॥
ಕೊಡಗೂಸಿರ್ಪವೊಲಿರ್ಪೆ ನಿನ್ನೊಳಗುಗಂಡರ್ ಗಂಡರಿನ್ನೇನುಮಂ ।
ಕುಡರಿನ್ನೆಂದು ಕನಲ್ದು ತಾಯ್ ಮಗಳನೊರ್ವಳ್ ಪರ್ವಿನಿಂ ಜರ್ವಿದಳ್ ॥

ಪೊಡವ*ರ್ತ್ತುಂಗಸ್ತನಂ ಕೊಂಕಱಿದು ನಿಮಿ*ರ್ದ ನೀಳಾಳಕಂ ಜೋಲ್ದು
ಬಂಬ । ಲ್ಮಡಿ ಬೆಳ್ಪೇಱಿರ್ದ ಬಿಂಬಾಧರಮಣಿ ನಸುಗೊಂಕಿರ್ದ ಕರ್ಣೋ
ತ್ಪಲಂ ಕೆಂ ॥ ಪಡ*ರ್ದಾಲೋಲೇಕ್ಷಣಂ ಕಂಪಿಸುವ ತನು ರತಿಶ್ರಾಂತಿಯಿಂದಂ
ಬೆಡಂಗಂ । ಕುಡೆ ನೆಮ್ಮಿರ್ದೋರ್ಪನಂ ಮೆಯ್ಬೆಮರನೆಲರೊಳಂದಾಱಿಸುತ್ತಿ
ರ್ದಳೊರ್ವಳ್ ॥೯೮೮

ಮದಿರಾಪಾನಕ್ಕೆ ಮೆಯ್ಯಾಱದೆ ಸುೞಿವೆಱರಂ ಪೊರದುದ್ಯಾನಮಂ ಸಾ |
ರದೆ ಮಲ್ಲೀಮಾಲೆಯುಂ ಸೂಡದೆ ಹಿಮರುಚಿಯುಂ ನೋಡದಾನಂದದೊಳ್ ಪಾ ‖
ಡದೆ ಕೆಯ್ಗೆಯ್ವೊಂದಲಂಪಿಲ್ಲದೆ ಕೆಳದಿಯರೊಳ್ ಸೊಲ್ಲದೇಕಾಂತದೊಳ್ ಸಿ |
ಲ್ಲದಿರಾಂ ಬರ್ಪನ್ನಮಾಯುಂ ನಿನಗಿದು ವಿಗತಾಪಾಯಮಪ್ಪೊಂದುಪಾಯಂ ‖

ಇರದೆ ಗೋಪಂ ಕೋಪದಿಂ ಪೋದೊಡೆ ಪೆಱಗನುಲೇಪಂ ವಿಭೂಷಾಕಲಾ
ಪಂ | ವರಧೂಪಂ ಸುಪ್ರದೀಪಂ ಸೊಗಸದೊಗೆಯೆ ಕೋಪಂ ವಿಶೋಕ
ಪ್ರಳಾಪಂ ‖ ಸ್ಮರದೀಪಂ ಪೆಣ್ಣರೂಪಂ ತಳೆದುದೆನಿಸಿ ಮೋಪಂ ಪ್ರಭಾವೇ
ಶರೂಪಂ | ಪರಿತಾಪಂ ತೋಱಲಾಪೆಣ್ಣೊಲವು ಲಲಿತವಾಳಾಪವಿಜ್ಞಾಪ್ರ
ಳಾಪಂ ‖೯೯೦ (ಜಗನ್ನಾಥವಿಜಯಂ)

ಕರೆಯದೆ ಕಾಡಿ ಕಂದಿಸುವ ಕುಂಟಣಿಯುಂ ಮಸಣಬ್ಬೆ ತಿಂಗೆ ಬೇ |
ಗಿರದೆ ಬಳಾರಿ ಬಾಡಿಸುಗೆ ಚಂಡಿಕೆ ನುಂಗುಗೆ ಮಿತ್ತು ತುತ್ತುಗು ‖
ಕ್ಕರಿಸುಗೆ ಕಾಳಕೊಳ್ಗುಱಿಯುಮಂ ಮುಱಿದಿಕ್ಕುಗೆ ಮಾರಿ ಭೈರವಂ |
ಹರಹುಗೆ ಮೇಳೆಯುಂ ಮುಱಿಗೆ ಮಾಳವೆಗಿಂಬುಮೊಗಾರವೆತ್ತುವೆಂ ‖೯೯೧

ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತುಗಾಱನಂ |
ತಾಳಿಸು §ತೇಪೆಯುಂ ಕುಡದೆ ಕಾಡುವನಂ ರಸಬೋನವೆತ್ತು ಮಾ ‖
ಕಾಳಗೆ ಕಾಳನಂ ತಿರಿಪು ಟಕ್ಕಿಸನಂ ತುೞಿ ಮೇಕುದೋರ್ಪನಂ |
ಮಾಳವೆಗಿಕ್ಕು ಪೂಟ್ ಪುಸಿವನಂ ಪೊಸೆದಿಕ್ಕುಗೆ ಪಚ್ಚಗಾಱನಂ ‖೯೯೨
(ಕವಿಕುಂಜರಲೀಲಾವತಿ)

ಮುಳಿವಳೞಿಪ್ಪಳೞ್ವಳೆ*ರ್ದೆಯುಂ ಬಡಿವಳ್ ಪುರುಡಿಪ್ಪಳೞ್ವಳು |
ಮ್ಮಳಿಸುವಳಟ್ಟೆ ಪತ್ತುವಳಗಲ್ಕೆಗೆ ಕಾಯ್ವಳೊನಲ್ದು ಚಿಂತಿಪಳ್ ‖
ಕಳವಳಿಪಳ್ ಕರಂ ಕಳಯೆ ನಂಬಿಪಳಂಬಳಿಪಳ್ ಕಡಂಗಿ ಕಾ |
ಲ್ಗಳೊಳೆ ಪೊರೞ್ವಳುಳ್ಳಡಮೆಯುಂ ಕೊಳಲೆಂದವಳೊರ್ವಳೊರ್ವನಂ |
ಅಳಸವಿರಂಟನಿರ್ದನೆಡೆಯಲ್ಗಡ ಪೆರ್ವೊಲೆ ನೋವುಮುಟ್ಟುದಂ |
ಕಳೆಯದಿರಿಂದು ಬೇನೆ ಕೆಳ*ರ್ದಪ್ಪುದು ಪಾಯದಿರೊತ್ತಿ ಮೂಱು ತಿಂ ‖

§ ತೇವನಂ ; ಯೋನನುಂ.

ಗಳ ಬಸಿಱೀಕೆ ಪಾಯ್ವೆಯೆನಗಿರ್ಪಣವೋಡಿದುದಿಂದು ನೋಡ ಬಾ ।
ಯೞಿದುದು ತಾರದಿರ್ ಪೊಗಮನಿತ್ತನುತುಂ ಬೆಱಗಾಗೆ ಕೂಡಿದಳ್ ॥೯೯೪
(ಶೂದ್ರಕಂ)

ನಡೆ ನಡೆವಂತಿರೇಂ ಭಯಮೆ ನೋಡೆಲೆ ನೋೞ್ಪಡೆ ಪೃಸ್ನಿನಣ್ಪಿನಿಂ ।
ನುಡಿ ನುಡಿವಂತು ಬಕ್ಕುಡಿಯೆ ಬಾರೆಲೆ ಬರ್ಪೊಡೆ ಮಾವೆ ಮಾನವಂ ॥
ಬಿಡು ಬಿಡುವಂತಿರೇಳದಿಕೆಗಂಡನೆ ಗಂಡನೆ ಕೇಳ ಪೇೞ ಪೇ ।
ೞ್ಪೊಡೆ ಕವಿರಾಜಕುಂಜರನ ಕಬ್ಬಮೆ ಕೆಮ್ಮನಿದೇಕೆ ಸಮ್ಮದಂ ॥೯೯೫

ರತನುನೆ ಮಧ್ಯದೊಳ್ ಮುಱಿದು ತಾಂ †ಮಗಳಂ ಮೊಲೆಯುಡಲೀಶಚಟಂ ।
ಬಿತವದನಾಬ್ಜಮಂ ತೆಗೆದು ತಾಂ ಶಿಶುವಂ ಸಲಪಲ್ಕೆ ಬಲ್ಪಿನಿಂ ॥
ಪತಿಪರಿರಂಭಮಂ ಬಿಡಿಸಿ ಕೂಸಳ್ ನಂಬಿಸಲಿರ್ದ ಸೂಳ್ವಾ ।
ಣತಿಯೆರಡರ್ಕೆ ಬಿಟ್ಟು ಕಱುಪ್ಪೋಲಡೆಯಾಡಿದಳೊಂದು ಗೇಹದೊಳ್ ॥೯೯೬
(ಕವಿಕುಂಜರಲೀಲಾವತಿ)

ಕುಡುವುದು ಕೂರ್ಮೆಯಲ್ಲಿ ಕಲೆಯಿಲ್ಲದೆ ಮನ್ನಿಪ ಸೂಳೆಗೇನನಾ ।
ದೊಡಮುಳನೇಹಮಂ ಮೆಱೆದು ಪೊಳ್ಳಿಪಿ ಬಿಟ್ಟಪೆನೆಂಬ ಡಾಳೆಯಂ ॥
ಸುಡುವುದು ಸುಟ್ಟು ತೂಱುವುದು ತೂಱಿದ ಬೂದಿಯನೋವದೆಯ್ದೆ ಬೊ
ಟ್ಟಿಡುವುದು ಮಿಕ್ಕುದಂ ಕದಡಿ ಕುಂಟಣಿಗೀವುದು ತೀವಿ ಹಂಚಿನೊಳ್ ॥೯೯೭

ಸಿರಿ ಚೆಲ್ವಂ ಸಿರಿಯಲ್ಲಿ ರೂಪು ಮಿಗೆ ಚೆಲ್ವಂ ರೂಪಿನೊಳ್ ಮತ್ತಮುಂ ।
ಬರೆಯುಂ ಚೆಲ್ವಮಿನಿತ್ತುಮೆಯ್ದೆ ಕಡುಚೆಲ್ವಂ ಬೇಟದಿಂ ಬೇಟಮೇಂ ॥
ಬರಸಂ ಮನ್ನಿಸದಂಡನಾಯಕಮದೇಕಾಲಕ್ಷ್ಮಿಯುಂ ರೂಪುಮಾ ।
ಪರೆಯುಂ ಬೇವಿನ ಸುಗ್ಗಿಪೊಣ್ಮನೆಯ ಚಿತ್ರಂ ಕಾಡ ಚಂದ್ರಾತಪಂ ॥೯೯೮

ಎನಗೇಕಾದುದೊ ಬೆಂದ ರೂಪೆಸೆವ ರೂಪಿಂಗಿಂತು ಪಾೞಾದ ಜಾ ।
ವನಮೀಜೌವನವಲ್ಲಿ ಕೂರದನ ಕೂಟಂ ಕೂಟದೊಳ್ ಕಾಯ್ದ ಚೈ ॥
ತ್ರನ ಕಾಟಂ ಕಳಿವಂದವಾವುದೆನಗಿನ್ನೆಂತೆಂದೊಡೇನೆಂಬೆನಂ ।
ಗನೆ ನೀಂ ಗರ್ವಿಸಿದಪ್ಪೆಯೆಂದು ಬಗೆದೋಜಂ ನಲ್ಲನೇನೊಲ್ಲನೇ ॥೯೯೯
(ಅನಂತನಾಥಪುರಾಣಂ)

† ಮಗುವಂ.

ನುಡಿಯೆಲ್ಲಂ ಪೊಲೆ ಸೂರುಳೊಳ್ ನಿಲೆ ಪೊಸಂತಿಲ್ ಪೊಂಗೊಳಲ್ ಪುತ್ತವಾ|
ಯ್ಕುಡಿ ನೀರುಂ ಮಿಗೆ ಕಮ್ಮನಪ್ಪಬಳನೀರಾರೂರ ದೈವಂಗಳುಂ ‖
ಪಡಿಗೆಟ್ಟೋಡಿವುವೀಕೆಗಂಜಿ ವಿಟರೆಂದುಂ ಗೆಂಟು ತಮ್ಮಬ್ಬೆ ಸ |
ತ್ತೊಡವಿಗಾನಾಳಪೆ ಪೆಣ್ಣ ಕಣ್ಗೆ ಪುಸಿಕಣ್ಣೀರಲ್ಲವೇಂ ಬಕ್ಕುರ್ಡವೋ ‖೧೦೧೦

ಬರಡಗೆಯೋಱಿದಂ ಬಸಿದ ಸೂಲಮನೇಱಿದನೊತ್ತೆಗೊಟ್ಟನೇ |
ಕರೆದಭಿಮಾನಮಂ ಪೆಱರ್ಗೆ* ಕೊಟ್ಟವನೆಳ್ಕಿಱಿಸುಯ್ದುರಾಗದೊಳ್ ‖
ನೆರೆದನೆ ಧೂಳಿಯೊಳ್ ನೆರೆವನಾಕೆಯ ಹಾಸವೊ ಬೊಮ್ಮ ಪಾಸವೋ |
ತರುಣಿಯ ತೋಳೊ ಬಾಳೊ ಸುಡು ಸೂಳೆಯ ಕೂಟವೊ ಕಾಳಕೂಟ
ವೋ ‖೧೦೧೧ (ಕವಿಕುಂಜರ ಲೀಲಾವತಿ)

ಪೇಸಿಕೆಯಿಲ್ಲದಾ ಪ್ರೊಲೆಯ ಮಾದೆಗ ಕೀಲಿಗ ಡೊಂಬ ಡೋಹನ |
ತ್ಯಾಸುರಕರ್ಮಿಗಳ್ಗಡುಹಿ ತೊನ್ನರೊಳಾದೊಡುರುಳ್ವ ರೊಕ್ಕವೀ ‖
ವಾಸೆಗೆ ಲಜ್ಜೆಗೆಟ್ಟು ಪೆಱರೆಂಜಲ ತಿಂದೆರ್ದೆಗೊಯ್ಸಿಕೊಳ್ವಳ |
ಸ್ತ್ರೀಸುಡು ಸೂಳೆಯೆಂಬವಳನೊಲ್ವಜನಂ ನರಕಕ್ಕೆ ಭಾಜನಂ ‖೧೦೧೨

ಕಱಿವುಟ ದಾರಿವೆಂಚೆಯೆರ್ದೆ* ಕಮ್ಮರಗಲ್ ಮೊಲೆಯೆತ್ತುಗುಂಡು ನಾ|
ಣ್ದೆಱಿಮೆಸೆವೂರ ದಿಡ್ಡಿ ಮೊಗಮೋಜನ ಕಂನಡಿ ಪಾವವಟ್ಟೆಗೋಲ್ ‖
ಸೆಱಿವನುಮಲ್ಲಗಂಬನಿರಿಮುಂದಲೆ ಪಾಳ್ಮನೆ ಸೂರಪಿಂಡಿಯೆಂ |
ಬಱಿಕೆಯ ಸೂಳೆಯೊಳ್ ನೆರೆವವಂ ಧರೆಯೊಳ್ ಕಡುಗಾಂಪನಲ್ಲವೇ ‖೧೦೧೩

ಸುಡು ಸುಡು ಡೊಂಬಡೋಹಪ್ರೊಲೆಮಾದೆಗಕೀಲಿಗತೊನ್ನರಾದವರ್ |
ಕಡಿವಡೆತಿಂದ ತೋಳ್ ತುಟಿ ಕುಚಂ ಕೊರಳೂರು ಜುಗುಪ್ಸೆಯಾಂತ ನಾ ‖
ಣಡಿಗಡಿಗೆಲ್ಲರುಂ ಪೊರ್ಬ್ಬಿಮುಯ್ಯಿಲ್ಲಿಗೆವಾಸುಗುಬ್ಗಿಪ್ಪೆಯಾದ ಮೆಯ್ |
ಬಿಡದಿರದೆಂತು ಸೂಳೆಯರ ಸಂಗಮನೊಲ್ವರೊ ಖೂಳಮಾನವರ್ ‖೧೦೧೪

(....................)

—ವೇಶ್ಯಾವಿಡಂಬ ವರ್ಣನೆ—

ಸೋಡಂಬಾಡಮೆ ಬಂದು ಕಾಲ್ವಿಡಿವುದುಂ ಪೂಮಾಲೆಯಿಂ ನಲ್ಲನಂ ।
ನೀಡುಂ ಮೋದಿ ಕನಲ್ದು ಸೆಜ್ಜೆಗಿರದುಯ್ದಾಲಿಂಗನಂ ಚುಂಬನಂ ॥
ಕ್ರೀಡಾದಂತಶಕುಂತಿಕಾಕಳರವಂ ಕಂಠಸ್ವನಂ ರಾಗಮುಂ ।
ನೀಡುತ್ತಿರ್ಪಿನಮಾಪರಿಷ್ಟಕರತಪ್ರಾಗಲ್ಭ್ಯಮಂ ಬೀಱುವಳ್ ॥೧೦೦೫

ನೆಲೆಮೊಲೆಯ ಮೇಲೆ ವಲ್ಲಭ ।
ವಿಲಿಖಿತನಖಲೇಖೆ ಚಂದ್ರಲೇಖೆವೊಲಿರೆ ತ ॥
ಳ್ತಲರ್*ಗಂ ವಿಲೋಚನೋತ್ಪಳ ।
ಮಲರ್*ದಪ್ಪುದೆಂತಬಲೆ ನಿನ್ನ ವದನಾಂಭೋಜಂ ॥೧೦೦೬

(ಮಲ್ಲಿನಾಥಪುರಾಣಂ)

ಕಾವುದು ದೇವ ಯಾಚಕನನಂಜದಿರಂಜದಿರೇಕೆ ನೇಲ್ವ ತೋ ।
ಳ್ವಾವಲೊ ಮತ್ತವಾರಣದ ಸೊಂಡಿಲೊ ಕಾದೆರ್*ದೆವುತ್ತಿನಿಂದೆ ಪೆ ॥
ರ್ಮವೆರಡೊತ್ತುಗೊಂಡು ಪೊಱಮಟ್ಟುವೊ ಪೋದೊಡೆಪಾಯ್ವುವೆನ್ನನೋ ।
ವೋಂವತ್ರಿಭೀತಿಯಾದಪ್ಪುದು ಸೂಳೆಯ ಪೆರ್ಮೊಲೆಗಂಡು ಭೂಪತೀ ॥೧೦೦೭

ಅಡರ್*ದ ಕುಚದ್ವಯಂ ದಯಿತೆ ಬೀೞ್ವುವಿದೇಕೆನೆ ಬರ್ದಯೆಂದಳಂ ।
ತಱಿಗಡಿಗೋಪ ನಿಂ ಸರಸಕಾಮನಿವಾಸದೊಳಟ್ಟ ಕೈಯನಿಂ ॥
ಪಿಡಿದಿರೆ ತಮ್ಮ್ರಳಟ್ಟ ಸವಿದೋಱುವ ದೂಸಱಿನೊಂದಹರ್ನಿಶಂ ।
ಕೆಡೆದಪುನಲ್ಲಿಗಾಸವಿಗೆ ಪೆರ್ಮೊಲೆಯುಲ್ಲದೊಡಿಂತುಬೀೞ್ಗುಮೋ ॥೧೦೦೮

(ಕವಿಕುಂಜರಲೀಲಾವತಿ)

ಕೊಱ್ವಿದೆ ಮಾಣನೆಂದಿರುಳೆ ಕುಂತಳಮಂ ಪುಸಿನಲ್ಮೆದೋಱೆ ಮುಂ ।
ಗಯ್ಯ ತೊವಲ್ಗೆ ಮೆಱೆ ಬೆರಲ ಕಂಡಿಕೆಗಾಡುವನಾಸೆಗೆಯ್ದು ಕ ॥
ಣ್ಗೆಯ್ದಿರಾತನೊಳ್ ಪೆಸರ ಪೆಂಡಿರುಮಂ ಬಸಮಾಗೆ ಮಾಡಿ ಪೆ ।
ಣ್ಬುಯ್ಯಲನಾಲಿಸಂ ಕರುಣಮಿಲ್ಲದವಂ ಮನುಜೇಂದ್ರಚಂದ್ರಮಂ ॥೧೦೦೯

(ಮಲ್ಲಿನಾಥಪುರಾಣಂ)

ಇಂತು ಕಾವ್ಯಸಾರದೊಳ್

ಚಂದ್ರೋದಯ ವರ್ಣನಂ.

೨೯. ಪ್ರಭಾತ ವರ್ಣನೆ

ತೆರೆವೊೞ್ಲಿಂದುರ್ಬಿ ಕಾಸಾರದ ಪರಿಸರದೊಳ್ ನಿದ್ರೆಗೆಯ್ವಂಚೆವಿಂಡಿಂ |
ದರಹಾಸಶ್ರೀಯನಂಭೋಜಿನಿಗೆ ಪಡೆದು ನೆಯ್ದಿಲ್ಗಳಿಂದುಳ್ಳಲರ್ಗಂ ||
ಬುರುಹಕ್ಕೆೞ್ತರ್ಪ ಭೃಂಗಂಗಳ ಗಱಿಯೆಲರಿಂ ಕೊರ್ಬಿ ಚಾಂಡಾಲಿಗೇಯ |
ಸ್ವರದಿಂ ತಳ್ವೊಯ್ದತಿಸ್ವೈರದೆ ಸುೞಿದುದು ವೈಭಾತಿಕಂ ಮಾತರಿಶ್ವಂ ||

(ಜಗನ್ನಾಥವಿಜಯಂ)

ಊದಿತ್ತುದ್ದಾಮದಾಮಾತುಲಪರಿಮಳಭಾರಾನ್ವಿತಂ ಕಾಮಮೋಹೋ |
ನ್ಮಾದಂ ಮ್ಲಾನಾಂಗನಾವೃಕ್ಷವಳಯಮುಕುಳಾರಂಭಸಂರಂಭಿಕಾಂತಾ ||
ಸ್ವೇದಾಸ್ವಾದಪ್ರಗಲ್ಭಂ ಸಮರತಸಮರಶ್ರಾಂತಸೀಮಂತಿನೀ ಸ ||
ಮ್ಮೋದಪ್ರೋನ್ಮಂದಮಂದಸ್ಮಿತಮಧುರಮರುನ್ಮಾಂಸಳಂ ಮಾತರಿಶ್ವಂ |

(.....................) ?

ವಾರುಣಿ ಕಳ್ಳನೀಂಟ ಮಱಿದಿಕ್ಕಿದ ಬಟ್ಟಲೊ ಭೀತಿಯಿಂ ನಿಶಾ |
ಸ್ವೈರಿಣಿ ಪೋಗೆ ಬಿರ್ದ ಕಿವಿಯೋಲೆಯ ಮೌಕ್ತಿಕಪತ್ರವೋ ನಭೋ ||
ವಾರುಣವೊಲ್ಲದೊಕ್ಕ ದಧಿಪಾಂಡುರಪಿಂಡವೊ ಪೇೞೆನಲ್ಕೆ ನೀ |
ಹಾರಮಯೂಖಮಂಡಲಮದೇನಿಸೆದಿರ್ದುದೊ ಪಶ್ಚಿಮಾದ್ರಿಯೊಳ್ ||೧೧೨

(ಕವಿಕುಂಜರಲೀಲಾವತಿ)

ತಳರ್ದ* ವಿಯೋಗಿನೀಹೃದಯಮಾಃ ಕಣದಂತೆ ಸುರುಳ್ವ ತಾರಕಾ |
ವಳಿ ಮಸುಳ್ದತ್ತು* ಯಾಮಿನಿಯ ಬೆನ್ನನೆ ಪೋಪ ದುಕೂಲಚೇಲದಂ ||
ಚಳಮೆನೆ ಪೋಯ್ತು ಚಂದ್ರಿಕೆ ನಭೋವಧು ಸೂಡಿ ಬಿಸುಟ್ಟಮಾಲ್ಯಮಂ |
ಡಳದವೊಲಿರ್ದುದಸ್ತಗಿರಿಮಸ್ತಕದೊಳ್ ತುಹಿನಾಂಶುಮಂಡಲಂ ||೧೧೩

ಇದು ಸುೞಿಗಾಳಿಯಿಂ ನೆಗೆವು ತೋಱುವ ಕಿಂಶುಕಶುಷ್ಕಪತ್ರಮಿಂ |
ತಿಸು ಗಗನಕ್ಕೆ ನಾಡೆ ನಲಿವಾಱದುದೊಂದು ಕಪೋತಮಂತು ಮ ||
ಲ್ತಿದು ಪಱಿದಿರ್ಪಪಾವಸೆ ಮುಗಿಲ್ಮಱೆಯೊಂಬಿನಮಿಂಬುಗೆಟ್ಟು ಕಂ |
ಧಿನ ಪಟಿಗೆಂಚುಗನ್ನಡಿವೊಲೇನಿಳದಾಪುದೊ ಚಂದ್ರಮಂಡಲಂ ||೧೧೪

(ಚಂದ್ರಪ್ರಭಪುರಾಣಂ)

ವಾರುಣಿಯಮನೊಲಿದು ಮುಟ್ಟಿದ।
ಕಾರಣದಿಂ ಮುಱುಗುವಂತೆ ತನ್ನಯ ಕಱೆಯಂ॥
ನೀರೊಳಲೆವಂತೆ ಪಶ್ಚಿಮ।
ವಾರಿಧಿಯೊಳ್ ಮಗ್ನನಾದನಂಬಮೃತಕರಂ ॥೧೦೧೪

*
ಇದು ತಳರ್ವ ನಿಶಾಸುದತಿಯ।
ಮೃದುಪದನೂಪುರದ ನೂಲ ತೊಂಗಲ ದನಿಯೆಂ॥
ಬುದನೆನಿಸಿ ಪೊಣ್ಮಿದುದು ನಿ।
ದ್ದೆದಿಳಿಮು ನಲಿದುಲಿಯುತಿರ್ಪ ವಿಹಗರವಂಗಳ್ ॥೧೦೧೬

¶ಉಗಿದುವು ಪಿರ್ದ ಕತ್ತಲೆಯನಟ್ಟಿಸಲಾಱದೆ ಕಾಱುವಂತೆ ಕಾ।
ಡಿಗೆಗಳನಾಗಳೊಪವರ ಕೇಳಿಗಳಂ ತಲೆಯೆತ್ತಿ ನೋಡುವಂ॥
ತೊಗೆದುವು ನೋಡಿ ನಾಣ್ಚಿ ತಲೆಯಂ ತೆಗೆವಂತಿರೆ ಪಾತ್ರಮಧ್ಯದೊಳ್।
ತೆಗೆದುಡುಗಿರ್ದುವೊಳ್ಗುಡಿಗಳಂ ರತದೀಪಿಕೆಗಳ್ ನಿಶಾಂತದೊಳ್ ॥೧೦೧೭

ಪರೆಯೆ ಕುರುಳ್ಗಳಂತೆ ತಿಮಿರಂ ಮುಗಿಯುತ್ತಿರೆ ನೆಯ್ದಿಲಕ್ಷಿಯಂ॥
ತಿರೆ ಬೆಮರಂತಿರಾಱುತಿರೆ ತಾರಗೆ ತೀರೆ ವಿಭಾತಕಾಂತನೊಳ್॥
ನೆರೆದ ಸುಖಾಂತದೊಳ್ ಕರಗುತಿರ್ಪ ಮನೋಹರಿಯಾರ್ದ್ರಕುಂಕುಮಾಂ।
ಬರವೆ ಬಱಲ್ವವೊಲ್ ಬಳೆದುದೈಂದ್ರಿಯ ಸಾಂಧ್ಯಮಯೂಖಪಲ್ಲವಂ॥
(ಕವಿಕುಂಜರಲೀಲಾವತಿ)

ಇಂತು ಕಾವ್ಯಸಾರದೊಳ್
ಪ್ರಭಾತ ವರ್ಣನಂ.

¶ ಉಗುಳ್ದುವು.

೩೯. ಪರ್ವತ ವರ್ಣನೆ.

ಜಂಬೂದ್ವೀಪದ ನಡುವೆ ನಿ।
ತಂಬದ ಮಣಿಕಾಂತಿ ನಿಮಿರೆ ದೆಸೆದೆಸೆಗೆ ಚಿಶಾ ॥
ಸ್ತಂಬೇರಮುಕ್ಕೆ ಬಿದಿ ನೆ।
ಟ್ಟಂಬಿನ ಪೊಂಗಂಭಮೆನಿಸಿ ಮಂದರಮೆಸೆಗುಂ ॥೧೦೧೯

(ಪಾರ್ಶ್ವನಾಥಪುರಾಣಂ)

ನೆಗಳ್ದ*ದ್ವೀಪದ ಮಧ್ಯದಲ್ಲಿ ಕಳಶಂ ಚಂಡಪ್ರಭಂ ಪಂಜರಂ।
ಭಗಣಂ ಪಲ್ಲವಮಂಬುರಾಶಿಯೆನೆ ಪೂರ್ಣಬ್ಜಾಸನಂ ಪ್ರೀತಿ ಕೈ ॥
ಮಿಗೆ ದೈತ್ಯಾಂತಕನಾಮದಿಂದೆಸೆವ ಲಕ್ಷ್ಮೀವಲ್ಲಭಂಗೆತ್ತಿದಾ।
ಗಗನಚ್ಛತ್ರದ ಹೇಮದಂಡಮೆನಿಸಲ್ ಸಾಲ್ದತ್ತು ಹೈಮಾಚಲಂ ॥೧೦೨೦

ಶ್ರೀವೃಕ್ಷಪವನನಿವಹಮು।
ಮಾವಿಷ್ಕೃತಕುಸುಮಮಾದುದೆನೆ ಶಿಖರಮುಮಂ ॥
ತೀವಿದ ಶಿಖಂಡಮಣಿಕಿರ।
ಣಾವಳಿಯಿಂ ಕಾಣಲಾಯ್ತು ರೈವತಶೈಲಂ ॥೧೦೨೧

(ಜಗನ್ನಾಥವಿಜಯಂ)

ವಾರಾವಾರಾಮರಿಂಗೆತ್ತಮಲಕಮಲವನ್ಮಾನಸಂಮಾನಸಂಪ।
ತ್ಸಾರಂ ಸಾರಂಗಯೋಷಿತ್ಸುರತಸುರತರುನ್ಮಾನಭೋಗಂ ನಭೋಗಂ ॥
ದಾರೂಢಾರೂಢನಸ್ರೋತ್ಥದಳಕದಳಗುಂಜಾಕರಂಜಾಕರಂ ಮಂ।
ದಾರೋದಾರೋರುಕುಂಜದ್ವಿಪಮವಿಷಮುಹಾಪನ್ನಗೇಂದ್ರಂ ನಗೇಂದ್ರಂ ॥

ವ್ಯಾವೃತ್ತಶಿಖಡ್ಗದಿಂ ಲೀ।
ಲಾವಹಮಹಿಷೀವಿತಾನದಿಂ ಕಂಚುಕಿವೇ ॥
ತ್ರಾವಳಿಯಿಂ ನೃಪಗೃಹದವೊ।
ಲಾವಗಮೆಸೆವತ್ತು ಚಿತ್ರಕೂಟಗಿರೀಂದ್ರಂ ॥೧೦೨೩

ಬಲವತ್ಕ್ರೋಡವಿಜೃಂಭಿತಂ ಭುಜಗರಮ್ಯಂ ರಾಜರಾರಾಜಿತಂ ।
ವಿಲಸಚ್ಚಿತ್ರಶಿಖಂಡಿಮಂಡಿತಮುದಂಚದ್ಭೂಮಿಜಾತಾನ್ವಿತಂ ॥
ಲಲಿತಾರ್ಕೋರ್ಜ್ಜ್ವಲಬಿಂಬಭಾಸಿ ಘನಋಕ್ಷಾಧಿಷ್ಠಿತಂ ವ್ಯೋಮಮಂ ।
ಡಲವಂತಿರ್ದ್ದುದು ಫುಲ್ಲಪಲ್ಲವಮಿಳಚ್ಛಾಖಾಧರಂ ಭೂಧರಂ ॥೧೦೨೪

ಅಸುರೀಬೃಂದಸಮಾಹಿತಂ ದಶಶತಾಕ್ಷಿಭ್ರಾಜಿತಂ ಪ್ರೋಲ್ಲಸ ।
ತ್ಸುಮನಸ್ಸಂಕುಳಶೋಭಿತಂ ಲಲಿತರಂಭಾಸಂಭೃತಂ ಶಾತಕುಂ ॥
ಭಮಯಾಲಂಕರಣಂ ಪ್ರಸೂನಫಳಮಂದಾರಾನ್ವಿತಂ ಸ್ವರ್ಗಲೋ ।
ಕಮಿದೆಂಬಂತೆಸೆದಿರ್ದ್ದುದುನ್ನತರಸಾಲೋತ್ತಾಲವಿಂಧ್ಯಾಚಲಂ ॥೧೦೨೫

ಕಪಿಹಸ್ತಪ್ರಕರಪ್ರಕಂಪಿತಕುಜಾನೀಕಂ ಕುಜಾನೀಕಪು ।
ಷ್ಪಪರಾಗೋಜ್ಜಿತಪುಂಜರಂಜಿತಶಿಲಾಪಟ್ಟಂ ಶಿಲಾಪಟ್ಟಮ ॥
ಧ್ಯಪುಳಿಂದೀರತಸಂಭ್ರಮೋದ್ಗತಕಲಾಲಾಪಂ ಕಲಾಲಾಪಸಹಾ ।
ಸಪಿಕಧ್ವಾನವಿರಾಜಮಾನವರಶುಂಭತ್ಕಂದರಂ ಮಂದರಂ ॥೧೦೨೬

(..................) ?

ಶರಭಗ್ರಸ್ತೋಗ್ರಕಂಠೀರವಪಟುರಟನೋತ್ಥಪ್ರತಿಧ್ವಾನಮದ್ಗ ।
ಹ್ವರದುಶ್ಶ್ರಾವಶ್ರವಂ ನಿಷ್ಠುರಗರಳರಸಾದ್ರ್ರಸ್ಫುರಜ್ಜಿಹ್ವದರ್ವೀ ॥
ಕರದುರ್ದರ್ಶಂ ಸಮುತ್ಕಂಟಕವಿಟಪಿಲತಾಭೀರುಮತ್ಯಂತಮೃತ್ಯು ।
ತ್ಕರದುರ್ವೇಶಂ ಮನಕ್ಕದ್ಭುತರಸದೊದವಂ ತಂದುದೆಂದೊಂದಗೇಂದ್ರಂ ॥

(ಚಂದ್ರಪ್ರಭಪುರಾಣಂ)

ಮೃಗಮಯಮದಿಂ ಕುಜಮಯಮದಿಂ ।
ಖಗಮಯಮದಿಂ ಭುಜಗಮಯಮದಿನಿಂದುಗೆ ತಾರಾ ॥
ಳಿಗೆ ನಭಕೆ ಪಣಮಧೋಮಾ ।
ಟಗೆ ಸರಿ ದೊರೆ ಪಾಟಿ ಪಡಿ ರಥಾವರ್ತನಗಂ ॥೧೦೨೮

ಕರಿಮದನಗುಹೋರಗಬಂ ।
ಧುರಕಟಕಶಿವಾನ್ವಿತಂಗಳಾದುದಜಂ ತ ॥

ದ್ಗಿರಿನಿಕರಂಗಳ್ ಭಾವಿಸೆ ।
ಗಿರಿಶತೆಯನಾಂತುವೆಂಬುದೊಂದಚ್ಚರಿಯೆ ॥೧೦೭೯

(ವರ್ಧಮಾನಪುರಾಣಂ)

ಕರಿಣೀಶೃಂಗಾರಮುಗ್ರೋರಗಭಯಮುಗದೈಶ್ವರ್ಯದ್ಭುತಂ ದಸ್ಯುವೀರಂ।
ಶರಭಾಕಾರೋರುರೌದ್ರಂ ಪ್ಲವಗವಿಕೃತಹಾಸ್ಯಂ ಚಮೂರುಪ್ರಣಶ್ಯ ॥
ದ್ರುರುಬೀಭತ್ಸಂ ದವವ್ಯಾಕುಳಖಗಕರುಣಂ ಯೋಗಿರಾಟ್ಶಾಂತಿಶಾಂತಂ ।
ದೊರೆವೆತ್ತಾಶ್ಚರ್ಯಭೂತಂ ನವರಸಮಯಮಾಯ್ತಾನಗೇಂದ್ರೋಪಕಂಠಂ ॥

(ಚಂದ್ರಪ್ರಭಪುರಾಣಂ)

ಹರಿಗೋಲಾಂಗೂಲಡೋಲಾಯಿತತರುವಿಟಪಂ ನಿರ್ಘೃಣವ್ಯಾಘ್ರಭೀತಿ ।
ತ್ವರಿತೋದ್ಧಾವನ್ಮೃಗೌಘಂ ಜಗದಜಗರಪೂತ್ಕಾರವಾತಸ್ಫುರದ್ಗ ॥
ಹ್ವರಗರ್ಜತ್ಸಿಂಹನಿರ್ದಾರಿತಮದಗಜಕುಂಭಸ್ಥಲೋನ್ಮುಕ್ತಮುಕ್ತೋ ॥
ತ್ಕರಗುಂಜಾಪುಂಜಕಿರ್ಮ್ಮೀರಿತಕಟಕಮಗುರ್ಬಾದುದುರ್ವೀಧರೇಂದ್ರಂ ॥

(ಜಗನ್ನಾಥವಿಜಯಂ)

§

ಶ್ರೀವತ್ಸಾಂಗಂ ಸುಭಗಂ ।
ಶ್ರೀವತ್ಸಾಂಕೇಷುದಳಿತಗೋಪೀಹೃದಯಂ ॥
ಗೋವರ್ಧನಪಟು ನಲಿದಂ ।
ಗೋವರ್ಧನಗಿರಿಯೊಳೆಸೆವ ವೃಂದಾವನದೊಳ್ ॥೧೦೩೦

(ಜಗನ್ನಾಥವಿಜಯಂ)

ಇಂತು ಕಾವ್ಯಸಾರದೊಳ್
ಪರ್ವತ ವರ್ಣನಂ.

---

§ ಇಲ್ಲಿಯೂ ೪ ನೆಯ ಅಧ್ಯಾಯದ ೧೩೧, ೧೩೨, ೧೩೩ ನೆಯ ಪದ್ಯಗಳಿವೆ.

೪೦. ಕಾನನ ವರ್ಣನೆ.

ಇರೆ ಶಬರಾಧಿರಾಜಕಟಕಂ ಕಟಕಂ ಕಟಕಂದರೋಗ್ರಸಿಂ ।
ಧುರವೆನೆ ನಿರ್ಝರೋಲ್ಲಹರಿಯುಂ ಹರಿಯುಂ ಹರಿಯುಂ ವಿಜೃಂಭಿಪಾ ॥
ಗಿರಿವರವಲ್ಲಿ ದಾವಶಿಖಿಯುಂ ಶಿಖಿಯುಂ ಶಿಖಿಯುಂ ಪ್ರಭೂತವಾ ।
ಗಿರೆ ಬೆಳಗಂ ತಮಂ ತವಿಪಿನಂ ವಿಪಿನಂ ವಿಪಿನದ್ಧವೊಪ್ಪುಗುಂ ॥೧೦೩೩

ಕರಿದಾನದ್ರವಗಂಧಚಿತ್ರವಿಹಗಸ್ತ್ರೀಮಾರುತಂ ಮಾರುತಂ ।
ಬರೆ ಕೃಷ್ಣಾಗಿದಿರಂ ಪಳಂಚಲೆವು ಮೇಘಧ್ವಾಂತಮುಂ ಧ್ವಾಂತಮುಂ ॥
ಪರಪುತ್ರಿರ್ದುದು ತನ್ನದೊಂದುದಿತತೇಜೋವೈಹಿರಂ ವೈಹಿರಂ ।
ತರುಶಾಖಾನಿಕುರುಂಬಚುಂಬಿತದಿಶಾನೀಕಾನನಂ ಕಾನನಂ ॥೧೦೩೪

ಜರದಹಿಪ್ರತ್ಕೃತಂ ವಿಹಗಚೀತ್ಕೃತಮುದ್ಗತಘೂಕಹೂಂಕೃತಂ ।
ಕರಿಕರಸೂತ್ಕೃತಂ ಪ್ಲವಗಕೀತ್ಕೃತಮುದ್ಗತವೇಣುಝೀತ್ಕೃತಂ ॥
ಗಿರಿಜನದೀರ್ಘುಳತ್ಕೃತಮಿಭಾರಿಘುಳುತ್ಕೃತಮುಗ್ರದಾವಸಂ ।
ಚರಣದ ಘೌಸ್ಕೃತಂ ಮಹಿಷಶೃಂಗಘಟತ್ಕೃತಮಾವನಾಂತರಂ ॥೧೦೩೫

(ಜಗನ್ನಾಥವಿಜಯಂ)

ಸುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ ।
ಶ್ವರಭವನಾಗ್ರದಂತೆ ಪರಿವೇತ್ರಲತಾಸತತಪ್ರವೇಶಮುಂ ॥
ಬರತಳದಂತೆ ಋಕ್ಷಮೃಗಲುಬ್ಧಕಸಂಕುಲಮಂಬುರಾಶಿಯುಂ ।
ತುರುತರವಿದ್ರುಮಸ್ಥಿತಿ ನಿರಂತರವೊಪ್ಪುಗುಮಾವನಾಂತರಂ ॥೧೦೩೬

(ಪುಷ್ಪದಂತಪುರಾಣಂ)

ಪಾತ್ರವಿಕೀರ್ಣಮಾತತಸುತಾಳಧರಂ ವಿವಿಧಾವನದ್ಧವಾ ।
ಸೂತ್ರಿತವಂಶಕಾರನಿಕರಂ ಕಳಕಂಠಸಮೂಹಸಂಶ್ರಿತಂ ॥
ಚಿತ್ರತರೋಪಶೋಭೆಗೆಡೆಯಾವುದು ಭಾವಿಸಿ ನೋಡೆ ನಾಡೆ ತೂ ।
ರ್ಯತ್ರಯಸಂಪ್ರದಾಯಮೆನೆ ಕಾನನಮಾವೃತದಿಕ್ಕುಳಾನನಂ ॥೧೦೩೭

(ಚಂದ್ರಪ್ರಭಪುರಾಣಂ)

ಪರಿವೃತವಿದ್ರುಮಂ ವನಧಿಯಂತೆ ಸಮಾವೃತಕೇಸರಪ್ರಭಾ ।
ಸುರಮಿಭವೈರಿಯಂತೆ ವಿಳಸತ್ತಿಳಕಂ ವನಿತಾಸ್ಯದಂತೆ ಬಂ ॥
ಧುರಕದಳೀಕಲಾಪಕಳಿತಂ ಬಲದಂತೆ ಕಪಿತ್ಥತಾಳವಿ ।
ಸ್ತರವನಿಶಂ ಲಸದ್ಭರತದಂತೆ ಪಿಕಾಳಿಶುಕಾವನಂ ವನಂ ॥೧೦೩೮

(...... ....)

ವಸುಧಾವಿಶ್ರುತರಾಜವಂಶತಿಲಕಂ ದುರ್ಗಾಧಿಪಂ ಕೊಂಬುಗೊ ।
ಟ್ಟುಸರಣ್ಗೊಬ್ಬಕ್ಕ ತಮಕ್ಕೆ ತಳ್ತರೆ ಮಧುಚ್ಛತ್ರಾತಪತ್ರಂಗಳು ॥
ರ್ಗಿಸೆ ನಿರ್ಮೋಕಪತಾಕೆಗಳ್ ಮೊಳಗೆ ಚೀರೀಭೇರಿಗಳ್ ಪೊಯ್ದು ಪಾ ।
ಡಿಸುವಂ ಕೀಚಕಗಾಯಕಪ್ರತತಿಯುಂ ಚಂದ್ರಾರ್ಕತೇಜಂಗಳಂ ॥೧೦೩೯

(ಮಲ್ಲಿನಾಥಪುರಾಣಂ)

ಸಿರಿಸಂ ಸೀರೆ ಬೆಳಲ್ಲವಂಗಮೆಲವಂ ಬಳ್ಳಾಲೆರಂ ಬಿಕ್ಕೆ ತೇಂ ।
ಗುರಿಮುತ್ತಂತಱುತಾಱುಹೊನ್ನೆಕುಟಜಂಕಬ್ಬಂನಿಸೀವಂನಿತುಂ ॥
ಬುರುಹಂ ತಾಳಂ ಬಡೆ ಪುತ್ತ್ರವತ್ತಿ ಕೆಲಸಂಬಲ್ಕಲ್ಕೆ ಕಂಕೆಲ್ಲಿ ಕಂ ।
ಮರನಾಮ್ರಂ ಜೆಳಲಿಂಗುಳಂ ಪನಸು ನಿಂಬಂ ಜಂಬು ಜಂಬೀರಕಂ(?)॥೧೦೪೦

(ಶೂದ್ರಕಂ)

ಆವಾಸಮೋಹದಿಂ ಪೆ ।
ರ್ವಾವಾದುವು ಮುತ್ತು ಸತ್ತ ಕಟ್ಟಲೆಗಳನಲ್ ॥
ಕಾವಲಿಯು ಕರಿಯ ಬಣ್ಣದ ।
ಹಾವುಗಳೆಸೆದಿರ್ದುವಾಗುಹಾಗಹ್ವರದೊಳ್ ॥೧೦೪೧

ಪುದಿದಡವಿಯು ಕಟ್ಟಲೆ ಸೂ ।
ಲದೊಳಕ್ಕಿದೊಡಗಿದು ತಿಂದ ತಿಂಗಳ ಪೆಣನಂ ॥
ದದಿನಿರ್ದುದುರ್ವಿ ಕೆಳಗು ।
ಕ್ಕಿದ ನೆಯ್ಯಿಂ ಜೇನ ಪುಟ್ಟ ಪೆರ್ಮರಗಾಡೊಳ್ ॥೧೦೪೨

(ಕವಿಕುಂಜರಲೀಲಾವತಿ)

ಕಾರಂಡಂ ಕೆಂಗಣ್ಣಂ ।
ಭೇರುಂಡಂ ಪೊಱಸು ಕಾಗೆಗಂಬೆಂಡುರಿಗಂ ॥
ಕಾಱಿಕಿಱುವಿಂಳಕೊಯ್ಸಂ ।
ಕೀರಂಜಂಹರಡೆಸುರಗಿಗಿಡಿಪೆರ್ಗಿಡುಗಂ (?)॥೧೦೪೩

ಕೋಗಿಲೆ ಚಾದಗೆ ಪ್ರೋದಗೆ ।
ಮುಗಿಗಲಿಂಚಂಚೆಕೊಂಚೆನೂಲೆಳಗಂಪಂ ॥
ಕಾಗೆ ಪೊಣರ್ವಕ್ಕಿ ಪೊಂಗುರು ।
ಗೂಗೆ ಮುಕುಂಡಂ ಬಲಾಕೆ ಲಾವುಗೆ ಸೇನಂ ॥೧೦೪೪

(ಶೂದ್ರಕಂ)

ಮರೆಯನೆಱಗೋಡು ಮಱ ಪ ।
ಟ್ಟರೆಯಿರೆ ಕಾಯ್ದುರಿವ ಸೂರ್ಯಕಾಂತದಿನೆಚ್ಚ ॥
ತ್ತಿರದೋಡಿದುದಜಗರನ ।
ಸ್ಥಿರಗುಣನಾಶ್ರಯದೊಳಾರುಮಿರಲಱಿವರೇ॥ ೧೦೪೫

ಬೆಳಗಂ ಪಸರಿಸುವರುಣೋ ।
ಪಳದೊಳ್ ಮೃಗಿ ನಿಲೆ ದವಾಗ್ನಿ ಮುಸುಕಿದುದಿನೆಂ ॥
ದೊಳಱ ಮೃಗಮಿತ್ತ ಲಸುವಂ ।
ಕಳೆದತ್ತು ವಿವೇಕಮುಂಟೆ ಮೋಹಾತುರರೊಳ್ ॥೧೦೪೬

ಪ್ರತಿಬಿಂಬವನಾಳಗೆ ಮರ ।
ಕತಾಶ್ಮದೊಳ್ ಪಾಯ್ದು ಕಪಿ ಹತಾಶಂ ಪನಸಂ ॥
ಗತಿಗೆಮುದಂಜಿದುದಾಶಾ ।
ಹತಿ ಮಾಡದೆ ತಥ್ಯವಲ್ಲಿ ಮಿಥ್ಯಾಭ್ರಮಮಂ ॥೧೦೪೭

ಮೇದುರನೀಳಾಶ್ಮಮನಂ ।
ಭೋದಭ್ರಾಂತಿಯೊಳೆ ನೋಡಿ ಕುಣಿವುವು ಶಿಖಿಗಳ್ ॥

ಆದರದಿಂದೆನೆ ಹರ್ಷವಿ ।
ಷಾದಗುಣಂ ಭ್ರಾಂತಿಸಂಭವಂ ದೇಹಿಗಳೊಳ್ ॥೧೦೪೮
ಕೊಳನಂ ಬಳಸಿದ ವಜ್ರೋ ।
ಪಳದೊಳ್ ಪಾರ್ವರ್ಗಳೆದು ಮಱಿಗಳನ್ಮಡಿಯಾದಂ ॥
ತೆಳಸಿ ಬರೆ ಹಂಸಿ ಹರ್ಷವು ।
ನೆಲಕೊಳ್ವುದಪತ್ಯದಲ್ಲಿ ತಣಿವಿಲ್ಲಾರ್ಗಂ ॥೧೦೪೯
(ಜಗನ್ನಾಥವಿಜಯಂ)

ತಳತಳಿಸಿ ತೊಳಗಿ ಬೆಳಗುವ ।
ಪಳಿಕಿನ ಸಱಬೊಂದು ಮಱಯೊಳಿರ್ದರಲೆ ಮುಕುರೋ ॥
ಜ್ಜ್ವಳತುಹಿನಕಿರಣಮಂಡಲ ।
ದೊಳಗಣ ಹರಿಣಂಬೊಲೊಪ್ಪಿ ತೋಱುತ್ತಾಗಳ್ ॥೧೦೫೦
(ಶೂದ್ರಕಂ)

ಎಲೆವೆರಸು ಗಾಳಿಯಿಂ ಪೞ ।
ದೆಲವದ ಪಸು*ರ್ಗಾಯ್ಗಳುದುರೆ ಮೊಗೆಱದು ಶುಕಾ ॥
ವಲಿ ಬಿರ್ದುವೆಂದು ಬಿಡೆ ನುಂ ।
ಗಲೊಡರ್ಚುವುವದಱ ಪೊದಱ ಬಾಲಬಿಡಾಲಂ ॥೧೦೫೧
ತುಱುಗಿದ ತೂಱಲೊಗ್ಗಿಂಬಿನ ।
ತೆಱಪುಗಳೊಳ್ ಕೂಡೆ ನುಗುಳಲಾಱದೆ ಸಿಕ್ಕಿಂ ॥
ಪಱದಿರ್ದ ಬೆಳ್ಮುಗಿಲ್ಗಳ ।
ಮುಱಗಳವೆನಿಸಿದುವು ಶಾಲ್ಮಲೀಫಲತೂಲಂ ॥೧೦೫೨
ಮರಗೊಂಬಿಂದಂ ನೇಲ್ವಳ್ ॥
ಯುರಗನ ಪಜ್ಜಳಿಪ ಪೆಡೆಯ ಮಾಣಿಕವೆಳಗಿಂ ॥
ಕರಮೆಸೆದುದು ವನದೇವತೆ ।
ಯುರಮಾನೆಯೊಳ್ ನೇಲ್ವ ಮಣಿಯ ಸೊಡರಂಬಿನೆಗಂ ॥೧೦೫೩
(ಪುಷ್ಪದಂತಪುರಾಣಂ)

ವಾಕ್ಯಂ॥ ಮತ್ತಮಾಮಹಾವನಂ ಯೌವನದಂತೆ ಮದನೋತ್ಕಳಿಕಾಕಮನೀಯಮುಂ ಚಿತ್ರಕಾಯಶೋಭಾಪ್ರಾಯಮುಂ, ಕಾಂತಾಕದಂಬದಂತೆ ಲೋಹಿತಚಂದನಾಲಂಕೃತಮುಂ ತಮಾಲಪತ್ರೋಪಶೋಭಿತಮುಂ, ಸನ್ನದ್ಧಸಪ್ತಿಯಂತೆ ಕಠಿನಶಾಖಾಮುಖಮುಮುಪಕಂಠಚಲಚ್ಚಾಮರಮುಂ, ತಾಳಪಾತವಿಧಿಯಂತೆ ಶಮ್ಯಾರಮ್ಯಮುಂ ತಾಳೋಪಲಾಲಿತಮುಂ, ರಣಾಂಗಣದಂತೆ ಚಮೂರುಚಿರಪ್ರಹರಣವಿಶೀರ್ಣರೂಪಮುಂ ದಂತಿದಾನಲೀನಶಿಲೀಮುಖಮುಂ, ಪಾಂಡವಪ್ರಕರದಂತಾತ್ತಭೀಮನಕುಲದ್ರುಪದಮುಂ ಅರ್ಜುನೋರ್ಜಿತಮುಂ, ನಾಕನಿಳಯದಂತನೂನಾಪ್ಸರೋಗಣಪ್ರಣೂತಮುಮಮರ್ತ್ಯಗೋಚರಮುಂ, ಅಸಂಯುತಹಸ್ತಸಮುದಯದಂತಾತ್ತಕಪಿತ್ಥಮುಂ ತಾಮ್ರಚೂಡಾವಲೀಢಮುಂ, ಕ್ಷೇತ್ರಕರ್ಷಕನಂತೆ ಪೋತ್ರಿಪ್ರೋಥಾಹತಧರಣೀತಳಮುಂ ಗೃಹೀತಗೋಲಾಂಗೂಲಮುಂ, ಗಗನಮಂಡಲದಂತೆ ಋಕ್ಷಾಕೀರ್ಣಮುಂ ಕುಟಜಕುಜವಿಭ್ರಾಜಿತಮುಂ, ಜಾಂಬೂನದಪ್ರದೇಶದಂತಷ್ಟಾಪದೋತ್ಪತ್ತಿಸ್ಥಾನಮುಮಪರಿಮಿತಕುಶಪ್ರಸರಮುಂ, ಸಭಾಸದನದಂತೆ ವೇತ್ರಾಸನಾಧಿಷ್ಠಿತರಾಜರಾಜಿತಮುಂ, ಸ್ವರಸಮುದಯದಂತೆ ನಿಷಾದನಿಷೇವ್ಯಮುಂ, ಆರಾಧಕನಂತಕ್ಷಮಾಲಾಗಣಿತಜಪೋಪೇತಮುಂ, ರಾಜ್ಞೀನಿವಾಸದಂತೆ ಜರತ್ಕಂಚುಕಿಶತೋದಂಚಿತಮುಂ, ನಾಟಕಪ್ರಕರದಂತೀಹಾಮೃಗೋಪಗೂಹಿತಮುಂ, ಅಭಿನಯದಂತನೇಕಾಹಾರ್ಯಕನಿವಿಷ್ಟಮುಂ, ಭೈರವಾವಳಿಯಂತೆ ರುರುಪರಿಚಿತಮುಂ, ಪಿತಾಮಹಾನನದಂತೆ ಸಾಮಜಪದಾಭಿರಾಮಮುಂ, ಸ್ಥಾಣುವಿವಸನಮಾಗಿಯುಂ ಅಪರ್ಣಾನ್ವಿತಮಲ್ತು, ಬಹುಸತ್ವೋಪೇತಮಾಗಿಯುಂ ತಮೋವಿರಹಿತಮಲ್ತು, ಮಯೂರಾಧಿರೂಢಮಾಗಿಯುಂ ವಿಶಾಖಾಕರಮಲ್ತು, ಆತ್ತಸಾರಸ್ವತಾತಿಶಯಮಾಗಿಯುಂ ವಿವೇಕಾನ್ವಿತಮಲ್ತು, ನಿರಂತರಚ್ಛಾಯಾಶ್ಲೇಷಮಾಗಿಯುಂ ಕೃತಾಂತರೂಪಮಲ್ತು ॥ ೧೦೫೪

(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್

ಕಾನನ ವರ್ಣನಂ.

೪೧. ಗಜ ವರ್ಣನೆ.

ನೆರೆದೆೞ್ತಂದತ್ತು ತೀವ್ರಾನಿಳಭಯವಶದಿಂದಿಲ್ಲಿಗಾನೀಳಮೇಘೋ |
ತ್ಕರಮೆಂಬಂತಿರ್ದ್ದವಬೃಂಹಿತರುತಿ ಮೊೞಗಂ ಪಿಂಗಳಾಪಾಂಗರುಗ್ಮಿಂ ||
ಜರಿಯುತ್ತಿದ್ವಿದ್ಯುನ್ಮಂದೋದ್ಯೋತಮನವಿರಳದಾನಂ ಗಳದ್ವರ್ಷಮಂ ಪ್ರೋ |
ಲ್ಲಿರೆ ಮೇಲ್ಲತ್ಸಲ್ಲಕೀಸಂಕುಳಮೆನಿಪೆಡೆಯೊಳ್ ಹಸ್ತಿಯೂಥಂ ವನೋತ್ಥಂ ||

ಅದು ಬಗೆಯೆ ಮಹಾಪ್ರಾಸಾ |
ದದಂತೆ ಭದ್ರೋಪಲಕ್ಷಿತಂ ಗ್ರಹಕುಳದಂ ||
ತದು ಮಂದಬಂಧುರಂ ಮ |
ತ್ತದು ಸಕಳಶಶಾಂಕನಂತೆ ಮೃಗಸಂಸ್ಥಿತಂ ||೧೫೬

(ಚಂದ್ರಪ್ರಭಪುರಾಣಂ)

ಗಿರಿಯಿದು ಕರಿಯಿದು ಕರಿಯಿದು ||
ಗಿರಿಯಿದು ಗಿರಿಯಲ್ತು ಕರಿಯುದಲ್ತು ಕರೀಂದ್ರಂ ||
ಗಿರಿವರಮಿದು ಕರಿವರಮೆಂ |
ದರಿದಱಿಯರ್ ಗಹನದೊಳಗೆ ಗಿರಿಯಂ ಕರಿಯಂ ||೧೫೭

(ಶೂದ್ರಕಂ)

ನಡುವಿರ್ದ್ದೆೞ್ತಿರೆ ಚಿಕ್ಕಪೋತಕಕಳಭಂಗಳ್ ಕೂಡೆ ಸಾರ್ದಿರ್ಕೆಲಂ |
ಬಿಡಿದಣ್ಮಿಂ ಸೆಳೆಯಾನೆಗಳ್ ಬರೆ ಮರಂಗೊಂಡೊಂದು ಯೂಥಾಧಿಪಂ ||
ಪೊಡೆಯುತ್ತುಂ ಬರೆ ಮುಂತೆ ಪಿಂತೆ ಪಿಡಿಗಿಂ ಬಂದೊಂದಿಭಂ ಪಜ್ಜೆಯಂ |
ತೊಡೆಯುತ್ತುಂ ಬರೆ ಬರ್ಪ ಯೂಥತತಿಯಿಂ ಚೆಲ್ವಾದುದಾ ಕಾನನಂ ||

(ಜಗನ್ನಾಥವಿಜಯಂ)

ಮದಧಾರಾಜಲದಿಂ ವನಂ ಬೆಳೆಯೆ ಸೋಂಕಿಂ ಸೊಪ್ಪುಸೊಪ್ಪಾಗೆ ಕ್ಷಮೆ |
ತ್ತಿದಿನೆತ್ತಂ ಕೋಱಟಾಗೆ ಲಂಡದೊದಪಿಂದಂ ತನ್ನದೀಕೂಲವಂ ||
ಕದಡುತ್ತಿರ್ದ್ದುದು ಚಿಕ್ಕಪೋತಕಳಭಾಕೀರ್ಣಂ ಗಜಾದ್ವೈತಸ್ಯ |
ಪ್ಪ ದಲೆಂಬಂತಿರೆ ಭದ್ರಮಂದಮೃಗಸಂಕೀರ್ಣಂ ಕರೀಂದ್ರೋತ್ಕರಂ ||

(ಮಲ್ಲಿನಾಥಪುರಾಣಂ)

ಬಿಸುಪ್ಪೋ ಕೂಟವೊ ಕರ್ಣತಾಳವೊ ಪತತ್ರಕ್ಷೇಪವೋ ನಿರ್ಗಳ ।
ನ್ಮದವೋ ನಿರ್ಝರವೋ ಲಲಾಟವೊ ಶಿಲಾವಿಸ್ತಾರವೋ ಕಣ್ಣ ಕೆಂ ॥
ಪ್ಪೊ ದವಜ್ವಾಲೆಯೊ ಮೆಯ್ಯ ಕರ್ಪೊ ಕರಿಕೋ ಪೆರ್ಬಾಸೆಯೋ ವಜ್ರಿಗೊ ।
ಡ್ಡಿದ ನೀಳಾದ್ರಿಯೊ ಪೇೞಿಮೆಂಬಿನಮುಗುರ್ವಾಯ್ತು ಮತ್ತೊಂದಿಭಂ ॥೧೦೬೦

(ಜಗನ್ನಾಥವಿಜಯಂ)

ಕೋಡೆೞ್ ಕೋಡೊತ್ತುತುಂ ಪಂತಿಗಳನೆ ತಿಱುಕಲ್ಲಾಡುವಂತಂಬರಕ್ಕೇ ।
ಡಾಡುತ್ತುಂ ತುಂಗಶೈಲಂಗಳನೆ ಮೃಗಸಮೂಹಂಗಳಂ ಮೆಟ್ಟಿ ನೀಳ್ದೇ ॥
ಡಾಡುತ್ತುಂ ನೋಡಲಾರುಂ ನೆಱವ ಸುಭಟರಿಲ್ಲೆಂಬಿನಂ ತನ್ನ ಕಾಯ್ಪಿಂ ।
ನೀಡುಂ ನೀಡುತ್ತು ಮೆಯ್ತಂದುದು ಪವನಜವಂ ರೌದ್ರಗಂಧದ್ವಿಪೇಂದ್ರಂ ॥

(ಪಾರ್ಶ್ವನಾಥಪುರಾಣಂ)

ಲಳಿತವಿಷಾಣಕೋಟಿಗಳನಿಡಿಱಿದಾಗಳೆ ತಾಳವಟ್ಟಮಂ ।
ಸೆಳೆದು ತುಡುಂಕಿ ಮತ್ತೆ ಮೊಲೆಯಂ ನಲವಿಂ ಕಡೆನಾಯ ಪಲ್ಲವಂ ॥
ಗಳನೆೞೆಕೊಂಡು ಸೂಸಿ ಪೆಱಗಾಲಡಿಯಿಂ ನುಸುಳ್ದೋಡಿ ಕಾಡಿ ಸಂ ।
ಗಳಸಿಮದೊಂದು ಪಲ್ಲವುಱ ತಾಯ್ವಿಡಿಗೆಂತುಮನಂತಸೌಖ್ಯಮಂ ॥೧೦೬೨

ಪಸಿದೊಡೆ ಸಲ್ಲಕೀಕಿಸಲಯಂಗಳನೊಯ್ಯನೆ ನೀಡಿ ಮೆಯ್ಯ ತೀಱೆ ।
ಮುಸಪೊಡೆ ಕೋಡೊಳಟ್ಟೆೞಿಸಿ ನೀರ್ಗಳನಿರ್ದೊಡೆ ತಂದು ನೀರನೂ ॥
ಡಿಸಿ ನಸೆಯಿಚ್ಛೆಯಾದೊಡಗೂಡಿ ಬೞಲ್ದೊಡೆ ಕರ್ಣವಾತಮಂ ।
ಪಸರಿಸಿ ತನ್ನ ಕೈಪಿಡಿಯುವೋಲ್ ಪಿಡಿಯಂ ಪಿರಿದಿರ್ದುದೊಂದಿಭಂ ॥೧೦೬೩

(ಚಂದ್ರಪ್ರಭಪುರಾಣಂ)

ನವನೀರೇಜಮನೊಟ್ಟಿಕೊಂಡು ವಿಕಟೋತ್ಕರ್ಷಸ್ರವಚ್ಛಂದನ ।
ದ್ರವದಿಂ ನಾಂದು ಕರಾಂಬುಶೀಕರದೆ ತನ್ನಂ ತೋಯ್ದು ಕರ್ಪೂರರೇ ॥
ಣುವನಾಂತೊಯ್ಯನೆ ನೆಮ್ಮಿ ಸಾಲತರುವಂ ಶ್ವಾಸಾನಿಲಪ್ಲುಷ್ಟಪ ।
ಲ್ಲವದಿಂ ಬೀಸಿಕೊಳುತ್ತುಮಿರ್ದುದು ವಿಯೋಗಮ್ಲಾನಮನ್ಯದ್ವಿಪಂ ॥೧೦೬೪

(ಕವಿಕುಂಜರಲೀಲಾವತಿ)

ಬೇನೆಯಿನಕ್ಷಿಗಳ್ ನಸುಮುಗುಳ್ದಿರೆ ಪಿಂತು ಕುಮುಂಗಿ ಜೋಲೆ ಪೇ।
ರಾನೆಯು ಕರ್ಣವಾಯುಬೆಮರಾರ್ಚಿಸೆ ತಾಯ್ಪಿಡಿ ನಿಡಿ ಹಸ್ತದಿಂ॥
ತಾನವಲಂಬಿಸಿರ್ಪ ವಟಭೂಜದೊಳೊಂದು ಕರೇಣು ಸೂಸಿಸು।
ತ್ತಾನಣುವಲ್ಲಿ ಮಾಡಿದುದೊ ಬೇಡರೊಳಂ ಕರುಣಾನುಭಾವಮಂ॥ ೧೦೬೫
(ಪುಷ್ಪದಂತಪುರಾಣಂ)

ಸರಿಯೆ ಝುಷಾಳಿಸಂಭ್ರಮಕರಂ ಮಕರಂ ಮಕರಂದರೇಣುಗಳ್।
ಪರೆಯೆ ಕಲಂಕೆ ಕಾಡೆ ಕಮಲಂ ಕಮಲಂ ಕಮಲಂ ಮಹೋರ್ಮಿ ಪೊ॥
ಣ್ಮಿರೆ ಪೊಣಮಟ್ಟಿಭಂ ಬಿನದದಿಂ ನದದಿಂ ನದದಿಂದ್ರಮಜ್ಜನಿ।
ಷ್ಟುರಮೆಗಿತ್ತಿಭಾಸಘನವಂ ಘನಮಂ ಘನವಂಶಜಾಲಮಂ ॥೧೦೬೬
(ಜಗನ್ನಾಥವಿಜಯಂ)

ಪರಿಪೂರ್ಣಗರ್ಭಭರದಿಂ।
ಬರಲಾರದೆ ನಿಂದೊಡೆಯ್ದೆ ನದಿಯಿಂ ಜಲಮಂ॥
ಕರಮೂಡಿ ಬಂದು ತೆಗೆತೆಗೆ।
ದಿರದೆಱೆದುದು ಕರದಿನೊಂದು ಕರಿಣಿಗಿಭೇಂದ್ರಂ ॥೧೦೬೭
(ಚಂದ್ರಪ್ರಭಪುರಾಣಂ)

ಜರನಜಗಂಮೊರಡಂ ಕೋಂ!
ಡೆರಡುಂ ನಿಗ್ರಮದೊಳಱಿದು ಕೋದೆತ್ತಿ ಮದ॥
ದ್ವಿರದಂ ಬೇಱೊಂದು ಭಯಂ।
ಕರಮಾದುದು ಕಣ್ಗೆ ಮೂಱು ಕೈಯಾನೆಯವೊಲ್ ॥೧೦೬೮
(ಮಲ್ಲಿನಾಥಪುರಾಣಂ)

ಇಂತು ಕಾವ್ಯಸಾರದೊಳ್
ಗಜವರ್ಣನಂ.

೪೨. ಶಬರ ವರ್ಣನೆ.

ಉಗುವೆಂಟುಂ ಮುಂವೆತ್ತಿ ಕಟ್ಟಿ ವಿರಸಂ ಸೀತ್ಕಾರಭೀರುಸ್ವನಂ।
ಮಿಗೆ ಬಾಯೊಳ್ ಬಿಡೆ ಕೈಯುಸಿಟ್ಟು ಸುಗಿವನ್ನಂ ಗರ್ಜಿಸುತ್ತೆಯ್ದೆ ಮು॥

ತ್ತುಗಳೆತ್ತಂ ಬಿದುವಿಂ ಸರಾಗ್ರರಸಬಿಂದುಶ್ರೇಣಿವೋಲ್ ಸೂಸೆ ೭ಂ।
ತಿಗಳಂ ಸೀೞ್ದು ಸಿಱುಂಬುಳಾಡಿದುದದೆಂದುತ್ಕಂಠಕಂಠೀರವಂ ॥೧೦೬೯

ಮದಗಜಗಂಧದುದ್ದೆಸಕೆ ಭೋಂಕನೆ ಲಂಘಿಸಿ ಚಂದ್ರಕಾಂತಕೂ।
ಟದ ಕೆಲದಲ್ಲಿ ನಿಂದಿಭದುದಗ್ರತನುಪ್ರತಿಬಿಂಬಮಂ ಮದೇ॥
ಭದ ತನುಗೆತ್ತು ಪಾಯ್ದು ಶಿಲೆಯೊಳ್ ಮೃತಮಾದುದಿಭದ್ವಿಷಂ ಬಿದು್ರಗಂ।
ಕಿದುದಿಭದಂತೆ ನಿರ್ಮಲರ ಸಂಗತಿ ಮಾೞ್ಕುಮಪಾಯನಾಶಮಂ ॥೧೦೭೦
(ಜಗನ್ನಾಥವಿಜಯಂ)

ಉಗಿಬಗಿಮಾಡುತ್ತು ಮದಾ।
ತ್ತಗಜಮನೆಸೆದತ್ತು ರಕ್ತಕೇಸರವಿಸರಂ॥
ನಗಮಸ್ತಕದೊಳ್ ಸಂಧ್ಯಾಂ।
ಶುಗಳಂ ರಂಜಿಸುವ ಚಂದ್ರನಂತೆ ಮೃಗೇಂದ್ರಂ ॥೧೦೭೧

ಚಂಡಪವಿದಂಡದಿಂದಾ।
ಖಂಡಲನೆರಡೆಱಕೆವೆಟ್ಟಮಂ ತೂಗುದವೋಲ್॥
ತುಂಡತುಲಾದುಱಿದಿಂ ಭೇ।
ರುಂಡಂ ತೂಗಿದುದು ಶರಭಮೆರಡಂ ನಭದೊಳ್ ॥೧೦೭೨
(ಮಲ್ಲಿನಾಥಪುರಾಣಂ)

ಗೞಿವೊಯ್ಯದ ಕಣ್ದೆಱೆಯದ।
ಕಿಱುಳಂ ತನ್ನೊಡೆಮ ತತ್ತಿಯಿಂ ಭೇರುಂಡಂ॥
ಪೊಱಮಡಲದೊಂದು ಶರಭಂ।
ಬಿಱುತೋಡಿತು ಸತ್ತ್ವಸಿಧಿಯು ಶೈಶವಮಿಱದೇ ॥೧೦೭೩
(ಜಗನ್ನಾಥವಿಜಯಂ)

ಭರದಿಂ ಲಂಘಿಸೆ ಗಂಧಸಿಂಧುರಶಿರೋಭಾಗಕ್ಕೆ ನಾಗಾರಿ ತ।
ಚ್ಚರಣಂ ಮುಟ್ಟಿತು ಮುಟ್ಟದೆಂಬವಸರಕ್ಕಾಕಸ್ಮಿಕಂ ಪಾಯ್ದು ಕೇ॥
ಸರಿಯಂ ಕೇಸುರಿಯಂತೆ ಪ್ರೋಯ್ದು ಶರಭಂ ಕೊಂದಿಕ್ಕೆ ಸಂಜೀವನಂ।
ದೊರೆಕೊಂಡತ್ತು ಗಜಾ ಗಜಕ್ಕೆ ವಿಪರೀತಂ ಕರ್ಮನಿರ್ಮಾಪಣಂ ॥೧೦೭೪
(ಮಲ್ಲಿನಾಥಪುರಾಣಂ)

ಮರದಿಂದಾಸರ್ಪನಂ ಹಸ್ತಿಯೆ ಪಿಡಿವುದುಮಾಸರ್ಪನಂ ಹಸ್ತಿಯುಂ ಕೇ |
ಸರಿ ಕೋಪಾಟೋಪದಿಂ ಪೊಯ್ದುಜ್ಜೆ ಪಿಡಿವುದುಮಾಸರ್ಪನಂ ಹಸ್ತಿಯುಂಕೇ ||
ಸರಿಯುಂ ಸಿಂಹಾರಿ ಪಾಯ್ದುರ್ವಿಸಿ ಪಿಡಿವುದುಮಾಸರ್ಪನಂ ಹಸ್ತಿಯುಂ ಕೇ |
ಸರಿಯುಂ ಸಿಂಹಾರಿಯುಂ ತುಂಡದೊಳೆ ಪಿಡಿದು ಪಾಱುತ್ತು ಭೇರುಂಡಜಾಗಳ್ ||
(ಜಗನ್ನಾಥವಿಜಯಂ)

ಪವವಿಲ್ ಕಟ್ಟಿನ ಗಣೆ ಪೊಸ |
ಪೊದೆ ಪೆಗಲೊಳ್ ಪುದಿದ ಕೊಂಬು ಬಡಿಕೋಲ್ ಬಲೆ ಪಾ ||
ಸದ ನಾಯ್ ಸಹಿತಂ ದೆಸೆದೆಸೆ |
ಗೊದವಿಸಿ ನಡೆತಂತು ಬೇಂಟೆಗಾಱರ ತಂಡಂ ||೧೦೩೬
(.....................) ?

ಪೊಸದ ನೇಣ್ಗಳಂ ಪೊಸೆದ ಜಾಲಮಂ ನೆಪ್ಪಿರೆ ಮಾಪ್ಪಿಕಲ್ಲಿಯುಂ |
ಕಾಸಿದ ಕಂಜಿಯುಂ ಸಮೆದ ಮಾರ್ಗಣಮುಂ ಗಱಿಗಟ್ಟುತಿರ್ಪ ಬಿ ||
ಲ್ಗೋಲುವ ಬಾಣಮುಂ ತಿರಪಿ ತಿರ್ದಿದ ಮಾರ್ತಿಱುವಂ ತೊಡರ್ಚೆ ನೋ |
ಳ್ಪ್ಪಸಹಸಕ್ರಿಯಾನನವನೇಚರರಿಂ ಬಗೆಗೊಂಡುದಾವನಂ || ೧೦೩೭
(ಜಗನ್ನಾಥವಿಜಯಂ)

ಪೊಸವೊದೆಗಟ್ಟಿನಂಬುಗಳ ಕುಪ್ಪೆಯುದಾವರಿಪಾಶ ಜಾಲಮುಂ |
ಪಸರಿಪ ಸೆಂಡುಕೋಲನುಡೆಗಟ್ಟಿನ ಪಿಲಿಗಳಂ ತರಂಗಮುಂ ||
ಪೊಸೆಯಿಪ ಬಿತ್ತಗಣ್ಣಿವಲೆಯುಂ ಸಲೆ ಕಟ್ಟುವ ಜಟ್ಟುಗೊಂಟುಮಂ |
ಬಸಿದ ಪುಳಿಂದಸಂಕುಳದ ಪೆಕ್ಕಣದಿಂದೆಸೆದತ್ತು ಪಕ್ಕಣಂ ||೧೦೩೮
(ಚಂದ್ರಪ್ರಭಪುರಾಣಂ)

ಕಟೋರನ್ನಿಂದಂ ವಿಧಾತ್ರಂ ಪಡೆದನಿವನನೆಂಬಂದದು ಕಾರ್ಕಶ್ಯದಿಂದಂ |
ಸಬರಂಗಂ ಕಣ್ಗೆಗುರ್ಬಂ ಪಡೆಯುಲಡವಿಯುಂ ಕೂಡೆ ಕಾಳಿಂದಿ ಸುತ್ತಂ ||
ಪರ್ಬಿತ್ತೆಂಬಂತೆ ಸಿಲೀತ್ಸಲರುಚಿರುಚಿರಶ್ಯಾಮದೆ ಹಾಂಶು ಪರ್ಬೆ |
ಲ್ಗೆರ್ಬಂ ಬಂದಂ ಪುಳಿಂದಪ್ರಕರಬಹಳಸೇನಾಪರೀತಂ ಕಿರಾತಂ ||೧೦೩೯
(ಕಾದಂಬರಿ)

ಪೊಸಗೋಲಂ ಗಱಿಗಟ್ಟುವಂ ಗರುಡಪಕ್ಷಚ್ಛೇದದಿಂ ತಿರ್ದಿಪಂ ।
ಪ್ರಸರದ್ದಂತಿಯ ದಂತದೊಳ್ ಹರಿಯ ದಂಷ್ಟ್ರಾಶ್ರೇಣಿಯಂ ಕಿೞ್ತಿತೆ ॥
ತ್ತಿಸುವಂ ಲಿಲೆಯೊಳರ್ಧಚಂದ್ರಶರಮಂ ಮಾಱ್ಪೀತ್ತಿಯಿಂದಣ್ಮಿ ದ ।
ಳ್ಳಿಸೆ ಸಿಂಹಿಂಸ ತನೇತ್ರರತ್ನಪತಿಶೋಕಾದ್ರಂದಕಂ ವಿಂಧ್ಯಕಂ ‖೧೦೮೦

ಜವುನಡೆದಾಪುಳಿಂದಿ ಪತಿಯಾಶುನ ಬೇಂಟೆಗೆ ಬೆರ್ಚಿ ಪೋಗೆ ಚಂ ।
ಡಿಯ ಮಱಿಯಂ ಮೃಗಾರಿ ಮುರವೈರಿಯ ಮೈಮಱಿಯಂ ಖಗೇಂದ್ರನು‖
ರ್ವಿಯ ಮಱಿಯಂ ಮಹಾಪ್ರಳಯದಾದಿವರಾಹನಿವದ್ಭುತಂ ದಿಶಾ ।
ಳಿಯ ಮಱಿಯಂ ಗಡಿನ್ನುಮವೆ ಪೊಕ್ಕುದಿರ್ದಪುವಷ್ಟದಂತಿಗಳ್ ‖೧೦೮೧

ಶಳಸೂಚಿಭಿನ್ನವಕ್ಷಂ ಕಿಟಿರದಲಿಖಿತಗ್ರೀವನಾಪೂಶಿಶಂಕಾವಿಳ ।
§ಚಿತ್ತೋದ್ದಿಷ್ಟಾನುತ್ಪ್ರಸ್ರವಣಸಮಯಸಂತ್ಯಾಪಿತೈಕಾಂಘ್ರಿವಕ್ತ್ರಂ‖
ಚಲ†ನಾಳಸ್ಪೃಷ್ಟನಿರ್ವಿವೃತವದನವಿನಿಷ್ಕ್ರಾಂತಜಿಹ್ವಾಪ್ರನಾಳಂ ।
ಪೊಳೆದೊಂದೇಂ ಬಂದುದೋ ಪೇಡನಬೞಿಪುೞಿಯೊಳ್ ಶ್ವಾನನೇತ್ರಾವಸಾನಂ‖
(ಅರ್ಧನೇಮಿಪುರಾಣಂ)

ಕಾಯಲೆ ವೇೞ್ಪುದು ಸಿಂಹನಿ ।
ಕಾಯಮನೆಂದಭಯದಾನಮಂ ಬೇಡುವ ಸಿಂ ‖
ಹಿಯ ರೂಢಮೆಂಬಿನಂ ಕಾ ‖
ಳೇಯಕನಿಕರಂಗಳೆಸೆದುವಾತನ ಕೆಲದೊಳ್ ‖೧೦೮೩
(ಕಾದಂಬರಿ)

ತುಡು ಕೋಲಂ ಹರಿಣಂಗೆ ಸಾಚರ್ಮ ಬಲೆಯಂ ಕೋಕಂಗೆ ನೀದಾಣ ಮಂ । ಬಿಡು ಪೆರ್ಬಂದಿಗೆ ನಾಯ ಬಾಯ ಮೊಲನಂ ಕೈಗುತ್ತಿ ಕೋಲ್ ಕಂಡಿಯೊಳ್ ‖ ಕೆಡಪುತ್ತೆಟ್ಟುಸು ಮೇಲೆ ಪಾಯ್ವ ಪುಲಿಯಂ ಪ್ರಲ್ಗಡೊಳಾಪ್ರೆ ಯೆತ್ತಿ ಪೇ । ‡ರಡು ಮೆಯ್ದಂಗೆಯೆೞ್ಚರಯ್ಯನಯ್ಯ ಸರಿದುಂ ಕಟ್ಟಿಟ್ಟ ಸಾರಂಗವಂ ‖೧೦೮೪ (. . . . .) ?

---

§ ಚಿಪ್ರದಾಣನತ್ಪ್ರಸ್ರವಣ. † ವಾ. ‡ ದಡಿ.

ಪರಿ ಬೆಂಬತ್ತೆಯ್ದು ನಾಯುಂ ಬಿಡು ನಡೆಯಿಸು ದೀವಂಗಳಂ ಪಾಶವಂ
ಪಾ | ಗುರೆಯುಂ ಬೀಸೆಂಕೆಗೊಂಡಾರ್ದಿಸು ಪ್ರೋರ್ದಿಱಿ ಕೊಲ್ಲೆಂಬ ಘೋ
ರಸ್ವನಂ ಪ್ರೊ | ಣ್ಮಿರೆ ವನ್ಯಪ್ರಾಣಿಗಳ್ಗಂತಕನ ಪಡೆಯೆ ದಾೞಿಟ್ಟವೋಲ್
ಬೇಡರಿರ್ದರ್ | ಪರುಷಾಕಾರರ್ ವನಾಂತಸ್ಥಿರಮೆ ಶಬಲಸ್ರಾಶವಾಯ್ತೆಂ
ಬಗುಬರ್ಗಿಂ ॥೧೦೮೫

ಕವುಳಪನಿಲ್ಲಿ ಬಯ್ತ್ತನೊಲವಿಂ ಕುಮುದೇಕ್ಷಣವಜ್ರನಂತವಿ |
ಮ್ರನುರನಚ್ಚಿಂಗಳನನುಚಿನ್ನ ಜಂಗಮನೀಳಪುತ್ರಿಕಾ ॥
ಸಮಿತಿಯುದೆಂಬಿನಿಂ ಮಿಸುಪ ಕಣ್ ಸುಲಿಪಲ್ಲರುಣಾಧರಂ ಸಕಾ |
ಳಮುತನುಲೇಖೆಯೊಪ್ಪಿರೆ ಪುಳಿಂದಿಯರಿರ್ದರದೊಂದು ತಾಣದೊಳ್ ॥೧೦೮೬

(ಜಗನ್ನಾಥವಿಜಯಂ)

ಅಲರ್ಗಣ್ ಪ್ರೊಂಗಿಸ ಲೋಳ್ವಾಸ್ ಪನಿವೊಗಂ ತೊಂಗಲ್ಗುರುಳ್ ಸೆಳ್ಳು
ಗುರ್ | ಸುಲಿಪಲ್ ಸೋರ್ಮುಡಿ ತೆಳ್ವಸಿರ್ ಪೆರ್ಮೊಸಲ್ ಪೊಂಬಾಳೆ ಪ
ಚ್ಚೋಲೆ ನಃ | ಜೂಲ ಪಣ್ಣಂ ತಿಳಯೆಣ್ಣೆಯೊಳ್ ಬೆರಸಿ ತೊಯ್ದಂತಪ್ಪ ನು
ಣ್ಗುರ್ಪೆ ಪೆ | ವೆರ್ಲೆ ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀ
ಪಾಲಕಂ ॥೧೦೮೭

(ಕವಿಕುಂಜರಲೀಲಾವತಿ) ?

ತಳಿರುಡೆ ಪುಲ್ಲ ಕಂಕಣಮಶೋಕೆಯ ಬಿಲ್ ಬಿಳಿಯುಂಬು ಕಾಡ ಪೂ |
ಗಳ ತಲೆಸುತ್ತು ಮಾಂದಳಿರ ಕೃಪ್ಪೆಡೆ ರಂಜಿಸೆ ಬೇಂಟೆಯಾಡೆ ಚಾ ॥
ಪಳಹರಿಣೀವಿಲೋಕನನುನಿಕರ್ಣಳಗೊಂಡಳೆನಲ್ಕೆ ಗಾಳುಗಣ್ |
ಪೊಳೆಯೆ ಪುಳಿಂದಿ ವೀರಸಿರಿಯುಂತಿರೆ ಬೆನ್ನನೆ ಬಂದಳೀಶನಾ ॥೧೦೮೮

(ಅರ್ಧನೇಮಿಪುರಾಣಂ)

ತೋರದ ಬಿದಿರ್ಮುತ್ತಿನ ಪೊಸ |
ಹಾರದ ಕೆಂಪಳಗರ್ಗಳುಡೆಯ ವನಚರಿಯೊರ್ವಳ್ ॥
ತಾರಾವಳಿಯಿಂ ನವಸಂ |
ಧ್ಯಾರಾಗದೊಳೆಸೆವ ಸಿರಿಯನನುಕರಿಸಿರ್ದಳ್ ॥೧೦೮೯

(ಜಗನ್ನಾಥವಿಜಯಂ)

ಎಣ್ಣೆಯೊಳರಸೇಱುಲ ತನಿ।
ವಣ್ಣಂ ನುಣ್ಣಿಸಿದನಬ್ಜಭವನೆಂಬಾ ವ್ಯೆ॥
ವಣ್ಣದ ಶಬರಿ ತನೂಲದ।
ತಣ್ಣೆಲರೊಳ್ ಕಣ್ಣ ಬೆಳಗೆ ಬೆಳಗಾಗಿರ್ದಳ್॥೧೯೦

(ವಂಶಸ್ಥವೃತ್ತಂ) (ಕವಿಕುಂಜರಲೀಲಾವತಿ)

ಎನಿತ್ತನಿತ್ತಂಬುಜಪತ್ರನೇತ್ರೆಯಾ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ॥
ಅನಿತ್ತನಿತ್ತಂ ವನದೊಳ್ ವನೇಚರಂ।
ತನತ್ತು ಬಿಲ್ಲಾನನನೆತ್ತೆ ಕೀಸುವಂ॥೧೯೧

(ಹರಿವಂಶಂ)

ತುಱುಗೆವೆಗಣ್ಣ ಕಾಂತಿ ಪೊಲಗಟ್ಟಲೆಯಂ ಬೆದಱಟ್ಟೆ ತೊಂಡೆವಾ।
ಯ್ದೆಱೆ ಕಿಸುಸಂಜೆವೀಱೆ ದಶನಾಂಶು ನವಾಮೃತಪೂರವೆಂಬಿನಂ॥
ಪ್ರೆಱವುಡೆ ಸಿಂಗವಾನೆ ಪುಲಿಪ್ರಲ್ಲೆ ನವಿಲ್ ಫಣಿ ತಮ್ಮ ವೈರಮಂ।
ಮಱೆದೊಡನಾಲಿಸಲ್ ಶಬರಿ ಪಾಡಿದಳಚ್ಯುತನಂಕಮಾಲೆಯಂ॥೧೯೨

(ಜಗನ್ನಾಥವಿಜಯಂ)

ರಾಗರಸಂ ಪೊನಲ್ವನಲನಟ್ಟುವಿನಂ ಕವಿತಂದು ತೊಯ್ದವೊಲ್।
ತೂಗುವ ಕೆಂದಳಿರ್ ತೊಲಗೆ ತುಂಬಿಯ ಬಣ್ಣದ ಮೆಯ್ಯ ಬಣ್ಣದಿಂ॥
ಕೋಗಿಲೆಯಂತೆ ಕಣ್ಗೆಸೆಯುತುಂ ಕಳಕಂಠಿಕೆ ಕೊಂಬನೇಱೆ ಕೊ।
ಯ್ವಾಗಳನಾರತಂ ಶಬರಿ ಪಾಡಿದಳಾಕನಿತಾವಿಳಾಸನೆರೆ॥೧೯೩

ಬೀಣೆಯು ದಂಡಿಗೆಯಂತಿರೆ।
ಮಾಣದೆ ಪೊಱೆವಳಗಳಂ ಸನಾಳಾಂಬುಜಮಂ॥
ಜಾಣಿಂದೆ ಪಿಡಿದು ಪಾಡಿದ।
ಳೇಣೀದೃಶೆ ಶಬರಿ ಸುಕರಕವಿಶೇಖರನಂ॥೧೯೪

ವನಚರಿ ಪೊಡೆ ಪೊಡರ್ದು ಸೊದೊರ್ಲೆದಾಲಿಸುತಿರ್ಪ ದಂತಿಯಂ ।
ವನಚರನೆಚ್ಚೊಡೆಯ್ದೆ ಬಿರಿದಾನೆಯ ಕುಂಭದಿನುನ್ನಮನ್ನಿಜ ॥
ಸ್ತನಭರಕುಂಭಮಂಡಲಕೆ ಸೋಲ್ತುದು ಸೇಸೆಯನಿಕ್ಕುವಂತೆ ಮು ।
ತ್ತಿನ ಸರಿ ಸೋರೆ ಹಾರರಚನಾತುರೆಯಾದಳವಳ್ ವಿಳಾಸದಿಂ ॥೧೯೫

ತಳಿರ ‡ಸನಂಗ ಪೂತ ಸೆಳೆಗೊಂಬಿನ ಬಿಲ್ ನವಪುಲ್ಲಕಂಕಣಂ ।
ಬಿಳಿಮುಸಿಯಂಬು ಮಾವಳಿರ ಕೈಪ್ರೊಡೆ ತೋರಮುಱುಂಬಿನೊಳ್ ತೆಱಂ ॥
ಬೊಳೆವಲ*ಗೊಂಚಲೊಪ್ಪೆ ತನು ನೀಲಶಲಾಕೆವೊಲಾಗೆ ಕಾಮನಂ ।
ತಳವಡೆ ಬಂದಳಂತು ಮೊಲೆಬಾರದ ಬಾಲೆ ಪುಳಿಂದಲೀಲೆಯಿಂ ॥೧೯೬

(ಕವಿಕುಂಜರಲೀಲಾವತಿ)

ಪೆರ್ಮರನನಡ*ರ್ವ ವನಲತೆ ।
ಕಾರ್ಮುಗಿಲೊಳ್ ತಳ್ತು ಮಿಂಚು ವಿಂಧ್ಯಾಚಲಮಂ ॥
ನೆರ್ಮಿದ ನರ್ಮದೆಯೆನಿಸಿದ ।
ಳೆರ್ಮೆಯೆ ವನಚರನನಪ್ಪಿ ವನಚರಿಯೊರ್ಪಳ್ ॥೧೯೭

(..................)

ಇಂತು ಕಾವ್ಯಸಾರದೊಳ್
ಶಬರವರ್ಣನಂ

೪೩ ಬೇಂಟೆಯ ವರ್ಣನೆ

ಹರಿಣಸನಾರ್ದಿಸಲ್ಕೆ ಶಬರಂ ¶ಬರಲಾಪ್ರಿಯಕಾಂತೆ †ಕಂಡು ಬಿ ।
ರ್ದರಲೆಯನೀಕ್ಷಿಸುತ್ತುಮಿರಲಾಕೆಯ ಕೇಕರಕಾಂತಿಜಾಲದಿಂ ॥
ಪರಿವೃತಮಾಗಿ ತನ್ಮೃಗಮದೇಂ ಪಡೆದತ್ತೊ ಮೃಗಾಂಕಮಂಡಲಂ ।
ಧರೆಗವತೀರ್ಣಮಾದುದೆನಿಪ್ಪೆಂಪಭಿಶಂಕೆಯ §ನೊಂದು ತಾಣದೊಳ್ ॥೧೯೮

ತೊರೆವ ಕುಚಂಗಳಿಂದೆ ಕೊಣಸಂ ನಸೆಯಿಂ ಮೃಗಮಂ ಕುರಂಗಿ ಸಾ ।
ರ್ದರಲೆಡೆಗೊಂಡು ಭಲ್ಲದಿನೆರಲ್ಕಡಿಯಾಗೆ ಕಿರಾತನೆಚ್ಚೊಡಂ ॥

‡ ತರಂ. ¶ ಶಬರ. † ಬಂದು. § ಸುಟುವಾಡುಗುಂ.

ತರಿಸದೆ ಪುಲ್ಲೆ ಸಾರ್ಚೆ §ಮಱಿಯಂ ಮೊಲೆಯಂ ನೆರೆದೋಣನಂ ಬೞಿ ।
ಕ್ಕೆರಡುಡಿಯಾಯ್ತು ಕೇವಲಮೆ ದೇಹಿಗೆ ಸಂಸೃತಿಮೋಹಬಂಧನಂ ॥೧೦೯೯

(ಜಗನ್ನಾಥವಿಜಯಂ)

ಹರಿಣಿಯನೆಚ್ಚು ತತ್ಪ್ರಿಯಕುರಂಗನನಾರ್ದಿಸಲೆಂದು ಬಾಣಮಂ ।
ತಿರುವಿನೊಳಟ್ಟಿ ತೀವಿ ತೆಗೆವನ್ನೆಗಮಂಗಜನಸ್ತ್ರಘಾತದಿಂ ॥
ದೆರಲೆ ನೆಲಕ್ಕೆ ಬೀೞೆ ಮಝುಭಾಪ್ರಪಕಾರಿಯೆನುತ್ತೆ ಬಿಲ್ಲುಮಂ ।
ಸರಲುಮನೊಂದೆ ಕೈವಿಡಿದು ಬಣ್ಣಿಸಿದಂ ಸ್ಮರನಂ ವನೇಚರಂ ॥೧೧೦೦

ಮೃಗಮೆರಡೊಂದೆ ತಾಣದಿನಿರುತ್ತಿರಲಾಬಿಱುಬಿಲ್ಲ ನಾರಿಯುಂ ।
ತೆಗೆದು ಪುಳಿಂದನಾರ್ದು ಬಿಡೆ ಕೂರ್ಗಣೆಯೊಂದೆ ಪೞನುರ್ಚಿತೆಂದು ತೊ ॥
ಟ್ಟಗೆ ಹರಿಣಂ ನೆಲಕ್ಕೆ ಕೆಡೆಯಲ್ಕದನಾಗಳೆ ಕಂಡು ಬೇಗದಿಂ ।
ದಗಿದೆೞಗಿತ್ತು ಪುಲ್ಲೆ ಭಲರೇ ಎನುತುಂ ಪೊಗೞ್ದಂ ವನೇಚರಂ ॥೧೧೦೧

ಮಸಕಂಬೆತ್ತು ಪುಳಿಂದನಾರ್ದು ತೆಗೆದಾಗಳ್ ಬೋಳಯಂಬಿಂದಿಸಲ್ ।
ಬಸಿಱಿಂದಂ ಮಱಿ ದೊಪ್ಪನುರ್ವರೆಗೆ ಬೀೞ್ತಂದು ಗೋಣ್ ಕೊಂಕಿ ವಾ॥
ಸಿಸುತುಂ ಮೋಱಯನಿಟ್ಟು ಮೋಹದೆ ಮೞಂಕಾಡುತ್ತೆ ಮತ್ತಂತುಝೊಂ।
ಪಿಸುತುಂ ಬಿೞ್ದೞುತ್ತೆ ಪುಲ್ಲೆ ಕಳೆದತ್ತಾಭಾವದಿಂ ಜೀವಮಂ ॥೧೧೦೨

ಕರಡಿಯನೆಚ್ಚೊಡುರ್ಚೆ ಸರಲುರ್ಕಿನ ಪಂದಿಯನುರ್ಚಿ ಭೀಕರೋ ।
ತ್ಕರತರಮಪ್ಪ ಪೆರ್ಬುಲಿಯನುರ್ಚಿದೊಡಂತವು ರೌದ್ರರೂಪದಿಂ ॥
ದಿರದಱಿಯುಟ್ಟೆ ಮೆಲ್ಲನೆ ತೞುಂಬಿದೊಡೊಯ್ಯನೆ ನೋಣನುರ್ಚಿಯಾ ।
ಕರಡಿಯನಾವರಾಹನುಮನಾಪುಲಿಯುಂ ತಿವಿದಂ ವನೇಚರಂ ॥ ೧೧೦೩

(...............)

ಇದಿರೊಳ್ ಗರ್ಜಿಸಿ ಪುಲಿ ನಿಲೆ ।
ಬೆದಱಿ ಕರಂ ಶಬರಿ ಬೞಿಯನಪ್ಪಲೊಡಂ ಕೋ ॥
ಪದಿನಲರ್ದುದೊಂದು ಕಣ್ ರಾ ।
ಗದೆ ಮುಗುಳ್ದುದದೊಂದು ಕಣ್ ವನೇಚರಪತಿಯಾ ॥

(ಚಂದ್ರಪ್ರಭಪುರಾಣಂ)

§ ಮಗನಂ.

ಬಿದಿರ ಸಿಡುಂಬಿನೊಳ್ ಗಜಱಿ ಗರ್ಜಿಸಿ ಪೆರ್ಬುಲಿ ಪಾಯೆ ಕೈದು$ ಗೊ।
ಳ್ಳದೆ ಕೆಲಸಾರ್ದು ಮೆಯ್ಯೊಣರ್ದು* ಬಂಚಿಸಿ ಗಂಟಲನೊತ್ತಿ ಕಿರ್ಬಸಿಱ್ ॥
ತಿದಿಯುವೊಲಾಗೆ ಕಣ್ತುಮುೞ್ಗೆ ಬಿರ್ದು ಮುಸುಂಬಿ ಜವಂಗೆ ಬಿರ್ದನಿ।
ಕ್ಕಿದನುಸಿರಿಕ್ಕಲೀಯದುಸಿರಿಕ್ಕುವವೊಲ್ ಶಬರಂ ಮಹಾಬಳಂ ॥೧೧೦೭

(ಮಲ್ಲಿನಾಥಪುರಾಣಂ)

ವೆಱೆಯಿಂದಂ ಪೊಱಮಟ್ಟು ಮೈಮುಱಿದು ಕಿಗ್ಗಣ್ಣಿಂದೆ ಕಂಡಾಳ್ಗಳಂ।
ನೆಲನಂ ಗರ್ಜಿಸಿ ಪೊಯ್ದು ಬಾಯ್ದೆಱೆದು ಪುರ್ಬಿಕ್ಕುತ್ತೆ §ವಾಲಾಗ್ರದಿಂ॥
ಮುಳಿಸಿಂ ದಾಡೆಗಳಂ ನಿಮಿರ್ಚಿ ಸೆಣೆಯುತ್ತುಂ ಕೋಪದಿಂ ಪೊಱಪಟೆ।
ಬುಱಿಲಿಯಂ ದಂಡೆಯೊಳಾಂತು ನಂಕಿ ತಿವಿದಂ ವಿಕ್ರಾಂತಕಂಠೀರವಂ ॥

ಭರದಿಂದುರ್ವಿದ ನಾಯ್ಗಳಪ್ಪಳಿಸೆ ಬಿಲ್ಲಂ ಭಿಲ್ಲನಾಕೃಷ್ಟಿಗೆ।
ಯ್ದಿರೆ ಕಂಡಳ್ಕಿ ಕುನುಂಗಿ ಪ್ರೋರ್ದಿ ಮೊಳೆಯಂ ಸಂರಂಭದಿಂ ಜೊಪ್ಪಗೊಂ ॥
ಡಿರುತುಂ ಗರ್ಜಿಸಿ ದಾಡೆಗುಟ್ಟಿದುದು ಧಾತ್ರೀಭೀಕರಂ ವಿಕ್ರಮಾ।
ಕರಮುದ್ವ್ಯಾಕುಳಕೇಕರಂ ಪೃಥುಕಲಾಲಾಶೀಕರಂ ಸೂಕರಂ ॥೧೧೦೮

ಹವನಂ ಕೈಕೊಂಡು ಸೊಪ್ಪಂ ಬೆದಕಿ ಸೊವಡನಾರಯ್ಯುತ್ತುಂ ನಿಂದು ಮೇಲಿ। ಕ್ಕಿದ ನಾಯಂ ಕಂಡು ಬೆಂಬತ್ತುವ ಬಿರುದಿನ ಜಂಘಾಳರಂ ಮಿಕ್ಕು ಪೆರ್ದ। ಳ್ಳದಿಂಬಂ ಪೊಕ್ಕು ನಾನಲ್ಗೆ ಸಱಿ ಹೊನಲೊಳಂಡೈಸಿ ನಿಂದಿರ್ದುದು ಚ್ಚಂಡದಡಪ್ರೋದ್ಭಿನ್ನಗರ್ಜದ್ಘುಳುಘುಳುನಿನದಂ ದೀರ್ಘದೇಹಂ ವರಾಹಂ॥

(...............)?

ಬಱಿಸುತ್ತುಂ ಗ್ರಾಮಕೋಣಂಗಳೊಳವಯವಮಂ ಕಂಡು ಕಾಡಾನೆಯಂ ಕೇ। ‡ಕರಿಸುತ್ತುಂ ಕಣ್ಗಳಂ ತಾಗುವ ಬಿಸುಗದಿರಂ ಪ್ರೇಯ್ಯುತ್ತುಂ ಕೋಪದಿಂ ಘ॥ ರ್ಘರಿಸುತ್ತುಂ ಗ್ರೀಷ್ಮದೊಳ್ ಕೊಟ್ಗೆ ಸಱಿನಱಿಸುತ್ತುಂ ಪೋಗುತಿರ್ದತ್ತು ದಂಷ್ಟ್ರಾ। ಕುರಘಾತನ್ಯಸ್ತಮುಸ್ತಾಕ್ಷತಸುರಭಿತದಂಷ್ಟ್ರಾಪರೋಹಂ ವರಾಹಂ ॥೧೧೦೯

$ ಕೈಯುದೆ. § ಕೋಪಾ ‡ ಸಂ.

ವನಗಜಮೊಕ್ಕನ್ನೋಲ್ ಮದದ ಕೊೞ್ಗೆಸಱೊಳ್ ಕೆಸಱಾಟಮಾಡಿ ಸೊ ।
ಕ್ಕಿನ ಸೊವಡಿಂಗೆ ಮುತ್ತಿ ಮಱುಂಬಿಗಳಂಬಿಸೆ ರೋಮವಿಕ್ಕಿ ಬಿ ॥
ಕ್ಕನೆ ಬಿರಿನಂತೆ ಬಂದ ಬಲದೊಳ್ ಪೆಳರ್ವಟ್ಟು ಮದಕ್ಕೆ ಬಂದ ಕಂ ।
ಪಿನ ಕಳಭಂಬೊಲಿರ್ದುದತಿದರ್ಪರಸಾಕರನೊಂದು ಸೂಕರಂ ॥೧೧೧೦
(ಅರ್ಧನೇಮಿಪುರಾಣಂ)

ಬರಿಗಂಡಂ ಪಿಣಿಲೇಱಿ ರೋಮಮುಮುದಿರ್ದಿರ್ಬೆನ್ನಾಗೆ ಮುಂಗಾಲಗ ।
ಲ್ತಿರೆ ಬಿಕ್ಕುಬ್ಬೆ ಮೊಗಂ ಕರಂ ಪೆಗಲ ಬಿಣ್ಪಿಂ ಜೋಲ್ದು ಬಾಲಂ ಮುಱಿಂ ॥
ಕಿರೆ ಬಂಬಲ್ಗಡಿವಾ ಪೊದಲ್ವುಗಸೆ ಪೂಗೊಂಬೊಪ್ಪೆ ಕೋಱುಟ್ಟೆ ಪೆ ।
ನೆರ್ದರೆ ಸೂಸುತ್ತಿರೆ ಭೀಕರಂ ಸೊಗಯಿಸಿತ್ತುತ್ಕೀಕರಂ ಸೂಕರಂ ॥೧೧೧೧
(ಚಂದ್ರಪ್ರಭಪುರಾಣಂ)

ಮಿಱುಗುವ ದಾಡೆಯಿಂದಗೆದು ಪೆರ್ವಱಿಯಂ ಕರದಿಂದಮೆತ್ತುತುಂ ।
ತುಱುತುಱುತಿಂಬ ಕಂದರಮನೊತ್ತರಗೊಂಡು ಮಹಾಮಹೀಜದೊಳ್ ॥
ತಱತಱನಾಗಿ ಮಾಱೊಱಸುತಂ ಮಲೆಯುತ್ತೊಲೆಯುತ್ತೆ ಸುತ್ತಿ ಕೈ ।
ಪಱಿದ ಗಜೇಂದ್ರನಂತೆ ಬರುತಿರ್ದುದು ಭೀಕರನೊಂದು ಸೂಕರಂ ॥೧೧೧೨

ಕೀಲಿಸೆ ಕಂಧರದೊಳ್ ಭೂ ।
ಪಾಲಕನಿಡೆ ನೊಂದ ಪಂದಿ ತಿರುಗುವ ಪದದೊಳ್ ॥
† ಕೋಲಿಂದಾಡುವ ತಿಗುರಿಯು ।
ವೋಲಂತಿರೆ ತೋಱಿತಿಟ್ಟ ತನು ಕೆಡೆವಿನೆಗಂ ॥೧೧೧೩

ತುಂಗಗಿರಿಶಿಖರದಿಂದಂ ।
ಲಂಗಿಸಿ ಶೂದ್ರಕನ ಪೊಳೆವ ಸುರಿಗೆಯ ಮೊನೆಯೊಳ್ ॥
ಪೊಂಗಿ ಸೊಡರ್ಗುಡಿಯ ಮೇಲೆ ಪ ।
ತಂಗಂ ಪಾಯ್ವಂತೆ ಪಾಯ್ದು ಬಿರ್ದುದು ಸಿಂಗಂ ॥೧೧೧೪
(ಶೂದ್ರಕಂ)

ಉಗುರ್ವೊಯ್ಲೀತನ ಮೆಯ್ಯೊಳೀಪುಲಿಯ ಪೊಯ್ಲಿಂದಾದುವೆಂದೀಪ
ನೊಳ್ । ಬಗೆವಂತನ್ಯವಧೂರತೋತ್ಸವನಖಾಂಕಾನೀಕಮಂ ವಂಚಿಪು ॥

† ಕೇವಲಿಪೂಡುವತಿಗುರಿಯಕೋ.

ಜ್ಜುಗದಿಂದಂ ಪಿಡಿದೊಂದು ಪೆರ್ಬುಲಿಯನೆರ್ವರ್ ಕಕ್ಷದಿಂದೊತ್ತಿ ತ।
ನ್ನ ಗೃಹಕ್ಕೆೞ್ತರುತಿರ್ದನೊಂದೆಡೆಯೊಳುದ್ಯದ್ಧೀವರಂ ಧೀವರಂ ॥೧೧೧೫

(ಜಗನ್ನಾಥವಿಜಯಂ)

ಕರಿದಂತಂಗಳನಾಂತು ಪೀಲಿವೊಱೆಯಂ ತಳ್ಕೈಸಿ ಗಂಧೇಭಬಂ।
ಧುರಮುಕ್ತಾಫಲಭಾರಮಂ ತಳೆದು ಮಾಂಸವ್ರಾತಮಂ ಪೊತ್ತು ಕೇ॥
ಸರಿಚರ್ಮವ್ರಜಮಂ ತೆರಳ್ಚಿ ಚಮರೀವಾಲಂಗಳಂ ತಾಳ್ದಿ ಬಂ।
ದರನೇಕರ್ ಬೞಿಸಂದು ಕಾಡೆಡೆಯನಂ ಕಾಂತಾರದೊಳ್ ಲುಬ್ಧಕರ್ ॥೧೧೧೬

(ಕಾದಂಬರಿ)

ಇಂತು ಕಾವ್ಯಸಾರದೊಳ್
ಬೇಂಟೆಯ ವರ್ಣನಂ.

೪೪ ತಪೋವನವರ್ಣನೆ

ಅತಿಥಿಯನಾದರಿಪ್ಪ ಪಿತೃದೈವಮನರ್ಚಿಪ ಧರ್ಮಶಾಸ್ತ್ರಸಂ।
ಗತಿಗಳೊಳಿರ್ಪ ಯಜ್ಞವಿಧಿವೇಳ್ವ§ಪುರಾಣಮನೋದುವಾಗಮ॥
ಪ್ರತತಿಗಳಂ ವಿಚಾರಿಸುವ ತತ್ತ್ವನಿರೀಕ್ಷಣೆಗೆಯ್ವ ಯೋಗದ।
ನ್ನತಿಕೆಯನಪ್ಪುಕೆಯ್ವ ಮುನಿ‡ ಸಂಗದಿನೊಪ್ಪುಗುಮಾತಪೋವನಂ ॥೧೧೧೭

(ಕಾದಂಬರಿ)

ಪೊಕ್ಕು ಕುಟೀರಮಂ ಕೆದಱಿ ಪುಸ್ತಕಮಂ ಮಸಿಯಕ್ಕರಂಗಳಂ।
ನೆಕ್ಕಿ ಬಿಸುಟ್ಟು ಬೊಕ್ಕಣದ ಬೂದಿಯನುಣ್ಪೆನುತೂದಿ ಮೂಗಿನೊಳ್॥
ಪೊಕ್ಕೊಡೆ ಸೀಂತು ಮಾಣ್ದಿರದೆ ಪಾಯ್ದವಲಂಬಿಪ ಕೊಂಬನೇಱೆ ಪು।
ಬ್ಬಿಕ್ಕುವ ಮರ್ಕಟಂ ನಗದ ತಾಪಸರಂ ನಗಿಸಿತ್ತರಣ್ಯದೊಳ್ ॥೧೧೧೮

(...............)?

ಎಡ್ಡವೆನಲಿಂಡೆಗಟ್ಟುವ।
ಗಡ್ಡುಗೆಗುಡುವೆಡೆಗೆ ನೀರನಡಕುವ ಫಲಮಂ॥
ಬಡ್ಡಿಸಿ ನೀಡುವ ಮೇಡೆಯ।
ಗೊಡ್ಡಾಟದ ಮುಸುಗಳೆಸೆದುವಾಮುನಿಗೃಹದೊಳ್ ॥೧೧೧೯

(ಜಗನ್ನಾಥವಿಜಯಂ)

---

§ ಪುರಾಣವ ಕೇಳ್ವ. ‡ ಸಂಘ.

ಮನನುಂ ಮುಟ್ಟಿಸಿ ಮಧ್ಯಂದಿನದ ಬಿಸಿಲೆ ಬೆಳ್ದಂಗಳಾಗೆ ತನ್ನಿಂ ।
ತನುವಂ ಬೇರ್ಕೆಯ್ದು ಬಾಹ್ಯೇಂದ್ರಿಯಮನುಡುಗಿ ಕೈಯಿಕ್ಕಿ ನಿರ್ವಾಣಸಾ
ಮ್ರಾಜ್ಯನಿವಾಸಕ್ಕೊರ್ವನಂತರ್ಮುಖನಭಿಮುಖನಾದಿತ್ಯಬಿಂಬಕ್ಕೆ ಯೋ
ಗೀಂದ್ರನತಂಪ್ರಂ ನಿರ್ನಿಮೇಷಂ ನಗನಿಕಟಹಟಪ್ರತ್ನಕೂಟಂಬೊಲಿರ್ದಂ ॥
(ರಾಮಚಂದ್ರಚರಿತಪುರಾಣಂ)

ಉಲಿವ ಮಯೂತರಂಗಿಣಿಯ ಪಾವಸೆ ಕರ್ಬುರಕಾಯದೀಪಕ ।
ಜ್ಜಲಮನುರ್ಪ್ಪಿಕೊಂಡಸಮಲಕ್ಷ್ಮಿಯ ಮೆಯ್ಯ ಮೃಗೋದ್ಭವಂ ತಪೋ ॥
ನಲನಪಧೂಮಲೇಖೆ ಧೃತಿಪರ್ವತಲಗ್ನಘನಾಳಿ ಪಾಱಿ ಪೋ ।
ಗಲೆ ಪೊಱಮಟ್ಟ ಪಾಪಮೆನಿಸಿತ್ತು ಮಲಂ ಮಲಧಾರಿದೇವನಾ ॥೧೧೨॥
(ಅರ್ಧನೇಮಿಪುರಾಣಂ)

ಕೃತಪರ್ಯಂಕಾಸನಂ ಸುಸದೆ ನಿಲೆ ಕರಮುತ್ತಾನಕಂ ಸ್ವಸ್ತಿಕಂ ನಾ ।
ಭಿತಟನ್ಯಸ್ತಂ ಬೆಡಂಗಾಗಿರೆ ನಯನಯುಗಂ ನಿಶ್ಚಳಧ್ಯಾನಮುದ್ರಾಂ ॥
ಕಿತಮಾನಂ ಚೆಲ್ವನಾಲಿಂಗಿಸೆ ವಿಶದಶಶಿಗ್ರಾವಸಂಸಿದ್ಧಸಿದ್ಧ ।
ಪ್ರತಿಮಂ ನಿಷ್ಕಂಪನಿರ್ದಂ ಯತಿಪತಿ ಪರಮಧ್ಯಾನಸಂಯೋಗಯೋಗಂ ॥
(ಚಂದ್ರಪ್ರಭಪುರಾಣಂ)

ಇಂತು ಕಾವ್ಯಸಾರದೊಳ್
ತಪೋವನವರ್ಣನಂ

೪೬ ವೈರಾಗ್ಯ ವರ್ಣನೆ.

ಅಱಿವೆಣ್ಣಾದೊಡಮೊಂದೆರಡ್ದಿವಸಮೊಂದಾಗಿರ್ದನಂ §ನಲ್ಲನಂ ।
ಮಱೆದಂಮನ್ಯರೊಳಾಸೆಗೆಯ್ವಳಮಳಂ ನಿರ್ವ್ಯಾಕುಳಂ ಪೊಲ್ಲಿವಳ್ ॥
ಪೆಱಗಂಜಳ್ ಭರತಾದಿಗಳ್ ಪಲವು ಕಾಲಂ ತನ್ನೊಳೋತ್ತಿರ್ದವರ್ ।
ಕಱಿದಂದಾಕ್ಷಣದೊಳ್ ಧರಾರಮಣಿ ಮತ್ತೊರ್ವಂಗೆ ಪುರ್ಬಿಕ್ಕುವಳ್ ॥೧೧೩॥
(ರಾಮಚಂದ್ರಚರಿತಪುರಾಣಂ)

ಕನಕಾಭಿಧಾನವೆಸರಿಂ ।
ಜನಿಯಿಪುದುನ್ಮತ್ತವೃತ್ತಿಯುಂ ಮತ್ತೂರಂ ॥

§ ನಂಟು.

ಕನಕಮೆ ತಾಂ ತತ್ಕ್ಷಣದೊಳ್ ।
ಜನಿಯಿಪುದಚ್ಚರಿಯೆ ಜನದ ಮನದೊಳ್ ಮದಮಂ ॥೧೧೨೪

ನೆರೆವುದಗಲ್ವುದರ್ಕೆ ಜನನಂ ಮರಣಕ್ಕೆ ವಿನೂತಯೌವನಂ ।
ಜರೆಗೆ ಧನಂ ದರಿದ್ರತೆಗೆ ನಲ್ಮೆ ವಿರಾಗಪಥಕ್ಕೆ ಸತ್ಸುಖೋ ॥
ತ್ಕರಮಸುಖಕ್ಕೆ ಕಾರಣಮಿದೆಂದಱಿದುಂ ಭವಸಿದ್ಧಪಂಜರೋ ।
ದರಗತರೇಕೆ ಚಿಂತಿಸುವರೇಕೆ ಪಲಂಬುವರೇಕೆ ನೊಂದಪರೋ ॥೧೧೨೫

(...............) ?

ಜವನೇನಚ್ಚುಮೆವಟ್ಟನೇ ಪರಿದು ಮೇಣ್ ಕಾಲಂ ಜವಂಗೆಟ್ಟನೇ ।
ಕಿವಿ ಕಣ್ ನಾಲಗೆ ಮೂಗು ಮೆಯ್ ಜವಜವಕ್ಕೇಂ ಸಲ್ಲವೇ ಯೌವನಂ ॥
ತನದೇ ಕುತ್ತದ ಬಿತ್ತನೇಂ ಪುದಿದರೇ ಕೇಡಿಂಗೆ ಕೇಡಾಯ್ತೆ ಮಾ ।
ನವರೇನೆಂದು ಜಡಾತ್ಮರೈಹಿಕಸುಖವ್ಯಾಮೋಹಮಂ ಮಾಡುವರ್ ॥೧೧೨೬

(ಮಲ್ಲಿನಾಥಪುರಾಣಂ)

ಪೊಲೆ ಮುಳಿಸೆಂಬುದಾಮುಳಿಸು ಪುಟ್ಟಿದ ಪೊತ್ತಱೊಳಾವನಾದೊಡಂ ।
ಪೊಲೆಯನೆ ಪಾಪಹೇತು ಮುಳಿಸಲ್ಲದೆ ಪೇೞ್ ಪೆಱತುಂಟೆ ಕೋಪದಿಂ ॥
ಕೊಲೆ ದೊರೆಕೊಳ್ಗುಮಾಕೊಲೆಯೆ ಪಾತಕಮೆಂಬುದು ಪುಣ್ಯಮೆಂಬುದಾ ।
ಕೊಲೆಪೊಲೆ ಪೂರ್ವದಿರ್ಪಿರವೆ ನೀಮಱಿದುಂ ತೊಱೆಯಿಂ ವಿರೋಧಮಂ ॥

(ರಾಮಚಂದ್ರಚರಿತಪುರಾಣಂ)

ಪರಸತಿಗಾಟಿಸಂಗೆ ಸಿರಿಯುಂ ಜಸಮುಂ ಪರಮಾಯುಮೇಳ್ಗೆಯುಂ ।
ಕರಿತುರಗಾಳಿಯುಂ ರಥಪದಾತಿಯುಮೊಪ್ಪುವ ಕೋಶದುರ್ಗಮುಂ ॥
ಧರಣಿಯುಮೊಳ್ಪುವೆತ್ತ ಕುಲಮುಂ ಚಲಮುಂ ವರಚಕ್ರರತ್ನಮುಂ ।
ಧುರದುರುವೀರಮುಂ ಕಿಡದೆ ನಿಲ್ವುದೆ ತಾಂ ದಶಕಂಠನಾದೊಡಂ ॥೧೧೨೮

ತೊತ್ತಿನ ಬೇಂಟಮೇಕೆ ಸುಡು ಮೈದೊಳೆಯುಟ್ಟುದು ಚಂಪಕ್ಕೈಯು
ಗುರ್ । ಪತ್ತಿದ ಗಂಜಣಂ ಪಡಿಗದಂಬುಲವಾಯ್ ಪಱಿಸೆತ್ತ ಕಣ್ಣ ಪು ॥

ಣ್ಣಿತ್ತಿದ ಬೆನ್ನ ಬಾಸುಳುದೆಗಟ್ಟನ ತಾಡಿನ ರೊಟ್ಟಿ ಸಿಂಬೆ ತಾಂ ।
ಪಿತ್ತಿಲ ತಿಪ್ಪೆ ಪಚ್ಚವನೆ ಚೀ ಅದನಪ್ಪುವರೆಂತು ಗಾವಿಲರ್ ॥೧೧೨

ಮೊಲೆಯುಂ ಪೊಂಗೊಡಸೆಂದು ತಜ್ಜಘನಮುಂ ಮತ್ತೇಭಸತ್ಕುಂಭಮೆಂ ।
ದಲರಂಪಕ್ಷಿಯುನಿಂದುವೆಂದು ಪೊಗಮುಂ ಮೆಯ್ಯುಂ ಲಸದ್ವಲ್ಲಿಯೆಂ ॥
ದೆಲೆ ನೀಂ ಸೊಲ್ಲಬಲಾಂಗಮುಂ ಶುಭಗುಣೋದ್ಯದ್ವಸ್ತುಗಳ್ಮಾಡಿ ಕೊಂ ।
ಡೊಲೆವೈ ಜೀವನೆ ಪೇಟನಂಗಮುದದಿಂದೇಂ ಸೊರ್ಕಿದೈ ಮೊಕ್ಕಳಂ ॥೧೧೩

(..................)?

ಮೃಡಸುತನಂತೆ ದಂತಹತಿ ಪೊರ್ದದೆ ಶೂದ್ರಕನಂತೆ ಶಕ್ತಿಯುಂ ।
ಕಿಡಿಸದೆ ವಾರ್ಧಿಯಂತೆ ತೆರೆಯೇಱದೆ ಕೋಡಗವಂತೆ ಶಾಖೆಯೊಳ್ ॥
ನಡೆಯದೆ ಪೊಟ್ಟೆವೋದ ಮರದಂತೆ ಕರಂ ನರೆಯೇಱದಿಟ್ಟ ಮು ।
ಪ್ಪಡಸದ ಮುನ್ನಮೇಕೆ ಮನುಜರ್ ಮುಱಿದಿಕ್ಕರೊ ಮೋಹನುಲ್ಲನಂ ॥

(ಮಲ್ಲಿನಾಥಪುರಾಣಂ)

ಕರಕಾಱಂಬೊಲಡರ್ದ ಮುಪ್ಪಡಸೆ ಬೇಗಂ ಬಂದು ಕೈಕಾಲ್ಗಳಂ ।
ಸೆರೆಯೆಂಬಗ್ಗದ ಪಗ್ಗದಿಂ ಬಿಗಿದು ಗಂಡಂ ನೋಡೆ ನೋಡಲ್ಜವಂ ॥
ಗಿರದುಯಪ್ಪಾಗಳೆ ಮಾಱಲೆಂದು ತಲೆಯೊಳ್ ಪುಲ್ಗಟ್ಟಿದಂತಿರ್ದ ಬೆ ।
ಳ್ನರೆಯುಂ ಕಂಡಕಟೇಕೆ ಮಾಡುವನೊ ಮತ್ತಂ ಮಾನವಂ ಮಾನವಂ ॥

(ಧರ್ಮನಾಥಪುರಾಣಂ)

—ವೃದ್ಧವರ್ಣನಂ—

ಸುದತಿಯರಾನನಾಂಬುಜವನಕ್ಕೆ ಹಿಮಂ ನಯನೋತ್ಪಲಕ್ಕೆ ಘ ।
ರ್ಮದ ಬಿಸಿಲಂಗವಲ್ಲರಿಗೆ ತೀವ್ರದವಾಗ್ನಿ ಮನೋಮೃಗಕ್ಕೆ ಸಿಂ ॥
ಗದ ದನಿ ರಾಗನಾಗನಿವಹಕ್ಕೆ ನವಿಲ್ ಪ್ರಣಯಪ್ರದೀಪಸಂ ।
ಪದಕೆ ಸಮೀರನಲ್ತೆ ರತಿಲಂಪಟವೃದ್ಧನ ಭೋಗದಾಗ್ರಹಂ ॥೧೧೪

ಗತಬಲನಾಗಿ ವಜ್ರಧರನಲ್ತು ವಯೋಧಿಕನಾಗಿ ತಾರ್ಕ್ಷ್ಯನ ।
ಲ್ತತಿಜಡಭಾವಮಾಗಿ ಕಡಲಲ್ತು ನಿಜಶ್ರುತಿಶೂನ್ಯನಾಗಿ ಮಾ ॥

ರುತಭೃಗುವಲ್ತು ದಂಡಧರನಾಗಿ ದಿಟಂ ಜವನಲ್ತು ನೀರದ |
ಸ್ಥಿತಿಗವಕಾಶವಾಗಿ ಕಡಲಲ್ತೆನೆ ವೃದ್ಧನದೇಂ ವಿದಗ್ಧನೋ ||೧೧೩೪

(ಪುಷ್ಪದಂತಪುರಾಣಂ)

ಬಱಿಯೆ ವಯಸ್ಸಲಿಲವೊಡ |
ಲ್ದೊಱೆದಡಿಯೊಳ್ ನಿಂದು ನಿಮಿರ್ದ* ವಾರ್ಧಿಕಬಕನಾ ||
ಯ್ದುಱಿಸಿ ಕುಱುಂಕುವ ಕಣ್ಣಂ |
ಮಿಱುಗುವ ಮೀನೆನ್ನದಿನ್ನದೇನೆಂದಪುದೋ ||೧೧೩೫

ಕೆಂಬಲ್ಲನೊಸೆದು ತಸದಾ |
ಳಂಬದ ಬಿತ್ತೆಂದು ಪೊಗಳ್ವ* ಕವಿಗಳ ಮಾತಂ ||
ನಂಬಿದೆನಲ್ಲದೊಡೇಂ ಗಡ |
ತಿಂಬುದೆ ಕಳವೊಡಲೊಳಱಿಗಿ ಖಳಕಾಲಶುಕಂ ||೧೧೩೬

ನವರಂಧ್ರಮೆಂಬ ಕನ್ನಂ |
ಸವೆದಿರಲೊಡಲೆಂಬ ಮನೆಯನೊಯ್ಯನೆ ಪೊಕ್ಕಾ ||
ಜವನೆಂಬಾಱಡಿಗಳ್ಳಂ |
ತವಕದಿನಸುವೆಂಬ ವಸುವನುಯ್ಯದೆ ಮಾಣಂ ||೧೧೩೭

(ಧರ್ಮನಾಥಪುರಾಣಂ)

ಇಂತು ಕಾವ್ಯಸಾರದೊಳ್
ವೈರಾಗ್ಯವರ್ಣನಂ

ಕಾವ್ಯಸಾರಂ ಸಮಾಪ್ತಂ.

$ ಕಲಾವಿಲಾಸ ವರ್ಣನೆ.

ಕಡುಕರ್ಪುರ್ಪಿಂ ನಡೆ ನೋಟ್ಟ ಕಾಂತೆಯ ಕಟಾಕ್ಷಶ್ರೀ ಣಿವೆಂಬತ್ತ ಕಾ।
ಲ್ದೊಡರೊಳ್ ಬೇಗದೆ ಪೋಗಲಾಱನುವಮಾನಂದಂ ಮೆಲ್ಪಿಂ ತಳ ॥
ರ್ನಡೆಯೊಳ್ ಕಂತುಕಲಾವಿಲಾಸನುಱ ಪೋಲ್ತಂ ಕಂತುರಾಜೇಂದ್ರನು ।
ಗ್ಗಡದಾಬೆಳ್ಳಿಯ ಬಳ್ಳಸಂಕಲೆಯನಾಂತೇೞ್ತರ್ಪ ಗಂಧೇಭವಂ ॥೧

ಕುರುಳಂ ಕೊಟ್ಟಪಳೆಂಬುದರ್ಕೆ ಕುಱುಪೇನೀಱೆನ್ನ ಪೂಬೇಡಿದಾ ।
ಬೆರಲಂ ಕೊಟ್ಟಪಳೆಂಬುದರ್ಕೆ ಕುಱುಪೇನೀವುಂಗುರಂ ಮಾಸಲಾ ॥
ದುರಮಂ ಕೊಯ್ದಪಳೆಂಬುದರ್ಕೆ ಹೊಸೆವೋಗಿ ಹಾರಮಾಗಳ್ ತಳೋ ।
ದರಿ ಪೇೞೆಂದು ಕಲಾವಿಲಾಸನಿದಿರೊಳ್ ತಂದಿಕ್ಕುವರ್ ದೂತಿಯರ್ ॥೨

ಸರಸಿರುಹಾಕ್ಷಿ ಸೂಚಿಸಿದ ಸನ್ನೆಯನಾಲಿಸಿ ಕೇಳದಂತಿರಲ್ ।
ತರಳಕಟಾಕ್ಷದಿಂದೆಡಬಲಂಗಳನೊಯ್ಯನೆ ನೋಡಿ ಕೈಯ ಕ ॥
ಪ್ಪುರವಳಕಿಂಪಮಿಟ್ಟಱಿಪೆ ಪಿಂತನೆ ಬಂದವರ್ ಅಪ್ಪಿ ಚುಂಬಿಪಾ ।
ತುರತೆಗೆ ಮಾಱುವೋಯಿತು ಮನಂ ಕವಿರಾಜಕಲಾವಿಲಾಸನಾ ॥೩

ಮಿಸುನಿಯ ಮಿಂಚಿನೋಲೆ ಪೊಸಮೂಕುತಿ ಕತ್ತುರಿಯಚ್ಚಬೊಟ್ಟು ನು
ಣ್ಪೆಸೆವೆಳಮುತ್ತಿನೆಕ್ಕಸರಮೇಱಿದ ಪೆರ್ಮೊಲೆ ದೋರೆಮಿಂಚುವಲ್ ॥
ನಸುಬಿರಿದಚ್ಚಮಲ್ಲಿಗೆಯ ಸೋರ್ಮುಡಿ ಪೆರ್ಮೆಯನೀಯೆ ಮುಂದೆ ನಿಂ ।
ದಸಿಯೊಳಗಾಸೆವಟ್ಟುದು ಮನಂ ಕವಿರಾಜಕಲಾವಿಲಾಸನಾ ॥೪

ಪುದಿದು ಪಳಚ್ಚನಪ್ಪ ಬೆಳರ್ದಿಂಗಳೊಳಂಗಣದಲ್ಲಿ ತೀವಿ ಪಾ।
ಸಿದ ನೆಲೆವಾಸಿನೊಳ್ ಮಲಗಿ ಮೆಲ್ಲನುರೋಜದೊಳಟ್ಟು ೕವಿಣೆಯಂ ॥

$ ವೈರಾಗ್ಯಪ್ರಕರಣದೊಡನೆ ಗ್ರಂಥವು ಸಮಾಪ್ತವಾದಂತೆ ತೋರು ತ್ತದೆ. ಆದರೆ ಮೂಲದಲ್ಲಿ ಈ ವರ್ಣನೆಯೂ ಕೊನೆಯಲ್ಲಿ ಇರುವದರಿಂದ ಇದನ್ನು ಇಲ್ಲಿ ಸೇರಿಸಿದೆ.

ಬಿದಿರ್ಗೆ* ಮೃದುಸ್ವನಂ ನೆಗೞೆ ಕನ್ನಡಗೌಳವನೊಲ್ದು ಪಾಡಿದಳ್ ।
ಸುದತಿ ಪದಂಗಳಂ ಪ್ರಮುದದಿಂ ಕವಿರಾಜಕಲಾವಿಲಾಸನಾ ॥೫

ಸೂಸುವ ಕಣ್ಣ ಕೆಂಪು ಪೊಸಬಾಸುೞಿ ಮೈ ಜಡೆಬಿಟ್ಟ ಮಂಡೆ ಹೆ ।
ನ್ನೇಸಳ ಕೋಳಕಚ್ಚು (?)ಕಿಱುಲಜ್ಜೆ ತೊದಳ್ನುಡಿ ದೋರೆವಲ್ಲು ಕೈ ॥
ಬಾಸಿಕೆ ಕೊಯ್ದು ಮುಂದಲೆ ಕಱಂಗಿದ ಕೆಂದುಟಿಯೊಪ್ಪಿ ಬರ್ಪ ಸಂ ।
ತೋಷದ ಲೇಸು ಬಾಸಣಿಸಿತಾಕವಿರಾಜಕಲಾವಿಲಾಸನಾ ॥೬

ಇಂತು ಕಲಾವಿಲಾಸ ವರ್ಣನಂ.